ಬಿಬಿಎಂಪಿ ಚುನಾವಣೆ ನಡೆಸಲು ಮೀನಮೇಷ • ಮಡುಗಟ್ಟಿದೆ ಆಕ್ರೋಶ

ಚುನಾಯಿತ ಕೌನ್ಸಿಲ್ ಇಲ್ಲದೇ ಕಳೆಯಿತು ವರ್ಷ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿಗೆ ಚುನಾಯಿತ ಕೌನ್ಸಿಲ್‌ನ ಆಡಳಿತ ಇಲ್ಲದೇ ಶುಕ್ರವಾರಕ್ಕೆ (ಸೆ.10) ಒಂದು ವರ್ಷ ತುಂಬಿದೆ. ಬಿಬಿಎಂಪಿಗೆ ಹೊಸ ವಾರ್ಡ್ ಸೇರ್ಪಡೆಗೊಳಿಸಿ ಮರುವಿಂಗಡಣೆ ಪ್ರಕ್ರಿಯೆಯನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಿ ಶೀಘ್ರವೇ ಚುನಾವಣೆ ನಡೆಸಲಾಗುತ್ತದೆ ಎಂಬ ಸರ್ಕಾರದ ಭರವಸೆ ಹುಸಿಯಾಗಿದೆ.

ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಕಲಬುರ್ಗಿ ಮಹಾನಗರ ಪಾಲಿಕೆಗಳಿಗೆ ಕೋವಿಡ್ ನಡುವೆಯೂ ಇತ್ತೀಚೆಗೆ ಚುನಾವಣೆಯನ್ನು ನಡೆಸಲಾಗಿದೆ. ಇದರ ಬೆನ್ನಲ್ಲೇ ಬಿಬಿಎಂಪಿಗೂ ಆದಷ್ಟು ಬೇಗ ಚುನಾವಣೆ ನಡೆಸಬೇಕು ಎಂಬ ಒತ್ತಾಯ ಕೇಳಿಬಂದಿದೆ.

2015ರಲ್ಲಿ ಆಯ್ಕೆಯಾಗಿದ್ದ ಬಿಬಿಎಂಪಿ ಚುನಾಯಿತ ಕೌನ್ಸಿಲ್ ಅವಧಿ 2020ರ ಸೆ.10ಕ್ಕೆ ಕೊನೆಗೊಂಡಿತ್ತು. ಸೆ. 11ರಂದು ಗೌರವ್ ಗುಪ್ತ ಪಾಲಿಕೆಯ ಆಡಳಿತಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ಅವರು ಈಗ ಪಾಲಿಕೆಯ ಮುಖ್ಯ ಆಯುಕ್ತರಾಗಿದ್ದು, ಸರ್ಕಾರ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರನ್ನು ಪಾಲಿಕೆಯ ಆಡಳಿತಾಧಿಕಾರಿಯನ್ನಾಗಿ ಸರ್ಕಾರ ನೇಮಿಸಿದೆ. ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಹುದ್ದೆಯೂ ಅವರ ಹೆಗಲೇರಿದೆ. ಆಡಳಿತಾಧಿಕಾರಿಯವರು ಬಿಬಿಎಂಪಿ ಕಚೇರಿಗೆ ಬರುವುದೇ ಅಪರೂಪ ಎಂಬ ದೂರುಗಳಿವೆ.

‘ಆಡಳಿತಾಧಿಕಾರಿ ಇದ್ದರೂ ಪ್ರಮುಖ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳಲು ಅವರು ಸರ್ಕಾರದತ್ತ ಮುಖ ಮಾಡಬೇಕಾದ ಸ್ಥಿತಿ ಇದೆ. ರಸ್ತೆ ಗುಂಡಿಯಿಂದ ಹಿಡಿದು, ಆಸ್ತಿ ತೆರಿಗೆ ಪಾವತಿವರೆಗೆ ವಾರ್ಡ್ ಮಟ್ಟದಲ್ಲಿ ಹತ್ತು-ಹಲವು ಸಮಸ್ಯೆಗಳಿದ್ದರೂ ಸ್ಪಂದನೆ ಸಿಗದೇ ಜನ ಸಮಸ್ಯೆ ಎದುರಿಸುತ್ತಿದ್ದಾರೆ. ಸಂವಿಧಾನದ ಆಶಯದಂತೆ ಸ್ಥಳೀಯ ಸರ್ಕಾರ ರಚನೆಗೆ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳಬೇಕು’ ಎಂದು ಸಾರ್ವಜನಿಕರು ಹಾಗೂ ರಾಜಕೀಯ ಪಕ್ಷಗಳ ಪ್ರಮುಖರು ಒತ್ತಾಯಿಸಿದ್ದಾರೆ.

ಪ್ರಜಾವಾಣಿ ವಿಶೇಷ

‘ಸಂವಿಧಾನದ ಕಲಂ 243 ಯು‘ ಪ್ರಕಾರ ಬಿಬಿಎಂಪಿಯ ಚುನಾಯಿತ ಕೌನ್ಸಿಲ್ ಅನ್ನು ಸರ್ಕಾರವು ವಿಸರ್ಜಿಸಿದರೂ ಆರು ತಿಂಗಳೊಳಗೆ ಚುನಾಯಿತ ಕೌನ್ಸಿಲ್ ರಚನೆಯಾಗುವಂತೆ ನೋಡಿಕೊಳ್ಳಬೇಕು. 1976ರ ಕರ್ನಾಟಕ ಪೌರ ನಿಗಮಗಳ (ಕೆಎಂಸಿ) ಕಾಯ್ದೆಯಲ್ಲೂ ಈ ಅಂಶವನ್ನು ಅಳವಡಿಸಿಕೊಳ್ಳಲಾಗಿದೆ. ಚುನಾವಣೆಯನ್ನು ಮುಂದೂಡಿದರೂ ಗರಿಷ್ಠ ಆರು ತಿಂಗಳಿಗೆ ಮಾತ್ರ ಆಡಳಿತಾಧಿಕಾರಿಯನ್ನು ನೇಮಿಸುವುದಕ್ಕೆ ಸಂವಿಧಾನದಲ್ಲಿ ಅವಕಾಶವಿದೆ. ಬಿಬಿಎಂಪಿ ಚುನಾಯಿತ ಕೌನ್ಸಿಲ್ ಅವಧಿ ಮುಗಿಯುವುದರೊಳಗೆ ಚುನಾವಣೆ ಪ್ರಕ್ರಿಯೆ ಪೂರ್ಣಗೊಂಡಿರಬೇಕಿತ್ತು. ಚುನಾವಣೆ ನಡೆಸದಿರುವುದಕ್ಕೆ ರಾಜ್ಯ ಚುನಾವಣಾ ಆಯೋಗವಾಗಲೀ, ಸರ್ಕಾರವಾಗಲೀ ಸ್ಪಷ್ಟ ಕಾರಣವನ್ನೂ ನೀಡಿರಲಿಲ್ಲ.

ಚುನಾಯಿತ ಕೌನ್ಸಿಲ್ ಅವಧಿ ಮುಗಿದಾಗ ಬಿಬಿಎಂಪಿಯ ಆಡಳಿತವು ಕೆಎಂಸಿ ಕಾಯ್ದೆಯನ್ವಯವೇ ನಡೆಯುತ್ತಿತ್ತು. ಈಗ 2020ರ ಬಿಬಿಎಂಪಿ ಕಾಯ್ದೆಯನ್ವಯ ಪಾಲಿಕೆಯ ಆಡಳಿತವನ್ನು ನಿರ್ವಹಿಸಲಾಗುತ್ತಿದೆ. ಸರ್ಕಾರವು ಚುನಾಯಿತ ಕೌನ್ಸಿಲನ್ನು ವಿಸರ್ಜಿಸಲು ಬಿಬಿಎಂಪಿ ಕಾಯ್ದೆಯ ಸೆಕ್ಷನ್ 126 ಅವಕಾಶ ಕಲ್ಪಿಸುತ್ತದೆ. ಪಾಲಿಕೆಯನ್ನು ವಿಸರ್ಜಿಸಿದರೆ, ಆ ದಿನದಿಂದ ಆರು ತಿಂಗಳ ಒಳಗೆ ಕೌನ್ಸಿಲ್ ಪುನರ್ರಚಿಸಬೇಕು ಎಂದು ಸೆಕ್ಷನ್ 126 (7) ಹೇಳುತ್ತದೆ. ವಿಸರ್ಜನೆಯ ಅವಧಿಗೆ ಆಡಳಿತಾಧಿಕಾರಿಯನ್ನು ನೇಮಿಸಲು, ಅಗತ್ಯಬಿದ್ದರೆ ಆಡಳಿತಾಧಿಕಾರಿಯ ಅವಧಿಯನ್ನು ಮೊಟಕುಗೊಳಿಸಲು ಅಥವಾ ವಿಸ್ತರಿಸಲು ಸೆಕ್ಷನ್ 127 ಅವಕಾಶ ಕಲ್ಪಿಸುತ್ತದೆ.

‘ನಗರದ ಸರ್ವತೋಮುಖ ಅಭಿವೃದ್ಧಿಗೆ ಸ್ಥಳೀಯ ಸರ್ಕಾರದ ಪಾತ್ರವೂ ಮಹತ್ವವಾದುದು. ಆಡಳಿತಕ್ಕೆ ಸಂಬಂಧಿಸಿದ ಸ್ಥಳೀಯ ವಿಚಾರಗಳ ಕುರಿತು ಬಿಬಿಎಂಪಿ ಚುನಾಯಿತ ಕೌನ್ಸಿಲ್‌ನಲ್ಲೇ ಚರ್ಚಿಸಿ ನಿರ್ಧರಿಸಬೇಕೇ ಹೊರತು ಸರ್ಕಾರ ಹಾಗೂ ಅಧಿಕಾರಿಗಳು ತಮ್ಮ ನಿರ್ಧಾರವನ್ನು ಜನರ ಮೇಲೆ ಹೇರುವುದು ಸರಿಯಲ್ಲ’ ಎನ್ನುತ್ತಾರೆ ನಗರಾಡಳಿತ ತಜ್ಞರು.

‘ಉತ್ತರದಾಯಿತ್ವ ಇಲ್ಲದಂತಾಗಿದೆ’

ಚುನಾಯಿತ ಕೌನ್ಸಿಲ್ ಇಲ್ಲದೇ ಆಡಳಿತ ವ್ಯವಸ್ಥೆಯಲ್ಲಿ ಉತ್ತರದಾಯಿತ್ವ ಇಲ್ಲದಂತಾಗಿದೆ. ವಾರ್ಡ್ ಸಮಿತಿ ಸಭೆಗಳೂ ಕಾಟಾಚಾರಕ್ಕೆ ನಡೆಯುತ್ತಿವೆ. ಸರ್ಕಾರ ಬಿಬಿಎಂಪಿಗೆ ಶೀಘ್ರ ಚುನಾವಣೆ ನಡೆಸಬೇಕು

ಶ್ರೀಕಾಂತ್ ನರಸಿಂಹನ್, ಬೆಂಗಳೂರು ನವನಿರ್ಮಾಣ ಪಕ್ಷದ ಪ್ರಧಾನ ಕಾರ್ಯದರ್ಶಿ

ಬಿಬಿಎಂಪಿಯಲ್ಲಿ ಅಧಿಕಾರಿಗಳದೇ ದರ್ಬಾರ್. ಜನರ ಸಮಸ್ಯೆಗಳನ್ನು ಆಲಿಸುವವರೇ ಇಲ್ಲ. ಕುಂಟುನೆಪ ಹೇಳಿ ಬಿಬಿಎಂಪಿ ಚುನಾವಣೆಯನ್ನು ಸರ್ಕಾರ ಮತ್ತಷ್ಟು ಮುಂದೂಡಬಾರದು. ಸೋಲು-ಗೆಲುವು ಬೇರೆ ವಿಚಾರ. ಆದರೆ, ಜನರು ಬಯಸುವ ಆಡಳಿತ ಬಿಬಿಎಂಪಿಯಲ್ಲಿರಬೇಕು

ಆರ್.ಪ್ರಕಾಶ್, ಜೆಡಿಎಸ್ ನಗರ ಜಿಲ್ಲಾ ಘಟಕದ ಅಧ್ಯಕ್ಷ

ಈಗಿನ ಸರ್ಕಾರದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬೆಲೆಯೇ ಇಲ್ಲ. ಸರ್ಕಾರ ಬಿಬಿಎಂಪಿಗೆ ಚುನಾವಣೆ ನಡೆಸುತ್ತದೆ ಎಂಬ ನಂಬಿಕೆ ಇಲ್ಲ. ಆದರೆ, ಸುಪ್ರೀಂ ಕೋರ್ಟ್ ನಮ್ಮ ನೆರವಿಗೆ ಬರುತ್ತದೆ ಎಂಬ ನಂಬಿಕೆ ಇದೆ. ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿರುತ್ತಿದ್ದರೆ ಕೋವಿಡ್ ಎರಡನೇ ಅಲೆ ಸಂದರ್ಭದಲ್ಲಿ ಅಷ್ಟೊಂದು ಪ್ರಮಾಣದ ಸಾವು-ನೋವು ಸಂಭವಿಸುತ್ತಿರಲಿಲ್ಲ

ಅಬ್ದುಲ್ ವಾಜಿದ್, ಕಾಂಗ್ರೆಸ್ ಮುಖಂಡ

ಚುನಾವಣೆ ಮುಂದೂಡಲು ಈಗಿನ ಸರ್ಕಾರ ಬಿಬಿಎಂಪಿ ಕಾಯ್ದೆ ಜಾರಿಗೆ ತಂದಿತು. ಈಗ ಅದರ ಪ್ರಕಾರವೂ ನಡೆದುಕೊಳ್ಳುತ್ತಿಲ್ಲ. ಆಡಳಿತವಂತೂ ಅಧ್ವಾನವಾಗಿಬಿಟ್ಟಿದೆ. ಕೊವಿಡ್ ಸಂದರ್ಭದಲ್ಲಿ ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಕಲಬುರ್ಗಿ ಮಹಾನಗರ ಪಾಲಿಕೆಗಳಿಗೆ ಚುನಾವಣೆ ನಡೆಸಲು ಸಾಧ್ಯವಾಗುವುದಾದರೆ, ಬಿಬಿಎಂಪಿಗೆ ಚುನಾವಣೆ ನಡೆಸಲು ಏನು ಅಡ್ಡಿ?

ಎಂ.ಶಿವರಾಜು, ಕಾಂಗ್ರೆಸ್ ಮುಖಂಡ

‘ಜನರ ಸಮಸ್ಯೆ ಆಲಿಸಲು ಬಿಬಿಎಂಪಿಯೇ ರೂಪಿಸಿದ ‘ನಮ್ಮ ಬೆಂಗಳೂರು ಆ್ಯಪ್ 2.0’ ಮೂಲಕ ದೂರು ನೀಡಿದರೂ ಕೇಳುವವರೇ ಇಲ್ಲ. ಚುನಾಯಿತ ಕೌನ್ಸಿಲ್ ಇದ್ದಾಗ ಜನರ ದೂರು ದುಮ್ಮಾನಗಳಿಗೆ ಅಧಿಕಾರಿಗಳು ಸ್ವಲ್ಪಮಟ್ಟಿಗಾದರೂ ಸ್ಪಂದಿಸುತ್ತಿದ್ದರು. ಜನರ ಪ್ರತಿನಿಧಿಗಳಿಲ್ಲದ ಆಡಳಿತ ಸಾಕು. ಆದಷ್ಟು ಬೇಗ ಬಿಬಿಎಂಪಿಗೆ ಚುನಾವಣೆ ನಡೆಸಬೇಕು

ಉಮೇಶ್ ಬಾಬು ಪಿಳ್ಳೆಗೌಡ, ಸಿಟಿಜನ್ಸ್ ಫಾರ್ ಬೆಂಗಳೂರು

ನೀರು ಪೂರೈಕೆಯಲ್ಲಿ ವ್ಯತ್ಯಯ 12ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೊರೆ ಕಾಡನಹಳ್ಳಿ ಪಂಪಿಂಗ್ ಸ್ಟೇಷನ್‌ನ ಮುಖ್ಯ ಮಾರ್ಗದಲ್ಲಿ ಸೋರಿಕೆ ಕಂಡು ಬಂದಿದ್ದು, ಇದರ ತುರ್ತು ಕಾಮಗಾರಿ ಕೈಗೆತ್ತಿಕೊಂಡಿರುವುದರಿಂದ ಇದೇ 12 ಮತ್ತು 13ರಂದು ನಗರದ ವಿವಿಧ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ತಿಳಿಸಿದೆ.

ಗಾಂಧಿನಗರ, ಕುಮಾರ ಪಾರ್ಕ್ ಪೂರ್ವ, ವಸಂತ ನಗರ, ಹೈ ಗ್ರೌಂಡ್ಸ್, ಸಂಪಂಗಿ ರಾಮನಗರ, ಸಿ.ಕೆ.ಸಿ ಗಾರ್ಡನ್, ಕೆ.ಎಸ್.ಗಾರ್ಡನ್, ಟೌನ್ ಹಾಲ್, ಲಾಲ್‌ಬಾಗ್ ರಸ್ತೆ, ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್ ಸುತ್ತಮುತ್ತಲಿನ ಪ್ರದೇಶಗಳು, ಕಬ್ಬನ್‌ಪೇಟೆ ಮುಖ್ಯರಸ್ತೆ, ಕುಂಬಾರ್ ಪೇಟೆ, ಕಾಟನ್ ಪೇಟೆ, ಚಿಕ್ಕಪೇಟೆ, ನಗರ್ತ ಪೇಟೆ, ಬಕ್ಷಿ ಗಾರ್ಡನ್, ಭಾರತಿನಗರ, ಸೇಂಟ್ ಜಾನ್ಸ್ ರಸ್ತೆ, ಹೈನ್ಸ್ ರಸ್ತೆ, ನಾರಾಯಣ ಪಿಳ್ಳೈ ರಸ್ತೆ, ಸಂಗಮ್ ರಸ್ತೆ, ಕಾಮರಾಜ್ ರಸ್ತೆ, ವೀರಪಿಳ್ಳೈ ರೋಡ್, ಇನ್ಫೆಂಟ್ರಿ ರಸ್ತೆ, ವಸಂತ ನಗರ, ಶಿವಾಜಿ ನಗರ, ಲ್ಯಾವೆಲ್ಲೆ ರಸ್ತೆ.

ಫ್ರೇಜರ್ ಟೌನ್, ಬ್ಯಾಡರಹಳ್ಳಿ, ವಿಲಿಯಮ್ಸ್ ಟೌನ್, ಸಿಂಡಿ ಕಾಲೊನಿ, ಎಸ್.ಸಿ. ಕಾಲೊನಿ, ಕೋಲ್ಸ್ ರಸ್ತೆ, ಮಚಲಿಬೆಟ್ಟ, ಕಾಕ್ಸ್ ಟೌನ್, ದೊಡ್ಡಿಗುಂಟ, ಜೀವನಹಳ್ಳಿ, ವಿವೇಕಾನಂದ ನಗರ, ದೇವಿಸ್ ರಸ್ತೆ, ಕುಕ್ಸ್ ಟೌನ್, ಹಳೆಯ ಬೈಯಪ್ಪನಹಳ್ಳಿ, ನಾಗಯ್ಯನಪಾಳ್ಯ, ಸತ್ಯನಗರ, ಮಾರುತಿ ನಗರ.

ಮುಸ್ಲಿಂ ಕಾಲೊನಿ, ಕುಶಾಲ್ ನಗರ, ಡಿ.ಜೆ.ಹಳ್ಳಿ, ಕೆ.ಜಿ. ಹಳ್ಳಿ, ನಾಗವಾರ, ಸಮಾಧಾನ ನಗರ, ಹೊಸ ಬಾಗಲೂರು, ಹಳೆ ಬಾಗಲೂರು, ಲಿಂಗರಾಜಪುರ, ಚಾಮರಾಜ ಪೇಟೆ, ಬ್ಯಾಂಕ್ ಕಾಲೊನಿ, ಶ್ರೀನಿವಾಸ ನಗರ, ಗವಿಪುರ, ಹನುಮಂತ ನಗರ, ಗಿರಿ ನಗರ, ಬ್ಯಾಟರಾಯನಪುರ, ರಾಘವೇಂದ್ರ ಬ್ಲಾಕ್, ಆವಲಹಳ್ಳಿ, ಮುನೇಶ್ವರ ಬ್ಲಾಕ್, ಕಾಳಿದಾಸ ಬಡಾವಣೆ.

ಶ್ರೀನಗರ, ಬನಶಂಕರಿ ಮೊದಲನೇ ಹಂತ, ಯಶವಂತಪುರ, ಮಲ್ಲೇಶ್ವರ, ಕುಮಾರ ಪಾರ್ಕ್, ಜಯಮಹಲ್, ಶೇಷಾದ್ರಿಪುರ, ನಂದಿ ದುರ್ಗ ರಸ್ತೆ, ಜೆ.ಸಿ.ನಗರ, ಸದಾಶಿವನಗರ, ಪ್ಯಾಲೇಸ್ ಗುಟ್ಟಹಳ್ಳಿ, ಬಿ.ಇ.ಎಲ್ ರಸ್ತೆ, ಸಂಜಯ್ ನಗರ, ಡಾಲರ್ಸ್ ಕಾಲೊನಿ, ಆರ್.ಎಂ.ವಿ, ಗೆದ್ದಲ ಹಳ್ಳಿ, ಭೂಪಸಂದ್ರ, ಕಾವಲ್ ಬೈರಸಂದ್ರ, ಗಂಗಾನಗರ, ಆರ್. ಟಿ.ನಗರ, ಮನೋರಾಯನಪಾಳ್ಯ, ಆನಂದನಗರ.

ವಿ.ನಾಗೇನಹಳ್ಳಿ, ಸುಲ್ತಾನ್ ಪಾಳ್ಯ, ಶಾಂತಲಾ ನಗರ, ಅಶೋಕ ನಗರ, ಎಂ ಜಿ. ರಸ್ತೆ, ಬ್ರಿಗೇಡ್ ರಸ್ತೆ, ಎಚ್‌ಎಎಲ್ 2ನೇ ಹಂತದ ಭಾಗ, ದೂಪನಹಳ್ಳಿ, ಇಂದಿರಾನಗರ, ಕದಿರಯ್ಯನ ಪಾಳ್ಯ, ಕಲ್ಲಳ್ಳಿ, ಆಂಧ್ರ ಕಾಲೊನಿ, ಎಚ್‌ಎಎಲ್ 3ನೇ ಹಂತ, ಜೀವನ್ ಬಿಮಾ ನಗರ, ಕೋಡಿಹಳ್ಳಿ, ಎಂ.ಜಿ. ರಸ್ತೆ, ಹನುಮಂತಪ್ಪ ಬಡಾವಣೆ, ಬಜಾರ್ ಸ್ಟ್ರೀಟ್, ಹಲಸೂರು, ಎಂ. ವಿ. ಗಾರ್ಡನ್, ಮರ್ಫಿ ಟೌನ್, ಜೋಗುಪಾಳ್ಯ, ಕೇಂಬ್ರಿಜ್ ಬಡಾವಣೆ, ದೀನಬಂಧು ನಗರ, ಲಿಂಗರಾಜಪುರ, ಜಾನಕಿರಾಮ್ ಬಡಾವಣೆ, ಸಿದ್ದರಾಮಪ್ಪ ಗಾರ್ಡನ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಆರ್ಟ್ ಆಫ್ ಲಿವಿಂಗ್ ‘ಮಂಡಲ ವಾಟಿಕಾ’ ನಿರ್ಮಾಣ

ಬೆಂಗಳೂರು: ಎರಡು ಸಾವಿರ ವರ್ಷಗಳ ಹಿಂದೆ ತಮಿಳುನಾಡಿನಲ್ಲಿ ಪ್ರಚಲಿತದಲ್ಲಿದ್ದ ‘ಮುರುಗನ್ ಮಂಡಲ ವಾಟಿಕಾ’ ಉದ್ಯಾನವನ್ನು ಆರ್ಟ್ ಆಫ್ ಲಿವಿಂಗ್ ತನ್ನ ಕೇಂದ್ರದ ಆವರಣದಲ್ಲಿ ನಿರ್ಮಿಸಿದ್ದು, ಇದೇ 11ರಂದು ಉದ್ಯಾನ ಉದ್ಘಾಟನೆಯಾಗಲಿದೆ.

ಇಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಂಡಲ ವಾಟಿಕಾ ಯೋಜನೆಯ ಉಸ್ತುವಾರಿ ಡಾ. ಪ್ರಭಾಕರ್ ರಾವ್, ‘ಆರ್ಟ್ ಆಫ್ ಲಿವಿಂಗ್‌ನ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ ಗುರೂಜಿ, ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ (ಐಐಎಚ್‌ಆರ್) ನಿರ್ದೇಶಕ ಡಾ.ಬಿ. ಎನ್.ಎಸ್. ಮೂರ್ತಿ ಹಾಗೂ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ರಾಜೇಂದ್ರ ಪ್ರಸಾದ್ ಅವರು ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿರುತ್ತಾರೆ. 6 ವಿಧದ ಸಸ್ಯಗಳನ್ನು ಜ್ಯಾಮಿತಿ ವಿನ್ಯಾಸದಲ್ಲಿ ನೆಟ್ಟು ಬೆಳೆಸಲಾಗಿದೆ. ಈ ಉದ್ಯಾನವು ಸಾಮರಸ್ಯದ ವಾತಾವರಣ ಸೃಷ್ಟಿಸುವ ಜೊತೆಗೆ ಮನಸ್ಸನ್ನು ತಿಳಿಗೊಳಿಸಲು ಸಹಕಾರಿ’ ಎಂದರು.

ಟಿಪ್ಪು ಸುಲ್ತಾನ್ ಅರಮನೆ ಬಳಿಯ ರಸ್ತೆ ಹದಗೆಟ್ಟಿದೆ

ಚಾಮರಾಜಪೇಟೆಯ ಟಿ.ಆರ್. ಮಿಲ್ಸ್ ಹತ್ತಿರದ ‘ಸ್ಮಶಾನದ’ ಬಳಿ ಇರುವ ರಸ್ತೆ ಅಪಾಯವನ್ನು ಆಹ್ವಾನಿಸುತ್ತಿದೆ

ಗುಂಡಿಗಳಲ್ಲಿ ರಸ್ತೆ !

ರಸ್ತೆಗಳಲ್ಲಿ ಗುಂಡಿಗಳಿವೆ ಎನ್ನುವುದಕ್ಕಿಂತ, ಗುಂಡಿಗಳಲ್ಲಿಯೇ ರಸ್ತೆಗಳು ಇವೆಯೇನೋ ಎನ್ನುವಷ್ಟರ ಮಟ್ಟಿಗೆ ಹದಗೆಟ್ಟಿವೆ ರಾಜಧಾನಿಯ ಬಹುತೇಕ ರಸ್ತೆಗಳು. ಅಧಿಕಾರಿಗಳನ್ನು, ಜನಪ್ರತಿನಿಧಿಗಳನ್ನು ಬೈದುಕೊಳ್ಳುತ್ತಲೇ ಅಂಕು-ಡೊಂಕಾದ ರಸ್ತೆಗಳಲ್ಲಿ ಓಡಾಡುತ್ತಿದ್ದಾರೆ ವಾಹನ ಸವಾರರು.

ಈ ಗುಂಡಿ ತುಂಬಿದ ರಸ್ತೆಯಲ್ಲಿ ಸಾಗಲು ‘ಗುಂಡಿಗೆ’ ಗಟ್ಟಿ ಇರಬೇಕು ಎನ್ನುವಂತಿದೆ ಶ್ರೀನಗರದ ಕಾಳಿದಾಸ ಬಡಾವಣೆಯ 12ನೇ ಮುಖ್ಯ ರಸ್ತೆ – ಪ್ರಜಾವಾಣಿ ಚಿತ್ರಗಳು

ಹೊಳೆಯಂತಾದ ರಸ್ತೆ... ನಗರದ ಡಿಸ್ಪೆನ್ಸರಿ ರಸ್ತೆಯಲ್ಲಿ ಆಳವಾದ ದೊಡ್ಡ ಗುಂಡಿಗಳು ಬಿದ್ದಿದ್ದು, ಮಳೆ ನೀರು ನಿಂತು ಹೊಂಡದಂತಾಗಿದೆ

ಶುಕ್ರವಾರ, ಸೆಪ್ಟೆಂಬರ್ 10, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ

ಜಮ್ಮು ವಿಮಾನ ನಿಲ್ದಾಣಕ್ಕೆ ಬಂದಿಳಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ನೃತ್ಯದ ಮೂಲಕ ಸ್ವಾಗತ ಕೋರಿದ ಕಾರ್ಯಕರ್ತೆ

ಶುಕ್ರವಾರ, ಸೆಪ್ಟೆಂಬರ್ 10, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 253 | ಪುಟ 14 + 2 + 4

www.prajavani.net /prajavani.net @prajavani /prajavani http://bit.ly/Prajavani



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿಶೇಷ ಲೇಖನ 7

ಗಣೇಶ ಹಬ್ಬದ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	₹/$
58,305 ▲	17,369 ▲	73.50 ▲

ಸಿನಿಮಾ ಪುರವಣಿ

ಸಿನಿಮಾ ಕ್ಷೇತ್ರವೇ ಬೇಡ ಎಂದು ದೂರ ಉಳಿಯಲು ನಿರ್ಧರಿಸಿದ್ದ ನಟ ಸೋನಲ್ ಮೊಂತೆರೋ ಮನಸ್ಸು ಈಗ ಸಂಪೂರ್ಣ ಬದಲಾಗಿದೆ

ಧಾರಣಾ ಸಾಮರ್ಥ್ಯ ಕಳೆದುಕೊಂಡ ಎಂಟು ಘಾಟ್ ರಸ್ತೆಗಳು • ಪ್ರತಿ ವರ್ಷವೂ ಕುಸಿತ ತಪ್ಪಿದ್ದಲ್ಲ

ಅಪಾಯದ ಅಂಚಿಗೆ ಘಾಟ್ ರಸ್ತೆ

• ಎಸ್. ರವಿಪ್ರಕಾಶ್

ಬೆಂಗಳೂರು: ನಾಲ್ಕು ವರ್ಷಗಳಿಂದ ಸುರಿದ ಭಾರಿ ಮಳೆಗೆ ಪಶ್ಚಿಮಘಟ್ಟದ ಸಾಲಿನಲ್ಲಿರುವ ರಾಜ್ಯದ ಎಂಟು ಘಾಟ್ ರಸ್ತೆಗಳು ಧಾರಣಾ ಸಾಮರ್ಥ್ಯವನ್ನೇ ಕಳೆದುಕೊಂಡು ಅಪಾಯದ ಸ್ಥಿತಿಗೆ ತಲುಪಿವೆ. ಮುಂಬರುವ ವರ್ಷಗಳಲ್ಲಿ ಇವುಗಳ ಸ್ಥಿತಿ ಇನ್ನಷ್ಟು ಹದಗೆಡುವ ಸಾಧ್ಯತೆ ಇದೆ.

ಪ್ರತಿ ವರ್ಷ ಮಳೆಗಾಲಕ್ಕೆ ಮೊದಲು ಅಥವಾ ಆ ಬಳಿಕ ಘಾಟ್ ರಸ್ತೆಗಳಿಗೆ ನೂರಾರು ಕೋಟಿ ಸುರಿದು ರಿಪೇರಿ ಮಾಡಲಾಗುತ್ತದೆ. ಆದರೆ, ಮಳೆಗಾಲ ಶುರುವಾಗುತ್ತಿದ್ದಂತೆ ಭೂಕುಸಿತ ಮರುಕಳಿಸುತ್ತಿದೆ. ಮುಂಬರುವ ದಿನಗಳಲ್ಲಿ ಅದೂ ವ್ಯರ್ಥವಾಗಲಿದ್ದು, ಹಿಮಾಲಯ ಪ್ರದೇಶದಲ್ಲಿ ರಸ್ತೆ ಮತ್ತು ಸೇತುವೆ ನಿರ್ಮಾಣದಲ್ಲಿ ಪರಿಣತಿ ಸಾಧಿಸಿರುವ ಬಾರ್ಡರ್ ರೋಡ್ ಆರ್ಗನೈಸೇಷನ್ (ಬಿಆರ್‌ಒ) ಬಳಸುತ್ತಿರುವ ತಂತ್ರಜ್ಞಾನದ ಮೂಲಕ ಘಾಟ್ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಯ ಅಗತ್ಯವಿದೆ ಎನ್ನುತ್ತಾರೆ ತಜ್ಞರು.

ಘಾಟ್ ರಸ್ತೆ (ಕಿ.ಮೀಗಳಲ್ಲಿ)	
ಸಂಪಾಜೆ- ಮಡಿಕೇರಿ	17 ಕಿ.ಮೀ
ಅರೆಬೈಲು– ಇಡಗುಂಜಿ	8 ಕಿ.ಮೀ
ಚಾರ್ಮಾಡಿ-ಕೊಟ್ಟಿಗೆಹಾರ	23 ಕಿ.ಮೀ
ಶಿರಾಡಿ ಘಾಟ್, ಸಕಲೇಶಪುರ–ಗುಂಡ್ಯ	34 ಕಿ.ಮೀ
ಆಗುಂಬೆ- ಸೋಮೇಶ್ವರ	9 ಕಿ.ಮೀ
ಕೆರೆಕಟ್ಟೆ– ಮಾಳ	16 ಕಿ.ಮೀ
ಕೊಲ್ಲೂರು– ನಾಗೋಡಿ	14 ಕಿ.ಮೀ
ಹುಲಿಕಲ್–ಹೊಸಂಗಡಿ	14 ಕಿ.ಮೀ

ಅತಿವೃಷ್ಟಿಯಿಂದ ಅಪಾಯಕ್ಕೆ ಸಿಲುಕಿರುವ ಘಾಟ್ ರಸ್ತೆಗಳೆಂದರೆ, ಸಂಪಾಜೆ, ಅರೆಬೈಲು, ಚಾರ್ಮಾಡಿ, ಶಿರಾಡಿ, ಆಗುಂಬೆ , ಮಾಳ, ಕೊಲ್ಲೂರು ಮತ್ತು ನಾಗೋಡಿ ಘಾಟ್. ಇವುಗಳ ದುಸ್ಥಿತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನವದೆಹಲಿಯಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರ ಗಮನಕ್ಕೆ ತಂದಿದ್ದು, ವಿಶೇಷ ಪ್ಯಾಕೇಜ್‌ಗಾಗಿ ಮನವಿ ಮಾಡಿದ್ದಾರೆ.

ಘಾಟ್ ರಸ್ತೆಯ ಸಮಸ್ಯೆಗಳೇನು?

- ಘಾಟ್ ರಸ್ತೆಯ ಪಕ್ಕದಲ್ಲಿ ಲಂಬವಾಗಿ ಗುಡ್ಡಗಳನ್ನು ಕತ್ತರಿಸಲಾಗುತ್ತದೆ. ಇಳಿಜಾರು ಮಾದರಿಯಲ್ಲಿ ಕತ್ತರಿಸಿದರೆ ಭೂಕುಸಿತ ತಡೆಯಬಹುದು. ಮಳೆ ನೀರು ಹರಿದು ಹೋಗಲು ವೈಜ್ಞಾನಿಕವಾಗಿ ವ್ಯವಸ್ಥೆ ಮಾಡದ ಕಾರಣ ನೀರು ಇಂಗಿ ಕುಸಿತಕ್ಕೆ ಕಾರಣವಾಗುತ್ತದೆ
- ರಸ್ತೆಯ ಅಕ್ಕ-ಪಕ್ಕ ಇಳಿಜಾರು ಮಾದರಿಯಲ್ಲಿ ಗುಡ್ಡ ಕಡಿಯಲು ಅರಣ್ಯ ಇಲಾಖೆ ಅನುಮತಿ ಕೊಡುವುದಿಲ್ಲ. ಬಹುತೇಕ ಘಾಟ್ ರಕ್ಷಿತ ಅರಣ್ಯ ಅಥವಾ ರಾಷ್ಟ್ರೀಯ ಉದ್ಯಾನದಲ್ಲಿ ಹಾದು ಹೋಗುತ್ತವೆ. ಅರಣ್ಯ ಕಾಯ್ದೆಗಳಿಂದ ರಸ್ತೆ ಅಭಿವೃದ್ಧಿ ಕಷ್ಟ.
- ಸೂಕ್ಷ್ಮ ಪ್ರದೇಶದಲ್ಲಿ ಅತಿ ಉನ್ನತ ತಂತ್ರಜ್ಞಾನ ಬಳಕೆ ಮಾಡಲು ಹೋದರೆ ಈಗ ರಸ್ತೆಗೆ ಖರ್ಚು ಮಾಡುವುದಕ್ಕೆ ಬಳಸುವ ಹಣಕ್ಕಿಂತ ಹತ್ತು ಪಟ್ಟು ಹೆಚ್ಚು ಖರ್ಚಾಗುತ್ತದೆ.

ಪ್ರಜಾವಾಣಿ ವಿಶೇಷ

ಅರಬೈಲ್ ಘಾಟ್‌ನಲ್ಲಿ ಈ ಬಾರಿ ಮಳೆಯಿಂದ 80 ಮೀಟರ್‌ಗಳಷ್ಟು ಎತ್ತರದ ಗುಡ್ಡ ಲಂಬವಾಗಿ ಕುಸಿದು ಬಿದ್ದಿದೆ. ಇದರಿಂದ ರಸ್ತೆ ಸಂಪರ್ಕ ಕಡಿದು ಹೋಗಿದ್ದು, ಇದನ್ನು ಶಾಶ್ವತವಾಗಿ ಸರಿಪಡಿಸಲು ₹125 ಕೋಟಿ ಅಗತ್ಯವಿದ್ದು, ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಬೊಮ್ಮಾಯಿ ಪ್ರತ್ಯೇಕ ಮನವಿ ಸಲ್ಲಿಸಿದರು.

ಸಕಾಲದಲ್ಲಿ ಈ ಘಾಟ್ ರಸ್ತೆಗಳನ್ನು ಸರಿಪಡಿಸಿದರೆ, ಮುಂದೆ ಆಗಬಹುದಾದ ಅನಾಹುತಗಳನ್ನು ತಪ್ಪಿಸಬಹುದು. ಇದಕ್ಕಾಗಿ ಅಗತ್ಯ ನೆರವು ನೀಡಬೇಕು ಎಂದು ಅವರು ಕೋರಿದರು.

ರಾಜ್ಯದ ಕರಾವಳಿ ಭಾಗದ ಬಂದರು ನಗರಗಳನ್ನು ಸಂಪರ್ಕಿಸಲು ಇರುವ ಈ ಹೆದ್ದಾರಿಗಳು ವಾಣಿಜ್ಯ- ವ್ಯವಹಾರ ಮತ್ತು ಪ್ರಯಾಣಿಕರ ಓಡಾಟದ ದೃಷ್ಟಿಯಿಂದ ಪ್ರಮುಖ ಎನಿಸಿವೆ. ಅವೈಜ್ಞಾನಿಕವಾಗಿ ರಸ್ತೆಗಳ ಅಗಲೀಕರಣ, ಅಭಿವೃದ್ಧಿಯಿಂದ ಧಾರಣಾ ಸಾಮರ್ಥ್ಯ ಕುಸಿದಿದ್ದು, ಸಾಮಾನ್ಯ ಮಳೆ ಬಂದರೂ ರಸ್ತೆ ಅಥವಾ ಬೆಟ್ಟ ಕುಸಿದು ಹೋಗುತ್ತದೆ.

ರಾಜ್ಯದಲ್ಲಿ ಅತಿವೃಷ್ಟಿಯಿಂದ ಆಗಿರುವ ಹಾನಿ ವೀಕ್ಷಿಸಲು ಬಂದಿದ್ದ ಕೇಂದ್ರ ತಂಡದ ಜತೆ ಅರಬೈಲ್ ಘಾಟ್ ಪ್ರದೇಶಕ್ಕೆ ರಾಜ್ಯದ ಪ್ರತಿನಿಧಿಯಾಗಿ ಭೇಟಿ ನೀಡಿದ್ದ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ನಿವೃತ್ತ ನಿರ್ದೇಶಕ ಡಾ.ಶ್ರೀನಿವಾಸ ರೆಡ್ಡಿ ಅಲ್ಲಿನ ಪರಿಸ್ಥಿತಿಯನ್ನು 'ಪ್ರಜಾವಾಣಿ'ಗೆ ವಿವರಿಸಿದರು.

4ನೇ ಪುಟ ನೋಡಿ

ಕಚೇರಿಗೆ ಬಿಡುವು

ಗಣೇಶ ಚತುರ್ಥಿ ಪ್ರಯುಕ್ತ ಇಂದು (ಸೆ.10) ಕಚೇರಿಗೆ ರಜೆ. ಶನಿವಾರದ ಸಂಚಿಕೆ ಪ್ರಕಟವಾಗುವುದಿಲ್ಲ

– ಸಂ

'ತುರ್ತು ಭೂಸ್ಪರ್ಶ ನೆಲೆ' ಉದ್ಘಾಟನೆ 11

'ಅಫ್ಗನ್ ಅಭಿವೃದ್ಧಿಗೆ ಭಾರತ ಶ್ರಮಿಸಿದೆ' 11

ಒಳ ಪುಟ

ಪ್ರತಿಭಟನೆಗೆ ತಾಲಿಬಾನ್ ಕೆಂಗಣ್ಣು 11

ಐಐಎಸ್ಸಿ ಅತ್ಯುತ್ತಮ ಸಂಶೋಧನಾ ಸಂಸ್ಥೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಶಿಕ್ಷಣ ಸಚಿವಾಲಯವು ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರ‍್ಯಾಂಕಿಂಗ್ ಫ್ರೇಮ್‌ವರ್ಕ್ ಅನ್ನು (ಎನ್‌ಐಆರ್‌ಎಫ್) ಗುರುವಾರ ಪ್ರಕಟಿಸಿದ್ದು, ದೇಶದ ಸಂಶೋಧನಾ ಸಂಸ್ಥೆಗಳಲ್ಲಿಯೇ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಅತ್ಯುತ್ತಮ ಎನ್ನುವ ಹಿರಿಮೆಗೆ ಪಾತ್ರವಾಗಿದೆ. ಅಲ್ಲದೆ ದೇಶದ ವಿಶ್ವವಿದ್ಯಾಲಯಗಳ ವಿಭಾಗದಲ್ಲಿ ಮೊದಲ ಸ್ಥಾನ ಹಾಗೂ ಒಟ್ಟಾರೆ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನ ಪಡೆದುಕೊಂಡಿದೆ.

ಕಾನೂನು ಶಿಕ್ಷಣ ವಿಭಾಗದಲ್ಲಿ ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ ಮೊದಲ ಸ್ಥಾನದಲ್ಲಿದೆ. 'ಬಿ–ಸ್ಕೂಲ್' ವಿಭಾಗದಲ್ಲಿ ಬೆಂಗಳೂರಿನ ಭಾರತೀಯ ನಿರ್ವಹಣಾ ಸಂಸ್ಥೆಯು (ಐಐಎಂ) ಎರಡನೇ ಸ್ಥಾನದಲ್ಲಿದೆ.

4ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

FLAGSHIP SHOWROOM: BENGALURU:
JAYANAGAR: 4TH BLOCK, PH: 080-2665 1515 | MALLESWARAM: PH: 080-2292 1515
KAMMANAHALLI: PH: 080-2546 1515 | MARATHAHALLI: PH: 080-2540 1515
TAMIL NADU | PUDUCHERRY | ANDHRA PRADESH | TELANGANA || SINGAPORE
Shop online at: www.oriana.com | mail@grtjewels.com | GRT LIVE VIDEO SHOPPING Shop from the comfort of your home

ತ್ವರಿತ, ಎಲೆಕ್ಟ್ರಿಕ್, ಇಂಟೆಲಿಜೆಂಟ್.

ಪರಿಸಾಟಿಯಿಲ್ಲದ ಬುದ್ಧಿವಂತಿಕೆ ಮತ್ತು ಸಂಪರ್ಕದ ವೈಶಿಷ್ಟ್ಯಗಳು. ಆಕರ್ಷಕ ವಿನ್ಯಾಸ.
ಸಾಂಪ್ರದಾಯಿಕ, ಸಾಮಾನ್ಯ ಸ್ಕೂಟರ್‌ಗಳನ್ನು ಕಾರ್ಯಕ್ಷಮತೆಯಲ್ಲಿ ಮೀರಿಸುವಂತಹ ಸ್ಕೂಟರ್.
ಸಂಪೂರ್ಣ ಎಲೆಕ್ಟ್ರಿಕ್ ಎಥರ್ 450x ಅನ್ನು ಭೇಟಿಯಾಗಿ.

ವರ್ಗದಲ್ಲಿ ಉತ್ತಮ ಎಕ್ಸೆಲೆರೇಷನ್*: 3.3 ಸೆಕೆಂಡುಗಳಲ್ಲಿ ಗಂಟೆಗೆ 0 ಯಿಂದ 40 ಕಿಮೀ ಚಲಿಸುತ್ತದೆ
17.78 cm (7") ಟಚ್ ಸ್ಕ್ರೀನ್ | ಗೂಗಲ್ ಮ್ಯಾಪ್ಸ್™ ನ್ಯಾವಿಗೇಷನ್ ಅಳವಡಿಸಿಕೊಳ್ಳುವ ಡ್ಯಾಶ್ಬೋರ್ಡ್
ಬ್ಲೂಟೂಥ್ ಮತ್ತು 4ಜಿ ಕನೆಕ್ಟಿವಿಟಿ | ಸರ್ಟಿಫೈಡ್ ರೇಂಜ್: ಒಮ್ಮೆ ಚಾರ್ಜ್ ಮಾಡಿದಲ್ಲಿ 116 ಕಿಮೀ**
ವೇಗವಾದ ಚಾರ್ಜಿಂಗ್ : 10 ನಿಮಿಷಗಳಲ್ಲಿ 15 ಕಿಮೀವರೆಗೆ | www.atherenergy.com

ATHER

Ather Test Ride Zone: WeWork, Bellandur & WeWork, Shivaji Nagar | **Contact us:** +91-7676600900

Ather Space Experience Center: 53, 100 ft Road, **Indiranagar**
BIA Ventures Pvt. Ltd. 292, 15th cross, **JP Nagar 5th phase**

Learn more about the Ather 450X & book a test-ride at **www.atherenergy.com**

*Best acceleration from 0 to 40 km/h in the 125 cm³ (cc) and electric scooter category. **Based on tests conducted in ideal conditions. The actual numbers may vary. All trademarks are the property of their respective owners. Product shown in the image is for representation purpose only, actual color may vary. Specifications, pricing and product availability are subject to change without notice. **Caution:** Visit the only official website - www.atherenergy.com for information or to make a booking. Exercise caution against any fake website(s) with deceptively similar names or anyone claiming to be representative of the Company.

'ವಾರಾಂತ್ಯದ ಕರ್ಫ್ಯೂ ಸಡಿಲ'

ಬೆಂಗಳೂರು: ಕೋವಿಡ್ ದೃಢೀಕರಣ ಪ್ರಮಾಣ ಶೇ 2 ಕ್ಕಿಂತ ಕಡಿಮೆ ಇರುವ ಜಿಲ್ಲೆಗಳಲ್ಲಿ ವಾರಾಂತ್ಯದ ಕರ್ಫ್ಯೂ ಸಡಿಸಲು ಸೂಚಿಸಲಾಗಿದೆ.

ಪರಿಷ್ಕೃತ ಮಾರ್ಗಸೂಚಿಯನ್ನು ಗುರುವಾರ ರಾತ್ರಿ ಹೊರಡಿಸಲಾಗಿದೆ. ಕೋವಿಡ್ ಪರಿಸ್ಥಿತಿ ನೋಡಿಕೊಂಡು ಆಯಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಸೂಕ್ತ ತೀರ್ಮಾನ ತೆಗೆದುಕೊಳ್ಳಬಹುದು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ಸಾರ್ವಜನಿಕ ಗಣೇಶೋತ್ಸವ ಕ್ಕೆ ಅನುಕೂಲ ಮಾಡಿ ಕೊಡಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ವ್ಯಾಖ್ಯಾನಿಸಲಾಗಿದೆ.

ಹಂಪಿ: ವಾರಾಂತ್ಯ ನಿರ್ಬಂಧ ತೆರವು

ಹೊಸಪೇಟೆ (ವಿಜಯನಗರ): ವಾರಾಂತ್ಯಕ್ಕೆ ಇಲ್ಲಿನ ಹಂಪಿ ಸ್ಮಾರಕಗಳ ವೀಕ್ಷಣೆಗೆ ಪ್ರವಾಸಿಗರಿಗೆ ವಿಧಿಸಿದ್ದ ನಿರ್ಬಂಧವನ್ನು ಜಿಲ್ಲಾಡಳಿತ ಗುರುವಾರ ಹಿಂಪಡೆದಿದೆ. ಸ್ಮಾರಕಗಳು, ದೇವಸ್ಥಾನಗಳಿಗೆ ಸಾರ್ವಜನಿಕರು, ಭಕ್ತರು ಭೇಟಿ ಕೊಡಬಹುದು ಎಂದು ಜಿಲ್ಲಾಧಿಕಾರಿ ಪವನಕುಮಾರ ಮಾಲಪಾಟಿ ತಿಳಿಸಿದ್ದಾರೆ.

ಸ್ಮಶಾನ ಭೂಮಿಗಾಗಿ ಅಳವಂಡಿಯ ಪರಿಶಿಷ್ಟ ಜಾತಿಯ ಜನರು ಬೇಡಿಕೆಯಿಟ್ಟರೂ ಇನ್ನೂ ಈಡೇರಿಲ್ಲ

ಅಂತ್ಯಕ್ರಿಯೆಗೆ ಪರಿಶಿಷ್ಟರ ಪರದಾಟ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಶವಸಂಸ್ಕಾರದ ಜಾಗದಲ್ಲಿ ಚೆಕ್‌ಡ್ಯಾಂ ನಿರ್ಮಾಣ
- ದಶಕ ಕಳೆದರೂ ಈಡೇರದ ಬೇಡಿಕೆ
- ಅಧಿಕಾರಿಗಳು, ಜನಪ್ರತಿನಿಧಿಗಳಿಂದ ಸಿಗದ ಸ್ಪಂದನೆ

ಸ್ಮಶಾನ ಸಮಸ್ಯೆ ಇರುವ ಗ್ರಾಮಗಳನ್ನು ಗುರುತಿಸಲಾಗಿದೆ. ಅಳವಂಡಿಗೆ ಗುರುವಾರ ಭೇಟಿ ನೀಡಿ, ಎಸ್‌ಸಿ, ಎಸ್‌ಟಿ ಜನರಿಗೆ 3 ಎಕರೆ ಜಮೀನು ನೀಡಲಾಗಿದೆ.
ಅಮರೇಶ ಬಿರಾದಾರ್, ತಹಶೀಲ್ದಾರ್

ಅಳವಂಡಿ (ಕೊಪ್ಪಳ ಜಿಲ್ಲೆ): ಗ್ರಾಮದ ಅಂಬೇಡ್ಕರ್ ಕಾಲೊನಿಯ ಪರಿಶಿಷ್ಟ ಜಾತಿಯ ಜನರು ಬುಧವಾರ ಅಂತ್ಯಕ್ರಿಯೆಗೆ ಸ್ಮಶಾನವಿಲ್ಲದೇ, ಶವ ಹೊತ್ತು ಪರದಾಡಿದರು.

ಮಹಿಳೆಯ ಶವವನ್ನು ಕಾಲೊನಿಯ ಜನರು ಕಷ್ಟಪಟ್ಟು ಹೊತ್ತು ನಡೆದರೆ, ಅಂತ್ಯಕ್ರಿಯೆಗೆ ಕಟ್ಟಿಗೆ ತುಂಬಿಕೊಂಡು ತರುತ್ತಿದ್ದ ಟ್ರ್ಯಾಕ್ಟರ್ ಕೆಸರಿನಲ್ಲಿ ಸಿಲುಕಿ ಇನ್ನಷ್ಟು ಸಮಸ್ಯೆ ಉಂಟಾಯಿತು. ಮೂರು ತಾಸುಗಳ ನಂತರ ಪ್ರಯಾಸದಿಂದ ಅಂತ್ಯಕ್ರಿಯೆ ನಡೆಯಿತು.

'ಅಂತ್ಯಕ್ರಿಯೆ ನಡೆಸುತ್ತಿದ್ದ ಜಾಗದಲ್ಲಿ ಈಗ ಚೆಕ್ ಡ್ಯಾಂ ನಿರ್ಮಿಸಲಾಗಿದೆ. ಅದಕ್ಕೆ ಅಳವಂಡಿ-ಭೈರಾಪುರದ ಕಾಲ್ನಡಿಗೆ ದಾರಿಯ ಹಳ್ಳದಲ್ಲಿ ಅಂತ್ಯಕ್ರಿಯೆ ಮಾಡಬೇಕಿದೆ. ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ ಸ್ಥಗಿತಗೊಳಿಸಿ, ಸ್ಮಶಾನಕ್ಕೆ ಜಾಗ ನೀಡುವಂತೆ ಒತ್ತಾಯಿಸಿದರೂ ಜಿಲ್ಲಾಡಳಿತ ಸ್ಪಂದಿಸಲಿಲ್ಲ. ದಾರಿ ಮಧ್ಯದ ಜಮೀನಿನ ಮಾಲೀಕರು ಅಂತ್ಯಕ್ರಿಯೆಗೆ ಅಡ್ಡಿಪಡಿಸಿದರೆ, ಮತ್ತಷ್ಟು ದೂರ ಹೋಗಬೇಕು' ಎಂದು ನಿವಾಸಿಗಳು ನೋವು ತೋಡಿಕೊಂಡರು.

'ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 300ಕ್ಕೂ ಹೆಚ್ಚು ಕುಟುಂಬಗಳಿವೆ.

ಕೊಪ್ಪಳ ಜಿಲ್ಲೆಯ ಅಳವಂಡಿಯಲ್ಲಿ ಕೆಸರುಗದ್ದೆಯಂತಾದ ರಸ್ತೆಯಲ್ಲಿ ಅಂತ್ಯಕ್ರಿಯೆಗೆ ತೆರಳುತ್ತಿರುವ ಜನರು

ಮೃತಪಟ್ಟರೆ, ಹಳ್ಳದ ದಂಡೆ ಅಥವಾ ದೂರದ ಪ್ರದೇಶಕ್ಕೆ ಹೋಗಿ ಅಂತ್ಯಕ್ರಿಯೆ ಮಾಡಬೇಕು. ಮಳೆಗಾಲದಲ್ಲಿ ಒಂದು ಕಿ.ಮೀ. ಉದ್ದದ ರಸ್ತೆ ಕೆಸರುಮಯ ಆಗಿರುತ್ತದೆ. ಸ್ಮಶಾನಕ್ಕೆ ಬೇಡಿಕೆಯಿಟ್ಟು ದಶಕವಾದರೂ ಪರಿಸ್ಥಿತಿ ಸುಧಾರಿಸಿಲ್ಲ' ಎಂದು ಅವರು ದೂರಿದರು.

'ಸಂಕಷ್ಟದಲ್ಲೇ ಜೀವನ ಕಳೆಯುವ ಪರಿಶಿಷ್ಟ ಜಾತಿಯ ಸಮುದಾಯಕ್ಕೆ ಸತ್ತ ಮೇಲೂ ಶಾಂತಿ ಸಿಗುವುದಿಲ್ಲ. ಸ್ಮಶಾನಕ್ಕಾಗಿ ಹಕ್ಕೊತ್ತಾಯ ಮಾಡಿದರೂ ಅಧಿಕಾರಿಗಳು, ಜನಪ್ರತಿನಿಧಿಗಳು ಸ್ಪಂದಿಸದಿದ್ದರೆ, ನಮ್ಮ ಪರಿಸ್ಥಿತಿ ಏನಾಗಬೇಕು' ಎಂದು ಸಮುದಾಯದ ದುರಗೇಶ ತಂಬೂರಿ ಪ್ರಶ್ನಿಸಿದರು.

ಹೂವಿನ ಭರಾಟೆ... ಬೆಂಗಳೂರಿನ ಗಾಂಧಿಬಜಾರ್‌ನಲ್ಲಿ ಗುರುವಾರ ಗಣೇಶ ಹಬ್ಬದ ಪ್ರಯುಕ್ತ ಹೂವಿನ ವ್ಯಾಪಾರ ಭರಾಟೆಯಿಂದ ನಡೆಯಿತು ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಅಧಿಕಾರಿಗಳ ಎದುರೇ ಪರಸ್ಪರ ಏಕವಚನ ಬಳಕೆ

ಡಿಎಂಎಫ್ ನಿಧಿ: ಸಚಿವ– ಶಾಸಕ ಕಿತ್ತಾಟ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಜಿಲ್ಲಾ ಖನಿಜ ನಿಧಿ (ಡಿಎಂಎಫ್) ಹಂಚಿಕೆ ವಿಷಯವಾಗಿ ಜಿಲ್ಲಾ ಉಸ್ತುವಾರಿ ಸಚಿವ ಆನಂದ್ ಸಿಂಗ್ ಹಾಗೂ ಸಂಡೂರು ಕ್ಷೇತ್ರದ ಶಾಸಕ ತುಕಾರಾಂ ಏಕ ವಚನದಲ್ಲಿ ಕಿತ್ತಾಡಿಕೊಂಡು, ಶಾಸಕರು ಸಭೆಯಿಂದ ಹೊರನಡೆದ ಪ್ರಸಂಗ ಗುರುವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆಯಿತು.

ಅಧಿಕಾರಿಗಳೆದುರೇ ಆನಂದ್‌ಸಿಂಗ್ ಮತ್ತು ತುಕಾರಾಂ ಸುಮಾರು ಅರ್ಧಗಂಟೆ ಕಿತ್ತಾಡಿದರು. ವಿಧಾನಪರಿಷತ್ ಸದಸ್ಯರಾದ ಕೆ.ಸಿ. ಕೊಂಡಯ್ಯ ಮತ್ತು ಅಲ್ಲಂ ವೀರಭದ್ರಪ್ಪ ಅವರು, ಇಬ್ಬರನ್ನೂ ಸಮಾಧಾನಪಡಿಸಲು ನಡೆಸಿದ ಪ್ರಯತ್ನ ಫಲಿಸಲಿಲ್ಲ.

ತುಕಾರಾಂ

ಆನಂದ್ ಸಿಂಗ್

ತಮ್ಮ ಕ್ಷೇತ್ರಕ್ಕೆ ಆಗಿರುವ ಅನ್ಯಾಯ ಸರಿಪಡಿಸಲು ಕೋರ್ಟ್ ಮೊರೆ ಹೋಗುವುದಾಗಿ ಕೂಗಾಡುತ್ತಾ ತುಕಾರಾಂ ಸಭೆಯಿಂದ ಹೊರನಡೆದರು. ಆನಂದ್‌ಸಿಂಗ್ ಅಧ್ಯಕ್ಷತೆಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನದ ಸಭೆ ಸೇರಿತ್ತು.

ಜಿಲ್ಲಾ ಖನಿಜ ನಿಧಿ ಅನುದಾನದಡಿ ನಡೆಯುತ್ತಿರುವ, ನಡೆಯಲಿರುವ ಕಾಮಗಾರಿಗಳ ಪ್ರಗತಿ ಕುರಿತು ಚರ್ಚೆ ಆಗುತ್ತಿತ್ತು. ಆ ಸಮಯದಲ್ಲಿ ತುಕಾರಾಂ, 'ಗಣಿಗಾರಿಕೆಯಿಂದ ಹೆಚ್ಚು ಬಾಧಿತವಾಗಿರುವ ಸಂಡೂರಿಗೆ ಡಿಎಂಎಫ್ ಮಾರ್ಗಸೂಚಿಯಂತೆ ಶೇ 60ರಷ್ಟು ಅನುದಾನ ಹಂಚಿಕೆ ಮಾಡದೆ ಅನ್ಯಾಯ ಮಾಡಲಾಗಿದೆ' ಎಂದು ದೂರಿದರು.

'ಕ್ರಿಯಾ ಯೋಜನೆ ಸಿದ್ಧವಾಗಿದ್ದು ನಿಮ್ಮ (ಕಾಂಗ್ರೆಸ್) ಸರ್ಕಾರದಲ್ಲೇ. ಡಿ.ಕೆ.ಶಿವಕುಮಾರ್ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ. ಆಗ ಕಣ್ಣು ಮುಚ್ಚಿ ಕುಳಿತುಕೊಂಡು, ಈಗ ಕ್ಯಾತೆ ತೆಗೆಯುವುದು ಸರಿಯಲ್ಲ' ಎಂದು ಆನಂದ್ ಸಿಂಗ್ ಕೂಗಾಡಿದರು.

'ಅನುದಾನ ಹಂಚಿಕೆಯಲ್ಲಿ ರಾಜಕಾರಣ ನಡೆಯುತ್ತಿದೆ' ಎಂದು ತುಕಾರಾಂ ಆರೋಪಿಸಿದರು. ಈ ಹಂತದಲ್ಲಿ ಇಬ್ಬರ ನಡುವೆ ಮಾತಿನ ಚಕಮಕಿ ತಾರಕಕ್ಕೆ ಹೋಗಿ ಕೊನೆಗೆ ಶಾಸಕರು ಸಭೆಯಿಂದ ಹೊರನಡೆದರು.

ಅಪಾಯದ ಅಂಚಿಗೆ ಘಾಟ್ ರಸ್ತೆ

ಒಂದನೇ ಪುಟದಿಂದ

2018 ರಿಂದ ರಾಜ್ಯದ ಘಾಟ್ ಪ್ರದೇಶದಲ್ಲಿ ಭೂಕುಸಿತ ಸಾಮಾನ್ಯವಾಗಿದೆ. ಅದಕ್ಕೂ ಮೊದಲು ಭೂಕುಸಿತ ಅಪರೂಪವಾಗಿತ್ತು. ಹವಾಮಾನ ವೈಪರೀತ್ಯದಿಂದ ಮುಂದಿನ ವರ್ಷಗಳಲ್ಲಿ ಭೂಮಿ ಕುಸಿತ ಸಾಮಾನ್ಯ ವಿದ್ಯಮಾನ ಆಗುತ್ತದೆ. ಆದ್ದರಿಂದ ಇವುಗಳ ಅಭಿವೃದ್ಧಿಗೆ ಎನ್‌ಡಿಆರ್‌ಎಫ್ ಅಥವಾ ಎಸ್‌ಡಿಆರ್‌ಎಫ್‌ನಿಂದ ನೀಡುವ ಪರಿಹಾರದ ಮೊತ್ತ, ಮಣ್ಣು ಉದುರಿಸುವುದಕ್ಕೂ ಸಾಲದು. ಕೇಂದ್ರ ಸರ್ಕಾರ ಇದಕ್ಕಾಗಿ ಪ್ರತ್ಯೇಕ ಪ್ಯಾಕೇಜ್ ನೀಡಬೇಕಾಗುತ್ತದೆ. ಈ ಸಂಬಂಧ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ರಾಜ್ಯದ ಮುಖ್ಯ ಎಂಜಿನಿಯರ್ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ ಎಂದು ರೆಡ್ಡಿ ವಿವರಿಸಿದರು.

'ಹವಾಮಾನ ಬದಲಾವಣೆಯಿಂದ 'ಪದೇ ಪದೇ ಅತಿರೇಕದ ವರ್ತನೆ' ಎಂದು ಕರೆಯಲಾಗುವ ಒಂದು ತಿಂಗಳ ಮಳೆ ನಾಲ್ಕು ದಿನ ಅಥವಾ ಒಂದು ವಾರದಲ್ಲಿ ಸುರಿಯುತ್ತದೆ. ಇದರಿಂದ ನೀರು ಕುಡಿದು ಭಾರವಾಗುವ ಬೆಟ್ಟಗಳು ಜರಿದು ಬೀಳುತ್ತದೆ. ಎಲ್ಲೆಲ್ಲಿ ಗುಡ್ಡಗಳನ್ನು ಲಂಬವಾಗಿ ಕತ್ತರಿಸಿ ರಸ್ತೆ ಮಾಡಿರುತ್ತಾರೋ ಅಲ್ಲಿ ಇಂತಹ ಅನಾಹುತ ಹೆಚ್ಚು. ರಾಜ್ಯದ ಬಹುತೇತ ಘಾಟಿ ರಸ್ತೆಗಳದ್ದು ಇದೇ ಸಮಸ್ಯೆ' ಎಂದು ಅವರು ವಿವರಿಸಿದರು.

'ಘಾಟ್‌ಗೆ ಪ್ರತ್ಯೇಕ ನೀತಿ ಅಗತ್ಯ'

ಘಾಟ್ ರಸ್ತೆಯ ಪಕ್ಕದ ಗುಡ್ಡಗಳನ್ನು ಲಂಬವಾಗಿ ಕತ್ತರಿಸಬಾರದು ಮತ್ತು ರಸ್ತೆ ಅಗಲ ಮಾಡಬಾರದು. ಸ್ಥಳೀಯ ಬೇಡಿಕೆ ಮತ್ತು ರಸ್ತೆಯಲ್ಲಿ ವಾಹನ ದಟ್ಟಣೆ ಇಲ್ಲದಿದ್ದರೂ ನಾಲ್ಕು ಅಥವಾ ಆರು ಲೇನ್ ರಸ್ತೆ ಮಾಡುವುದು ಸರಿಯಲ್ಲ ಎನ್ನುತ್ತಾರೆ ಪಶ್ಚಿಮಘಟ್ಟದ ಭೂಪ್ರದೇಶದ ಅಧ್ಯಯನ ನಡೆಸಿರುವ ಸಂರಕ್ಷಣ ಜೀವಶಾಸ್ತ್ರಜ್ಞ ಡಾ. ಕೇಶವ ಎಚ್. ಕೊರ್ಸೆ.

ಕಡಿದಾದ ಆಗುಂಬೆ ಘಾಟಿಯಲ್ಲಿ ಚತುಷ್ಪಥ ಮಾಡಿದರೆ ಅನಾಹುತ ಆಗುತ್ತದೆ. ಕಾರ್ಯಸಾಧ್ಯ ಅಧ್ಯಯನ ನಡೆಸದೇ ಈ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ದೂರದ ರಾಜ್ಯದ ಊರಿಗೆ ಸಂಪರ್ಕ ತೋರಿಸಿ ಅಗಲೀಕರಣ (ಉದಾಹರಣೆ: ಮಂಗಳೂರು–ಸೊಲ್ಲಾಪುರ) ಮಾಡಲಾಗುತ್ತಿದೆ. ಘಾಟ್ ರಸ್ತೆ ನಿರ್ಮಾಣ ಮತ್ತು ನಿರ್ವಹಣೆಗೆ ಪ್ರತ್ಯೇಕ ಮಾರ್ಗಸೂಚಿ ಇಲ್ಲ. ಈ ಪ್ರದೇಶದ ಮಳೆ ಪ್ರಮಾಣ, ಗುಡ್ಡದ ಇಳಿಜಾರು ಮತ್ತು ಮಣ್ಣಿನ ರಚನೆ ಆಧರಿಸಿ ನೀತಿ ರೂಪಿಸಬೇಕು ಎಂದು ಅವರು ಹೇಳಿದರು.

ಲಸಿಕೆಗೆ ಕಾರ್ಮಿಕ ನಿಧಿ: ಕಾರ್ಯಾದೇಶ ಹಿಂತೆಗೆತ

ಪ್ರಜಾವಾಣಿ ವಾರ್ತೆ

ವರದಿ ಫಲಶ್ರುತಿ

ಬೆಂಗಳೂರು: ಕಾರ್ಮಿಕ ಕಲ್ಯಾಣ ನಿಧಿ ಹಣ ಬಳಸಿಕೊಂಡು ಖಾಸಗಿ ಆಸ್ಪತ್ರೆಗಳ ಮೂಲಕ ಲಸಿಕಾ ಅಭಿಯಾನ ನಡೆಸಲು ಕಾರ್ಮಿಕ ಇಲಾಖೆ ಹೊರಡಿಸಿದ್ದ ಕಾರ್ಯಾದೇಶವನ್ನು ಹಿಂದಕ್ಕೆ ಪಡೆದಿದೆ.

'ಕಟ್ಟಡ ಹಾಗೂ ಇತರ ನಿರ್ಮಾಣ ಕಾರ್ಮಿಕರಿಗೆ ಕಲ್ಯಾಣ ಮಂಡಳಿಯಿಂದ ಲಸಿಕೆ ಕೊಡಿಸಲು ಉದ್ದೇಶಿಸಲಾಗಿತ್ತು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದಲೇ ಕಾರ್ಮಿಕರಿಗೆ ಲಸಿಕೆ ಹಾಕಿಸುವಂತೆ ಸೂಚನೆ ಬಂದಿರುವುದರಿಂದ ಕಾರ್ಯಾದೇಶ ಹಿಂಪಡೆಯಲಾಗಿದೆ' ಎಂದು ಕಾರ್ಮಿಕ ಇಲಾಖೆ ತಿಳಿಸಿದೆ.

ಈ ಸಂಬಂಧ ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಅಸೋಸಿಯೇಷನ್‌ಗೆ (ಫನಾ) ಪತ್ರ ಬರೆದು ಸ್ಪಷ್ಟಪಡಿಸಿದೆ.

ಕಾರ್ಮಿಕರಿಗೆ ಕೋವಿಡ್ ಲಸಿಕೆ ಕೊಡಿಸಲು ಕಾರ್ಮಿಕರ ನಿಧಿಯ ಹಣ ಖರ್ಚು ಮಾಡುವುದಕ್ಕೆ ವ್ಯಕ್ತವಾಗಿದ್ದ ವಿರೋಧದ ಬಗ್ಗೆ 'ಲಸಿಕೆ: ಕಾರ್ಮಿಕ ನಿಧಿಯ ₹700 ಕೋಟಿ ವ್ಯಯ?' ಎಂಬ ಶೀರ್ಷಿಕೆಯಡಿ ಸೆ.5ರಂದು 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು.

ಕೋವಿಡ್ ಲಸಿಕೆ ನೀಡಲು ಖಾಸಗಿ ಆಸ್ಪತ್ರೆಗಳಿಗೆ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ನೀಡಿರುವ ಕಾರ್ಯಾದೇಶವನ್ನು ಮಂಡಳಿ ರದ್ದುಗೊಳಿಸಿರುವುದು ಸ್ವಾಗತಾರ್ಹ ಕ್ರಮ ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ ತಿಳಿಸಿದ್ದಾರೆ.

'ರಾಜ್ಯದಲ್ಲಿರುವ 30 ಲಕ್ಷ ಕಟ್ಟಡ ಹಾಗೂ 10 ಲಕ್ಷ ವಲಸೆ ಕಾರ್ಮಿಕರಿಗೆ ಕೊವೀಡ್ ಲಸಿಕೆ ನೀಡಲು ಖಾಸಗಿ ಆಸ್ಪತ್ರೆಗಳಿಗೆ ಕಟ್ಟಡ ಕಾರ್ಮಿಕ ಮಂಡಳಿ ನಿಧಿಯಿಂದ ಪ್ರತಿ ಡೋಸ್‌ಗೆ ₹780 ದರ ನಿಗದಿಪಡಿಸಿತ್ತು. ಇದನ್ನು ವಿರೋಧಿಸಿ ಕಟ್ಟಡ ಕಾರ್ಮಿಕ ಸಂಘಟನೆಗಳು ಹೋರಾಟ ನಡೆಸಿದ್ದವು. ಸರ್ಕಾರ ಸ್ಪಂದಿಸಿರುವುದು ಸ್ವಾಗತಾರ್ಹ' ಎಂದಿದ್ದಾರೆ.

ಶಿಕ್ಷಕರ ವರ್ಗಾವಣೆಗೆ ಮತ್ತೆ ಕೆಎಟಿ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ (2020–21) ವರ್ಗಾವಣೆ ಪ್ರಕ್ರಿಯೆಗೆ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಮತ್ತೊಮ್ಮೆ ತಡೆಯಾಜ್ಞೆ ನೀಡಿದೆ. ಹೀಗಾಗಿ, ಜೂನ್ 30ರಂದು ಹೊರಡಿಸಿದ್ದ ಅಧಿಸೂಚನೆಯಂತೆ ಆರಂಭಗೊಂಡಿದ್ದ ವರ್ಗಾವಣೆ ಪ್ರಕ್ರಿಯೆ ಸ್ಥಗಿತಗೊಂಡಿದೆ.

ಸ. 11ರಂದು ಮೊದಲ ಬಾರಿ ಹೊರಡಿಸಿದ್ದ ವರ್ಗಾವಣೆ ಅಧಿಸೂಚನೆಯನ್ನೂ ಕೆಎಟಿ ರದ್ದುಪಡಿಸಿತ್ತು. ವರ್ಗಾವಣೆ ಬಯಸಿ 75 ಸಾವಿರಕ್ಕೂ ಹೆಚ್ಚು ಶಿಕ್ಷಕರು ಅರ್ಜಿ ಸಲ್ಲಿಸಿದ್ದಾರೆ.

2019–20ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾದವರಿಗೆ ಕೌನ್ಸೆಲಿಂಗ್ ವೇಳೆ ವಿಶೇಷ ಆದ್ಯತೆ ನೀಡುವ ಪ್ರಸ್ತಾವ 'ಶಿಕ್ಷಕರ ವರ್ಗಾವಣೆ ಕಾಯ್ದೆ -2020'ರಲ್ಲಿ ಇಲ್ಲದಿದ್ದರೂ ಅಧಿಸೂಚನೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಸರ್ಕಾರದ ಈ ನಡೆಯನ್ನು ಕೆಲವು ಶಿಕ್ಷಕರು ಕೆಎಟಿಯಲ್ಲಿ ಪ್ರಶ್ನಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಕೆಎಟಿ, ಶಿಕ್ಷಕರ ಪರವಾಗಿ ತೀರ್ಪು ನೀಡಿತ್ತು. ಈ ತೀರ್ಪು ಪ್ರಶ್ನಿಸಿ ಹೈಕೋರ್ಟ್‌ಗೆ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು. ಆದರೆ, ಕೆಎಟಿ ತೀರ್ಪನ್ನೇ ಹೈಕೋರ್ಟ್ ಎತ್ತಿ ಹಿಡಿದಿತ್ತು.

ಹೀಗಾಗಿ, ಸುಗ್ರೀವಾಜ್ಞೆ ಮೂಲಕ ಕಾಯ್ದೆಗೆ ತಿದ್ದುಪಡಿ ತಂದು, 2019–20ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾದವರಿಗೆ ಕೌನ್ಸೆಲಿಂಗ್ ವೇಳೆ ವಿಶೇಷ ಆದ್ಯತೆ ನೀಡಿ ಪರಿಷ್ಕೃತ ಅಧಿಸೂಚನೆಯನ್ನು ಸರ್ಕಾರ ಹೊರಡಿಸಿತ್ತು. ವರ್ಗಾವಣೆಗೆ ಅರ್ಹ ಶಿಕ್ಷಕರಿಗೆ ಅರ್ಜಿ ಸಲ್ಲಿಸಲು ಸೆ. 8ರವರೆಗೆ ಅವಕಾಶ ನೀಡಲಾಗಿತ್ತು. ಅಲ್ಲದೆ, 2019–20ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾದವರಿಗೆ ಸೆ. 15ರಿಂದ ಕೌನ್ಸೆಲಿಂಗ್ ನಡೆಸಲು ನಿರ್ಧರಿಸಲಾಗಿತ್ತು.

ಈ ಮಧ್ಯೆ, 2016–17ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾಗಿರುವ ಶಿಕ್ಷಕರು ಮತ್ತೆ ಕೆಎಟಿ ಮೆಟ್ಟಿಲೇರಿದ್ದಾರೆ. 'ತಮಗೂ ವಿಶೇಷ ಆದ್ಯತೆ ನೀಡಬೇಕು' ಎಂದು ಅವರು ಮನವಿ ಮಾಡಿದ್ದಾರೆ. ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಿರುವ ನ್ಯಾಯಮಂಡಳಿ, ವರ್ಗಾವಣೆ ಪ್ರಕ್ರಿಯೆಗೆ ತಡೆ ನೀಡಿದೆ.

ಐಐಎಸ್ಸಿ ಅತ್ಯುತ್ತಮ ಸಂಶೋಧನಾ ಸಂಸ್ಥೆ

ಒಂದನೇ ಪುಟದಿಂದ

ವೈದ್ಯಕೀಯ ವಿಭಾಗದಲ್ಲಿ ಬೆಂಗಳೂರಿನ ನಿಮ್ಹಾನ್ಸ್‌ಗೆ 4ನೇ ಸ್ಥಾನ, ಮಣಿಪಾಲದ ಕಸ್ತೂರಬಾ ವೈದ್ಯಕೀಯ ಕಾಲೇಜಿಗೆ 10ನೇ ಸ್ಥಾನ ದೊರೆತಿದೆ. ದಂತ ವೈದ್ಯಕೀಯ ಕಾಲೇಜು ರ್‍ಯಾಂಕಿಂಗ್ ಪಟ್ಟಿಯಲ್ಲಿ ಉಡುಪಿಯ ಮಣಿಪಾಲ ದಂತ ವೈದ್ಯಕೀಯ ಕಾಲೇಜು ಮೊದಲ ಸ್ಥಾನದಲ್ಲಿದ್ದರೆ, ಮಂಗಳೂರಿನ ಎ.ಬಿ. ಶೆಟ್ಟಿ ದಂತ ವೈದ್ಯಕೀಯ ಕಾಲೇಜು 6ನೇ ಸ್ಥಾನ, ಮಂಗಳೂರಿನ ಮಣಿಪಾಲ ದಂತ ವೈದ್ಯಕೀಯ ಕಾಲೇಜು 7ನೇ ಸ್ಥಾನವನ್ನು ಪಡೆದುಕೊಂಡಿವೆ.

ಫಾರ್ಮಸಿ ಕಾಲೇಜು ವಿಭಾಗದಲ್ಲಿ ಉಡುಪಿಯ ಮಣಿಪಾಲ ಕಾಲೇಜ್ ಆಫ್ ಫಾರ್ಮಾಸಿಟಿಕಲ್ ಸೈನ್ಸ್ ಮತ್ತು ಮೈಸೂರಿನ ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ ಕ್ರಮವಾಗಿ 7 ಮತ್ತು 8ನೇ ಸ್ಥಾನದಲ್ಲಿವೆ.ವಿಶ್ವವಿದ್ಯಾಲಯ ವಿಭಾಗದಲ್ಲಿ ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಏಳನೇ ಸ್ಥಾನದಲ್ಲಿದ್ದರೆ, ಎಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳ ವಿಭಾಗದಲ್ಲಿ ಸುರತ್ಕಲ್‌ನ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ (ಎನ್‌ಐಟಿ) 10ನೇ ಸ್ಥಾನ ಪಡೆದಿದೆ.

ಮದ್ರಾಸ್ ಐಐಟಿ ಅಗ್ರಸ್ಥಾನ: ದೇಶದಲ್ಲಿನ ಅತ್ಯುತ್ತಮ ಸಂಸ್ಥೆಗಳಲ್ಲಿ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಮದ್ರಾಸ್ ಈ ವರ್ಷವೂ ಅಗ್ರಸ್ಥಾನ ಪಡೆದಿದೆ. ಅದು ಎಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳ ವಿಭಾಗದಲ್ಲೂ ಮೊದಲ ಸ್ಥಾನ ಪಡೆದುಕೊಂಡಿದೆ.ಅಹಮದಾಬಾದ್‌ನ ಭಾರತೀಯ ನಿರ್ವಹಣಾ ಸಂಸ್ಥೆಯು (ಐಐಎಂ) 'ಬಿ–ಸ್ಕೂಲ್'ಗಳಲ್ಲೇ ಅತ್ಯುತ್ತಮ ಸ್ಥಾನ ಪಡೆದಿದೆ. ಕೋಲ್ಕತ್ತದ ಐಐಎಂ ಮೂರನೇ ಸ್ಥಾನದಲ್ಲಿದೆ.

ಮೊದಲ ಸ್ಥಾನದಲ್ಲಿ ಏಮ್ಸ್: ವೈದ್ಯಕೀಯ ಕಾಲೇಜುಗಳ ವಿಭಾಗದಲ್ಲಿ ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಏಮ್ಸ್) ಮೊದಲ ಸ್ಥಾನ ಪಡೆದಿದೆ. ನಂತರದ ಸ್ಥಾನವನ್ನು ಚಂಡೀಗಡದ ಪಿಜಿಐಎಂಇಆರ್ ಪಡೆದಿದೆ. ವೆಲ್ಲೋರ್‌ನ ಕ್ರಿಶ್ಚಿಯನ್ ವೈದ್ಯಕೀಯ ಕಾಲೇಜು ಮೂರನೇ ಸ್ಥಾನ ಪಡೆದಿದೆ. ದೆಹಲಿಯ ಜಮಿಯಾ ಹಮದರ್ದ್ ಸಂಸ್ಥೆ ಫಾರ್ಮಸಿ ವಿಭಾಗದಲ್ಲಿ ಅಗ್ರಸ್ಥಾನ ಪಡೆದಿದೆ.

ಕಾಲೇಜು ವಿಭಾಗದಲ್ಲಿ ದೆಹಲಿಯ ಮಿರಂದಾ ಮೊದಲ ಸ್ಥಾನದಲ್ಲಿದೆ. ಮಹಿಳೆಯರಿಗಾಗಿ ಇರುವ ದೆಹಲಿಯ ಲೇಡಿ ಶ್ರೀ ರಾಮ ಕಾಲೇಜು ಮತ್ತು ಚೆನ್ನೈನ ಲೊಯೊಲಾ ಕಾಲೇಜುಗಳು ಕ್ರಮವಾಗಿ ಎರಡು, ಮೂರನೇ ಸ್ಥಾನಗಳನ್ನು ಪಡೆದುಕೊಂಡಿವೆ.

ಮೊದಲ 10 ಸ್ಥಾನದಲ್ಲಿರುವ ಸಂಸ್ಥೆಗಳು

ಮದ್ರಾಸ್ ಐಐಟಿ, ಬೆಂಗಳೂರಿನ ಐಐಎಸ್ಸಿ, ದೆಹಲಿ ಐಐಟಿ, ಬಾಂಬೆ ಐಐಟಿ, ಖರಗ್‌ಪುರ ಐಐಟಿ, ಕಾನ್ಪುರ ಐಐಟಿ, ಗುವಾಹಟಿ ಐಐಟಿ, ರೂರ್ಕಿ ಐಐಟಿ, ಜವಾಹರ ಲಾಲ್ ನೆಹರೂ ವಿ.ವಿ ಮತ್ತು ಬನಾರಸ್ ಹಿಂದೂ ವಿ.ವಿ

ನಿಧನ ವಾರ್ತೆ

ನಿರ್ಮಾಪಕ ಸಿ.ಜಯರಾಂ

ಬೆಂಗಳೂರು: ಕನ್ನಡ ಚಿತ್ರರಂಗದ ಹಿರಿಯ ನಿರ್ಮಾಪಕ ಸಿ.ಜಯರಾಂ (84) ಅವರು ಗುರುವಾರ ನಸುಕಿನಲ್ಲಿ ನಿಧನರಾದರು.

'ಪಾವನ ಗಂಗಾ', 'ಗಲಾಟೆ ಸಂಸಾರ', 'ಆಟೋರಾಜ', 'ನಾ ನಿನ್ನ ಬಿಡಲಾರೆ' ಮುಂತಾದ ಸೂಪರ್ ಹಿಟ್ ಚಿತ್ರಗಳನ್ನು ಸಿ.ಜಯರಾಂ ಅವರು ನಿರ್ಮಿಸಿದ್ದರು.

ಅವರ ಪುತ್ರ ಮಿಲನ ಪ್ರಕಾಶ್ ಅವರು ಚಿತ್ರ ನಿರ್ದೇಶಕರು.

ಜಯರಾಂ ಅಂತ್ಯಕ್ರಿಯೆ ಗುರುವಾರ ಸುಮನಹಳ್ಳಿ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹರಪನಹಳ್ಳಿಯ ಗ್ರಾಮೀಣ ಪ್ರತಿಭೆ ತಯಾರಿಸಿದ ಇಟ್ಟಿಗೆ ಎತ್ತುವ ಸರಳ ಮಾದರಿ

ಸಮರ್ಥ್‌ಗೆ ಇನ್‌ಸ್ಪೈರ್ ರಾಷ್ಟ್ರೀಯ ಪ್ರಶಸ್ತಿ

• ವಿಶ್ವನಾಥ ಡಿ.

ಹರಪನಹಳ್ಳಿ: 'ಇನ್‌ಸ್ಪೈರ್ ಅವಾರ್ಡ್–ಮಿಲಿಯನ್ ಮೈಂಡ್ಸ್ ಆಗ್ಮೆಂಟಿಂಗ್ ನ್ಯಾಷನಲ್ ಆಸ್ಪಿರೇಷನ್ಸ್ ಮತ್ತು ನಾಲೆಡ್ಜ್' ಸ್ಪರ್ಧೆಯಲ್ಲಿ ತಾಲ್ಲೂಕಿನ ಗ್ರಾಮೀಣ ಪ್ರತಿಭೆ, ವಿದ್ಯಾರ್ಥಿ ಕೆ.ಸಮರ್ಥ್, 'ಇಟ್ಟಿಗೆ ಎತ್ತುವ ಸರಳ ಸಾಧನ'ದ ಮಾದರಿಯನ್ನು ಪ್ರದರ್ಶಿಸಿ ರಾಷ್ಟ್ರಮಟ್ಟದ 60 ವಿದ್ಯಾರ್ಥಿಗಳಲ್ಲಿ ಸ್ಥಾನ ಪಡೆದುಕೊಂಡಿದ್ದಾನೆ.

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಹಲುವಾಗಲು ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಸಮರ್ಥ್ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಈತ ತಾವರಗೊಂದಿ ಶಾಲೆಯ ಶಿಕ್ಷಕ ಕೆ.ಮೋಹನ್ ಮತ್ತು ಶೋಭಾ ದಂಪತಿ ಪುತ್ರ.

2019ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲಾ ಮಟ್ಟದಲ್ಲಿ ಮಾದರಿಯನ್ನು ಪ್ರದರ್ಶಿಸಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದ. ನಂತರ ಆದಿಚುಂಚನಗಿರಿಯಲ್ಲಿ ನಡೆದಿದ್ದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಈ ಮಾದರಿಯು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿತ್ತು.

ಕೋವಿಡ್ ಕಾರಣಕ್ಕೆ ರಾಷ್ಟ್ರಮಟ್ಟದ ಸ್ಪರ್ಧೆಯು ಆನ್‌ಲೈನ್‌ನಲ್ಲಿ ನಡೆದು ಬುಧವಾರ ಫಲಿತಾಂಶ ಪ್ರಕಟವಾಗಿದೆ. ವಿದ್ಯಾರ್ಥಿಗೆ ಶಿಕ್ಷಕರಾದ ಮಧು ಮತ್ತು ದೀಪಕ್ ಮಾರ್ಗದರ್ಶನ ಮಾಡಿದ್ದಾರೆ. ದೆಹಲಿಯಲ್ಲಿ ನಡೆಯುವ ಫೆಸ್ಟಿವಲ್ ಆಫ್ ಇನ್ನೊವೇಷನ್ ಮತ್ತು ಎಂಟರ್‌ಪ್ರೈನರ್‌ಶಿಪ್ ಕಾರ್ಯಕ್ರಮದಲ್ಲಿ ಸಮರ್ಥ್ ಪ್ರಶಸ್ತಿ ಸ್ವೀಕರಿಸಲಿದ್ದಾನೆ.

'ಉನ್ನತ ವ್ಯಾಸಂಗ ಮಾಡಿ, ವಿಜ್ಞಾನಿಯಾಗುವ ಗುರಿ ಹೊಂದಿದ್ದೇನೆ. ಶಿಕ್ಷಕರು, ತಂದೆ–ತಾಯಿ ಪ್ರೇರಣೆಯಾಗಿದ್ದಾರೆ' ಎಂದು ಸಮರ್ಥ್ ಸ್ಮರಿಸಿದನು.

'ರಾಜ್ಯದ 5 ವಿದ್ಯಾರ್ಥಿಗಳ ಪೈಕಿ ನನ್ನ ಮಗನೂ ಪ್ರಶಸ್ತಿ ಪಡೆದಿರುವುದು ಸಂತಸ ತಂದಿದೆ' ಎಂದು ಸಮರ್ಥ್‌ನ ತಂದೆ ಮೋಹನ್ ಪ್ರತಿಕ್ರಿಯಿಸಿದರು.

'ಸಮರ್ಥ್‌ಗೆ ಅಭಿನಂದನೆ. ತಾಲ್ಲೂಕಿನ ವಿವಿಧ ಶಾಲೆಯ ಶಿಕ್ಷಕರು, ಮಕ್ಕಳಲ್ಲಿ ಸೃಜನಶೀಲತೆ ಬೆಳೆಸಲು ಯತ್ನಿಸಬೇಕು' ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎಂ. ವೀರಭದ್ರಯ್ಯ ಸಲಹೆ ನೀಡಿದರು.

ಇಟ್ಟಿಗೆ ಎತ್ತುವ ಬಹೂಪಯೋಗಿ ಸಾಧನ

ಗುಜರಿಯಿಂದ ಕಬ್ಬಿಣದ ತುಂಡುಗಳನ್ನು ತಂದು ಕ್ಲಿಪ್ ಸ್ಟ್ಯಾಂಡ್ ಮಾಡಿ, ಅದಕ್ಕೆ ಚಕ್ರಗಳನ್ನು ಜೋಡಿಸಿ, ಚಲಾಯಿಸುವಂತೆ ಮಾಡಲಾಗಿದೆ. ಅದರಲ್ಲಿ 10ರಿಂದ 16 ಇಟ್ಟಿಗೆಗಳನ್ನು ತೆಗೆದುಕೊಂಡು ಹೋಗಬಹುದಾಗಿದೆ. ಮೇಲಂತಸ್ತುಗಳಿಗೆ ಇಟ್ಟಿಗೆಗಳನ್ನು ತೆಗೆದುಕೊಂಡು ಹೋಗಲು ಸಾಧನವು ಅತ್ಯಂತ ಸಹಕಾರಿಯಾಗಿದೆ.

ಓದುವುದಕ್ಕೆ, ಬರೆಯುವುದಕ್ಕೂ ಈ ಸ್ಟ್ಯಾಂಡ್ ಉಪಯೋಗಿಸಬಹುದು. ಸಿಲಿಂಡರ್, ಹೆಚ್ಚಿನ ಪುಸ್ತಕಗಳನ್ನು ಸಾಗಿಸಲೂ ಅನುಕೂಲವಾಗಿದೆ. ಇಟ್ಟಿಗೆ ಹೆಂಡೆಯನ್ನು ಸಮನಾಗಿ ಕತ್ತರಿಸಬಹುದಾಗಿದೆ ಎಂದು ಮಾಹಿತಿ ನೀಡುತ್ತಾನೆ ಸಮರ್ಥ್.

ಬೊಲೆರೊ–ಬೈಕ್ ಡಿಕ್ಕಿ: ಮೂವರ ಸಾವು

ಚನ್ನಗಿರಿ: ತಾಲ್ಲೂಕಿನ ರಾಜಗೊಂಡನಹಳ್ಳಿಯಲ್ಲಿ ಬೊಲೆರೊ ಪಿಕಪ್ ವಾಹನ ಮತ್ತು ಬೈಕ್ ನಡುವೆ ಗುರುವಾರ ಅಪಘಾತ ಉಂಟಾಗಿ ಮೂವರು ಮೃತಪಟ್ಟಿದ್ದಾರೆ.

ತಾಲ್ಲೂಕಿನ ಮಲ್ಲೇಶ್ವರ ಗ್ರಾಮದ ಅಜ್ಜಯ್ಯ(19), ಮಂಜು(18) ಹಾಗೂ ದೇವರಾಜ್(19) ಮೃತಪಟ್ಟ ಯುವಕರು.

ಬೊಲೆರೊ ಪಿಕಪ್ ವಾಹನ ಬೀರೂರು ಕಡೆಯಿಂದ ಚನ್ನಗಿರಿಗೆ ಹಾಗೂ ಬೈಕ್ ಸವಾರರು ಚನ್ನಗಿರಿಯಿಂದ ಮಲ್ಲೇಶ್ವರ ಗ್ರಾಮಕ್ಕೆ ಬರುತ್ತಿದ್ದಾಗ ಈ ಅಪಘಾತ ಉಂಟಾಗಿದೆ.

ಅಜ್ಜಯ್ಯ ಸ್ಥಳದಲ್ಲೇ ಮೃತಪಟ್ಟರೆ, ಮಂಜು ಹಾಗೂ ದೇವರಾಜ್ ಆಸ್ಪತ್ರೆಯಲ್ಲಿ ನಿಧನರಾದರು. ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಸ್ಥಳದಲ್ಲಿ ನೂರಾರು ಜನರು ಜಮಾಯಿಸಿದ್ದರು. ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald--Prajavani Relief Trust' ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.finc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಸದಾ ಚಿರಋಣಿ

ಕಷ್ಟ ಕಾಲದಲ್ಲಿ 'ಪ್ರಜಾವಾಣಿ'ಯ ಶೈಕ್ಷಣಿಕ ನೆರವು ನಿಧಿಯಿಂದ ನೀಡಿದ ಹಣದಲ್ಲಿ ನನ್ನ ಶಿಕ್ಷಣದ ದೋಣಿ ಸಾಗಿದೆ. ತಂದೆ ಖಾಸಗಿ ಬಸ್ ಚಾಲಕರಾಗಿದ್ದು ಇಬ್ಬರು ಮಕ್ಕಳು. ಆರ್ಥಿಕವಾಗಿ ಸಮಸ್ಯೆಯಿದ್ದರೂ ನನ್ನನ್ನು ಓದಿಸಿ ಎಂಜಿನಿಯರ್ ಮಾಡಬೇಕೆಂದು ಕನಸು ಕಟ್ಟಿದ್ದಾರೆ. ಅವರ ಆಶಯದಂತೆ ಚೆನ್ನಾಗಿ ಓದಿ ನನ್ನಂತಹ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗುತ್ತೇನೆ. ಪತ್ರಿಕೆ ನೀಡಿದ ಆರ್ಥಿಕ ನೆರವಿಗೆ ಸದಾ ಚಿರಋಣಿ.

ಬಿ.ಎಲ್.ಈಶ್ವರ್, ಕೋಲಾರ

ಶುಲ್ಕ ಕಟ್ಟಿದೆ

'ಪ್ರಜಾವಾಣಿ' ನೀಡಿದ ವಿದ್ಯಾರ್ಥಿ ವೇತನ ಸಕಾಲಕ್ಕೆ ನೆರವಿಗೆ ಬಂತು. ಈ ಹಣದಲ್ಲಿ ಶುಲ್ಕ ಪಾವತಿಸಿ, ಶಿಕ್ಷಣ ಮುಂದುವರಿಸಲು ಸಹಕಾರಿಯಾಯಿತು. ಈಗ ದ್ವಿತೀಯ ಪಿಯುಸಿ ಅಭ್ಯಾಸ ಮಾಡುತ್ತಿದ್ದು 'ಪ್ರಜಾವಾಣಿ' ನೆರವಿನ ನೆನಪಿನೊಂದಿಗೆ ಮುನ್ನಡೆದಿದ್ದೇನೆ.

ಡಿ.ಎಚ್.ಲೇಖಾ, ತುಮಕೂರು

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

facebook Premier — ಸಂಜೆ 5 ಗಂಟೆಗೆ

ಚೌತಿಯಂದು ಪಂಚಮುಖಿ ಗಣೇಶನಿಗೆ ಪಂಚಮುಖಾಮೃತ
ವಿಶೇಷ ಖಂಜಿರ ಲಯ ವಿನ್ಯಾಸ ಕಾರ್ಯಕ್ರಮ
ಪ್ರಸ್ತುತಿ: ವಿದ್ವಾನ್ ಬೆಂಗಳೂರು ಎನ್. ಅಮೃತ್ ಹಾಗೂ ಆವಾಹನ ಕಲ್ಚರಲ್ ಟ್ರಸ್ಟ್ . ಪರಿಕಲ್ಪನೆ, ಸಂಯೋಜನೆ ಮತ್ತು ನಿರ್ದೇಶನ: 'ಖಂಜಿರ ಪ್ರವೀಣ' ವಿದ್ವಾನ್ ಬೆಂಗಳೂರು ಎನ್. ಅಮೃತ್. ಸಹ ಕಲಾವಿದರು: ಅನಿಲ್ ಪರಾಶರ, ಬೆಟ್ಟ ಎಚ್. ಮುಕುಂದ, ಲಕ್ಷ್ಮೀನಾರಾಯಣ ಜಿ., ಚವನ ಆರ್. ಶಾಸ್ತ್ರಿ

ಪಾಡ್‌ಕಾಸ್ಟ್: ಈದಿನದ ವಿಶೇಷ : ಸಂಜೆ 4 ಸಿನಿ ಮ್ಯಾಟನಿ, ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆ. 7.30 ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲಿಟಿನ್, ಬೆಳಿಗ್ಗೆ 9.30 ಸಂಪಾದಕೀಯ, ಬೆಳಿಗ್ಗೆ 9 ಪ್ರಚಲಿತ
ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಜಸ್ಟ್ ಮ್ಯೂಸಿಕ್
ತಾಯಿಯಾದ ಜೋಗತಿ!
https://bit.ly/3hd1qpp

ಮುಖಾಮುಖಿ: ಟೋಕಿಯೊ ಪ್ಯಾರಾಲಿಂಪಿಕ್ಸ್ ಬೆಳ್ಳಿಪದಕ ವಿಜೇತ ಬ್ಯಾಡ್ಮಿಂಟನ್ ಆಟಗಾರ ಸುಹಾಸ್ ಯತಿರಾಜು ಅವರ ಜೊತೆಗೆ
ಸೆಲೆಬ್ರಿಟಿ LIVE — ಮಧ್ಯಾಹ್ನ 1ರಿಂದ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಚುನಾವಣಾ ಫಲಿತಾಂಶ
ಸಂವಾದ — ಸಂಜೆ 5
ಪಾಲ್ಗೊಳ್ಳುವವರು: ಮಹೇಶ ಟೆಂಗಿನಕಾಯಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ. ಅಲ್ತಾಫ್ ಹಳ್ಳೂರ, ಅಧ್ಯಕ್ಷ, ಹುಬ್ಬಳ್ಳಿ–ಧಾರವಾಡ ಮಹಾನಗರ ಜಿಲ್ಲಾ ಕಾಂಗ್ರೆಸ್ ಘಟಕ.
ಗುರುರಾಜ ಹುಣಸಿಮರದ, ಅಧ್ಯಕ್ಷ, ಧಾರವಾಡ ಜಿಲ್ಲಾ ಜೆಡಿಎಸ್ ಘಟಕ.
ನಜೀರ್ ಅಹ್ಮದ್ ಹೊನ್ಯಾಳ, ಅಧ್ಯಕ್ಷ, ಎಐಎಂಐಎಂ ಧಾರವಾಡ ಜಿಲ್ಲಾ ಘಟಕ

ಭಾನುವಾರ — ಬೆಳಿಗ್ಗೆ 12.30ಕ್ಕೆ



ಕಾವ್ಯ ಲೋಕದ ಅಪೂರ್ವ ಚಿಂತಾಮಣಿ ಬಿ.ಆರ್.ಎಲ್ -75
ಬಿ.ಆರ್. ಲಕ್ಷ್ಮಣ ರಾವ್ ಕವಿ- ಕಾವ್ಯದ ಬಗ್ಗೆ ಮಾತು- ಕವಿತೆ-ಹಾಡು. ಕವಿತೆಗಳನ್ನು ಹಾಡಾಗಿಸುವವರು: ಗಾಯಕಿ ಎಂ.ಡಿ. ಪಲ್ಲವಿ, ವಾದ್ಯ ಸಹಕಾರ: ಕೃಷ್ಣ ಉಡುಪ, ಪ್ರದ್ಯುಮ್ನ, ವಾದಿ, ಸಂಯೋಜನೆ: ಶ್ರೀನಿವಾಸ ಜಿ ಕಪ್ಪಣ್ಣ

ಕ್ಲಬ್ ಹೌಸ್ — ಮಾತು-ಕತೆ ಮತ್ತು ಹಾಡು
ಜಾನಪದ ಮತ್ತು ಮಹಿಳೆ
ಕಾಳೇಗೌಡ ನಾಗವಾರ, ಜಾನಪದ ವಿದ್ವಾಂಸ. ಪಿಚ್ಚಳ್ಳಿ ಶ್ರೀನಿವಾಸ್, ಜಾನಪದ ಗಾಯಕ, ಸಂಶೋಧಕ. ಶಿಲ್ಪಾ ಮುಡಬಿ, ಜಾನಪದ ಕಲಾವಿದೆ. ವಿಶ್ವೇಶ್ವರಿ ಬಸವಲಿಂಗಯ್ಯ ಹಿರೇಮಠ, ಜಾನಪದ ಕಲಾವಿದೆ ಮತ್ತು ನೀವು..
ಪ್ರಜಾವಾಣಿ ಆಲದಮರ — 10.30 ರಿಂದ 12.30

ನಿರ್ಬಂಧವಿರಲಿ, ಶ್ರಮಿಕರಿಗೆ ಪರಿಹಾರವೂ ಸಿಗಲಿ

ಗದಗ: ಕೋವಿಡ್‌-19 ಸಂಭಾವ್ಯ ಕೋವಿಡ್‌ ಮೂರನೇ ಅಲೆ ಭೀತಿಯ ಕಾರಣದಿಂದ ರಾಜ್ಯ ಸರ್ಕಾರ ಸಾರ್ವಜನಿಕ ಗಣೇಶೋತ್ಸವಕ್ಕೆ ಕೆಲವು ನಿರ್ಬಂಧಗಳನ್ನು ವಿಧಿಸಿದೆ. ಈ ನಿರ್ಧಾರಕ್ಕೆ ಹಲವು ಕಡೆಗಳಿಂದ ಅಪಸ್ವರ ಕೇಳಿಬಂದಿವೆ.

ಈ ಹಿನ್ನಲೆಯಲ್ಲಿ ‘ಸಾರ್ವಜನಿಕ ಗಣೇಶೋತ್ಸವಕ್ಕೆ ಸರ್ಕಾರ ನಿರ್ಬಂಧ ಹೇರಿರುವುದು ಸರಿಯೇ?’ ವಿಷಯ ಕುರಿತು ‘ಪ್ರಜಾವಾಣಿ’ ಗುರುವಾರ ನಡೆಸಿದ ‘ಫೇಸ್‌ಬುಕ್‌ ಲೈವ್‌’ ಸಂವಾದದಲ್ಲಿ ಪಾಲ್ಗೊಂಡಿದ್ದ ನಾಲ್ಕು ಮಂದಿ ಅತಿಥಿಗಳು ಹಂಚಿಕೊಂಡಿರುವ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

ಫೇಸ್‌ಬುಕ್‌ ಸಂವಾದದ ಪೂರ್ಣ ವೀಕ್ಷಣೆಗೆ:
https://bit.ly/3DYxiYy

ಪ್ರಜಾವಾಣಿ ಸಂವಾದ

ಶ್ರಮಿಕ ವರ್ಗಕ್ಕೆ ನೆರವಾಗುವ ಭರವಸೆ

ಕೊರೊನಾ ಎರಡನೇ ಅಲೆಯ ಅವಾಂತರಗಳನ್ನು ಕಣ್ಣಾರೆ ಕಂಡಿದ್ದೇವೆ. ಈಗಲೂ ಎಚ್ಚೆತ್ತುಕೊಳ್ಳದಿದ್ದರೆ ದೊಡ್ಡ ಅನಾಹುತ ಸಂಭವಿಸಬಹುದು ಎಂದು ಸರ್ಕಾರ ಎಲ್ಲ ಆಯಾಮದಿಂದಲೂ ಯೋಚಿಸಿ ಸಾರ್ವಜನಿಕ ಗಣೇಶೋತ್ಸವಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಸಾರ್ವಜನಿಕ ಗಣೇಶೋತ್ಸವ ಧಾರ್ಮಿಕ ಆಚರಣೆ ಎಂಬುದಕ್ಕಿಂತಲೂ ಸಂಸ್ಕೃತಿ ಮತ್ತು ಪರಂಪರೆ ಬಿಂಬಿಸುವ ಹಾಗೂ ಎಲ್ಲರನ್ನೂ ಬೆಸೆಯುವ ಹಬ್ಬ. ರಾಷ್ಟ್ರೀಯತೆ, ಸಮಗ್ರತೆಯ ಸಂಕೇತ. ಸರ್ಕಾರ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿ ಜಾಣ್ಮೆಯ ಹಾಗೂ ರಕ್ಷಣಾತ್ಮಕ ಸೂತ್ರಗಳನ್ನು ಮಾರ್ಗಸೂಚಿಯಾಗಿ ಪ್ರಕಟಿಸಿದೆ. ಜನರು ಇದನ್ನು ಸ್ವಾಗತಿಸಿದ್ದಾರೆ.

ಎಲ್ಲವನ್ನೂ ಕಾನೂನಿನ ದಂಡದಿಂದಲೇ ಬಗ್ಗಿಸಲು ಸಾಧ್ಯವಿಲ್ಲ. ಜಾಗೃತ ನಾಗರಿಕರಾಗಿ ಎಲ್ಲರೂ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಈ ಬಾರಿಯ ಗಣೇಶೋತ್ಸವವು ಕೋವಿಡ್‌ ಲಸಿಕೆ ಹಾಕಿಸಿಕೊಳ್ಳಲು ಜನ ಜಾಗೃತಿ ಮೂಡಿಸುವ ವೇದಿಕೆಗಳಾದರೆ ಹೆಚ್ಚು ಅರ್ಥಪೂರ್ಣವೆನಿಸುತ್ತದೆ.

ಆರ್‌. ರಘು, ಅಧ್ಯಕ್ಷ, ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಹಿಂದೂ ಹಬ್ಬಗಳೇ ಯಾಕೆ ಟಾರ್ಗೆಟ್‌?

ಗಣೇಶೋತ್ಸವ ಆಚರಣೆಗೆ ಶತಮಾನದ ಇತಿಹಾಸವಿದೆ. ಸ್ವಾತಂತ್ರ್ಯಪೂರ್ವದಲ್ಲಿ ಹೋರಾಟ ಹಾಗೂ ಜನಸಂಘಟನೆಗಾಗಿ ತಿಲಕರು ಸಾರ್ವಜನಿಕ ಗಣೇಶೋತ್ಸವ ಆರಂಭಿಸಿದರು. ಬಳಿಕ ಅದು ಹಿಂದೂಗಳ ನಂಬಿಕೆ, ಶ್ರದ್ಧೆಯ ಕಾರಣದಿಂದ ವಿಜೃಂಭಣೆಯಿಂದ ಆಚರಣೆಯಾಗುತ್ತ ಬರುತ್ತಿದೆ.

ಬಿಜೆಪಿ ಸರ್ಕಾರ ಹಿಂದೂಗಳ ಹಬ್ಬಕ್ಕೆ ಈ ರೀತಿಯ ನಿರ್ಬಂಧ ಹೇರುತ್ತದೆ ಎಂದು ನಿರೀಕ್ಷಿಸಿರಲಿಲ್ಲ. ಕೋವಿಡ್‌ ನೆಪದಲ್ಲಿ, ಸಾರ್ವಜನಿಕ ಗಣೇಶೋತ್ಸವಕ್ಕೆ ನಿರ್ಬಂಧ ವಿಧಿಸಿರುವುದನ್ನು ವಿಶ್ವ ಹಿಂದೂ ಪರಿಷತ್‌ ಕಟುವಾಗಿ ವಿರೋಧಿಸುತ್ತದೆ.

ಒಂದು ವಾರ್ಡ್‌ಗೆ ಒಂದೇ ಮೂರ್ತಿ ಕೂರಿಸಬೇಕು, ಮೂರ್ತಿ ಅಡಿ ಇರಬೇಕು ಎಂಬ ಬಗ್ಗೆ ನಮ್ಮ ತಕರಾರುಗಳಿವೆ. ಇಷ್ಟು ವರ್ಷ ಗಲ್ಲಿಗಳಲ್ಲಿ ಹತ್ತಾರು ಗಣೇಶನನ್ನು ಕೂರಿಸಿ ಮೆರೆಸಿದ ಸಂಘಗಳ ಗತಿ ಏನು? ಮಸೀದಿ, ಚರ್ಚ್‌ಗಳಿಗೆ ಅನ್ವಯಿಸದ ನಿರ್ಬಂಧ ಗಣೇಶೋತ್ಸವಕ್ಕೆ ಯಾಕೆ?. ಕೋವಿಡ್‌–19 ನಿಯಂತ್ರಣದ ಮಾರ್ಗಸೂಚಿಗಳನ್ನು ಒಪ್ಪುತ್ತೇವೆ. ಆದರೆ, ಗಣೇಶೋತ್ಸವದಲ್ಲಿ ಸರ್ಕಾರದ ಹಸ್ತಕ್ಷೇಪ ಸಹಿಸಲು ಸಾಧ್ಯವಿಲ್ಲ.

ಶರಣ್‌ ಪಂಪ್‌ವೆಲ್‌, ಮುಖಂಡ ವಿಶ್ವಹಿಂದೂ ಪರಿಷತ್‌, ಮಂಗಳೂರು

ಸ್ವಯಂ ಪ್ರಜ್ಞೆಯ ಪ್ರಶ್ನೆ

ತಿಲಕರು ರಾಷ್ಟ್ರೀಯ ಆಂದೋಲನಕ್ಕೆ ಎಲ್ಲ ಧರ್ಮೀಯರು ಸೇರುವಂತಹ ಧರ್ಮಾತೀತ ಲೌಕಿಕ ದೇವರು ಬೇಕು ಎಂದು ಗಣೇಶನನ್ನು ಹುಡುಕಿದರು. ಗಣೇಶ ಒಂದು ಜಾತಿ, ಧರ್ಮಕ್ಕೆ ಸೇರಿದ ದೇವರಲ್ಲ.

ಕೊರೊನಾ ಸಂದರ್ಭದಲ್ಲಿ ಸಾವಿರಾರು ಜನರು ಒಂದೆಡೆ ಸೇರಿ ಉತ್ಸವ ಮಾಡುವುದು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಅಪಾಯಕಾರಿ. ಇದನ್ನು ಸರಳವಾಗಿ, ಕಡಿಮೆ ಜನರು ಸೇರಿಕೊಂಡು ಆಚರಿಸಬೇಕು ಎಂಬುದನ್ನು ಸರ್ಕಾರವೇ ಹೇಳಬೇಕಿಲ್ಲ. ಸ್ವಯಂ ಅಳವಡಿಸಿಕೊಳ್ಳಬೇಕಿತ್ತು.

ಸಾರ್ವಜನಿಕ ಉತ್ಸವ ಅಂದರೆ ಸಾಂಸ್ಕೃತಿಕ ಉತ್ಸವ. ಗಣೇಶೋತ್ಸವದಲ್ಲಿ ಪೂಜೆಗಿಂತಲೂ ಹೆಚ್ಚಾಗಿ ರಸಸಂಜೆ, ಆರ್ಕೆಸ್ಟ್ರಾಗಳು ನಡೆಯುತ್ತವೆ. ಈ ಕಾರಣಕ್ಕಾಗಿ ಸರ್ಕಾರ ಸಾರ್ವಜನಿಕ ಉತ್ಸವವನ್ನು ರದ್ದು ಪಡಿಸಿರುವುದು ಸರಿಯಾದ ನಿರ್ಧಾರ.

ಯಾವ ಸನ್ನಿವೇಶಗಳಿಗೆ ಯಾವ ಹಕ್ಕು ಮೊಟಕುಗೊಳಿಸಿಕೊಳ್ಳಬೇಕು ಎಂಬುದು ನಾಗರಿಕರ ಜವಾಬ್ದಾರಿ. ಬದುಕಿಗಿಂತ ಯಾವುದೂ ದೊಡ್ಡದಲ್ಲ. ಈ ಬಾರಿ ಹಬ್ಬವನ್ನು ಸರಳವಾಗಿ ಆಚರಿಸಿದರೆ ದೇವರೇನೂ ಮುನಿಸಿಕೊಳ್ಳುವುದಿಲ್ಲ. ನಿರ್ಬಂಧದಿಂದ ತೊಂದರೆಯಾದವರಿಗೆ ಪರಿಹಾರ ಕೊಡಬೇಕು.

ಬಂಜಗೆರೆ ಜಯಪ್ರಕಾಶ್‌, ಲೇಖಕ, ಚಿಂತಕ

ನಿಯಮ ಉಲ್ಲಂಘಿಸಿದರೆ ಮಂತ್ರಿಗಳ ಮೇಲೂ ಕೇಸ್‌ ಮಾಡಿ

ಕೊರೊನಾ ವೈರಸ್‌ ಶತಮಾನಕ್ಕೊಮ್ಮೆ ಅಥವಾ ಹಲವಾರು ದಶಕಗಳಿಗೊಮ್ಮೆ ಬರುತ್ತದೆ. ಸೋಂಕು ನಿರ್ದಿಷ್ಟವಾಗಿ ಯಾವ ರೀತಿ ವರ್ತಿಸುತ್ತದೆ ಎಂಬ ಅರಿವು ಯಾರಿಗೂ ಇಲ್ಲ. ಸರ್ಕಾರ ಹೊರಡಿಸಿರುವ ನಿರ್ಬಂಧ ಕೋವಿಡ್‌ ನಿಯಂತ್ರಣಕ್ಕೆ ಬರುವವರೆಗೆ ಹಾಕಿರುವ ನಿರ್ಬಂಧವಷ್ಟೇ.

ಒಂದು ಸಮುದಾಯಕ್ಕೆ ನಿರ್ಬಂಧ ವಿಧಿಸಿ ಮತ್ತೊಂದು ಸಮುದಾಯಕ್ಕೆ ಸಡಿಲ ಮಾಡಿಕೊಡುವುದು ಸರಿಯೇ ಎಂಬ ತರ್ಕವನ್ನು ಒಪ್ಪಲು ಸಾಧ್ಯವಿಲ್ಲ. ಸರ್ಕಾರ ಎಲ್ಲರಿಗೂ ಒಂದೇ ತೆರನಾದ ನಿರ್ಬಂಧ ವಿಧಿಸಿದೆ. ಆದರೆ, ಜನರು ಉಲ್ಲಂಘಿಸುತ್ತಲೇ ಬಂದಿದ್ದಾರೆ. ಮುಖ್ಯವಾಗಿ ರಾಜಕಾರಣಿಗಳು ಕೋವಿಡ್‌ ಮಾರ್ಗಸೂಚಿ ಉಲ್ಲಂಘನೆಯಲ್ಲಿ ಮುಂಚೂಣಿಯಲ್ಲಿದ್ದಾರೆ. ಮಂತ್ರಿಗಳು, ಶಾಸಕರು ಮೇಲೆ ಕೇಸ್‌ ಹಾಕಬೇಕು.

ಕಲಾವಿದರಿಗೆ ಆರ್ಥಿಕ ನಷ್ಟ ಆಗುವುದನ್ನು ತಪ್ಪಿಸುವ ಅವಕಾಶ ಸರ್ಕಾರಕ್ಕೆ ಇತ್ತು. ಸಾರ್ವಜನಿಕ ಗಣೇಶೋತ್ಸವಕ್ಕೆ ಸಂಬಂಧಿಸಿದ ಸ್ಪಷ್ಟ ನಿಲುವನ್ನು ಮುಂಚೆಯೇ ಪ್ರಕಟಿಸಿದ್ದರೆ ಮೂರ್ತಿ ತಯಾರಕರು ಆರ್ಥಿಕ ನಷ್ಟದಿಂದ ಬಚಾವಾಗುತ್ತಿದ್ದರು. ಶ್ರಮಜೀವಿಗಳ ಬೆನ್ನಿಗೆ ಸರ್ಕಾರ ನಿಲ್ಲಬೇಕು.

ಬಿ.ಎಲ್‌.ಶಂಕರ್‌, ಸಹ ಅಧ್ಯಕ್ಷ ಕೆಪಿಸಿಸಿ ಮಾಧ್ಯಮ ವಿಭಾಗ

‘ಗಣೇಶ ಉತ್ಸವ: ಜೈಲಿಗಟ್ಟಿದರೂ ಪದ್ಧತಿ ಬಿಡೋದಿಲ್ಲ’

ಸೋಮಲಿಂಗ ಸ್ವಾಮೀಜಿ

ತಾಳಿಕೋಟೆ (ವಿಜಯಪುರ ಜಿಲ್ಲೆ): ‘ಹಿಂದೂ ಮಹಾಗಣಪತಿ ಮಹಾಮಂಡಳದಿಂದ ಪಟ್ಟಣದಲ್ಲಿ ಒಂಬತ್ತು ದಿನದ ಗಣೇಶೋತ್ಸವ ಮಾಡುತ್ತೇವೆ. ಜೈಲಿಗಟ್ಟಿದರೂ, ಎದೆಗೆ ಗುಂಡಿಟ್ಟರೂ ಉತ್ಸವ ನಿಲ್ಲಿಸುವುದಿಲ್ಲ’ ಎಂದು ಮಹಾಮಂಡಳಿಯ ಗೌರವ ಉಪಾಧ್ಯಕ್ಷ, ಕೆಸರಟ್ಟಿಯ ಶಂಕರಲಿಂಗ ಗುರುಪೀಠದ ಪೀಠಾಧ್ಯಕ್ಷ ಸೋಮಲಿಂಗ ಸ್ವಾಮೀಜಿ ಹೇಳಿದರು.

ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಅವರು, ‘ಹಿಂದೂಗಳ ಹಬ್ಬ ಬಂದಾಗ ಷರತ್ತು ವಿಧಿಸಿ ಭಕ್ತರ ಭಾವನೆ ಕೆರಳಿಸುವ ಕಾರ್ಯವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಇಂತಹ ಅಸಂಬದ್ಧ ಷರತ್ತುಗಳನ್ನು ಹಿಂಪಡೆಯಬೇಕು’ ಎಂದು ಒತ್ತಾಯಿಸಿದರು.

‘ರಾಜಕಾರಣಿಗಳ ಕಾರ್ಯಕ್ರಮಗಳಿಗೆ, ಷರತ್ತುಗಳಿರುವುದಿಲ್ಲ, ದೊಡ್ಡ ರಾಜಕಾರಣಿಗಳ ಮನೆಯ ಮದುವೆಗಳಿಗೆ ದೊಡ್ಡ ಪ್ರಮಾಣದಲ್ಲಿ ಜನರು ಸೇರಿದಾಗ ಕೋವಿಡ್‌ ಇರುವುದಿಲ್ಲ. ಆದರೆ ಶ್ರದ್ಧಾ ಭಕ್ತಿಯ ಗಣೇಶೋತ್ಸವಕ್ಕೆ ಷರತ್ತುಗಳನ್ನು ವಿಧಿಸುವುದೇಕೆ?’ ಎಂದರು.

‘ಕೋವಿಡ್‌ ಮಾರ್ಗಸೂಚಿಯನ್ನು ಪಾಲಿಸಲಾಗುತ್ತದೆ. ಆದರೆ ಇಷ್ಟೇ ದಿನ ಪೂಜಿಸಬೇಕು ಎಂಬ ಸರ್ಕಾರದ ಫರ್ಮಾನನ್ನು ಒಪ್ಪಲಾಗುವುದಿಲ್ಲ’ ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್‌ ಎಸ್‌*	124.80	116.37	16,056	10,903
ಹಾರಂಗಿ	2,859	2,858.06	4,535	5,713
ಕಬಿನಿ	2,284	2,281.28	6,863	700
ಹೇಮಾವತಿ	2,922	2,915.28	7,509	5,097
ಲಿಂಗನಮಕ್ಕಿ	1,819	1,813.85	17,387	-
ಸೂಪಾ (ಮೀ)	564	555.50	12,030	2,459
ಮಾಣಿ	594.36	586.84	3,296	-
ತುಂಗಭದ್ರಾ	1,633	1,632.88	14,459	14,092
ಮಲಪ್ರಭಾ	2,079.50	2,078.90	4,519	1,294
ಘಟಪ್ರಭಾ	2,175	2,175	1,893	1,893
ಭದ್ರಾ	186	185.50	5,373	4,459
ಆಲಮಟ್ಟಿ (ಮೀ)	519.60	519.60	18,139	18,139
ನಾರಾಯಣಪುರ (ಮೀ)	492.25	492.13	25,000	32,100

* ನೆಲಮಟ್ಟದಿಂದ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಗಣೇಶ ಮೂರ್ತಿ ಸಹಿತ ಪ್ರತಿಭಟನೆ... ಸಾರ್ವಜನಿಕ ಗಣೇಶೋತ್ಸವದ ನಿರ್ಬಂಧ ವಿರೋಧಿಸಿ ವಿಎಚ್‌ಪಿ, ಹಿಂದು ಜಾಗರಣ ವೇದಿಕೆ, ಭಜರಂಗದಳ, ಬೆಂಗಳೂರು ಮಹಾನಗರ ಗಣೇಶೋತ್ಸವ ಸಮಿತಿ ಹಾಗೂ ಎಲ್ಲ ಹಿಂದು ಪರ ಸಂಘಟನೆಗಳ ಸದಸ್ಯರು ನಗರದ ಬಿಬಿಎಂಪಿ ಮುಂಭಾಗ ಗುರುವಾರ ಗಣೇಶ ಮೂರ್ತಿಯೊಂದಿಗೆ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ಚಿತ್ರ/ ರಂಜು ಪಿ

‘ಆಂತರಿಕ ವಿಚಾರಕ್ಕೆ ಸಿ.ಎಂ ಕೈಗೊಂಬೆ ಆಗಬಾರದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಣೇಶ ಹಬ್ಬದಲ್ಲಿ ಎಷ್ಟು ಗಾತ್ರದ ಮೂರ್ತಿಗೆ ಪೂಜೆ ಮಾಡಬೇಕು ಎಂಬುದು ಭಕ್ತರು ಹಾಗೂ ಭಗವಂತನಿಗೆ ಬಿಟ್ಟ ವಿಚಾರ. ಇದಕ್ಕೆ ಸರ್ಕಾರ ನಿರ್ಬಂಧ ಹೇರಬಾರದು. ತಮ್ಮ ಪಕ್ಷದ ಆಂತರಿಕ ವಿಚಾರಕ್ಕೆ ಮುಖ್ಯಮಂತ್ರಿ ಕೈಗೊಂಬೆ ಆಗಬಾರದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ನಗರದ ಮಾವಳ್ಳಿಯಲ್ಲಿ ಗಣೇಶ ಮೂರ್ತಿ ತಯಾರಕರು ಮತ್ತು ಮಾರಾಟಗಾರರನ್ನು ಗುರುವಾರ ಭೇಟಿ ಮಾಡಿ ಅವರ ಸಮಸ್ಯೆ ಆಲಿಸಿದ ಬಳಿಕ ಸುದ್ದಿಗಾರರ ಜೊತೆ ಶಿವಕುಮಾರ್ ಮಾತನಾಡಿದರು.

‘ಗಣೇಶನ ಪೂಜೆ ಎಲ್ಲರ ಹಕ್ಕು, ಎಲ್ಲರ ಆಸ್ತಿ. ಗಣೇಶ ಹಬ್ಬದಲ್ಲಿ ಹಿಂದೂ ಭಾವನೆ ಒಂದೇ ಅಲ್ಲ. ಎಲ್ಲ ಧರ್ಮದವರು ತಮ್ಮ ಸಂಪ್ರದಾಯ ಆಚರಣೆಗೆ ಅವಕಾಶ ಮಾಡಿಕೊಡಿ. ಈ ಹಬ್ಬ ಅನೇಕರ ಜೀವನಕ್ಕೆ ಆಸರೆಯಾಗಿದೆ. ಧಾರ್ಮಿಕ ಭಾವನೆ ಕೆರಳಿಸಲು ಸರ್ಕಾರ ಯತ್ನಿಸಬಾರದು’ ಎಂದರು.

‘ಸರ್ಕಾರ ಗಣೇಶ ಹಬ್ಬ ಆಚರಣೆಗೆ 10-15 ದಿನಗಳ ಅವಕಾಶ ನೀಡಬೇಕು. ಆರ್ಕೆಸ್ಟ್ರಾ ಮತ್ತಿತರ ಮನರಂಜನೆ ಕಾರ್ಯಕ್ರಮಗಳಿಗೂ ಅವಕಾಶ ಇರಬೇಕು. ಕೋವಿಡ್ ನಿಯಮಾವಳಿ ವ್ಯಾಪ್ತಿಯಲ್ಲೇ ಆಚರಣೆಗೆ ಅವಕಾಶ ನೀಡಬೇಕು. ಕೋವಿಡ್ ನಿಯಮ ಎಲ್ಲರಿಗೂ ಅನ್ವಯ ಆಗಬೇಕು’ ಎಂದರು.

‘ಕೇಂದ್ರ ಸರ್ಕಾರ ಇಡೀ ದೇಶಕ್ಕೆ ಒಂದು ಕೋವಿಡ್ ಮಾರ್ಗಸೂಚಿ ಪ್ರಕಟಿಸಿದೆ. ಆದರೆ, ಕೋವಿಡ್ ನಿಯಮದಲ್ಲಿ ಬಿಜೆಪಿ ಆಡಳಿತದಲ್ಲಿರುವ ಕರ್ನಾಟಕಕ್ಕೂ ಗುಜರಾತ್, ಮಧ್ಯಪ್ರದೇಶ ಹಾಗೂ ಇತರೆ ರಾಜ್ಯಗಳಲ್ಲಿ ವ್ಯತ್ಯಾಸ ಏಕೆ’ ಎಂದು ಪ್ರಶ್ನಿಸಿದರು.

‘ಮಿಸ್‌–ಸಿ’ಯಿಂದ ಬಾಲಕಿ ಸಾವು

ಮೈಸೂರು: ಕೆ.ಆರ್.ನಗರ ತಾಲ್ಲೂಕಿನ ಬೊಮ್ಮೇನಹಳ್ಳಿಯ ಸ್ಪಂದನಾ (9) ಬಹು ಅಂಗಾಂಗ ಉರಿಯೂತ ಸಮಸ್ಯೆ (ಮಿಸ್‌–ಸಿ)ಯಿಂದ ಮಂಗಳವಾರ ಮೃತಪಟ್ಟಳು. ಆಕೆ ಕೊರೊನಾ, ಡೆಂಗಿಯಿಂದಲೂ ಬಳಲುತ್ತಿದ್ದಳು. ವಿಪರೀತ ಜ್ವರವಿತ್ತು. ಮೊದಲು ಭೇರ್ಯ ಗ್ರಾಮದ ಖಾಸಗಿ ಕ್ಲಿನಿಕ್‌ಗೆ ಒಯ್ದಿದ್ದು, ನಂತರ ಚೆಲುವಾಂಬ ಆಸ್ಪತ್ರೆಗೆ ಸೇರಿಸಲಾಗಿತ್ತು.

‘ಬಾಲಕಿಯ ಸಾವಿನ ಕುರಿತು ವರದಿ ನೀಡುವಂತೆ ಚೆಲುವಾಂಬ ಆಸ್ಪತ್ರೆಗೆ ಸೂಚಿಸಲಾಗಿದೆ. ಗ್ರಾಮದಲ್ಲಿ ಡೆಂಗಿ ಕಂಡುಬಂದಿಲ್ಲ’ ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಚಿದಂಬರ ತಿಳಿಸಿದರು.

ಕೋವಿಡ್‌: ರಾಜ್ಯದಲ್ಲಿ ಐದೂವರೆ ತಿಂಗಳಲ್ಲಿ ಕನಿಷ್ಠ ಮರಣ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೊರೊನಾ ಸೋಂಕಿತರಲ್ಲಿ ಬೆಂಗಳೂರಿನಲ್ಲಿ ಮೂವರು ಸೇರಿದಂತೆ ರಾಜ್ಯದಲ್ಲಿ ನಾಲ್ವರು ಮೃತಪಟ್ಟಿರುವುದು ಗುರುವಾರ ದೃಢಪಟ್ಟಿದೆ. ಇವು ಐದೂವರೆ ತಿಂಗಳ ಅವಧಿಯಲ್ಲಿ ವರದಿಯಾದ ಕನಿಷ್ಠ ಮರಣ ಪ್ರಕರಣಗಳು.

ಮಾರ್ಚ್‌ ಕೊನೆಯ ವಾರದ ಬಳಿಕ ಮರಣ ಪ್ರಕರಣಗಳ ಸಂಖ್ಯೆ ಏರಿಕೆ ಕಂಡು, ಬಳಿಕ 500ರ ಗಡಿ ತಲುಪಿತ್ತು. ಜುಲೈನಿಂದ ಸಂಖ್ಯೆ ಇಳಿಮುಖಮಾಡಿದೆ. ಮರಣ ಪ್ರಮಾಣ ದರ ಶೇ 0.37ರಷ್ಟಿದೆ. ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 37,462ಕ್ಕೆ ತಲುಪಿದೆ.

ಹೊಸದಾಗಿ 1,074 ಮಂದಿ ಕೋವಿಡ್‌ ಪೀಡಿತರಾಗಿರುವುದು ದೃಢಪಟ್ಟಿದೆ. ಈವರೆಗಿನ ಪ್ರಕರಣಗಳ ಒಟ್ಟು ಸಂಖ್ಯೆ 29.59 ಲಕ್ಷ ದಾಟಿದೆ. ಒಂದು ದಿನದಲ್ಲಿ 1.69 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.63ರಷ್ಟಿದೆ. 9 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್‌, ಹಾವೇರಿ, ಗದಗ ಹಾಗೂ ಕೊಪ್ಪಳದಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 176, ಕೊಡಗಿನಲ್ಲಿ 59 ಹಾಗೂ ಮೈಸೂರಿನಲ್ಲಿ 48 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 343 ಮಂದಿ ಹಾಗೂ ಉಡುಪಿಯಲ್ಲಿ 126 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಕೋವಿಡ್‌ ಸಕ್ರಿಯ ಪ್ರಕರಣಗಳ ಸಂಖ್ಯೆಯೂ ಇಳಿಕೆ ಕಂಡಿದ್ದು, ಸದ್ಯ 16,992 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸೋಂಕಿತರಲ್ಲಿ 1,136 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಸಂಖ್ಯೆ 29.04 ಲಕ್ಷ ದಾಟಿದೆ.

ಪಿಂಚಣಿ ಮಂಜೂರು ಮಾಡಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಹೋರಾಟಗಾರ ಬಳ್ಳಾರಿಯ ಗುಂಡುರಾವ್‌ ದೇಸಾಯಿ ಅವರಿಗೆ ಕೂಡಲೇ ಪಿಂಚಣಿ ಮಂಜೂರು ಮಾಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್‌ ನಿರ್ದೇಶನ ನೀಡಿದೆ.

‘ಹೋರಾಟದ ಸಂದರ್ಭದಲ್ಲಿ ಒಂದು ಬಾರಿ ಅವರು ಸಹಕೈದಿ ಆಗಿದ್ದರ ಬಗ್ಗೆ ಪ್ರಮಾಣಪತ್ರ ಸಲ್ಲಿಸಲಾಗಿದೆ. ಎರಡು ಬಾರಿ ಸಹಕೈದಿ ಆಗಿದ್ದರ ಬಗ್ಗೆ ಪ್ರಮಾಣಪತ್ರ ಸಲ್ಲಿಸುವುದು ಕಡ್ಡಾಯ ಎಂದು ಪಟ್ಟು ಹಿಡಿಯಲಾಗಿದೆ. ಎರಡು ದಶಕಗಳಿಂದ ಪಿಂಚಣಿ ಮಂಜೂರು ಮಾಡಿಲ್ಲ’ ಎಂದು ಬಳ್ಳಾರಿ ಜಿಲ್ಲೆಯ ಕಮಲಾಪುರದ 94 ವರ್ಷ ವಯಸ್ಸಿನ ಗುಂಡುರಾವ್‌ ದೇಸಾಯಿ ಅವರು ಅರ್ಜಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್‌. ದೀಕ್ಷಿತ್‌ ಅವರಿದ್ದ ಪೀಠ, ‘ಎರಡು ಬಾರಿ ಸಹ ಕೈದಿಯಾಗಿದ್ದರ ಬಗ್ಗೆ ಪ್ರಮಾಣಪತ್ರವನ್ನು ಈಗ ಕೇಳಿದರೆ ಅವರು ಸಲ್ಲಿಸಲು ಸಾಧ್ಯವಿಲ್ಲದ ಮಾತು. ಪಿಂಚಣಿ ಮಂಜೂರು ಮಾಡಬೇಕು’ ಎಂದು ಸೂಚಿಸಿತು.

‘ಆರು ವಾರಗಳಲ್ಲಿ ಅವರಿಗೆ ಪಿಂಚಣಿ ಮಂಜೂರು ಮಾಡಬೇಕು. ತಡ ಮಾಡಿದರೆ ಬಳ್ಳಾರಿ ಜಿಲ್ಲಾಧಿಕಾರಿ ಮತ್ತು ಹೊಸಪೇಟೆ ಉಪವಿಭಾಗಾಧಿಕಾರಿ ದಿನಕ್ಕೆ ತಲಾ ₹1 ಸಾವಿರದಂತೆ ಪಾವತಿಸಬೇಕಾಗುತ್ತದೆ’ ಎಂದು ಪೀಠವು ಎಚ್ಚರಿಸಿದೆ.

‘ಅಕ್ಟೋಬರ್‌ ಅಂತ್ಯದವರೆಗೆ ಕೇರಳಕ್ಕೆ ಹೋಗುವುದು, ಬರುವುದು ಬೇಡ’

ಪ್ರಜಾವಾಣಿ ವಾರ್ತೆ

ಮಂಗಳೂರು: ಕೋವಿಡ್‌–19 ಹಾಗೂ ನಿಫಾ ವೈರಸ್‌ ಸೋಂಕಿನ ಕಾರಣಕ್ಕೆ ಕರ್ನಾಟಕ- ಕೇರಳ ಮಧ್ಯೆ ಅನಗತ್ಯ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ದಕ್ಷಿಣ ಕನ್ನಡ ಜಿಲ್ಲಾಡಳಿತವೂ ಕೆಲವು ಸೂಚನೆಗಳನ್ನು ನೀಡಿದೆ.

ಜಿಲ್ಲೆಯ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ, ವಿದ್ಯಾರ್ಥಿಗಳು, ವಿವಿಧ ಸಂಸ್ಥೆಗಳ ನೌಕರರು ಕೇರಳದಿಂದ ಬರುವವರಿದ್ದರೆ ಹಾಗೂ ಇಲ್ಲಿಂದ ಕೇರಳಕ್ಕೆ ಹೋಗುವುದಿದ್ದರೆ ಅಕ್ಟೋಬರ್‌ ಅಂತ್ಯದವರೆಗೆ ಪ್ರವಾಸ ಮುಂದೂಡಿಕೆಗೆ ಸೂಚಿಸಲು ಆಯಾ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ. ಸಲಹೆ ನೀಡಿದ್ದಾರೆ.

ತುರ್ತು ಕಾರಣಕ್ಕಾಗಿ ಕೇರಳದಿಂದ ಕರ್ನಾಟಕಕ್ಕೆ ಬರುವವರು ಆರ್‌ಟಿಪಿಸಿಆರ್‌ ನೆಗೆಟಿವ್‌ ವರದಿ ಕಡ್ಡಾಯವಾಗಿ ತರಬೇಕು ಎಂದು ಅವರು ತಿಳಿಸಿದ್ದಾರೆ.

‘ಟೊಟೊ ಪುರಸ್ಕಾರ’ಕ್ಕೆ ಕೃತಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಸೃಜನಶೀಲ ಯುವ ಬರಹಗಾರರಿಗೆ ಉತ್ತೇಜನ ನೀಡಲು ಸ್ಥಾಪಿಸಿರುವ ‘ಟೊಟೊ ಪುರಸ್ಕಾರ’ಕ್ಕೆ 2022ನೇ ಸಾಲಿಗಾಗಿ ಕೃತಿಗಳನ್ನು ಆಹ್ವಾನಿಸಲಾಗಿದೆ. ಪ್ರಶಸ್ತಿಯನ್ನು ಟಿ.ಎಫ್‌.ಎ. (ಟೊಟೊ ಫಂಡ್ಸ್‌ ದಿ ಆರ್ಟ್ಸ್‌) ಸ್ಥಾಪಿಸಿದೆ. ಪುರಸ್ಕಾರವು ₹ 50 ಸಾವಿರ ಒಳಗೊಂಡಿದೆ.

18 ರಿಂದ 29 ವರ್ಷದ ಭಾರತೀಯ ನಾಗರಿಕರಿಗೆ ಮಾತ್ರ ಅವಕಾಶ ನೀಡಲಾಗುತ್ತದೆ. 1992ರ ಜನವರಿ 1ರ ನಂತರ ಜನಿಸಿದವರು ಪ್ರವೇಶ ಕಳುಹಿಸಲು ಅರ್ಹರು. ಕಥೆ, ಕವಿತೆ, ನಾಟಕ ಈ ಮೂರರಲ್ಲಿ ಯಾವುದೇ ಪ್ರಕಾರದಲ್ಲಿಯಾದರೂ ಪ್ರವೇಶ ಕಳುಹಿಸಬಹುದು. ಮೂರು ಪ್ರಕಾರಗಳಿಂದ ಒಬ್ಬರನ್ನು ಪುರಸ್ಕಾರಕ್ಕೆ ಆಯ್ಕೆ ಮಾಡಲಾಗುತ್ತದೆ.

ಪ್ರವೇಶ ಕಳುಹಿಸಲು ಇದೇ 30 ಕಡೇ ದಿನ.

ವಿವರಗಳಿಗಾಗಿ http://totofundsthearts.blogspot.in/ ನೋಡಬಹುದು. ಎಂ.ಎಸ್‌. ವರ್ಡ್‌ನಲ್ಲಿ ನುಡಿ, ಬರಹ ಅಥವಾ ಯೂನಿಕೋಡ್‌ ಫಾಂಟ್‌ ಮೂಲಕ ಪ್ರವೇಶಗಳನ್ನು ಇ–ಮೇಲ್‌ ವಿಳಾಸ totokannada@gmail.comಗೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)
ಡಾ. ಎಂ.ಹೆಚ್‌. ಮರಿಗೌಡ ರಸ್ತೆ, ಬೆಂಗಳೂರು–560 029.
ದೂರವಾಣಿ: 91–80–26560722 (Dir), 26094000 ಫ್ಯಾಕ್ಸ್‌: 080–26560723

No.: KMIO/SME(1)/Tender/SS Fur CSSD/272/2021-22 Date: 09.09.2021

ಇ-ಪ್ರೊಕ್ಯೂರ್‌ಮೆಂಟ್‌ ಟೆಂಡರ್‌ ಪ್ರಕಟಣೆ

ಈ ಕೆಳಗಿನ ಸಾಮಾಗ್ರಿಗಳ ಪೂರೈಕೆಗಾಗಿ **ದ್ವಿ–ಲಕೋಟೆ ಪದ್ಧತಿಯಲ್ಲಿ** ಜಿಒಕೆ ಇ–ಪ್ರೊಕ್ಯೂರ್‌ಮೆಂಟ್‌ ಮುಖಾಂತರ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Name of the Item
1	No. KMIO/SME(1)/Tender/M. Equip/67/Co60 Glb/ 2017-18, Dated: 09.09.2021 **(Call-6)**	Cobalt 60 High Dose Rate Remote Controlled Brachytherapy System to PCC Kalburgi.
2	No. KMIO/SME(1)/Tender/SS Fur CSSD/272/ 2021-22, Dated: 09.09.2021	Procurement of SS Furniture to CSSD Room at KMIO., Bangalore.

ಆನ್‌ಲೈನ್‌ನಲ್ಲಿ ಬಿಡ್‌ ದಾಖಲೆಗಳ ಲಭ್ಯತೆ ದಿನಾಂಕ: **13.09.2021 ರಿಂದ 27.09.2021.** ಬಿಡ್‌ ದಾಖಲೆಗಳನ್ನು ವೆಬ್‌ಸೈಟ್‌ **https://eproc.karnataka.gov.in** ನಿಂದ ನೋಡಿ ಡೌನ್‌ಲೋಡ್‌ ಮಾಡಿಕೊಳ್ಳಬಹುದಾಗಿದೆ. ಇ–ಪೋರ್ಟಲ್‌ ಶುಲ್ಕ ರೂ. 500/-ನ್ನು ಪಾವತಿಸಿ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್‌ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ ಮೂಲಕ ಬಿಡ್‌ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ: **27.09.2021 ರಂದು ಮಧ್ಯಾಹ್ನ 3:00** ಗಂಟೆಯವರೆಗೆ. ಟೆಂಡರ್‌ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ / ತಿರಸ್ಕರಿಸುವ / ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/-
ನಿರ್ದೇಶಕರು

DIPR/DDU/1485/2021-22

ಕೋವಿಡ್‌-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್‌ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ– 587103
Ph: 08354-235776 E-mail:dudc_bgk@yahoo.co.in, Itstaff dudc_bagalkote@yahoo.co.in
ಸಂಖ್ಯೆ : ಜಿನಕೋಬಾ/ಎಲ್‌.ಇ.ಡಿ/ಒ.ಎಂ/2021–22 ದಿನಾಂಕ : 09.09.2021

ತಿದ್ದುಪಡಿ ಪ್ರಕಟಣೆ

ಬಾಗಲಕೋಟ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬೀದಿ ದೀಪಗಳ ಸಾರ್ವಜನಿಕ ಖಾಸಗಿ / ಕಂಪನಿ ಮುಖಾಂತರ ವಾರ್ಷಿಕ ನಿರ್ವಹಣೆ ಕುರಿತು e-protal: https://eproc.karnataka.gov.in ಮುಖಾಂತರ ಟೆಂಡರ ಪ್ರಕಟಣೆಯನ್ನು (INDENT No : DUDC/BGK/ TECHNICAL/ CCMS/ LED2021-22/01) ದಿನಾಂಕ : 29.08.2021 ರಂದು ಪ್ರಕಟಿಸಲಾಗಿದ್ದು, ತಾಂತ್ರಿಕ ಕಾರಣಗಳಿಂದ ಇಂಡೆಂಟ ನಂಬರನ್ನು INDENT No : DUDC/BGK/ TECHNICAL/ CCMS/ LED2021-22/02 ಎಂದು ಓದಿಕೊಳ್ಳತಕ್ಕದ್ದೆಂದು ತಿದ್ದುಪಡಿ ಪ್ರಕಟಣೆಯಲ್ಲಿ ತಿಳಿಸಿದೆ.

ಸಹಿ/– ಜಿಲ್ಲಾಧಿಕಾರಿಗಳು, ಬಾಗಲಕೋಟೆ.

ವಾಸಾಇ/ಬಾ/282/2021–22/ದೇಶಪಾಂಡೆಪಬ್ಲಿಸಿಟಿ

ನಗರಸಭಾ ಕಾರ್ಯಾಲಯ, ಚಿಕ್ಕಮಗಳೂರು.
CITY MUNICIPAL COUNCIL, CHIKKAMAGALURU.
Office : 08262-230420, Fax : 08262-232272
Email : comm_ckg@yahoo.co.in Website : www.chickmagalur.gov.in
ಸಂ.ಸಿಎಂಸಿ/ಸಿಕೆಎಂ/ಆಶಾ/ಸಿಆರ್‌/02/2020–21 ದಿನಾಂಕ : 08.09.2021

ಇ–ಪ್ರೊಕ್ಯೂರ್‌ಮೆಂಟ್‌ ಟೆಂಡರ್‌ ಪ್ರಕಟಣೆ

ನಗರಸಭೆ ಕಾರ್ಯಾಲಯ, ಚಿಕ್ಕಮಗಳೂರು ವತಿಯಿಂದ ಈ ಕೆಳಕಂಡಂತೆ ಹೊರಗುತ್ತಿಗೆಯ ಮುಖಾಂತರ ಕಾರ್ಮಿಕರನ್ನು ಒದಗಿಸುವ ಬಗ್ಗೆ ಅರ್ಹ ಮಾನವ ಸಂಪನ್ಮೂಲ ಸರಬರಾಜು ಸಂಸ್ಥೆಗಳಿಂದ ಸೇವಾ ಶುಲ್ಕಕ್ಕಾಗಿ ಇ–ಪ್ರೊಕ್ಯೂರ್‌ಮೆಂಟ್‌ ಮುಖಾಂತರ, ಟೆಂಡರ್‌ ಆಹ್ವಾನಿಸಲಾಗಿದೆ. ಆಸಕ್ತರು ಷರತ್ತುಗಳಿಗೊಳಪಟ್ಟು ಇ–ಟೆಂಡರ್‌ ಸಲ್ಲಿಸಬಹುದಾಗಿದೆ.

ಕ್ರ ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ ಗಳಲ್ಲಿ)
1.	ಚಿಕ್ಕಮಗಳೂರು ನಗರಸಭೆಯ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದ ವಾಹನಗಳಿಗೆ ಚಾಲಕರು, ಲೋಡರ್‌ಗಳು ಸಹಾಯಕರು, ಕಾವಲುಗಾರರು ಹಾಗೂ ಇತರೆ ಅಪರಿಣಿತ ಕೆಲಸಗಳನ್ನು ನಿರ್ವಹಿಸಲು ಅರ್ಹ ಕಾರ್ಮಿಕರನ್ನು ಒದಗಿಸುವುದು. CMC/CKM/HS/CR/02/2020-21/CALL-3	229.50	ಸರ್ಕಾರದ ಆದೇಶದಂತೆ ವಿನಾಯಿತಿ ಘೋಷಣೆಯನ್ನು ಸಲ್ಲಿಸುವುದು

ಟೆಂಡರ್‌ ಫಾರಂ ಬೆಲೆ ಇ–ಪ್ರೊಕ್ಯೂರ್‌ಮೆಂಟ್‌ನಂತೆ, ಕಾಲಾವಧಿ 01 ವರ್ಷ
1. ಬಿಡ್‌ ಪೂರ್ವಭಾವಿ ಸಭೆ 21.09.2021 ರಂದು 16.00 ಗಂಟೆಗೆ ಪೌರಾಯುಕ್ತರ ಕಛೇರಿಯಲ್ಲಿ
2, ಇ–ಪ್ರೊಕ್ಯೂರ್‌ ಮೆಂಟ್‌ ಪೋರ್ಟಲ್‌ನಲ್ಲಿ ಟೆಂಡರ್‌ ಸಲ್ಲಿಸಲು ಕೊನೆಯ ದಿನಾಂಕ: 23.09.2021 ರ 16.00 ಗಂಟೆಯವರೆಗೆ.
3. ತಾಂತ್ರಿಕ ಬಿಡ್‌ ತೆರೆಯುವ ದಿನಾಂಕ: 24.09.2021 ರ 17.00 ಗಂಟೆಗೆ
4. ಆರ್ಥಿಕ ಬಿಡ್‌ ತೆರೆಯುವ ದಿನಾಂಕ: 27.09.2021 ರ 17.30 ಗಂಟೆಗೆ
ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಕೆ.ಎನ್‌. ರಮೇಶ್‌(ಭಾ.ಆ.ಸೇ.)
ಆಡಳಿತಾಧಿಕಾರಿಗಳು ನಗರಸಭೆ ಹಾಗೂ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು,

ಬಿ.ಸಿ. ಬಸವರಾಜು ಕೆ.ಎಂ.ಎ.ಎಸ್‌.
ಪೌರಾಯುಕ್ತರು, ನಗರಸಭೆ, ಚಿಕ್ಕಮಗಳೂರು

ಬೃಹತ್‌ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಮಹದೇವಪುರ ವಿಭಾಗ,
ವೈಟ್‌ಫೀಲ್ಡ್‌ ರಸ್ತೆ, ಫೀನೆಕ್ಸ್‌ ಮಾಲ್‌ ಎದುರು, ಬೆಂಗಳೂರು-560 048.
ಸಂಖ್ಯೆ: ಕಾಅ/ಮ/ಟೆಂಡರ್‌/10/2021-22 ದಿನಾಂಕ: 09-09-2021

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ಐಎಫ್‌ಟಿ) (ದ್ವಿ ಲಕೋಟೆ ಪದ್ಧತಿ)
(ಇ-ಪ್ರೊಕ್ಯೂರ್‌ಮೆಂಟ್‌ ಪೋರ್ಟಲ್‌ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ಇವರು ಐಟಂದರದ ಟೆಂಡರ್‌ಗಳನ್ನು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಗುತ್ತಿಗೆದಾರರು ತಾವು ಬಿ.ಬಿ.ಎಂ.ಪಿ/ಕೆ.ಪಿ.ಡಬ್ಲ್ಯೂ.ಡಿ/ ಸಿ.ಪಿ.ಡಬ್ಲ್ಯೂ.ಡಿ/ ರೈಲ್ವೇಸ್‌/ಯಾವುದೇ ರಾಜ್ಯ/ಕೇಂದ್ರ ಸಂಸ್ಥೆಗಳಲ್ಲಿ ನೋಂದಾಯಿತರಾಗಿರಬೇಕು.

ಕ್ರ. ಸಂ.	ಪ್ಯಾಕೇಜ್‌ ಕೆಲಸದ ಹೆಸರು	ಅಂದಾಜು ಮೊತ್ತ ಲಕ್ಷಗಳಲ್ಲಿ (ರೂ.ಗಳಲ್ಲಿ)
1)	ವಾರ್ಡ್‌ ನಂ.149 ಮಹಾದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ ವರ್ತೂರು ಕೆಳಗಡೆ ಬರುವ 110 ಗ್ರಾಮಗಳಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ನೀರು ಸರಬರಾಜು, ಯುಜಿಡಿ ಕಾಮಗಾರಿಗಳಿಂದ ಕೆಟ್ಟುಹೋದ ರಸ್ತೆಗಳ ನಿರ್ಮಾಣ ಮತ್ತು ಪುನರ್‌ ಸ್ಥಾಪನೆ. (ಪ್ಯಾಕೇಜ್‌-1) (ಸರ್ಕಾರಿ ಆದೇಶ ಕ್ರ.ಸಂ.01, 02, 03, 04, 05) (5 ಕಾಮಗಾರಿಗಳು).	1200.00
2)	ವಾರ್ಡ್‌ ನಂ.149 ಮಹಾದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ ವರ್ತೂರು ಕೆಳಗಡೆ ಬರುವ 110 ಗ್ರಾಮಗಳಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ನೀರು ಸರಬರಾಜು, ಯುಜಿಡಿ ಕಾಮಗಾರಿಗಳಿಂದ ಕೆಟ್ಟುಹೋದ ರಸ್ತೆಗಳ ನಿರ್ಮಾಣ ಮತ್ತು ಪುನರ್‌ ಸ್ಥಾಪನೆ. (ಪ್ಯಾಕೇಜ್‌-2) (ಸರ್ಕಾರಿ ಆದೇಶ ಕ್ರ.ಸಂ.06, 07, 08, 09, 10) (5 ಕಾಮಗಾರಿಗಳು).	1200.00
3)	ವಾರ್ಡ್‌ ನಂ.149 ಮಹಾದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ ವರ್ತೂರು ಕೆಳಗಡೆ ಬರುವ 110 ಗ್ರಾಮಗಳಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ನೀರು ಸರಬರಾಜು, ಯುಜಿಡಿ ಕಾಮಗಾರಿಗಳಿಂದ ಕೆಟ್ಟುಹೋದ ರಸ್ತೆಗಳ ನಿರ್ಮಾಣ ಮತ್ತು ಪುನರ್‌ ಸ್ಥಾಪನೆ. (ಪ್ಯಾಕೇಜ್‌-3) (ಸರ್ಕಾರಿ ಆದೇಶ ಕ್ರ.ಸಂ.11, 12, 13, 14, 15) (5 ಕಾಮಗಾರಿಗಳು).	1200.00
4)	ವಾರ್ಡ್‌ ನಂ.149 ಮಹಾದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ ವರ್ತೂರು ಕೆಳಗಡೆ ಬರುವ 110 ಗ್ರಾಮಗಳಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ನೀರು ಸರಬರಾಜು, ಯುಜಿಡಿ ಕಾಮಗಾರಿಗಳಿಂದ ಕೆಟ್ಟುಹೋದ ರಸ್ತೆಗಳ ನಿರ್ಮಾಣ ಮತ್ತು ಪುನರ್‌ ಸ್ಥಾಪನೆ. (ಪ್ಯಾಕೇಜ್‌-4) (ಸರ್ಕಾರಿ ಆದೇಶ ಕ್ರ.ಸಂ.16, 17, 18, 19, 20) (5 ಕಾಮಗಾರಿಗಳು).	1200.00
5)	ವಾರ್ಡ್‌ ನಂ.149 ಮಹಾದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ ವರ್ತೂರು ಕೆಳಗಡೆ ಬರುವ 110 ಗ್ರಾಮಗಳಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ನೀರು ಸರಬರಾಜು, ಯುಜಿಡಿ ಕಾಮಗಾರಿಗಳಿಂದ ಕೆಟ್ಟುಹೋದ ರಸ್ತೆಗಳ ನಿರ್ಮಾಣ ಮತ್ತು ಪುನರ್‌ ಸ್ಥಾಪನೆ. (ಪ್ಯಾಕೇಜ್‌-5) (ಸರ್ಕಾರಿ ಆದೇಶ ಕ್ರ.ಸಂ.21, 22, 23, 24, 25) (5 ಕಾಮಗಾರಿಗಳು).	1200.00
6)	ವಾರ್ಡ್‌ ನಂ.149 ಮಹಾದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ ವರ್ತೂರು ಕೆಳಗಡೆ ಬರುವ 110 ಗ್ರಾಮಗಳಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ನೀರು ಸರಬರಾಜು, ಯುಜಿಡಿ ಕಾಮಗಾರಿಗಳಿಂದ ಕೆಟ್ಟುಹೋದ ರಸ್ತೆಗಳ ನಿರ್ಮಾಣ ಮತ್ತು ಪುನರ್‌ ಸ್ಥಾಪನೆ. (ಪ್ಯಾಕೇಜ್‌-6) (ಸರ್ಕಾರಿ ಆದೇಶ ಕ್ರ.ಸಂ.26, 27, 28, 29, 30) (5 ಕಾಮಗಾರಿಗಳು).	1200.00
7)	ವಾರ್ಡ್‌ ನಂ.54 ಮಹಾದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ ಹೂಡಿ ಕೆಳಗಡೆ ಬರುವ 110 ಗ್ರಾಮಗಳಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ನೀರು ಸರಬರಾಜು, ಯುಜಿಡಿ ಕಾಮಗಾರಿಗಳಿಂದ ಕೆಟ್ಟುಹೋದ ರಸ್ತೆಗಳ ನಿರ್ಮಾಣ ಮತ್ತು ಪುನರ್‌ ಸ್ಥಾಪನೆ. (ಪ್ಯಾಕೇಜ್‌-7) (ಸರ್ಕಾರಿ ಆದೇಶ ಕ್ರ.ಸಂ.31, 32, 33) (3 ಕಾಮಗಾರಿಗಳು).	1418.00
8)	ವಾರ್ಡ್‌ ನಂ.54 ಮಹಾದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ ಹೂಡಿ ಮತ್ತು ವಾರ್ಡ್‌ ನಂ.85ರ ದೊಡ್ಡನೆಕ್ಕುಂಡಿ ಕೆಳಗಡೆ ಬರುವ 110 ಗ್ರಾಮಗಳಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ನೀರು ಸರಬರಾಜು, ಯುಜಿಡಿ ಕಾಮಗಾರಿಗಳಿಂದ ಕೆಟ್ಟುಹೋದ ರಸ್ತೆಗಳ ನಿರ್ಮಾಣ ಮತ್ತು ಪುನರ್‌ ಸ್ಥಾಪನೆ. (ಪ್ಯಾಕೇಜ್‌-8) (ಸರ್ಕಾರಿ ಆದೇಶ ಕ್ರ.ಸಂ.34, 35, 40) (3 ಕಾಮಗಾರಿಗಳು).	1067.00
9)	ವಾರ್ಡ್‌ ನಂ.83 ಮಹಾದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ ಕಾಡುಗೋಡಿ ಮತ್ತು ವಾರ್ಡ್‌ ನಂ.84ರ ಹಗದೂರು ಕೆಳಗಡೆ ಬರುವ 110 ಗ್ರಾಮಗಳಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ನೀರು ಸರಬರಾಜು, ಯುಜಿಡಿ ಕಾಮಗಾರಿಗಳಿಂದ ಕೆಟ್ಟುಹೋದ ರಸ್ತೆಗಳ ನಿರ್ಮಾಣ ಮತ್ತು ಪುನರ್‌ ಸ್ಥಾಪನೆ. (ಪ್ಯಾಕೇಜ್‌-9) (ಸರ್ಕಾರಿ ಆದೇಶ ಕ್ರ.ಸಂ.36, 37, 38, 39, 55, 56, 57, 58) (8 ಕಾಮಗಾರಿಗಳು).	1461.00
10)	ವಾರ್ಡ್‌ ನಂ.149 ಮಹಾದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ ವರ್ತೂರು ಕೆಳಗಡೆ ಬರುವ 110 ಗ್ರಾಮಗಳಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ನೀರು ಸರಬರಾಜು, ಯುಜಿಡಿ ಕಾಮಗಾರಿಗಳಿಂದ ಕೆಟ್ಟುಹೋದ ರಸ್ತೆಗಳ ನಿರ್ಮಾಣ ಮತ್ತು ಪುನರ್‌ ಸ್ಥಾಪನೆ. (ಪ್ಯಾಕೇಜ್‌-10) (ಸರ್ಕಾರಿ ಆದೇಶ ಕ್ರ.ಸಂ.42, 43, 44, 45, 46) (5 ಕಾಮಗಾರಿಗಳು).	1014.00
11)	ವಾರ್ಡ್‌ ನಂ.149 ಮಹಾದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ ವರ್ತೂರು ಮತ್ತು ವಾರ್ಡ್‌ ನಂ.150ರ ಬೆಲಂದೂರು ಕೆಳಗಡೆ ಬರುವ 110 ಗ್ರಾಮಗಳಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ನೀರು ಸರಬರಾಜು, ಯುಜಿಡಿ ಕಾಮಗಾರಿಗಳಿಂದ ಕೆಟ್ಟುಹೋದ ರಸ್ತೆಗಳ ನಿರ್ಮಾಣ ಮತ್ತು ಪುನರ್‌ ಸ್ಥಾಪನೆ. (ಪ್ಯಾಕೇಜ್‌-11) (ಸರ್ಕಾರಿ ಆದೇಶ ಕ್ರ.ಸಂ.41, 47, 48, 49, 50, 51, 52, 53, 54) (9 ಕಾಮಗಾರಿಗಳು).	1008.00

ಇಎಂಡಿ ಘೋಷಣಾ ಪತ್ರವನ್ನು ಸರ್ಕಾರಿ ಆದೇಶದ ಪ್ರಕಾರ ಸಲ್ಲಿಸುವುದು. ಟೆಂಡರ್‌ನ ಕಾರ್ಯಸೂಚಿ: 1) ಆರ್‌ಎಫ್‌ಪಿ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್‌ ಪೋರ್ಟಲ್‌ನಿಂದ ದಿನಾಂಕ: 16–09–2021 ರ ಸಂಜೆ 4:00 ಗಂಟೆ ಯಿಂದ ಡೌನ್‌ಲೋಡ್‌ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 18–09–2021ರ ಸಂಜೆ 3:00 ಗಂಟೆಯವರೆಗೆ. 3) ಪೂರ್ವ ಬಿಡ್‌ ಸಭೆಯು ಮುಖ್ಯ ಅಭಿಯಂತರರ ಕಚೇರಿ, ಮಹದೇವಪುರ ವಲಯ, ಕೆ.ಆರ್‌.ಪುರಂ, ಬೆಂಗಳೂರು–560 036 ಇಲ್ಲಿ ದಿನಾಂಕ: 22–09–2021 ರಂದು ಸಂಜೆ 3:00 ಗಂಟೆಗೆ. 4) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 30–09–2021ರ ಸಂಜೆ 4:00 ಗಂಟೆಯವರೆಗೆ. 5) ತಾಂತ್ರಿಕ ಬಿಡ್‌ನ್ನು ದಿನಾಂಕ: 01–10–2021 ಸಂಜೆ 4:30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ, ಬೃಬೆಂಮಪಾ.

ಕೋವಿಡ್‌-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್‌ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಸುಭಾಷಿತ

ಕಾಲ ಹಿಂದಕ್ಕೆ ಚಲಿಸುವುದಿಲ್ಲ. ಅದರ ಜೊತೆಗೇ ಹೆಜ್ಜೆ ಹಾಕದಿದ್ದರೆ ನಾವು ನಿಂತಲ್ಲೇ ನಿಂತಿರಬೇಕಾಗುತ್ತದೆ.

-ಶಿವರಾಮ ಕಾರಂತ

ಸಾರ್ವಜನಿಕ ಗಣೇಶೋತ್ಸವ ಆಚರಣೆ ಇರಲಿ ಸ್ವಯಂಪ್ರೇರಿತ ಎಚ್ಚರ

ಕೊರೊನಾ ಸೋಂಕಿನ ಆತಂಕದ ಸಂದರ್ಭದಲ್ಲೂ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಸರ್ಕಾರ ಷರತ್ತುಬದ್ಧ ಅನುಮತಿ ನೀಡಿದೆ. ಕಳೆದ ವರ್ಷ ಕೂಡ ಗಣೇಶೋತ್ಸವ ಆಚರಣೆಗೆ ಸರ್ಕಾರ ಷರತ್ತುಬದ್ಧ ಅವಕಾಶ ಕಲ್ಪಿಸಿತ್ತು. ಪ್ರಸ್ತುತ, ಕೊರೊನಾ ಸೋಂಕಿನ ಪ್ರಮಾಣ ಇಳಿಮುಖವಾಗಿರುವುದರಿಂದ ಗಣೇಶೋತ್ಸವ ಆಚರಣೆಗೆ ಅವಕಾಶ ಕಲ್ಪಿಸಿರುವುದರಲ್ಲಿ ಅಸ್ವಾಭಾವಿಕವೇನೂ ಇಲ್ಲ. ಗಣೇಶೋತ್ಸವ ಆಚರಣೆಗೆ ಅವಕಾಶ ನೀಡಬೇಕೆಂದು ಕೆಲವು ಹಿಂದೂ ಸಂಘಟನೆಗಳು ಮತ್ತು ಬಿಜೆಪಿಯ ಜನಪ್ರತಿನಿಧಿಗಳ ಕೆಲವರು ಒತ್ತಡ ಹೇರಿದ್ದರಿಂದಾಗಿ, ಸಾರ್ವಜನಿಕ ಉತ್ಸವಕ್ಕೆ ಸರ್ಕಾರ ಅವಕಾಶ ನೀಡಿರುವುದು ನಿರೀಕ್ಷಿತವೇ ಆಗಿದೆ. ಈಗ ಸರ್ಕಾರ ನೀಡಿರುವ ಅವಕಾಶವನ್ನು ಬಳಸಿಕೊಂಡು ಗಣೇಶೋತ್ಸವವನ್ನು ಜೋಪಾನವಾಗಿ ಆಚರಿಸುವ ಹೊಣೆಗಾರಿಕೆ ಸಾರ್ವಜನಿಕರ ಮುಂದಿದೆ. ಸರ್ಕಾರ ರೂಪಿಸಿರುವ ಕೋವಿಡ್ ನಿಯಂತ್ರಣ ಮಾರ್ಗಸೂಚಿಯು ಉತ್ಸವದ ಸಂದರ್ಭದಲ್ಲಿ ಕಡ್ಡಾಯವಾಗಿ ಪಾಲನೆಯಾಗುವಂತೆ ಎಚ್ಚರ ವಹಿಸಬೇಕಾಗಿದೆ. ಐದು ದಿನಗಳೊಳಗೆ ಗಣೇಶನ ಮೂರ್ತಿ ವಿಸರ್ಜನೆಯನ್ನು ಹಾಗೂ ಉತ್ಸವದ ಸಂದರ್ಭದಲ್ಲಿ ಯಾವುದೇ ಮನರಂಜನಾ ಕಾರ್ಯಕ್ರಮ ಹಮ್ಮಿಕೊಳ್ಳದಿರಲು, ಮೆರವಣಿಗೆ ನಡೆಸದಿರಲು ಸರ್ಕಾರ ತಿಳಿಸಿದೆ. ಎಲ್ಲೆಲ್ಲಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿದರೂ, 20ಕ್ಕೂ ಹೆಚ್ಚು ಜನ ಸೇರದಂತೆ ಸೂಚಿಸಲಾಗಿದೆ. ಮನೆಗಳಲ್ಲಿ ಗರಿಷ್ಠ 2 ಅಡಿ ಎತ್ತರದ ಮೂರ್ತಿ ಹಾಗೂ ಸಾರ್ವಜನಿಕವಾಗಿ ಗರಿಷ್ಠ 4 ಅಡಿಗಳವರೆಗಿನ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆಗೆ ಅವಕಾಶ ಕಲ್ಪಿಸಲಾಗಿದೆ. ಗಣೇಶೋತ್ಸವ ಆಚರಣೆಗೆ ಸಂಬಂಧಿಸಿದಂತೆ ಸರ್ಕಾರ ಗೊತ್ತುಪಡಿಸಿರುವ ನೀತಿಸಂಹಿತೆಯು ಕೊರೊನಾ ನಿಯಂತ್ರಣ ಕ್ರಮಗಳೊಂದಿಗೆ ಹಬ್ಬದ ಆಚರಣೆಗೂ ಅವಕಾಶ ಕಲ್ಪಿಸುವ ಸಮತೋಲನದ ಪ್ರಯತ್ನವಾಗಿದೆ. ಸರ್ಕಾರ ಗೊತ್ತುಪಡಿಸಿದ ನೀತಿಸಂಹಿತೆಯನ್ನು ಪಾಲಿಸುವುದು ನಾಗರಿಕ ಕರ್ತವ್ಯ. ಆದರೆ, ಜವಾಬ್ದಾರಿಯುತ ಪ್ರಜೆ ತನ್ನ ಹೊಣೆಗಾರಿಕೆ ನಿರ್ವಹಿಸಲು ಸರ್ಕಾರದ ಆದೇಶಗಳಿಗೆ ಕಾದು ಕೂರಬಾರದು; ಸಾರ್ವಜನಿಕ ಹಿತಕ್ಕೆ ಅಗತ್ಯವಾದ ನಡವಳಿಕೆಯನ್ನು ಸ್ವಯಂಪ್ರೇರಣೆಯಿಂದ ರೂಪಿಸಿಕೊಳ್ಳುವ ನಾಗರಿಕಪ್ರಜ್ಞೆಯನ್ನು ಕೊರೊನಾ ಸಂದರ್ಭದಲ್ಲಿ ಗಣೇಶೋತ್ಸವ ಆಚರಿಸುವವರು ಪ್ರದರ್ಶಿಸಬೇಕಾಗಿದೆ.

> ಕೊರೊನಾ ಸಂದರ್ಭವು ಸರಳತೆಯಲ್ಲಿ ಬದುಕಿನ ಚೆಲುವನ್ನು ನೋಡಲು ಒತ್ತಾಯಿಸುತ್ತಿದೆ. ಈ ಸರಳತೆಯು ಹಬ್ಬದ ಆಚರಣೆಗೂ ಅನ್ವಯವಾಗಬೇಕು

ಹಬ್ಬಗಳ ಸಂದರ್ಭದಲ್ಲಿ ಮಾರುಕಟ್ಟೆಗಳಲ್ಲಿ ಜನ ಕಿಕ್ಕಿರಿದು ಸೇರುವುದು ಹಾಗೂ ಖರೀದಿಯ ಭರಾಟೆಯಲ್ಲಿ ಕೊರೊನಾ ನಿಯಂತ್ರಣ ಮಾರ್ಗದರ್ಶಿ ಸೂತ್ರಗಳನ್ನು ನಿರ್ಲಕ್ಷಿಸುವುದು ಸಾಮಾನ್ಯ ಎನ್ನುವಂತಾಗಿದೆ. ಇಂತಹ ಬೇಜವಾಬ್ದಾರಿ ನಡೆಯು ಅಪಾಯಕ್ಕೆ ಆಸ್ಪದ ಮಾಡಿಕೊಡುವಂತಹದ್ದು. ಬೂದಿ ಮುಚ್ಚಿದ ಕೆಂಡದಂತೆ ಕೊರೊನಾ ಮೂರನೇ ಅಲೆಯ ಆತಂಕ ಕಾಡುತ್ತಿರುವಾಗ, ಯಾವುದೇ ಕಾರಣದಿಂದ ಮೈಮರೆಯುವುದು ಸರಿಯಲ್ಲ. ಕೊರೊನಾದ ಮೊದಲ ಎರಡು ಅಲೆಗಳು ಉಂಟುಮಾಡಿದ ಸಾವುನೋವಿನ ಅನುಭವ ಇನ್ನೂ ಹಸಿಯಾಗಿರುವಾಗ, ಇರುಳಿನಲ್ಲಿ ಕಂಡ ಬಾವಿಗೆ ಹಗಲು ಬೀಳುವ ಕುರುಡುತನ ಪ್ರದರ್ಶಿಸಬಾರದು. ನೆರೆಯ ಕೇರಳದಲ್ಲಿ ಕೋವಿಡ್ ಪ್ರಕರಣಗಳು ನಿಯಂತ್ರಣಕ್ಕೆ ಸಿಗುತ್ತಿಲ್ಲ. ಮಹಾರಾಷ್ಟ್ರದಲ್ಲೂ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ಆ ಪರಿಸ್ಥಿತಿ ಕರ್ನಾಟಕದಲ್ಲೂ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಬೇಕಾದ ಸಮಯವಿದು. ಈ ಜವಾಬ್ದಾರಿಯನ್ನು ಮರೆತು, ಗಣೇಶೋತ್ಸವ ಆಚರಣೆಯನ್ನು ರಾಜಕೀಯಗೊಳಿಸುವ ಪ್ರಯತ್ನಗಳೂ ನಡೆದಿವೆ. ಭಕ್ತಿ ಮತ್ತು ಸಾರ್ವಜನಿಕ ಹಿತಕ್ಕಿಂತಲೂ ರಾಜಕೀಯ ಹಿತಾಸಕ್ತಿಯನ್ನೇ ಮುಖ್ಯವಾಗಿಸಿಕೊಂಡು ಗಣೇಶೋತ್ಸವದ ಬಗ್ಗೆ ಮಾತನಾಡುವ ರಾಜಕಾರಣಿಗಳ ನಡವಳಿಕೆ ಸಮಾಜದ ಆರೋಗ್ಯಕ್ಕೆ ಪೂರಕವಾದುದಲ್ಲ. ಯಾವುದೇ ಒಂದು ಧರ್ಮದ ವಕ್ತಾರರಂತೆ ಮಾತನಾಡುವುದು ಪ್ರಜಾಪ್ರತಿನಿಧಿಗಳ ಸ್ಥಾನಕ್ಕೆ ಶೋಭೆ ತರುವಂತಹದ್ದಲ್ಲ; ಅಂಥ ನಡವಳಿಕೆ ಪ್ರಜಾಸತ್ತಾತ್ಮಕವೂ ಅಲ್ಲ. ರಾಜಕೀಯ ಕಾರ್ಯಕ್ರಮಗಳು ಹಾಗೂ ಜನಾಶೀರ್ವಾದ ಯಾತ್ರೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನ ಸೇರಿ ಕೋವಿಡ್ ನಿಯಮಾವಳಿ ಸ್ಪಷ್ಟವಾಗಿ ಉಲ್ಲಂಘನೆಯಾಗಿತ್ತು. ಅದೇ ರಾಜಕಾರಣಿಗಳು ಈಗ ಸಾರ್ವಜನಿಕ ಗಣೇಶೋತ್ಸವದ ಬಗ್ಗೆ ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ. ಗಣೇಶೋತ್ಸವ ಬರೀ ಧಾರ್ಮಿಕ ಆಚರಣೆಯಾಗಿರದೆ, ಸಮಕಾಲೀನ ತವಕತಲ್ಲಣಗಳಿಗೆ ಸ್ಪಂದಿಸುವ ಅನುಭವ ಮಂಟಪದ ರೀತಿಯಲ್ಲಿ ಗುರುತಿಸಿಕೊಂಡಿದೆ. ಸ್ವಾತಂತ್ರ್ಯ ಚಳವಳಿ ಸಂದರ್ಭದಲ್ಲಿ ಜನಜಾಗೃತಿ ಹಾಗೂ ಸಂಘಟನೆಯ ಉದ್ದೇಶಗಳಿಗಾಗಿ ಗಣೇಶೋತ್ಸವ ವೇದಿಕೆಗಳು ಬಳಕೆಯಾಗಿದ್ದವು. ನಂತರದ ವರ್ಷಗಳಲ್ಲಿ ಸಾಂಸ್ಕೃತಿಕ ಹಾಗೂ ವಿವಿಧ ಪ್ರಕಾರಗಳ ಕಲಾವಿದರ ಸೃಜನಶೀಲ ಅಭಿವ್ಯಕ್ತಿಗೆ ಗಣೇಶೋತ್ಸವ ವೇದಿಕೆಯಾಗಿದೆ. ಗಣೇಶೋತ್ಸವದಂತಹ ಆಚರಣೆಗಳಿಗೆ ಇರುವ ಸಾಂಸ್ಕೃತಿಕ ಹಾಗೂ ಸಮಾಜಮುಖಿ ಸಾಧ್ಯತೆಗಳು ಬಿಕ್ಕಟ್ಟುಗಳ ಶಮನಕ್ಕೆ ಬಳಕೆಯಾಗಬೇಕು.

ಸಾಮಾನ್ಯವಾಗಿ ಎಲ್ಲ ಹಬ್ಬಗಳ ಹಿಂದೆಯೂ ಮನುಷ್ಯನ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಉತ್ತಮಪಡಿಸುವ ಉದ್ದೇಶಗಳಿವೆ. ಹಬ್ಬಗಳ ಬಹುತೇಕ ವಿಧಿವಿಧಾನಗಳು ಮನೋವಿಕಾಸ ಹಾಗೂ ಮನರಂಜನೆಗೆ ಪೂರಕವಾಗಿದ್ದರೆ, ವಿಶೇಷ ಖಾದ್ಯಗಳು ದೈಹಿಕ ಆರೋಗ್ಯಕ್ಕೆ ಪುಷ್ಟಿವರ್ಧಕಗಳಾಗಿವೆ. ಈ ಆರೋಗ್ಯಲಾಭದ ನೆಲೆಗಟ್ಟು ಗಣೇಶ ಚತುರ್ಥಿಗೂ ಇದೆ. ಗಣಪತಿ ತಿಂಡಿಪ್ರಿಯನಷ್ಟೇ ಅಲ್ಲ, ವಿವೇಕ ಮತ್ತು ಸಾವಧಾನದ ಸಂಕೇತವೂ ಹೌದು. ಸದ್ಯದ ಸಂದರ್ಭದಲ್ಲಿ ನಮಗೆ ಮಾದರಿ ಆಗಬೇಕಾದುದು ವಿಶ್ವಸಂಚಾರದ ಷಣ್ಮುಖಪ್ರಜ್ಞೆಯಲ್ಲ; ಮನೆಯಲ್ಲಿರುವ ಅಪ್ಪ–ಅಮ್ಮನಿಗೆ ಪ್ರದಕ್ಷಿಣೆ ಹಾಕಿ ಲೋಕಸಂಚಾರ ಪೂರೈಸಿದ ಗಣೇಶಪ್ರಜ್ಞೆ. ಕೊರೊನಾ ಸೋಂಕಿನ ಆತಂಕವನ್ನು ಗೆಲ್ಲಲು ನಮಗೆ ಇದು ಪ್ರೇರಣೆಯಾಗಿ ಪರಿಣಮಿಸಬೇಕು. ಗಣೇಶೋತ್ಸವ ಆಚರಣೆಯ ಸಂಭ್ರಮವನ್ನು ಬಯಲಿನಿಂದ ಅಂತರಂಗಕ್ಕೆ ತಂದುಕೊಳ್ಳಲು ಇದು ಸಕಾಲ. ಕೊರೊನಾ ಸಂದರ್ಭವು ಸರಳತೆಯಲ್ಲಿ ಬದುಕಿನ ಚೆಲುವನ್ನು ನೋಡಲು ಒತ್ತಾಯಿಸುತ್ತಿದೆ. ಈ ಸರಳತೆಯು ಹಬ್ಬದ ಆಚರಣೆಗೂ ಅನ್ವಯವಾಗಬೇಕು. ಗಣೇಶನ ಆರಾಧನೆಯು ಕೋವಿಡ್ ನಿಯಂತ್ರಣದ ಪ್ರಯತ್ನಗಳಿಗೆ ಶಕ್ತಿಮದ್ದಾಗಿ ಪರಿಣಮಿಸಬೇಕೇ ವಿನಾ ವೈರಸ್ ಹರಡುವುದಕ್ಕೆ ಪೂರಕ ಪರಿಸ್ಥಿತಿ ಒದಗಿಸಬಾರದು.

ದಿನದ ಟ್ವೀಟ್

ಅರಿಯಿರಿ ಲಸಿಕೆಯ ಮಹತ್ವ

ನನ್ನ ತಂದೆ ಎರಡೂ ಡೋಸ್ ಲಸಿಕೆ ಪಡೆದಿದ್ದರು. ಆದರೂ ಕೋವಿಡ್‌ಪೀಡಿತರಾದರು. 10 ದಿನಗಳಲ್ಲಿ ಪರಿಸ್ಥಿತಿ ಉಲ್ಬಣಿಸಿ ಆಸ್ಪತ್ರೆಗೆ ದಾಖಲಾದರು. ಐಸಿಯು ಅಗತ್ಯ ಬರಲಿಲ್ಲ. ತ್ವರಿತವಾಗಿ ಚೇತರಿಸಿಕೊಂಡರು. ಐದು ದಿನಗಳಲ್ಲಿ ಡಿಸ್ಚಾರ್ಜ್ ಆಗಿ, ವಾರದ ಹಿಂದೆ ಮನೆಗೆ ಬಂದಿದ್ದಾರೆ. ಚೆನ್ನಾಗಿದ್ದಾರೆ. ನನ್ನ ತಾಯಿಗೆ ರೋಗ-ಲಕ್ಷಣಗಳು ಕಾಣಿಸಿಕೊಳ್ಳಲೇ ಇಲ್ಲ. ಲಸಿಕೆಗಳು ಕೆಲಸ ಮಾಡುತ್ತವೆ. ಸೋಂಕು ಪ್ರಕರಣಗಳ ಸಂಖ್ಯೆ ಹೆಚ್ಚಿಗೆ ಇಲ್ಲದಿದ್ದಾಗ ಆಸ್ಪತ್ರೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತವೆ. ಲಸಿಕೆ ಪಡೆಯಿರಿ.

ರಾಹುಲ್ ಸಿದ್ಧಾರ್ಥನ್, ಪ್ರಾಧ್ಯಾಪಕ

ಕಿಡಿನುಡಿ

ಪದವೀಧರ ಯುವಜನರಲ್ಲಿ ಶೇ 64ರಷ್ಟು ನಿರುದ್ಯೋಗ ಇದೆ. ಹಾಗಾಗಿ, ಮೋದಿ ಅವರು ಹುಟ್ಟಿದ ದಿನವನ್ನು ನಿರುದ್ಯೋಗ ದಿನವಾಗಿ ಯುವಜನರು ಆಚರಿಸಬೇಕು.



ಪ್ರಶಾಂತ್ ಭೂಷಣ್, ವಕೀಲ, ಸಾಮಾಜಿಕ ಹೋರಾಟಗಾರ

25 ವರ್ಷಗಳ ಹಿಂದೆ

ಮಂಗಳವಾರ, 10-9-1996

• **‘ಕುರುಕ್ಷೇತ್ರ ಯುದ್ಧವಾಗಿದ್ದು ಪಟೇಲ್‌ಗೆ ತಿಳಿಯದೇ?’**

ಬೆಂಗಳೂರು, ಸೆ. 9– ನಗರದಲ್ಲಿ ವಿಶ್ವ ಸುಂದರಿ ಸ್ಪರ್ಧೆ ನಡೆಸುವುದನ್ನು ಪ್ರಬಲವಾಗಿ ಸಮರ್ಥಿಸಿಕೊಂಡಿರುವ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು, ಅದೇ ಸಂದರ್ಭದಲ್ಲಿ ಮಹಾಭಾರತದ ದ್ರೌಪದಿಯ ಸೀರೆ ಎಳೆದಾಗ, ರಾಮಾಯಣದ ಸೀತೆಯನ್ನು ರಾವಣ ಅಪಹರಿಸಿದಾಗ ಭಾರತೀಯ ಸಂಸ್ಕೃತಿ ಎಲ್ಲಿತ್ತು ಎಂದು ಪ್ರಶ್ನಿಸಿರುವುದಕ್ಕೆ, ವಿಧಾನಸಭೆಯ ವಿರೋಧಪಕ್ಷದ ನಾಯಕ ಬಿ.ಎಸ್. ಯಡಿಯೂರಪ್ಪ, ಲೋಕಸಭಾ ಸದಸ್ಯ ಅನಂತಕುಮಾರ್, ಶಾಸಕರಾದ ಎಸ್.ಸುರೇಶ್ ಕುಮಾರ್ ಮತ್ತು ವಾಟಾಳ್ ನಾಗರಾಜ್ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ದ್ರೌಪದಿಯ ಸೀರೆ ಎಳೆದಾಗ ಕುರುಕ್ಷೇತ್ರ ಯುದ್ಧವಾಯಿತು. ಸೀತೆಯನ್ನು ಅಪಹರಿಸಿದಾಗ ರಾವಣನ ಸಂಹಾರವಾಗಿ ಲಂಕೆ ಸುಟ್ಟು ಹೋಯಿತು. ಅದೇ ರೀತಿ ಈಗ ಮಹಿಳೆಯರನ್ನು ನಗ್ನರಾಗಿಸಿ ವಿದೇಶಗಳಿಂದ ಉದ್ಯಮಿಗಳು ಬರುತ್ತಾರೆ, ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತದೆ ಎಂದರೆ, ಘೋಷಿಸಿರುವ ‘1996ನೇ ಇಸವಿ ನವೆಂಬರ್ ದುಶ್ಯಾಸನರಿಗೂ ಅಧೋಗತಿ ಕಾದಿದೆ’ ಎಂದು ಬಿಜೆಪಿ ವಕ್ತಾರ ಹಾಗೂ ಶಾಸಕ ಸುರೇಶ್ ಕುಮಾರ್ ಅವರು ಮುಖ್ಯಮಂತ್ರಿ ಪಟೇಲ್ ಅವರಿಗೆ ಬರೆದ ಬಹಿರಂಗ ಪತ್ರದಲ್ಲಿ ಎಚ್ಚರಿಸಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 10-9-1971

• **ಕರ್ನಾಟಕ ಎಕ್ಸ್‌ಪ್ರೆಸ್**

ಹುಬ್ಬಳ್ಳಿ, ಸೆ. 9– ಮೀರಜ್– ಬೆಂಗಳೂರು ನಡುವೆ ಸಂಚರಿಸುವ ಡೆಕ್ಕನ್ ಎಕ್ಸ್‌ಪ್ರೆಸ್ ರೈಲುಗಾಡಿಗೆ ಅಕ್ಟೋಬರ್ 1ರಿಂದ ‘ಕರ್ನಾಟಕ ಎಕ್ಸ್‌ಪ್ರೆಸ್’ ಎಂದು ಪುನರ್ ನಾಮಕರಣ ಮಾಡಲಾಗುವುದೆಂದು ಕೇಂದ್ರದ ರೈಲ್ವೆ ಸಚಿವ ಕೆ. ಹನುಮಂತಯ್ಯ ಅವರು ಇಂದು ಇಲ್ಲಿ ಪ್ರಕಟಿಸಿದರು.

ಸ್ಥಾಪಿತ ಮೌಲ್ಯಗಳು ಜಡವಾದಾಗ ಅವನ್ನು ಸರಿಪಡಿಸಲು ಪರಿವರ್ತನೆ ಬೇಕಾಗುತ್ತದೆ

ಸಮಗ್ರತೆ ಮೂಡಲಿ, ಅಲ್ಪಮತಿ ತೊಲಗಲಿ

ವಿಶ್ಲೇಷಣೆ

ಡಾ. ಶಿವಮೂರ್ತಿ ಮುರುಘಾ ಶರಣರು

ವೀರಶೈವವು ಶೈವದ ರೂಪಾಂತರ. ಶೈವ ಆಗಿರಬಹುದು ವೀರಶೈವ ಆಗಿರಬಹುದು ಎರಡೂ ವೇದಾಗಮ ಪ್ರಣೀತವಾದುವು. ತಾವು ಜನಿಸಿದಂತಹ ಶೈವ ಬ್ರಾಹ್ಮಣದಲ್ಲಿ ಇದ್ದಂತಹ ಅಸಮಾನತೆ, ಅಸ್ಪೃಶ್ಯತೆ, ಲಿಂಗ ತಾರತಮ್ಯ ಮೊದಲಾದ ಭೇದಗಳ ಕುರಿತು ಬಸವಣ್ಣನವರು ಹೀಗೆ ಹೇಳಿದ್ದರು-

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯಿವೆ,
ನೋಡಯ್ಯಾಮಹಾದಾನಿ ಕೂಡಲಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯ

ಇದು ವೇದಾಗಮಗಳ ಬಗೆಗಿನ ಅವರ ಸ್ಪಷ್ಟವಾದ ನಿಲುವು. ಬಸವಣ್ಣನ ಮಾತಾಪಿತೃಗಳು ಮತ್ತು ಅವರ ಮನೆತನವು ಶೈವ ಬ್ರಾಹ್ಮಣಕ್ಕೆ ಸೇರಿದುದಾಗಿತ್ತು. ಹಾಗಾಗಿ ಬಸವಣ್ಣನವರು ಶಿವೋಪಾಸಕರಾಗಿದ್ದರು. ವ್ಯವಸ್ಥೆಯೊಳಗಿನ ಲೋಪದೋಷವನ್ನು ವಿರೋಧಿಸುತ್ತಲೇ ಹೊಸ ಧರ್ಮ ಹುಟ್ಟಿಕೊಂಡಿದೆ. ಅದರಿಂದಾಗಿ ವೀರಶೈವ ಮತ್ತು ಬಸವಾಯತರ ನಡುವಿನ ಅಂತರವು ಆಳವಾಗಿ ಬೆಳೆಯುತ್ತ ಹೋಗಿದೆ. ದೇಶದಲ್ಲಿ ಎಷ್ಟು ಧರ್ಮಗಳು ಅಸ್ತಿತ್ವದಲ್ಲಿ ಬಂದವೊ ಅವೆಲ್ಲವೂ ನ್ಯೂನತೆಗಳನ್ನು ವಿರೋಧಿಸುತ್ತ ಅಸ್ತಿತ್ವಕ್ಕೆ ಬಂದಿವೆ.

ವೈದಿಕ ಧರ್ಮವು ಸನಾತನವಾದುದು. ಸ್ಥಾಪಿತ ಮೌಲ್ಯಗಳು ಜಡವಾದಾಗ ಅವನ್ನು ಸರಿಪಡಿಸಲು ಪರಿವರ್ತನೆ ಬೇಕಾಗುತ್ತದೆ. ಹೊಸ ಧರ್ಮದ ಉಗಮ ಆದಾಗಲೆಲ್ಲ ಸಂಘರ್ಷಗಳು ನಡೆದಿವೆ. ಅದರಿಂದ ಬೌದ್ಧ ಧರ್ಮ ಹೊರತಾಗಿಲ್ಲ. ಬುದ್ಧನ ಮೇಲೆ ದೌರ್ಜನ್ಯಗಳು ನಡೆದಿವೆಯೆಂಬುದು ಇತಿಹಾಸದಿಂದ ತಿಳಿದು ಬರುತ್ತದೆ. ದೇಶದಲ್ಲಿ ಧರ್ಮವನ್ನು ವಿಸ್ತರಿಸಲು ಸಾಧ್ಯ ಆಗದಿದ್ದಾಗ, ಅದು ಹೊರದೇಶಗಳಲ್ಲಿ ಅಸ್ತಿತ್ವ ಕಂಡುಕೊಂಡಿತು. ಅಷ್ಟೇ ಪ್ರಾಚೀನವಾದುದು ಜೈನಧರ್ಮ. ಯಜ್ಞದ ಹೆಸರಲ್ಲಿ ನಡೆಯುತ್ತಿದ್ದಂತಹ ಹಿಂಸೆಯನ್ನು ವಿರೋಧಿಸುತ್ತ, ಸ್ವತಂತ್ರ ಧರ್ಮದ ಸ್ವರೂಪ ಪಡೆಯಿತು. ನಂತರ ಸಿಖ್ ಧರ್ಮವು ಸಾಕಾರ ಪಡೆಯಿತು.

ಯಾವ ಸಮಸ್ಯೆಗಳು ಪರಿವರ್ತನೆ ಕಾಣದೆ ಉಳಿದಿದ್ದವೋ, ಅಂಥ ಸಮಸ್ಯೆಗಳನ್ನು ಹನ್ನೆರಡನೇ ಶತಮಾನದ ಬಸವಣ್ಣ ಮತ್ತಿತರ ಶರಣರು ಕೈಗೆತ್ತಿಕೊಂಡರು. ಅವೆಂದರೆ, ಲಿಂಗ ಅಸಮಾನತೆ ಮತ್ತು ಅಸ್ಪೃಶ್ಯತಾ ನಿವಾರಣೆ. ಒಂದು, ಮಹಿಳೆಯರ ಹಕ್ಕು-ಬಾಧ್ಯತೆಯನ್ನು ಎತ್ತಿ ಹಿಡಿಯುವುದು; ಮತ್ತೊಂದು, ಶೋಷಿತರ ಹಕ್ಕುಗಳನ್ನು ಪ್ರತಿಪಾದಿಸುವುದು. ಅದಕ್ಕಾಗಿ ಬಸವಣ್ಣ ನಿರ್ಲಕ್ಷಿತ ಸಮುದಾಯಗಳನ್ನೆಲ್ಲ ಒಟ್ಟುಗೂಡಿಸುತ್ತ, ಅವರಲ್ಲಿ ಸ್ವಾಭಿಮಾನ ಜಾಗೃತಿ ಮೂಡಿಸಿದರು. ಬಿಡಿಬಿಡಿಯಾಗಿದ್ದ ಶರಣರನ್ನು ಒಗ್ಗೂಡಿಸಿದರು. ಕುಲಕಸುಬುಗಳು ಕಾಯಕ ಸ್ವರೂಪ ಪಡೆದು ಕಾಯಕ ಸಮಾಜ ರಚನೆಗೊಂಡಿತು.

ಮುಸ್ಲಿಂ ರಾಜಮಹಾರಾಜರು ಸಾವಿರಾರು ವರ್ಷಗಳವರೆಗೆ ದೇಶವನ್ನು ಆಳಿದ್ದು, ಗಣನೀಯವಾಗಿ ಮತಾಂತರ ನಡೆದಿದೆ. ಅದರಂತೆ ಎಲ್ಲ ಧರ್ಮಗಳು ಮತಾಂತರವನ್ನು ಪ್ರಮುಖ ಆಶಯವನ್ನಾಗಿಟ್ಟುಕೊಂಡು ತಮ್ಮ ಧರ್ಮವನ್ನು ವಿಸ್ತರಿಸುತ್ತ ಹೋಗಿವೆ. ಧಾರ್ಮಿಕ ಹಕ್ಕಿನಿಂದ ವಂಚಿತವಾಗಿದ್ದ ಸಣ್ಣಪುಟ್ಟ ಜನಾಂಗಗಳೆಲ್ಲ ಬಸವಣ್ಣನವರ ಮುಖಂಡತ್ವದಲ್ಲಿ ಒಂದಾದದ್ದು ಅವರ ಸಂಘಟನಾ ಶಕ್ತಿಗೆ ಮಾತ್ರವಲ್ಲದೆ ಶರಣರ ಸ್ವಾಭಿಮಾನದ ಶಕ್ತಿಗೆ ದ್ಯೋತಕ. ತಮ್ಮ ಪೂರ್ವಾಶ್ರಯವನ್ನು ಕಳೆದುಕೊಂಡ ಜನಾಂಗಗಳು ಹೊಸ ಸಿದ್ಧಾಂತ ಕಂಡುಕೊಂಡವು. ತಾವು ಕಟ್ಟಿದ ಶರಣ ಧರ್ಮದೊಂದಿಗೆ ಶರಣರು ಗುರುತಿಸಿಕೊಂಡರು.

ತಮ್ಮನ್ನು ಹೊರದೂಡಿದ ಪಟ್ಟಭದ್ರರಿಗೆ ಬಸವಣ್ಣನವರು ಹೀಗೆ ಉತ್ತರ ಕೊಡುತ್ತಾರೆ. ಬಹಿಷ್ಕಾರದಿಂದ ನೊಂದು ಬೆಂದ ಬಸವಣ್ಣ ಅದನ್ನೇ ಭವಿಷ್ಯದ ಬದುಕಿಗೆ ಮೆಟ್ಟಿಲಾಗಿಸಿಕೊಳ್ಳುತ್ತಾರೆ. ಅದು ಬಸವ ಶಕ್ತಿ. ಅವರ ಪ್ರಯತ್ನ ಅಷ್ಟಕ್ಕೇ ನಿಲ್ಲದೆ ಸಮ ಸಮಾಜವನ್ನು ಕಟ್ಟಲು ಮುಂದಾಗುತ್ತಾರೆ. ಅಂತರ್ಜಾತಿ ವಿವಾಹ ನೆರವೇರಿಸಿದಾಗ ವರ್ಣಸಂಕರದ ಆರೋಪ ಹೊರಿಸಿದ ಬಿಜ್ಜಳ ಮತ್ತವರ ಕಡೆಯಿಂದ ಬಹಿಷ್ಕಾರ. ಬಸವಣ್ಣನವರಿಗೆ ಆರಂಭ ಮತ್ತು ಅಂತ್ಯ ಎರಡು ಹಂತದಲ್ಲೂ ಬಹಿಷ್ಕಾರ. ಅದನ್ನು ಸವಾಲಾಗಿ ಸ್ವೀಕರಿಸಿದ ಬಸವಣ್ಣ ಭವ್ಯ ವ್ಯಕ್ತಿಯಾಗುತ್ತಾರೆ; ಬಹಿಷ್ಕಾರದಿಂದ ಎದ್ದುಬರುತ್ತಾರೆ.

ಇಷ್ಟೆಲ್ಲ ತ್ಯಾಗ ಮತ್ತು ಬಲಿದಾನದಿಂದ ಕಟ್ಟಲ್ಪಟ್ಟಂತಹ ಶರಣಧರ್ಮವನ್ನು ಸರ್ವರೂ ಒಗ್ಗೂಡಿ ಬೆಳೆಸಿದ್ದರೆ ಬೌದ್ಧ ಧರ್ಮದಷ್ಟೇ ಪ್ರಭಾವಶಾಲಿಯಾಗಿ ವಿಶ್ವದಾದ್ಯಂತ ಪ್ರಚಾರಗೊಳ್ಳುತ್ತಿತ್ತು. ಸನಾತನವಾದ ಮತ್ತು ಪರಿವರ್ತನವಾದ ಎರಡರ ನಡುವಿನ ತಿಕ್ಕಾಟದಿಂದಾಗಿ ಸ್ವಾಮಿ ವಿವೇಕಾನಂದರು, ಬಾಬಾಸಾಹೇಬ ಅಂಬೇಡ್ಕರರು, ಕೊಲ್ಲಾಪುರದ ಶಾಹು ಮಹಾರಾಜರು, ಮೈಸೂರಿನ ಅರಸು ಮನೆತನದ ಮಹಾರಾಜ ಮುಂತಾದವರು ಈ ಧರ್ಮಕ್ಕೆ ಸೇರ್ಪಡೆ ಆಗುವ ಸಂದರ್ಭವು ಕೈತಪ್ಪಿ ಹೋಯಿತು.

ಪ್ರಾಚೀನ ಪರಂಪರೆಯು ವೇದಾಗಮ ಪ್ರಣೀತವಾದರೆ; ಬಸವ ಪರಂಪರೆಯು ವಚನಾಗಮ ಕೇಂದ್ರಿತವಾಗಿದೆ. ಇಬ್ಬರ ನಡುವಿನ ತಾತ್ವಿಕ ಸಂಘರ್ಷ, ಅದರೊಂದಿಗೆ ಸಾಮಾಜಿಕ ಸಂಘರ್ಷ. ಎರಡು ಪ್ರಭೇದಗಳು. ಉಭಯತ್ರರು ದಲಿತ, ಕ್ರೈಸ್ತ, ಮುಸ್ಲಿಂ ಮತ್ತು ಇತರೆಯವರೊಟ್ಟಿಗೆ ಸಂಪರ್ಕ ಹೊಂದುತ್ತಾರೆ. ಒಂದೇ ಧರ್ಮಕ್ಕೆ ಸೇರಿದ ಲಿಂಗಾಯತರು ವೀರಶೈವರನ್ನು; ವೀರಶೈವರು ಲಿಂಗಾಯತರನ್ನು ಪರಸ್ಪರ ದ್ವೇಷಿಸುತ್ತಾರೆ. ಅವರವರ ಪರಂಪರೆ ಅವರವರಿಗೆ ಶ್ರೇಷ್ಠ. ತಮ್ಮ ಧರ್ಮ ಅಥವಾ ಪರಂಪರೆಯನ್ನು ಅನುಸರಿಸಲಿ. ಸಾಮಾಜಿಕ ಸಾಮರಸ್ಯ ಸ್ಥಾಪಿಸುವುದು ಭವಿಷ್ಯದ ದೃಷ್ಟಿಯಿಂದ ಸೂಕ್ತ. ಇಷ್ಟನ್ನು ಹೇಳಿದಾಕ್ಷಣ ಕೆಲವರು- ಇವರು ವೀರಶೈವರ ಕಡೆ ವಾಲುತ್ತಿದ್ದಾರೆಂದು ಭಾವಿಸುತ್ತಾರೆ. ಬಸವಧರ್ಮ ಸ್ಥಾಪನೆ ಹಿನ್ನೆಲೆಯಲ್ಲಿ ಆರಂಭವಾದ ಕಾನೂನು ಸಂಘರ್ಷವು ಲಿಂಗಾಯತ ಸ್ವತಂತ್ರ ಧರ್ಮ ಹೋರಾಟಕ್ಕೆ ಬೆಂಬಲಿಸಿದಾಗಲೂ ಮುಂದುವರಿದಿತ್ತು.

ಐತಿಹಾಸಿಕ ಮುರುಘಾ ಮಠಕ್ಕೆ ರಾಜ್ಯದಾದ್ಯಂತ ಶಾಖಾ ಮಠಗಳು. ಉತ್ತರ ಕರ್ನಾಟಕದ ಲಿಂಗಾಯತ, ದಕ್ಷಿಣ ಕರ್ನಾಟಕದ ವೀರಶೈವ ಉಭಯತ್ರರೂ ನಡೆದುಕೊಳ್ಳುತ್ತಾರೆ. ಲಿಂಗಾಯತಕ್ಕೆ ಒತ್ತುಕೊಟ್ಟರೆ ವೀರಶೈವರು ದ್ವೇಷಿಸುತ್ತಾರೆ, ವೀರಶೈವರತ್ತ ಗಮನಹರಿಸಿದರೆ ಲಿಂಗಾಯತರು ದೂಷಿಸುತ್ತಾರೆ. ಕೇವಲ ವೇದಿಕೆ ಹಂಚಿಕೊಳ್ಳುವುದರಿಂದ ಅವರ ಸಿದ್ಧಾಂತವನ್ನು ಒಪ್ಪಿಕೊಳ್ಳಲಾಗುತ್ತದೆಂಬ ವಾದ ಸರಿಯಲ್ಲ. ಯಾವ ಧರ್ಮ, ಯಾವ ಸಂಘಟನೆ ಆಮಂತ್ರಿಸಿದಾಗಲೂ ಸಾಮಾಜಿಕ ಸಾಮರಸ್ಯ ಮುಖ್ಯವಾಗುತ್ತದೆಯೇ ಹೊರತು ಸೈದ್ಧಾಂತಿಕ ಬದ್ಧತೆ ಎಂದಿಗೂ ಬದಲಾಗದು.

ನಾನು ಬಸವಾಯತ, ನನ್ನ ಬಸವನಿಷ್ಠೆ ಅಚಲವಾದುದು, ಪ್ರಗತಿಪರವಾದುದು. ನನ್ನ ಹೆಜ್ಜೆಗಳು ದೃಢವಾಗಿವೆ. ಸೈದ್ಧಾಂತಿಕವಾಗಿ ಯಾವುದೇ ರಾಜಿ ಇರುವುದಿಲ್ಲ. ಎಲ್ಲರಿಗೂ ಆಶೀರ್ವಾದ ಬೇಕೆಂಬ ಒತ್ತಾಸೆಯಷ್ಟೆ. ಶೂದ್ರಾತಿಶೂದ್ರರಿಗೂ ನಾಯಕತ್ವ ನೀಡಿರುವಾಗ, ಅದರಿಂದ ದೂರ ಇರುವವರು ಅದನ್ನು ಕೇಳುವುದು ತಪ್ಪಲ್ಲವೆಂಬ ಭಾವನೆ. ಜಾತಿ, ಧರ್ಮದ ಜಗಳದಲ್ಲಿ ಬಸವತತ್ವಕ್ಕೆ ಪೆಟ್ಟು ಬೀಳದಂತೆ ಕಾಳಜಿ ವಹಿಸಬೇಕಾಗಿದೆ. ಬಸವತತ್ವವು ಒಳಗೊಳ್ಳುವ ತತ್ವ. ಇದನ್ನು ಸರ್ವರೂ ಅರ್ಥ ಮಾಡಿಕೊಳ್ಳುವುದು ಒಳ್ಳೆಯದು.

ಈ ನಡುವೆ ಒಳಮೀಸಲಾತಿಯ ಬೇಡಿಕೆ ಮುನ್ನೆಲೆಗೆ ಬಂದಿದೆ. ಸಮಕಾಲೀನ ಸಂದರ್ಭದಲ್ಲಿ ಒಳಮೀಸಲಾತಿ ಸಂಬಂಧದ ಹೋರಾಟವು ತೀವ್ರಗೊಂಡಿದ್ದು, ಸಮಗ್ರತೆಗೆ ಹಿನ್ನಡೆ ಆಗುವ ಸಂಭವವಿದೆ. ಯಾವುದೇ ಜನಾಂಗಕ್ಕೆ ತಮ್ಮ ಹಕ್ಕೊತ್ತಾಯ ಮಾಡಲು ಅವಕಾಶವಿದೆ. ಕೆಲವರನ್ನು ಪ್ರೋತ್ಸಾಹಿಸುವ, ಕೆಲವರನ್ನು ತುಳಿಯುವ ದಿಸೆಯಲ್ಲಿ ತಂತ್ರಗಳು ನಡೆಯಬಾರದಷ್ಟೆ.

ಮೂರನೆಯ ಪಂಚಮಸಾಲಿ ಪೀಠವನ್ನು ಅಸ್ತಿತ್ವಕ್ಕೆ ತರುವ ಪ್ರಯತ್ನಕ್ಕೆ ಕೆಲವರು ಮುಂದಾಗಿದ್ದಾರೆಂದು ಮಾಧ್ಯಮಗಳಿಂದ ಮಾಹಿತಿ. ಒಟ್ಟಾರೆ ಒಗ್ಗಟ್ಟಿಗಿಂತ ಬಿಕ್ಕಟ್ಟು ಸೃಷ್ಟಿಯಾಗುತ್ತ ನಡೆದಿದೆ. ಒಂದೊಂದು ಉಪಜಾತಿಯೂ ಮೀಸಲಾತಿ ಹೆಸರಲ್ಲಿ ಬೇರ್ಪಡುವುದರಿಂದ ಸಮಗ್ರತೆಗೆ ದೊಡ್ಡಪೆಟ್ಟು ಬೀಳುತ್ತಿದೆ. ಸಮಗ್ರತೆಯತ್ತ ಗಮನವಿಲ್ಲ; ಒಡೆಯುವುದರತ್ತ ಹೆಚ್ಚು ತುಡಿತ ಕಂಡುಬರುತ್ತಿದೆ.

ಅನೇಕ ಜಾತಿ- ಉಪಜಾತಿಗಳ ಒಳಮೀಸಲಾತಿ ಹೋರಾಟ ನಡೆಯುತ್ತಿದೆ. ಹೋರಾಟ ಮಾಡುವವರು ಪ್ರಬಲರಾಗಿದ್ದರೆ ಮೌನ; ದುರ್ಬಲರಾಗಿದ್ದರೆ ಅವರ ಮೇಲೆ ಸವಾರಿ. ಇತ್ತೀಚೆಗೆ ವೀರಶೈವ ಲಿಂಗಾಯತ ನಿಗಮ ರಚನೆ ಆಗಿದೆ. ಕೆಲವರು ಕೂಡಿಕೊಂಡು ಲಿಂಗಾಯತ ಮಠಾಧೀಶರ ಒಕ್ಕೂಟ ರಚಿಸಿಕೊಂಡಿರುತ್ತಾರೆ. ಸಂಘಟನೆ ಎಷ್ಟೇ ಇದ್ದರೂ ತೊಂದರೆಯಿಲ್ಲ. ಕಾರ್ಯಸಾಧನೆ ಆಗಬೇಕಷ್ಟೆ.

ಚುರುಮುರಿ

ತೊರೆಗತಿ

• ಲಿಂಗರಾಜು ಡಿ.ಎಸ್.

‘ಅಲ್ಲಾ ಕನ್ರೋ, ಮೋದಕ ವಸ್ತು ಪ್ರಕರಣಕ್ಕೆ ಸಂಬಂಧಪಟ್ಟಂಗೆ ಯಾರನ್ನೂ ಬುಡೀಕಿಲ್ಲಾ ಅಂತ ಗ್ರಹಸಚಿವ ಗುರುಗುಟ್ಟ್ಯದೆ!’ ಯಂಟಪ್ಪಣ್ಣನ ಮಾತು ಕೇಳಿ ನಮಗೆ ಗಾಬರಿಯಾಯ್ತು.

‘ಅಂದ್ರೆ ಗಣೇಶನ ಮುಂದೆ ಮೋದಕ ಮಡಗಂಗಿಲ್ಲ ಅಂದದಾ?’ ವಿಚಾರಿಸಿದೆ.

‘ಬಡ್ಡೆತ್ತುದೇ, ಯಂಟಪ್ಪಣ್ಣಗೆ ಕಣ್ಣು ಸರಿಯಾಗಿ ಕಾಣದೆ ಮಾದಕ ವಸ್ತು ಪ್ರಕರಣ ಅನ್ನದ್ನ ಮೋದಕ ವಸ್ತು ಅಂತ ಓದಿಕ್ಯಂಡದೆ ಕನೋ’ ಅಂತ ವಿವರಣೆ ಕೊಟ್ಟರು. ‘ಯಾಸೆಟ್ಗ ಬುಡಿ ಅತ್ತಗೆ. ಹಬ್ಬದ ಸೀಜನ್ನಗೆ 6ರಿಂದ 8ನೇ ಕ್ಲಾಸು ಮಕ್ಕಳಿಸ್ಕೂಲು ಸುರು ಮಾಡ್ಯದಲ್ಲಾ ನಾಗಣ್ಣ ಸರಿ ಅಂತೀರಾ?’ ಅಂದು ತುರೇಮಣೆಗೆ ಕೇಳಿದೆ.

‘ಅಲ್ಲಾ ಕಯ್ಯಾ, ಎರಡೊರ್ಸದಿಂದ ಇಸ್ಕೂಲು ದಾರಿಯೆ ಮರತುಕಂಡಿದ್ದ ಹೈಕ್ಳು ಈಗ್ಲೂ ಇಸ್ಕೋಲಿಗೆ ಹೋದ್ರೆ ಹೋಗಬೌದು ಇಲ್ಲದಿದ್ರೆ ಆನ್‌ಲೈನ್ ಕ್ಲಾಸಲ್ಲಿ ಮಕ್ಕಂಡು ನಿದ್ದೆ ಮಾಡಬೌದು ಅಂತ ಆಡ್ರು ಮಾಡ್ಯದಲ್ಲೋ ನಾಗಣ್ಣ!’ ಅಂದ್ರು.

‘ಓದಕ್ಕೆ ಕಳ್ಳಬಿದ್ದ ಹೈಕ್ಳು ಇನ್ನೊಂದೊರ್ಸ ಹಿಂಗೀಯೆ ಸ್ಕೂಲು ಮುಚ್ಚಿರಲಿ ಅಂದವಂತೆ. ಮಕ್ಕಳಿಸ್ಕೂಲು ಮನೇಲಲ್ವೆ ಅಂತ ಕೈಲಾಸಂ ಅಂದಿದ್ರಲ್ಲಾ ಅದುನ್ನೇ ಹೇಳ್ತಾವೆ. ಹಂಗೀಯೆ ರಾಜಕಾರಣಿಗಳಿಗೂ ಒಂದಾರು ತಿಂಗಳು ಸ್ಕೂಲಿಗೆ ಕಳಿಸಬೇಕು ಸಾ!’ ಅಂತಂದೆ.

‘ಹ್ಞೂಂ ಕಪ್ಪಾ, ಸ್ಕೂಲಿಗೆ ಬಂದ ಮಕ್ಕಳಿಗೆಲ್ಲಾ ಮೇಷ್ಟ್ರುಗಳು ಹೂವು ಎರಚಿ, ಕುಂಕುಮ ಇಟ್ಟು ಬರಮಾಡಿಕ್ಯಂಡವ್ರಂತೆ ಕನೋ. ಮನೇಲಿ ಅಪ್ಪ-ಅವ್ವನೂ ಇವುಗಳ ಕಾಟ ತಡಿನಾರ್ದೆ ರೋಸೋಗಿದ್ರಲ್ಲಾ ಈಗ ಕುಸಿಯಾಗಿರಬೇಕು’.

‘ನೋಡಿರ್‍ಲಾ ನಮ್ಮೂರು ಇಸ್ಕೂಲಲ್ಲಿ ಮಕ್ಳು ಬಂದೇಟ್ಗೆ ಮೇಷ್ಟ್ರು ‘ಸದ್ಯ ಬಂದಲ್ಲಾ ನನ್ನಪ್ಪ ಬಾ’ ಅಂತ ಸ್ವಾಗತ ಮಾಡಿ ಹೂವ ಮುಡಿಸ್ಯವ್ರಂತೆ ಕನೋ’ ಅಂತ ಯಂಟಪ್ಪಣ್ಣ ಬ್ರೇಕಿಂಗ್ ನ್ಯೂಸ್ ಹೇಳ್ತು. ‘ಅದ್ಯಾಕೆ ಹಂಗೆ ಮಾಡಿದ್ರಂತೆ?’ ಆಶ್ಚರ್ಯದಿಂದ ಕೇಳಿದೆ.

‘ಮಕ್ಳು ಬರದೇವೋದ್ರೆ ಇಸ್ಕೋಲು ಬಂದಾಯ್ತದೆ. ಮುಂದಕ್ಕೆ ಮನೇಗೋಗಿ ಕರಕಬರಬೇಕಾಯ್ತದೆ. ಮಕ್ಕಳೆಲ್ಲಾ ಸ್ಕೂಲು ತೊರೆದು ತೊರೆಗತಿಯಾದ್ರೆ ಕಷ್ಟ ಅಲ್ಲುವಲಾ ಜೀವನ’ ತುರೇಮಣೆ ಕೊರೊನಾ ವೈರಾಗ್ಯದ ಮಾತಾಡಿದರು.

ಸಂಗತ

ಕ್ರೀಡಾ ಅಧ್ಯಯನ: ಸಿಗಲಿ ಪ್ರಾಶಸ್ತ್ಯ

ಕ್ರೀಡಾ ತರಬೇತಿಗಾಗಿ ಪ್ರತ್ಯೇಕ ಸುಸಜ್ಜಿತ ವಿದ್ಯಾಲಯಗಳ ಸಂಖ್ಯೆ ಹೆಚ್ಚಲಿ

• ಮಾಲತಿ ಪಟ್ಟಣಶೆಟ್ಟಿ

ಜಪಾನಿನ ಟೋಕಿಯೊದಲ್ಲಿ ಇತ್ತೀಚೆಗೆ ಜರುಗಿದ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತದ ಕ್ರೀಡಾಪಟುಗಳು ಏಳು ಪದಕಗಳನ್ನು ಗೆದ್ದು ತಂದರು. ಪ್ಯಾರಾಲಿಂಪಿಕ್ಸ್‌ನಲ್ಲಿ ನಮ್ಮ ಕ್ರೀಡಾಳುಗಳು 19 ಪದಕಗಳನ್ನು ತಂದು ದಾಖಲೆ ಮೂಡಿಸಿದರು. ಇದನ್ನು ಕಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಭ್ರಮಿಸಿದವು. ಈ ಹಿಂದಿನ ಚಾಳಿಯಂತೆ ಅದನ್ನು ಅವು ಬಳಿಕ ಮರೆತೂಬಿಡಬಹುದು. ಇದು ನಮ್ಮ ಸರ್ಕಾರಗಳು ಕ್ರೀಡೆಗೆ, ಕ್ರೀಡಾಪಟುಗಳಿಗೆ ನೀಡುವ ಖದರು!

ದೂರದೃಷ್ಟಿಯುಳ್ಳ ಯಾವುದೇ ಸರ್ಕಾರ ಹೀಗೆ ಮಾಡುವುದು ಸಾಧ್ಯವಿಲ್ಲ. ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆಗಾಗಿ ನಾವು ಸಿದ್ಧರಾಗಿದ್ದೇವೆ. ಈ ಸುದೀರ್ಘ ಅವಧಿಯಲ್ಲಿ ದೇಶದ ಸರ್ವಾಂಗೀಣ ವಿಕಾಸವಾಗಿದೆಯೇ? ಸಮತೋಲನದ ಮುನ್ನಡೆ ಸಾಧ್ಯವಾಗಿದೆಯೇ ಎಂದು ನಮ್ಮನ್ನು ನಾವು ಕೇಳಿಕೊಂಡಾಗ, ‘ಆಗಿಲ್ಲ’ ಎಂಬ ಉತ್ತರ ಯಾರಿಂದಲಾದರೂ ಸಿಕ್ಕಬಹುದು.

ವಜ್ರ ವೈಢೂರ್ಯ, ಮುತ್ತು ರತ್ನ ಮತ್ತು ಬಂಗಾರದ ನಾಣ್ಯಗಳನ್ನು ಜೀರ್ಣವಾದ ವಸ್ತ್ರದಲ್ಲಿ ಕಟ್ಟಿ ಸುರಕ್ಷಿತವಾಗಿ ಇಡಲು ಹೇಗೆ ಸಾಧ್ಯವಿಲ್ಲವೋ ಹಾಗೇ ಅಶಕ್ತವಾದ ದೇಹವೆಂಬ ದೇಗುಲದಲ್ಲಿ ಜ್ಞಾನದ ದೇವರ ಸ್ಥಾಪನೆಯಾಗಲಾರದು! ಆರೋಗ್ಯವಂತ, ಸಶಕ್ತ ದೇಹದಲ್ಲಿ ಮಾತ್ರ ಲೋಕಜ್ಞಾನ, ಪುಸ್ತಕೀಯ ಜ್ಞಾನ ದೃಢವಾಗಿ ನಿಲ್ಲಬಲ್ಲವು. ಭಾರತೀಯ ಶಿಕ್ಷಣ ನೀತಿಯಲ್ಲಿ ಜ್ಞಾನ ದಾನಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಬೆಳಿಗ್ಗೆಯಿಂದ ಸಂಜೆಯವರೆಗೂ ಪಾಠ ಪ್ರವಚನಗಳಿಗೆ ಕೊಡುವ ಸಮಯದಲ್ಲಿ ವ್ಯಾಯಾಮಕ್ಕೂ ಯೋಗ್ಯವಾದ ಸಮಯ ಕೊಡುತ್ತಿಲ್ಲ ಎಂಬುದು ಅತ್ಯಂತ ವಿಷಾದನೀಯ ಸಂಗತಿ.

ಪ್ರಾಥಮಿಕ ಶಾಲೆಗಳಲ್ಲಿ ವಾರದ ಒಂದು ದಿನ ಒಂದು ಗಂಟೆ ಪಿ.ಟಿಗೆ ಮೀಸಲಾಗಿದ್ದರೆ, ಮಾಧ್ಯಮಿಕ, ಪದವಿ ಮತ್ತು ಸ್ನಾತಕೋತ್ತರ ಹಂತಗಳಲ್ಲಿ ವರ್ಷಕ್ಕೊಮ್ಮೆ ಬರುವ ವಾರ್ಷಿಕ ಕ್ರೀಡಾಕೂಟಗಳ ವ್ಯವಸ್ಥೆಯ ಮಟ್ಟಿಗೆ ಕ್ರೀಡೆಗಳತ್ತ ಗಮನ ಹರಿಸಲಾಗುತ್ತದೆ. ಎಷ್ಟೋ ಶಾಲೆಗಳಲ್ಲಿ ಆಟದ ಮೈದಾನಗಳೇ ಇಲ್ಲ. ಕ್ರೀಡಾಸಕ್ತರಿಗೆ, ಭರವಸೆಯ ಕ್ರೀಡಾಪಟುಗಳಿಗೆ ನಿಯಮಬದ್ಧ ತರಬೇತಿಗಳು ಸಿಗುತ್ತಿಲ್ಲ. ಕ್ರೀಡೆಗಳಿಗಾಗಿ ವಿದ್ಯಾಲಯದ ವೇಳಾಪಟ್ಟಿಗಳಲ್ಲಿ ಸಮಯವನ್ನು ಮೀಸಲಾಗಿಟ್ಟಿಲ್ಲ, ದೈಹಿಕ ಶಿಕ್ಷಣ ನಿರ್ದೇಶಕರನ್ನು ನೇಮಕ ಮಾಡುವುದು ಬಹಳ ಕಡಿಮೆ. ಇದ್ದರೂ ಕೇವಲ ವಾರ್ಷಿಕ ಕ್ರೀಡಾಕೂಟದ ಸಮಯಕ್ಕಾಗಿ ನಾಲ್ಕಾರು ದಿನ ಪ್ರ್ಯಾಕ್ಟೀಸ್ ನೀಡುವುದಕ್ಕಾಗಿ ಅಷ್ಟೇ ಎಂಬಂತೆ ಇರುತ್ತದೆ.

ಮನೆಯಲ್ಲಿ ಮಕ್ಕಳನ್ನು ಅಪ್ಪ, ಅಮ್ಮ ಆಟಕ್ಕೆ ಬಿಡದೆ ದಿನ ಪೂರ್ತಿ ಓದಬೇಕೆಂಬ ಒತ್ತಾಯವನ್ನು ಹೇರುತ್ತಾರೆ. ನಮ್ಮ ಪರಿವಾರಗಳಲ್ಲಾಗಲಿ, ಸಾಮಾಜಿಕ ಪರಿಸರದಲ್ಲಾಗಲಿ ಕ್ರೀಡೆಗಳ ಮೂಲಕ ಮಕ್ಕಳನ್ನು ಆರೋಗ್ಯವಂತರನ್ನಾಗಿ, ಶಕ್ತಿವಂತರನ್ನಾಗಿ ಬೆಳೆಸಿದರೆ ಅವರು ಭವಿಷ್ಯದಲ್ಲಿ ಹೆಚ್ಚಿನ ಲವಲವಿಕೆಯಿಂದ, ಏಕಾಗ್ರತೆಯಿಂದ, ಆಸಕ್ತಿಯಿಂದ ತಮ್ಮ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳಬಹುದು ಅಲ್ಲವೇ?

ಇಂದು ಕ್ರೀಡಾಪಟುಗಳಿಗೆ ಸಮಾಜದಲ್ಲಿ ಉನ್ನತ ಸ್ಥಾನಮಾನವಿದೆ. ಆರ್ಥಿಕ ಭರವಸೆಗಳೂ ಹರಿದು ಬರುತ್ತಿವೆ. ಕ್ರೀಡೆಯನ್ನು ತಮ್ಮ ಉಪಜೀವನದ ಮಾರ್ಗವನ್ನಾಗಿ ಆಯ್ಕೆ ಮಾಡಿಕೊಂಡ ಅನೇಕ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ.

ಸ್ಪರ್ಧೆಗಳಿಗಾಗಿ ಅಷ್ಟೇ ಅಲ್ಲ ನಮ್ಮ ಮಕ್ಕಳಿಗೆ, ಯುವಜನರಿಗೆ ಅವರ ವ್ಯಾಸಂಗದ ಜೊತೆ ಜೊತೆಗೆ ಸದೃಢ ದೇಹ ಕಟ್ಟಿಕೊಡಲು ಆಟ, ಪಾಠ, ಯೋಗಾಸನ, ಕರಾಟೆ, ಒಳಾಂಗಣ, ಹೊರಾಂಗಣ ಕ್ರೀಡೆಗಳಿಗಾಗಿ ನಿಯಮಿತ ಸಮಯ ನೀಡಬೇಕಾದುದು ಅಪೇಕ್ಷಣೀಯ. ನಾಲ್ಕು ಗಂಟೆ ಕಲಿಕೆಯ ನಂತರ ಎರಡು ಗಂಟೆ ವಿವಿಧ ಆಟಗಳಲ್ಲಿ ತರಬೇತಿ ಕೊಡಬಹುದು. ಬೆಳೆಯುವ ಸಸಿಗೆ ಸೂರ್ಯನ ಬಿಸಿಲಷ್ಟೇ ಸಾಕಾಗದು, ಮೇಲೆ ನೀರನ್ನು ಎರೆಯುವಂತೆ ಕ್ರೀಡೆಗಳೂ ನಮ್ಮ ಶಿಕ್ಷಣ ಸಂಹಿತೆಯಲ್ಲಿ ಸೇರಿಕೊಳ್ಳಬೇಕಾದುದು ಈ ಸಮಯದ ಬೇಡಿಕೆ ಎಂದೆನಿಸುತ್ತದೆ.

ದೇಶದಲ್ಲಿ ಕ್ರೀಡಾಸಕ್ತರಾಗಿರುವ ಎಷ್ಟೋ ಮಕ್ಕಳಿದ್ದಾರೆ, ಯುವಜನರಿದ್ದಾರೆ. ಎಲ್ಲರೂ ವೈಯಕ್ತಿಕವಾಗಿ ತರಬೇತಿ ಪಡೆಯುವುದಕ್ಕಾಗಿ ಹಣ ಸುರಿದು ಕ್ರೀಡಾ ಪರಿಣತರನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲ. ಅನೇಕ ಕ್ರೀಡಾಕಾಂಕ್ಷಿಗಳಿಗೆ ನಿಯಮಿತ ತರಬೇತಿ ಇಲ್ಲ. ಕ್ರೀಡೆಯನ್ನು ತಮ್ಮ ಧ್ಯೇಯವನ್ನಾಗಿ ರೂಪಿಸಿಕೊಳ್ಳಬೇಕೆಂದು ಕನಸು ಕಾಣುತ್ತಿರುವ ಯುವಕ, ಯುವತಿಯರು ಇರುವುದರಿಂದ ಪ್ರತ್ಯೇಕವಾಗಿ ಕ್ರೀಡಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕಾದ ಅನಿವಾರ್ಯ ಇದೆ. ಶಾಲೆ, ಕಾಲೇಜುಗಳಲ್ಲಿ ಇರುವಂತೆ ಇಲ್ಲಿಯೂ ಅಧ್ಯಯನಕ್ಕಾಗಿ ಪಠ್ಯಕ್ರಮಗಳಿದ್ದು, ಪರೀಕ್ಷೆಗಳೂ ರೂಪುಗೊಂಡು ಹೊಸ ಸ್ವರೂಪದ ಕ್ರೀಡಾ ವಿದ್ಯಾಲಯಗಳ ನಿರ್ಮಾಣವಾಗಬೇಕಿದೆ. ಪದವಿಪೂರ್ವ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳಿಗೆ ಮೂರು ವರ್ಷಗಳ ಕ್ರೀಡಾ ಪದವಿಯ ಕೋರ್ಸ್‌ಗಾಗಿ ಕ್ರೀಡಾ ಅಧ್ಯಯನ ಮತ್ತು ತರಬೇತಿ ನೀಡುವಂಥ ವಿದ್ಯಾಲಯಗಳ ಅಗತ್ಯವಿದೆ.

ಅಂಗವಿಕಲ ಕ್ರೀಡಾಪಟುಗಳಿಗೆ ಕ್ರೀಡಾಶಾಲೆಗಳಲ್ಲಿ ಕೆಲವು ಸೌಲಭ್ಯಗಳನ್ನು ನೀಡಿ ಆಮಂತ್ರಿಸಬಹುದು. ಇವರಿಗಾಗಿ ಒಂದು ವಿಶೇಷವಾದ ವಿಭಾಗವನ್ನು ತೆರೆದು ಪರಿಣತ ಶಿಕ್ಷಕರಿಂದ ತರಬೇತಿ ನೀಡುವ ಮೂಲಕ ಅವರ ಬಾಳಿನಲ್ಲಿ ಬೆಳಕು ತೋರಿದಂತಾದೀತು.

ದೇಶದ ಯಾವ ರಾಜ್ಯದಲ್ಲಿಯೇ ಇರಲಿ ಯೋಗ್ಯವಾದ ನಾಲ್ಕು ಜಿಲ್ಲೆಗಳಲ್ಲಿ ಕನಿಷ್ಠಪಕ್ಷ ನಾಲ್ಕು ಗುಣಮಟ್ಟದ ಸುಸಜ್ಜಿತ ವಿದ್ಯಾಲಯಗಳು ಸ್ಥಾಪನೆಯಾದಾಗ ಮಾತ್ರ ಆಧುನಿಕ ಜಗತ್ತಿನ ಪ್ರಗತಿಯ ಓಟದಲ್ಲಿ ನಮ್ಮ ದೇಶವೂ ಸೇರಿಕೊಳ್ಳಬಲ್ಲದೆಂಬ ಭರವಸೆ ನಮ್ಮಲ್ಲಿ ಮೂಡಲು ಸಾಧ್ಯ.

ವಾಚಕರ ವಾಣಿ

ಹಬ್ಬದ ಆಚರಣೆ: ಪ್ರಕೃತಿಸ್ನೇಹಿ ಆಗಿರಲಿ

ಪ್ರತಿಬಾರಿ ಹಬ್ಬಗಳನ್ನು ವೈಭವದಿಂದ ಆಚರಿಸುತ್ತ, ಟನ್‌ಗಟ್ಟಲೆ ತ್ಯಾಜ್ಯ ಉತ್ಪಾದಿಸುತ್ತಿದ್ದೇವೆ. ಇದರಿಂದ ಹಬ್ಬಗಳು ಪ್ರಕೃತಿಗೆ ಮಾರಕವಾಗಿ ಪರಿಣಮಿಸುತ್ತಿವೆ. ಇದರ ಪರಿಣಾಮವನ್ನು ಒಂದಲ್ಲ ಒಂದು ದಿನ ನಾವೇ ಎದುರಿಸಬೇಕಾಗುತ್ತದೆ. ಹೀಗಾಗಿ, ಪರಿಸರಕ್ಕೆ ಹಿತವಾಗುವಂತೆ ಹಬ್ಬಗಳನ್ನು ಶ್ರದ್ಧೆ, ಭಕ್ತಿ, ಸಂಪ್ರದಾಯಬದ್ಧವಾಗಿ ಸರಳವಾಗಿ ಆಚರಿಸಬೇಕು. ರಾಸಾಯನಿಕಮುಕ್ತ ಗೌರಿ ಗಣೇಶ ಮೂರ್ತಿಗಳನ್ನು ಬಳಸಿ ಮಾಲಿನ್ಯ ತಡೆಗೆ ಮುಂದಾಗಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ಬೇಕಾಗಿದೆ ‘ಭಾರತೀಯ ಭಾಷೆ’ಗಳ ದಿನ

ಕೇಂದ್ರ ಸರ್ಕಾರವು ಪ್ರತಿವರ್ಷ ಸೆ. 14ರಂದು ಹಿಂದಿ ದಿವಸವನ್ನು ದೇಶದಾದ್ಯಂತ ಆಚರಿಸುತ್ತಾ ಬಂದಿದೆ. ಹಲವು ಭಾಷೆಗಳ ಭಾರತದಲ್ಲಿ ಆಚರಿಸಬೇಕಾಗಿರುವುದು ಭಾರತೀಯ ಭಾಷೆಗಳ ದಿವಸವೇ ಹೊರತು ಹಿಂದಿ ದಿವಸವಲ್ಲ. ನಮಗೆ ಸ್ವಾತಂತ್ರ್ಯ ಬಂದ ನಂತರ ದಶಕದಿಂದ ದಶಕಕ್ಕೆ ಹಿಂದಿ ಹೇರಿಕೆಯ ಬಿಗಿಪಟ್ಟು ಹೆಚ್ಚುತ್ತಾ ಹೋಗುತ್ತಿದೆ. ಇದರಲ್ಲಿ ಎಲ್ಲಾ ಪಕ್ಷಗಳ ಕೊಡುಗೆಯೂ ಇದೆ.

ಇದೇ ಅಕ್ಟೋಬರ್ 10ರಂದು ದೇಶದಾದ್ಯಂತ ನಾಗರಿಕ ಸೇವಾ (ಯುಪಿಎಸ್‌ಸಿ) ಪೂರ್ವಭಾವಿ ಪರೀಕ್ಷೆ ನಡೆಯುತ್ತಿದೆ. ಇಂಗ್ಲಿಷ್ ಜೊತೆಗೆ ಹಿಂದಿ ಮಾಧ್ಯಮದಲ್ಲಿ ಮಾತ್ರ ಇದು ಇರುತ್ತದೆ. ಹಿಂದಿ ಭಾಷಿಕರಿಗೆ ಅವರ ನುಡಿಯಲ್ಲಿಯೇ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟು ಉಳಿದ ಭಾಷಿಕರಿಗೆ ಬೆನ್ನು ತಿರುಗಿಸುವುದನ್ನು ಹೇಗೆ ಸ್ಪರ್ಧಾತ್ಮಕ ಪರೀಕ್ಷೆ ಎಂದು ಕರೆಯಲು ಸಾಧ್ಯ? ಇದು ಭಾಷಾವಾರು ಒಕ್ಕೂಟ ಧರ್ಮದ ಸ್ಪಷ್ಟ ಉಲ್ಲಂಘನೆಯಾಗಿದೆ. ಈ ಪರೀಕ್ಷೆಯು ಅತ್ಯಂತ ಸಹಜವಾಗಿ, ಸಂವಿಧಾನಾತ್ಮಕವಾಗಿ ಕನ್ನಡವೂ ಸೇರಿದಂತೆ ಉಳಿದ ಭಾರತೀಯ ಭಾಷೆಗಳಲ್ಲಿಯೂ ಸಿಗಬೇಕು.

ಗಿರೀಶ್ ಮತ್ತೇರ, ಯರಗಟ್ಟಿಹಳ್ಳಿ, ಚನ್ನಗಿರಿ

ಮಂಗಳನ ಅಂಗಳ: ಮಾಫಿಯಾಗೆ ಬೇಡ ಅವಕಾಶ!

ನಾಸಾದ ರೋವರ್ ನೌಕೆಯು ಮಂಗಳ ಗ್ರಹದ ನೆಲದಲ್ಲಿ ಬಂಡೆಕಲ್ಲನ್ನು ಕೊರೆದು ಅದರ ಮಾದರಿಯನ್ನು ಸಂಗ್ರಹಿಸಿರುವುದು ಶ್ಲಾಘನೀಯ. ಅನ್ಯಗ್ರಹದ ಈ ಸುದ್ದಿ ಮುಂದುವರಿದ ವಿಜ್ಞಾನ- ತಾಂತ್ರಿಕತೆಗೆ ಸಾಕ್ಷಿ. ಇನ್ನು ಭವಿಷ್ಯದಲ್ಲಿ ನಮ್ಮ ಭೂಕಲ್ಲು ಮಾಫಿಯಾಗಳಿಗೆ ಅಲ್ಲಿ ಬಂಡೆ ಒಡೆಯಲು ಅನುಮತಿ ನೀಡದಿರಲಿ! ವಾಸ್ತುಶಾಸ್ತ್ರಜ್ಞರು ಭೂಮಿಯ ಯಾವುದೇ ಕಟ್ಟಡದ ಕೆಲಸಕ್ಕೆ ಮಂಗಳ ಗ್ರಹದ ಒಂದು ಚಿಕ್ಕ ಅಡಿಗಲ್ಲು ಶ್ರೇಷ್ಠ ಅನ್ನದಿದ್ದರೆ ಸಾಕು!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಹೃದಯಹೀನರಿಗೆ ತಕ್ಕಶಾಸ್ತಿ ಆಗಬೇಕಿದೆ

ಭದ್ರಾವತಿ ತಾಲ್ಲೂಕಿನ ಕಂದಾಳ್– ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸೆರೆಹಿಡಿದ ನೂರಾರು ನಾಯಿಗಳನ್ನು ಅರಣ್ಯದಲ್ಲಿ ಸಜೀವ ಸಮಾಧಿ ಮಾಡಿರುವ ಸುದ್ದಿ (ಪ್ರ.ವಾ., ಸೆ. 9) ಓದಿ ಬಹಳ ಬೇಸರವಾಯಿತು. ಈಗ್ಗೆ ಎರಡು ದಿನಗಳ ಹಿಂದೆ ನನ್ನ ಕಾಲಿಗೆ ನಾಯಿ ಕಡಿದು ಚುಚ್ಚುಮದ್ದು ಪಡೆಯುತ್ತಿರುವ ನನಗೇ ಈ ವಿಷಯ ತಿಳಿದು ಹೇಳಲಸದಳವಾದ ವ್ಯಥೆ ಆಗಿದೆ. ಪಾಪ, ಮೂಕಪ್ರಾಣಿಗಳು ಅರಿಯದೆ ಮಾಡಿದ ತಪ್ಪಿಗೆ ಅವುಗಳನ್ನು ಹೀಗೆ ಕೊಂದು ಹಾಕುವುದು ಸರಿಯಲ್ಲ.

ನಾಯಿಗಳನ್ನು ಹಿಡಿದು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ನಡೆಸುವುದು ಬಿಟ್ಟು ಜೀವಂತ ಸಮಾಧಿ ಮಾಡಲು ಆ ಪ್ರಾಣಿ ಹಂತಕರಿಗೆ ಮನಸ್ಸಾದರೂ ಹೇಗೆ ಬಂತು? ಅಂತಹ ಹೃದಯಹೀನರಿಗೆ ತಕ್ಕಶಾಸ್ತಿಯೇ ಆಗಬೇಕು ಹಾಗೂ ಅಂತಹ ಕಿರಾತಕರಿಗೆ ಸಾಧ್ಯವಾದಷ್ಟೂ ಒಳ್ಳೆಯ ಅರಿವು ಉಂಟುಮಾಡಿಸಲು ಪ್ರಯತ್ನಿಸಬೇಕು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಅನಾಮಧೇಯ ಆದಾಯ ಅಕ್ರಮ ಸಂಪಾದನೆಯಲ್ಲವೇ?

‘ರಾಜಕೀಯ ಪಕ್ಷಗಳ ಆದಾಯ ಅನಾಮಧೇಯ’ ಸುದ್ದಿ (ಪ್ರ.ವಾ., ಸೆ. 7) ಓದಿ ಆಘಾತವಾಯಿತು. ರಾಜಕೀಯ ಪಕ್ಷಗಳು ಯಾವ ಘನ ಸಾಧನೆಗಾಗಿ ಸಾವಿರಾರು ಕೋಟಿ ರೂಪಾಯಿ ದೇಣಿಗೆ ಸಂಗ್ರಹಿಸುತ್ತವೆ? ನೂರಾರು ಕೋಟಿ ದೇಣಿಗೆ ನೀಡುವವರು ಯಾರ ಹಿತಕ್ಕಾಗಿ ನೀಡುತ್ತಾರೆ? ಜನಸಾಮಾನ್ಯರಂತೂ ಹೀಗೆ ಕೊಡುವುದು ಸಾಧ್ಯವಿಲ್ಲ. ಉದ್ದಿಮೆದಾರರು ಒಳ ಹಿತಾಸಕ್ತಿ ಇಲ್ಲದೆ ತಾವೂ ಕೊಡಲಾರರು. ಹೀಗೆ ಕೊಡುವವರು ಸರ್ಕಾರದಿಂದ ಪಡೆಯುವ ಪ್ರತಿಫಲ ಯಾವ ಬಗೆಯದು? ಈ ಕ್ರಿಯೆ ಅನಧಿಕೃತ ಅಕ್ರಮಗಳಿಗೆ ಎಡೆ ಮಾಡಿಕೊಟ್ಟಿಲ್ಲ ಎಂಬುದಕ್ಕೆ ವಿವರಣೆ ಎಲ್ಲಿದೆ? ಚುನಾವಣಾ ಅಕ್ರಮಗಳಿಗೂ ಈ ದೇಣಿಗೆ ಬಳಕೆಯಾಗದಿರದೇ? ಕಪ್ಪುಹಣವನ್ನು ಬಿಳಿಯದಾಗಿಸಿಕೊಳ್ಳುವ ತಂತ್ರವೂ ಇಲ್ಲಿ ಇರಲಾರದೇ?

ನೋಟು ರದ್ದತಿಯ ಸಂದರ್ಭದಲ್ಲಿ ಅನೇಕರ ಅಕ್ರಮ ಸಂಪತ್ತು ದೇಣಿಗೆಯಾಗಿ ಆಡಳಿತ ಪಕ್ಷದ ಬೊಕ್ಕಸಕ್ಕೆ ಹರಿದಿದ್ದರೆ ಅಚ್ಚರಿ ಏನಿರಲಾರದಲ್ಲವೇ? ಈ ದೇಣಿಗೆಯ ಮೂಲವನ್ನು ಬಹಿರಂಗಪಡಿಸುವ ಅಗತ್ಯವಿಲ್ಲ ಎಂಬ ಕಾನೂನು ಮಾನ್ಯವೇ? ಇದು ಮತ್ತಷ್ಟು ಅಪವಿತ್ರ ಕಾರ್ಯಗಳಿಗೆ ಕುಮ್ಮಕ್ಕು ಕೊಡುತ್ತದೆಯಲ್ಲವೇ? ಯಾರಾದರೂ ವ್ಯಕ್ತಿಗಳು ಪಕ್ಷದ ಹೆಸರಲ್ಲಿ ಹೀಗೆ ಸಂಗ್ರಹವಾದ ದೇಣಿಗೆಯನ್ನು ಸಮಾಜವಿದ್ರೋಹಿ ಕೆಲಸಗಳಿಗೆ ಬಳಸದಿರಲಾರರೇ? ದೇಶದ ಯಾವುದೇ ವ್ಯಕ್ತಿ ತನ್ನ ಆದಾಯಕ್ಕೆ ತಕ್ಕ ತೆರಿಗೆಯನ್ನು ಸರ್ಕಾರಕ್ಕೆ ಸಲ್ಲಿಸುವುದು ಕಡ್ಡಾಯ. ಸಂದರ್ಭ ಬಂದಾಗ ಆದಾಯದ ಮೂಲವನ್ನು ಖಚಿತವಾಗಿ ಬಹಿರಂಗಪಡಿಸದಿದ್ದರೆ ಅದು ಅಕ್ರಮ ಸಂಪಾದನೆ ಎಂದಾಗುತ್ತದೆ ಹಾಗೂ ಜೈಲು ಶಿಕ್ಷೆಯೂ ಆಗುತ್ತದೆ. ಜನಸಾಮಾನ್ಯರಿಗೆ ಇಂಥ ಕಾನೂನು ಮಾಡುವ ಪಕ್ಷಗಳು ತಾವೂ ನ್ಯಾಯಯುತವಾಗಿ ಬದುಕಬೇಕಲ್ಲವೇ? ವಿದೇಶದಲ್ಲಿನ ಕಪ್ಪುಹಣದ ಬಗ್ಗೆ ಮಾತಾಡುವವರು ತಮ್ಮಲ್ಲೇ ರಾಶಿ ಬಿದ್ದ ಅಕ್ರಮ ಸಂಪಾದನೆಯ ಬಗ್ಗೆ ಉಸಿರೆತ್ತದಿರುವುದು ಸಮಾಜ ವಿರೋಧಿಯಾಗದೇ?

ಕೊಳಕು ತೊಳೆಯುವ ಪೊರಕೆ ಮೊದಲು ತಾನು ಸ್ವಚ್ಛವಾಗಿರಬೇಕು. ಪ್ರಜ್ಞಾವಂತರು ಈ ಸ್ವಚ್ಛತೆಗೆ ಇನ್ನಾದರೂ ಮುಂದಾಗಬೇಕು. ಘನ ನ್ಯಾಯಾಲಯಗಳು ಇದನ್ನೇ ಸಾರ್ವಜನಿಕ ಹಿತಾಸಕ್ತಿಯ ಪ್ರಶ್ನೆ ಎಂದು ಮಾನ್ಯ ಮಾಡಿ ಕೂಡಲೇ ಸರ್ಕಾರಕ್ಕೆ ನೋಟಿಸ್ ನೀಡುವಂತಾದರೆ ಹೆಚ್ಚು ಸುಧಾರಣೆಯಾದೀತು.

ಡಾ. ಟಿ.ಗೋವಿಂದರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೆನಕ ಮೊಗೆದಷ್ಟೂ ಮುಗಿಯದ ದೇವ

ಪರಶಿವನ ಆದರ್ಶ ಸಂಸಾರದಲ್ಲಿನ ಅಮ್ಮ ಮತ್ತು ಮಗನನ್ನು ಒಟ್ಟಿಗೆ ಕರೆದು ಆಧರಿಸಿ ಉಪಚರಿಸಿ ಕಳುಹಿಸಿಕೊಡುವ ಹಬ್ಬ ಗಣೇಶಚತುರ್ಥೀ. ಆದಿಪೂಜಿತ ಗಣೇಶನಿಗೆ ಅವನ ಗುಣ ಮತ್ತು ರೂಪವನ್ನಾಧರಿಸಿ ಸಾವಿರಾರು ಹೆಸರುಗಳು. ಕಾರ್ಯಕಲಾಪಗಳಲ್ಲಿ ಒದಗುವ ವಿಘ್ನವನ್ನು ದೂರಮಾಡುವ ಗಣೇಶನು ಕಲಾಭಿಮಾನಿ ದೇವತೆಯೂ ಹೌದು, ಕಲಾತ್ಮಕನಾದ ದೇವನೂ ಹೌದು

• ನವೀನ ಗಂಗೋತ್ರಿ

ಭಾರತೀಯ ಹಬ್ಬಗಳೆಲ್ಲವಕ್ಕೂ ಒಂದೊಂದು ಅಧಿದೇವತೆ ಯಿದ್ದಾರಷ್ಟೆ. ಹಬ್ಬಕ್ಕೊಂದು ದೇವತೆ, ಆ ದೇವತೆಯ ಹಿನ್ನೆಲೆಗೆ ಕಥೆಗಳು, ಅದರ ಸುತ್ತ ಹಬ್ಬಿಕೊಂಡ ಆಚರಣೆಗಳು; ಆಯಾ ಋತುವಿನಲ್ಲಿ ಬರುವ ಹಬ್ಬಕ್ಕಾಗಿ ಮತ್ತು ಆ ಹಬ್ಬದ ದೇವತೆಗಾಗಿ ಸಿದ್ಧವಾಗುವ ನಾನಾ ವಿಧದ ದೇಸೀ ಪಾಕ – ಹೀಗೆ ಹಬ್ಬಗಳೆಂದರೆ ಭಾರತೀಯ ಬದುಕಿನ ಚತುರ್ವಿಧ ಪುರುಷಾರ್ಥವನ್ನೂ ಸೋಕುವಂಥ ನಲ್ಮೆಯ ಕಾಲಭಾಗ. ಹಾಗೇ ಆಯಾ ಹಬ್ಬಗಳ ಅಂತಸ್ಸತ್ತ್ವವಾಗಿರುವ ದೇವತೆಗಳಾದರೂ ಮಾನವಜೀವನದ ವಿವಿಧ ಮಜಲುಗಳನ್ನು ಪ್ರತಿನಿಧಿಸುವಂಥವು. ಮನೆಮನೆಯಲ್ಲಾಡುವ ಪುಟ್ಟ ತುಂಟ ಮಗುವು ತರಬಲ್ಲ ಆನಂದವನ್ನು ತರುವುದು ಕೃಷ್ಣಜನ್ಮಾಷ್ಟಮಿಯ ಹಬ್ಬವಾದರೆ, ಪೊರೆಯುವೊಂದು ಮಾತೃಶಕ್ತಿಯ ಭಾವವನ್ನು ತುಂಬುವಂಥದು ನವರಾತ್ರಿ. ಅದೇ ರೀತಿ ಪರಶಿವನ ಆದರ್ಶ ಸಂಸಾರದಲ್ಲಿನ ಅಮ್ಮ ಮತ್ತು ಮಗನನ್ನು ಒಟ್ಟಿಗೆ ಕರೆದು ಆದರಿಸಿ ಉಪಚರಿಸಿ ಕಳುಹಿಸಿಕೊಡುವ ಹಬ್ಬ ಗಣೇಶ ಚತುರ್ಥಿ. ಕೃಷ್ಣಾಷ್ಟಮಿಯಲ್ಲಿ ಕೃಷ್ಣನೆಡೆಗೆ ಇರುವ ಭಾವಕ್ಕೂ ಗಣೇಶ ಚತುರ್ಥಿಯಲ್ಲಿ ಗಣಪನ ಕುರಿತಾಗಿರುವ ಭಾವಕ್ಕೂ ವ್ಯತ್ಯಾಸವಿದೆ. ದೇವತೆಯಿಂದ ದೇವತೆಗೆ ಬದಲಾಗುವ ಭಾರತೀಯ ಭಾವಸಂಚಾರಕ್ಕಿದು ಉದಾಹರಣೆ.

ಹಬ್ಬ ಅಥವಾ ಪೂಜೆ, ಯಜ್ಞ, ಕ್ರತು, ಸತ್ರ ಯಾವುದೇ ದೇವತೆಯದಾಗಿದ್ದರೂ ಅದರ ಆದಿಯಲ್ಲಿ ಪೂಜೆ ಸಲ್ಲುವುದು ಮಾತ್ರ ವಿಘ್ನನಿವಾರಕ ಗಣೇಶನಿಗೆ. ಹಾಗೆ ಪೂಜಿತನಾಗುವ ಗಣೇಶನಿಗೆ ಅವನ ಗುಣ ಮತ್ತು ರೂಪವನ್ನಾಧರಿಸಿ ಸಾವಿರಾರು ಹೆಸರುಗಳು. ಕಾರ್ಯಕಲಾಪಗಳಲ್ಲಿ ಒದಗುವ ವಿಘ್ನವನ್ನು ದೂರಮಾಡುವ ಗಣೇಶನು ಕಲಾಭಿಮಾನಿ ದೇವತೆಯೂ ಹೌದು, ಕಲಾತ್ಮಕನಾದ ದೇವನೂ ಹೌದು. ವಸ್ತುತಃ ಭಾರತೀಯವಾದ ಅನೇಕ ಕಲೆಗಳಿಗೆ, ಅದರಲ್ಲೂ ನೃತ್ಯಾದಿ ರಂಗಕಲೆಗೆ ಶಿವನು ಅಧಿಷ್ಠಾತೃ ದೇವತೆ. ಆದರೆ ಚಿತ್ರವೇ ಮೊದಲಾದ ರೇಖಾಪ್ರಧಾನ ಕಲೆಯ ವಿಚಾರ ಬಂದಾಗ ಆ ಕಲೆಗೆ ಅತ್ಯಂತ ಸಹಜವಾಗಿ ಒದಗಿಬರುವ ದೇವತಾವಸ್ತುವೆಂದರೆ ಶಿವನ ಮಗನಾದ ಗಣೇಶನೇ. ಎಷ್ಟೆಷ್ಟು ಬಗೆಯಲ್ಲಿ ಚಿತ್ರಿಸಿ ತೋರಿಸಿದ ಬಳಿಕವೂ ಮತ್ತೆ ಮತ್ತೆ ಹೊಸ ಅವತಾರಗಳಲ್ಲಿ ಕಲಾವಿದನ ಕಲ್ಪನೆಗೆ ಒದಗುವ, ಮೊಗೆದಷ್ಟೂ ಮುಗಿಯದ ಕಲಾವಂತಿಕೆಯ ದೇವನಿವ. ಇದೆಲ್ಲದರ ಜೊತೆಗೆ ಗಣಪತಿಗೆ ಒದಗುವಷ್ಟು ವಿಸ್ತೃತವಾದ ಸಿಹಿತಿನಿಸು ಹಾಗೂ ಇನ್ನಿತರ ಖಾದ್ಯಪದಾರ್ಥಗಳ ನೈವೇದ್ಯ ಬಹುಶಃ ಭಾರತದ ಇನ್ನಾವ ದೇವತೆಗೂ ಒದಗಲಾರದು. ದಕ್ಷಿಣ ಭಾರತದಲ್ಲಂತೂ ಭೋಜನಪ್ರಿಯವಾದ ದೇವತೆಯೆಂದರೆ ಲಂಬೋದರನೇ.

ಕಲಾಪ್ರಸ್ತುತಿಯ ಸಂದರ್ಭವನ್ನು ನೋಡುವುದಾದರೆ ಭಾರತೀಯವಾದ ಎಲ್ಲ ಶಾಸ್ತ್ರೀಯ ಕಲಾಪ್ರಸ್ತುತಿಗಳೂ ಆರಂಭವಾಗುವುದು ಗಣೇಶವಂದನೆಯೊಂದಿಗೆ. ಯಕ್ಷಗಾನದಂಥ ದೇಸೀ ಶಾಸ್ತ್ರೀಯ ಕಲೆಯಿಂದ ಹಿಡಿದು ಉತ್ತರಾದಿ-ದಕ್ಷಿಣಾದಿ ಸಂಗೀತದಷ್ಟು ಭಾರತವ್ಯಾಪಿಯಾದ ಕಲೆಯವರೆಗೂ ಗಣಪನಿಗೊಂದು ಆದಿಪೂಜೆಯೋ ನುಡಿನಮನವೋ ಇದ್ದೇ ಇದೆ. ವಿಶೇಷವೆಂದರೆ ಈ ಎಲ್ಲ ಕಲೆಗಳಿಗೂ ಆಯಾ ಕಲೆಯ ಜಾಡಿನಲ್ಲಿಯೇ ಗಣಪನು ನಿರ್ವಿಘ್ನ ದೇವತೆಯಾಗಿ ಒದಗುತ್ತಾನೆ ಎನ್ನುವುದು.

ಅದಷ್ಟಲ್ಲದೆ ಗಣಪತಿಯಷ್ಟು ಸಲೀಸಾಗಿ ಬೇರೆ ಬೇರೆ ಸಂದರ್ಭಗಳಿಗೆ, ವರ್ತಮಾನದ ಸ್ಥಿತಿಗತಿಗಳಿಗೆ, ಭಿನ್ನ ಭಿನ್ನ ಕಲಾಪ್ರಕಾರಗಳಿಗೆ ಒದಗಿಬರಬಲ್ಲ ಇನ್ನೊಬ್ಬ ದೇವನಿಲ್ಲ. ನೃತ್ಯಗಣಪತಿ ಎಂಬ ಹೆಸರಿನಲ್ಲಿ ನರ್ತಿಸುತ್ತಿರುವಂತೆಯೂ, ವಾದ್ಯಗಣಪತಿ ಎಂಬ ಹೆಸರಿನಲ್ಲಿ ಹಲವಾರು ವಾದ್ಯಗಳನ್ನು ನುಡಿಸುತ್ತಿರುವಂತೆಯೂ, ಗಾನಗಣಪತಿ ಎಂಬ ಹೆಸರಲ್ಲಿ ಹಾಡುತ್ತಿರುವಂತೆಯೂ, ವಿದ್ಯಾಗಣಪತಿ ಎಂದು ವಿದ್ಯಾದಾಯಕನನ್ನಾಗಿಯೂ ಇನ್ನಾವ ದೇವರನ್ನಾಗಲೀ ಕಲಾವಿದರು ಚಿತ್ರಿಸಿದ್ದಿಲ್ಲ. ಪಾರಂಪರಿಕವಾಗಿ ತೋರುವ ಈ ರೂಪಗಳಷ್ಟೇ ಅಲ್ಲದೆ ನಾವು ಬದುಕುತ್ತಿರುವ ಕಾಲದ ವಿದ್ಯಮಾನಗಳಲ್ಲಿಯೂ ಒಳಿತಿನ ಪ್ರತಿನಿಧಿಯಾಗಿ ಗಣಪನಿಗೆ ಸ್ಥಾನವಿದೆ. ಸಾರ್ವಜನಿಕ ಗಣೇಶೋತ್ಸವಗಳಲ್ಲಿ ಪ್ರತಿವರ್ಷವೂ ಗಣಪತಿಯು ಧರಿಸುವ ನಾನಾ ವಿಧದ ರೂಪಗಳನ್ನು ನೋಡುವಾಗ ಇದು ಸ್ಪಷ್ಟವಾಗುತ್ತದೆ. ಕಲೆಯ ಕಣ್ಣಿನಿಂದ ದೇವತೆಯನ್ನು ನೋಡುವ ಮತ್ತು ಚಿತ್ರಿಸುವ ಸನಾತನ ಸ್ವಾತಂತ್ರ್ಯಕ್ಕೆ ಗಣಪನೊಂದು ಅತ್ಯಂತ ಸಹಜವಾದ ಉದಾಹರಣೆಯಾಗುತ್ತಾನೆ. ಧಾರ್ಮಿಕ ಆಚರಣೆಗಳು ಮತ್ತು ಕಲೆಗಳು ಭಾರತದಲ್ಲೆಂದಿಗೂ ಪರಸ್ಪರ ಘನಿಷ್ಠ ಸಂಬಂಧವಿರುವ ಸಂಗತಿಗಳು. ಒಂದರ್ಥದಲ್ಲಿ ಭಾರತದ ಹಲವಾರು ಕಲೆಗಳು ರಂಗಪ್ರವೇಶವಾಗುವುದಕ್ಕೂ ಮುಂಚೆ ಜೀವಿಸಿದ್ದಿದ್ದು ಮತ್ತು ಬೆಳೆದುಬಂದಿದ್ದೆಲ್ಲ ಧಾರ್ಮಿಕ ಪರಿವೇಶದಲ್ಲಿಯೇ. ಗಣಪತಿಮೂರ್ತಿಯ ನಿರ್ಮಾಣ ಮತ್ತು ತತ್ಸಂಬದ್ಧವಾದ ಆಚರಣೆಗಳಂತೂ ಕಲೆಯನ್ನೇ ಉಸಿರಾಗಿಸಿಕೊಂಡಿರುವಂಥವು.

ಗಣಪತಿಯ ಆರಾಧನೆಯೆನ್ನುವುದು ಭೌಗೋಳಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಭಾರತಕ್ಕೆ ಮಾತ್ರ ಸಂಬಂಧಿಸಿರದೆ ಇಂಡೋನೇಷ್ಯಾ, ಪಿಲಿಪ್ಪಿನ್ಸ್, ಬಾಲಿ, ಜಪಾನ್, ಟಿಬೆಟ್, ಥಾಯ್ಲೆಂಡ್, ಘಾನಾ ಮೊದಲಾದ ದೇಶಗಳಲ್ಲಿಯೂ ಇರುವುದಾಗಿ ಕಂಡುಬರುತ್ತದೆ. ಇಂಡೊನೇಷ್ಯಾ ಇವತ್ತಿಗೆ ಒಂದು ಮುಸ್ಲಿಂ ಬಾಹುಳ್ಯದ ರಾಷ್ಟ್ರವಾಗಿದ್ದರೂ ತನ್ನ ಕರೆನ್ಸಿಯಲ್ಲಿ ಗಣಪತಿಯ ಚಿತ್ರವನ್ನು ಬಳಸುತ್ತದೆ. ಗಣಪತಿಯ ವಿಶ್ವಪ್ರಿಯತೆಗೆ ಇದು ಸಾಕ್ಷಿ. ವಿಶಾಲ ಸನಾತನದ ಪರಂಪರೆಯಲ್ಲಿ ವೈದಿಕರು ಮಾತ್ರವಲ್ಲದೆ ಬೌದ್ಧರೂ ಜೈನರೂ ಗಣೇಶನನ್ನು ಬೇರೆ ಬೇರೆ ವಿಧದಲ್ಲಿ ಪೂಜಿಸಿರುವರು. ಲೌಕಿಕರು, ವೈದಿಕರು, ಜೈನರು ಮತ್ತು ಬೌದ್ಧರಲ್ಲದೆ ತಾಂತ್ರಿಕರು ಅಥವಾ ಆಗಮಿಕರಲ್ಲಿಯೂ ಗಣೇಶನಿಗೆ ಸ್ಥಾನವಿದೆ.

ಹೀಗೆ ಗಣಪತಿಯ ಆರಾಧನೆಗೆ ದೀರ್ಘವೂ ವಿಶಾಲವೂ ಆದ ಪರಂಪರೆಯಿದೆ. ವೈಶ್ವಿಕವಾಗುತ್ತಲೇ ದೇಸೀ ಅನ್ನಿಸಿಕೊಳ್ಳುವುದು ಸಹ ಗಣಪನ ಹೆಗ್ಗಳಿಕೆಯಲ್ಲೊಂದು. ಕನ್ನಡ ಮಣ್ಣಿಗೆ ಮತ್ತು ನುಡಿಯ ಜಾಡಿಗೆ ಹೊಂದುವಂತೆ ವಿನಾಯಕ ಎನ್ನುವುದೇ ಬೆನಕ ಎಂದು ತದ್ಭವಗೊಂಡಿದೆ. ಈ ಬಗೆಯಲ್ಲಿ ಕನ್ನಡನಾಡು ಗಣೇಶನನ್ನು ತನ್ನ ನುಡಿಯ ದೇಶೀಯತೆಗೆ ಒಗ್ಗಿಸಿಕೊಂಡಿದೆ ಎನ್ನಬಹುದು.

ಲೇಖಕ: ಸಹಾಯಕ ಪ್ರಾಧ್ಯಾಪಕ, ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಸ್ಪಿರಿಚುವಲ್ ಸ್ಟಡೀಸ್, ಅಮೃತ ವಿಶ್ವವಿದ್ಯಾಪೀಠ, ಕೊಯಮತ್ತೂರು

ಜಗದಗಲ ಗಣೇಶ ಉತ್ಸವ

ಮಾರಿಷಸ್

ದ್ವೀಪ ರಾಷ್ಟ್ರವಾದ ಮಾರಿಷಸ್‌ನ ಜನಸಂಖ್ಯೆಯಲ್ಲಿ ಶೇ 52ರಷ್ಟು ಹಿಂದೂಗಳೇ ಇದ್ದಾರೆ. ಹೀಗಾಗಿ ಇಲ್ಲಿ ಗಣೇಶ ಚತುರ್ಥಿಯನ್ನು ಭಾರಿ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಚತುರ್ಥಿಯಂದು ರಾಷ್ಟ್ರೀಯ ರಜೆ ನೀಡಲಾಗುತ್ತದೆ. ಆದರೆ ಇಲ್ಲಿ ಸಾರ್ವಜನಿಕವಾಗಿ ಗಣೇಶನ ಮೂರ್ತಿ ಕೂರಿಸುವ ಪದ್ಧತಿ ಇಲ್ಲ. ಬದಲಿಗೆ ದೇವಸ್ಥಾನಗಳಲ್ಲಿ ಮತ್ತು ಮನೆಗಳಲ್ಲಿ ಗಣಪತಿಯ ಮಣ್ಣಿನ ಮೂರ್ತಿಯನ್ನು ಕೂರಿಸಿ ಹಬ್ಬ ಆಚರಿಸಲಾಗುತ್ತದೆ. ಮೂರರಿಂದ ಐದು ದಿನಗಳವರೆಗೆ ಗಣೇಶನ ಹಬ್ಬ ಆಚರಿಸಲಾಗುತ್ತದೆ.

ಕೆನಡಾ

ಕೆನಡಾದ ರಾಜಧಾನಿ ಟೊರಾಂಟೋದಲ್ಲಿ ಗಣೇಶನ ಹಬ್ಬ ಆಚರಿಸಲಾಗುತ್ತದೆ. ಟೊರಾಂಟೋದಲ್ಲಿ ಹಿಂದೂಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇಲ್ಲಿಯೂ ಗಣೇಶನ ಹಬ್ಬವನ್ನು ಸಾರ್ವಜನಿಕವಾಗಿ ಆಚರಿಸುವುದಿಲ್ಲ. ಯಾರಾದರೊಬ್ಬರ ಮನೆಯನ್ನು ಆಯ್ಕೆ ಮಾಡಿ, ಅಲ್ಲಿ ಗಣೇಶನ ಮೂರ್ತಿಯನ್ನು ಕೂರಿಸಲಾಗುತ್ತದೆ. ಅಲ್ಲಿಯೇ ಅಕ್ಕಪಕ್ಕದವರೆಲ್ಲರೂ ಸೇರಿ ಹಬ್ಬ ಆಚರಿಸುತ್ತಾರೆ. ಸಾಮೂಹಿಕವಾಗಿ ಪೂಜೆ ಸಲ್ಲಿಸುತ್ತಾರೆ. ಎಲ್ಲರೂ ಸೇರಿ ನೈವೇದ್ಯ ಸಿದ್ಧಪಡಿಸಿ ಹಂಚುತ್ತಾರೆ.

ಅಮೆರಿಕ

ಅಮೆರಿಕದ ಹಲವು ರಾಜ್ಯಗಳಲ್ಲಿ ಭಾರತೀಯರು ದೊಡ್ಡ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಹೀಗಾಗಿ ಇಲ್ಲಿ ಗಣೇಶನ ಚತುರ್ಥಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಇಲ್ಲಿನ ಭಾರತೀಯ ಸಮುದಾಯದವರು ಮುಂಬೈನಿಂದ ದೊಡ್ಡ ಗಣೇಶನ ಮೂರ್ತಿಗಳನ್ನು ಆಮದು ಮಾಡಿಕೊಳ್ಳುತ್ತಾರೆ. ಸಾರ್ವಜನಿಕವಾಗಿ, ಕ್ರೀಡಾಂಗಣಗಳಲ್ಲಿ, ಪಾರ್ಟಿ ಹಾಲ್‌ಗಳಲ್ಲಿ ಗಣೇಶನ ಉತ್ಸವ ನಡೆಸಲಾಗುತ್ತದೆ. ಕೆಲವೆಡೆ 10,000ಕ್ಕೂ ಹೆಚ್ಚು ಜನರು ಸೇರುತ್ತಾರೆ. ಇಲ್ಲಿ ಒಟ್ಟು 11 ದಿನ ಗಣೇಶನ ಹಬ್ಬವನ್ನು ಆಚರಿಸಲಾಗುತ್ತದೆ.

ಬ್ರಿಟನ್

ಬ್ರಿಟನ್‌ನಲ್ಲಿ ಭಾರತೀಯರು ಆಯೋಜಿಸುವ ಗಣೇಶನ ಉತ್ಸವಕ್ಕೆ ಭಾರಿ ವೈಶಿಷ್ಟ್ಯ ಇದೆ. ಲಂಡನ್‌ನ ಹೌನ್‌ಸ್ಲೋ ಎಂಬಲ್ಲಿನ ಲಕ್ಷ್ಮೀ ನಾರಾಯಣ ದೇವಾಲಯದಲ್ಲಿ ಪ್ರತಿ ವರ್ಷ ಗಣೇಶನ ಮೂರ್ತಿಯನ್ನು ಕೂರಿಸಲಾಗುತ್ತದೆ. ಬಹಳ ವಿಜೃಂಭಣೆಯಿಂದ ನಡೆಯುವ ಈ ಹಬ್ಬದಲ್ಲಿ 5,000ಕ್ಕೂ ಹೆಚ್ಚು ಜನರು ಸೇರುತ್ತಾರೆ. ಲಂಡನ್ ಪೊಲೀಸರು ಭಾರಿ ಭದ್ರತೆ ಒದಗಿಸುತ್ತಾರೆ. ದೇವಾಲಯದಲ್ಲಿ ಪ್ರತಿದಿನ ಆರತಿ ನಡೆಸಲಾಗುತ್ತದೆ. ಉತ್ಸವದ ಭಾಗವಾಗಿ ಹಲವು ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತದೆ. ಕೊನೆಯ ದಿನ ಹ್ಯಾಂ ಕೊಳದವರೆಗೆ ಮೆರವಣಿಗೆ ಮೂಲಕ ಗಣೇಶನ ಮೂರ್ತಿಯನ್ನು ಕೊಂಡೊಯ್ದು ವಿಸರ್ಜನೆ ಮಾಡಲಾಗುತ್ತದೆ.

ಫ್ರಾನ್ಸ್

ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ಗಣೇಶನ ಉತ್ಸವನ್ನು ಹತ್ತು ದಿನಗಳ ಕಾಲ ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಪ್ಯಾರಿಸ್‌ನ ಮಾಣಿಕ್ಯ ವಿನಾಯಕ ಮಂದಿರದಲ್ಲಿ ಗಣೇಶನ ಮೂರ್ತಿಯನ್ನು ಕೂರಿಸಲಾಗುತ್ತದೆ. ಪ್ರತಿ ದಿನವೂ ವಿಶೇಷ ಆರತಿ ಮತ್ತು ಪೂಜೆ ನಡೆಸಲಾಗುತ್ತದೆ. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಗುತ್ತದೆ. ಕೊನೆಯ ದಿನ ಗಣೇಶನ ಮೂರ್ತಿಯನ್ನು ಅಲಂಕೃತ ರಥದಲ್ಲಿ ಕೂರಿಸಿ, ಕಿಲೋಮೀಟರ್‌ಗಟ್ಟಲೆ ಮೆರವಣಿಗೆ ನಡೆಸಲಾಗುತ್ತದೆ. ಸಂಪ್ರದಾಯದಂತೆ ಜನರು ರಥವನ್ನು ಎಳೆಯುತ್ತಾರೆ. ಗಣೇಶನ ಮೆರವಣಿಗೆ ಸಾಗುವ ರಸ್ತೆಗಳನ್ನು ಟ್ಯಾಂಕರ್ ನೀರಿನಲ್ಲಿ ತೊಳೆಯಲಾಗುತ್ತದೆ. 15 ಕಿ.ಮೀ.ನ ಮೆರವಣಿಗೆಯ ನಂತರ ಮೂರ್ತಿಯನ್ನು ದೇವಾಲಯಕ್ಕೆ ವಾಪಸ್ ಕರೆತರಲಾಗುತ್ತದೆ. ಅಲ್ಲಿಯೇ ವಿಸರ್ಜನೆ ಮಾಡಲಾಗುತ್ತದೆ.

ನೇಪಾಳ

ಹಿಂದೂ ರಾಷ್ಟ್ರವಾದ ನೇಪಾಳದಲ್ಲಿ ಗಣೇಶನ ಹಬ್ಬವನ್ನು ಭಾರಿ ಜೋರಾಗಿ ಆಚರಿಸಲಾಗುತ್ತದೆ. ಆದರೆ ಇಲ್ಲಿ ದೇವಾಲಯಗಳಲ್ಲಿ ಮತ್ತು ಮನೆಗಳಲ್ಲಿ ಮೂರ್ತಿಯನ್ನು ಕೂರಿಸಲು ಆದ್ಯತೆ ನೀಡಲಾಗುತ್ತದೆ. 11 ದಿನಗಳ ಕಾಲ ಗಣೇಶನ ಹಬ್ಬ ಆಚರಿಸಲಾಗುತ್ತದೆ.

- ಈ ದೇಶಗಳು ಮಾತ್ರವಲ್ಲದೆ ನ್ಯೂಜಿಲೆಂಡ್, ಆಸ್ಟ್ರೇಲಿಯ, ಮಲೇಷ್ಯಾ, ಸಿಂಗಪುರ, ಜಪಾನ್‌ನಲ್ಲಿ ಗಣೇಶನ ಹಬ್ಬವನ್ನು ಆಚರಿಸಲಾಗುತ್ತದೆ. ಆದರೆ, ಸಾರ್ವಜನಿಕವಾಗಿ ಆಚರಿಸುವ ಪದ್ಧತಿ ಇಲ್ಲ. ದೇವಾಲಯಗಳಲ್ಲಿ ಮತ್ತು ಮನೆಗಳಲ್ಲಿ ಗಣೇಶನ ಮೂರ್ತಿಯನ್ನು ಕೂರಿಸಿ, ತೊಟ್ಟಿಯಲ್ಲಿಯೇ ವಿಸರ್ಜನೆ ಮಾಡುವ ಪರಿಪಾಟವಿದೆ

ಆಧಾರ: ವಿವಿಧ ಮೂಲಗಳಿಂದ

ಹಾರಾಟ ತರಬೇತಿ: ರಾಜ್ಯದಲ್ಲಿ 4 ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಾರಾಟ ತರಬೇತಿಗಾಗಿ ದೇಶದಲ್ಲಿ ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದ ಎಂಟು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಅವುಗಳ ಪೈಕಿ ನಾಲ್ಕು ಕರ್ನಾಟಕದ ಪಾಲಾಗಿವೆ. ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಎರಡು ಮತ್ತು ಕಲಬುರ್ಗಿ ವಿಮಾನ ನಿಲ್ದಾಣದಲ್ಲಿ ಎರಡು ಕೇಂದ್ರಗಳು ತಲೆ ಎತ್ತಲಿವೆ ಎಂದು ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ. ನೂರು ದಿನಗಳ ಹೊಸ ನೀತಿಗಳು ಮತ್ತು ಗುರಿಗಳ ಬಗ್ಗೆ ಅವರು ಗುರುವಾರ ಮಾತನಾಡಿದರು.

ಸರ್ಕಾರಿ ಸ್ವಾಮ್ಯದ ವಿಮಾನಯಾನ ಸಂಸ್ಥೆ ಏರ್ ಇಂಡಿಯಾ ಮಾರಾಟದ ಬಿಡ್ ಪ್ರಕ್ರಿಯೆಯ ಗಡುವನ್ನು ವಿಸ್ತರಿಸುವ ಯೋಚನೆ ಇಲ್ಲ ಎಂದು ಜ್ಯೋತಿರಾದಿತ್ಯ ತಿಳಿಸಿದ್ದಾರೆ. ಇದೇ 15 ಅನ್ನು ಬಿಡ್ ದಿನಾಂಕವಾಗಿ ಗುರುತಿಸಲಾಗಿದೆ.

ಐದು ವಿಮಾನ ನಿಲ್ದಾಣಗಳು, ಆರು ಹೆಲಿಪೋರ್ಟ್‌ಗಳು ಮತ್ತು 50 ಹೊಸ ವಿಮಾನ ಯಾನ ಮಾರ್ಗಗಳು ಮುಂದಿನ ನೂರು ದಿನಗಳಲ್ಲಿ ಆರಂಭ ಆಗಲಿವೆ ಎಂದು ಅವರು ಮಾಹಿತಿ ನೀಡಿದರು.

ವಿಮಾನ ನಿಲ್ದಾಣ ಪ್ರಾಧಿಕಾರವು ಹಾರಾಟ ತರಬೇತಿ ಸಂಘಟನೆಗಳಿಗೆ (ಎಫ್‌ಟಿಒ) ಸಂಬಂಧಿಸಿದ ನೀತಿಗಳನ್ನು ಉದಾರಗೊಳಿಸಿದೆ. ವಿಮಾನ ನಿಲ್ದಾಣಕ್ಕೆ ನೀಡಬೇಕಿದ್ದ ರಾಯಧನವನ್ನು (ಎಫ್‌ಟಿಒಗಳಿಂದ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಸಲ್ಲುವ ವರಮಾನ) ರದ್ದುಪಡಿಸಲಾಗಿದೆ. ಬಾಡಿಗೆಯನ್ನು ಹಲವು ಕೋಟಿ ರೂಪಾಯಿಗಳಿಂದ ₹15 ಲಕ್ಷಕ್ಕೆ ಇಳಿಸಲಾಗಿದೆ ಎಂದು ಮಾಧ್ಯಮಗೋಷ್ಠಿಯಲ್ಲಿ ಅವರು ವಿವರಿಸಿದರು.

ಎಂಟು ಎಫ್‌ಟಿಒಗಳ ಪೈಕಿ ನಾಲ್ಕು ಕರ್ನಾಟಕದಲ್ಲಿ ಸ್ಥಾಪನೆಯಾದರೆ, ಮಹಾರಾಷ್ಟ್ರದ ಜಲಗಾಂವ್, ಮಧ್ಯ ಪ್ರದೇಶದ ಖಜುರಾಹೊ ಮತ್ತು ಅಸ್ಸಾಂನ ಲಿಲಬರಿಯಲ್ಲಿ ತಲಾ ಒಂದೊಂದು ಸ್ಥಾಪನೆ ಆಗಲಿವೆ. ಕಲಬುರ್ಗಿಯ ಎರಡು ಎಫ್‌ಟಿಒಗಳು ತರಬೇತಿ ಕಾರ್ಯಾಚರಣೆಗೆ ಆಗಸ್ಟ್ 15ರಂದೇ ಚಾಲನೆ ನೀಡಿವೆ ಎಂದು ಹೇಳಿದ್ದಾರೆ.

ಮರುಜೋಡಣೆ ಕೇಂದ್ರ

ವಿಮಾನಗಳ ನಿರ್ವಹಣೆ, ದುರಸ್ತಿ ಮತ್ತು ಮರುಜೋಡಣೆಯ ಕೇಂದ್ರವಾಗಿ ಭಾರತವನ್ನು ಬೆಳೆಸುವ ದಿಸೆಯಲ್ಲಿಯೂ ಕೆಲಸ ಆರಂಭವಾಗಿದೆ. ಇದಕ್ಕೆ ಸಂಬಂಧಿಸಿದ ನೀತಿಯನ್ನು ಸರಳಗೊಳಿಸಲಾಗಿದೆ. ನಿರ್ವಹಣೆ, ದುರಸ್ತಿ ಮತ್ತು ಮರುಜೋಡಣೆ ಕೇಂದ್ರಗಳಾಗಿ ದೆಹಲಿ, ಕೋಲ್ಕತ್ತ, ತಿರುಪತಿ, ಬೇಗಂಪೇಟ್, ಭೋಪಾಲ್, ಚೆನ್ನೈ ಮತ್ತು ಚಂಡೀಗಡ ವಿಮಾನ ನಿಲ್ದಾಣಗಳನ್ನು ಆಯ್ಕೆ ಮಾಡಲಾಗಿದೆ. ಈ ಕೇಂದ್ರಗಳಿಗೆ ಖಾಸಗಿ ಹೂಡಿಕೆಗೆ ಉತ್ತೇಜನ ನೀಡಲಾಗುವುದು ಎಂದು ಸಿಂಧಿಯಾ ಹೇಳಿದ್ದಾರೆ.

ನಾಗರಿಕ ವಿಮಾನಗಳ ಜತೆಗೆ ಸೇನಾ ವಿಮಾನಗಳ ದುರಸ್ತಿ–ನಿರ್ವಹಣೆಯನ್ನೂ ನಡೆಸುವ ಬಗ್ಗೆ ಚಿಂತನೆ ನಡೆದಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತದಲ್ಲಿ ಈಗ ಕೋವಿಡ್‌ನ ಮೂರನೇ ಅಲೆ ತೀವ್ರವಾಗುತ್ತಿದೆ. ಕೋವಿಡ್ ಹರಡುವುದನ್ನು ತಡೆಗಟ್ಟಲು ಕೇಂದ್ರ ಸರ್ಕಾರವು ತುರ್ತು ಕ್ರಮ ಘೋಷಿಸಿದೆ. ಎಲ್ಲಾ ರಾಜ್ಯಗಳು ಶಾಲಾ-ಕಾಲೇಜುಗಳನ್ನು ತಕ್ಷಣವೇ ಬಂದ್ ಮಾಡಬೇಕು. ಆನ್‌ಲೈನ್ ತರಗತಿಗಳನ್ನು ಮಾತ್ರ ನಡೆಸಬೇಕು ಎಂದು ಕೇಂದ್ರ ಸರ್ಕಾರ ಆದೇಶಿಸಿದೆ ಎಂದು ಡಿಎನ್‌ಎಸ್ ನ್ಯೂಸ್ ಹೆಸರಿನ ಯುಟ್ಯೂಬ್ ವಾಹಿನಿಯಲ್ಲಿ ವರದಿ ಪ್ರಸಾರ ಮಾಡಲಾಗಿದೆ. ಈ ವರದಿಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಲಕ್ಷಕ್ಕೂ ಹೆಚ್ಚು ಬಾರಿ ಹಂಚಿಕೆಯಾಗಿದ್ದು, ವೈರಲ್ ಆಗಿದೆ. ಈ ವರದಿಯನ್ನು ಆಧರಿಸಿ ಹಲವರು ಸಂದೇಶ ಕಳುಹಿಸಿದ್ದಾರೆ.

ಇದು ಸುಳ್ಳು ಸುದ್ದಿ. ಭಾರತದಲ್ಲಿ ಕೋವಿಡ್ ಮೂರನೇ ಅಲೆ ಬಂದಿಲ್ಲ, ಅದು ತೀವ್ರತೆಯನ್ನೂ ಪಡೆದಿಲ್ಲ. ಶಾಲಾ-ಕಾಲೇಜುಗಳನ್ನು ಬಂದ್ ಮಾಡಿ, ಆನ್‌ಲೈನ್ ತರಗತಿ ಮೊರೆ ಹೋಗಿ ಎಂದು ಕೇಂದ್ರ ಸರ್ಕಾರವು ಯಾವುದೇ ತುರ್ತು ಆದೇಶ ಹೊರಡಿಸಿಲ್ಲ. ಸರ್ಕಾರದ ಹೆಸರಿನಲ್ಲಿ ಯಾರೋ ಕಿಡಿಗೇಡಿಗಳು ಈ ಸುಳ್ಳು ಸುದ್ದಿ ಸೃಷ್ಟಿಸಿದ್ದಾರೆ. ಈ ಸುದ್ದಿಯನ್ನು ಯಾರೂ ನಂಬಬೇಡಿ. ಶಾಲಾ-ಕಾಲೇಜುಗಳಿಗೆ ಹೋಗಿ ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ದಿನ ಭವಿಷ್ಯ

ಶುಕ್ರವಾರ ಸೆಪ್ಟೆಂಬರ್ 10, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪೂರ್ವಫಲ್ಗುಣಿ ಚತುರ್ಥೀ ಗಂ. 44-48 (ರಾ. 2-10) ಶುಕ್ರವಾರ ನಿತ್ಯ ನಕ್ಷತ್ರ ಚಿತ್ತೆ ಗಂ. 24-19 (ಹ. 3-58) ಬ್ರಹ್ಮ ನಾಮ ಯೋಗ ಗ. 38-26 ವಣಿಜ ಕರಣ ಗಂ. 17-17 ವಿಷ ಗಂ. 37-21 ಅಮೃತ ಗಂ. 8-40 ಪುನರಮೃತ ಗಂ. 56-51 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 : ಸೂರ್ಯೋದಯ: 6-12 ಸೂರ್ಯಾಸ್ತ: 6-21 ಅದೃಷ್ಟ ಸಂಖ್ಯೆ 1 6

ಮೇಷ: ಕೃಷಿ ಭೂಮಿ ಖರೀದಿ ಸಾಧ್ಯತೆ. ಮಾತಿನಿಂದ ಗೌರವ ಪ್ರಾಪ್ತಿ. ಪ್ರಿಯ ವ್ಯಕ್ತಿಗಳ ಆಗಮನದಿಂದಾಗಿ ಮನೆಯಲ್ಲಿ ಸಂತಸ. ಮಕ್ಕಳಿಂದ ನೆಮ್ಮದಿ. ವೃತ್ತಿಯಲ್ಲಿ ಸಂತೃಪ್ತಿ.

ವೃಷಭ: ಪ್ರಾಪ್ತ ವಯಸ್ಕರಿಗೆ ವಿವಾಹ ಕಾರ್ಯಗಳು ನಿಶ್ಚಯವಾಗುವ ಸಾಧ್ಯತೆ. ನಿಮ್ಮ ವೈಯುಕ್ತಿಕ ಆಶೋತ್ತರಗಳು ಈಡೇರಲಿವೆ. ಮನೆಯಲ್ಲಿ ದೇವತಾ ಕಾರ್ಯಗಳು ಜರುಗಲಿವೆ. ಉದ್ದೇಶಿತ ಕೆಲಸಗಳಿಗೆ ಸೋದರರಿಂದ ಸಹಕಾರ.

ಮಿಥುನ: ಕ್ಷೇತ್ರಗಳಲ್ಲಿ ಯಶಸ್ಸು ಕೀರ್ತಿಗಳನ್ನು ಸಾಧಿಸಲಿದ್ದೀರಿ. ವ್ಯಾಪಾರ ವಲಯದಲ್ಲಿ ಅಧಿಕ ಲಾಭವನ್ನು ನಿರೀಕ್ಷಿಸಬಹುದು. ಪ್ರಯಾಣ/ ವಾಹನ ಚಾಲನೆಗಳಲ್ಲಿ ಅತ್ಯಂತ ಜಾಗರೂಕರಾಗಿರುವುದು ಒಳಿತು.

ಕರ್ಕಾಟಕ: ವೃತ್ತಿ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದೀರಿ. ಶತ್ರುಬಾಧೆ ನಿವಾರಣೆಯಾಗುವ ಎಲ್ಲ ಲಕ್ಷಣಗಳು ಕಂಡುಬರುತ್ತಿವೆ. ಸಂಗಾತಿಯಿಂದ ದೊರೆಯುವ ಸಲಹೆಗಳನ್ನು ಗೌರವಿಸಿ.

ಸಿಂಹ: ಬರವಣಿಗೆಯಲ್ಲಿ ತೊಡಗಿರುವವರಿಗೆ ಯಶೋಕೀರ್ತಿ ಲಭ್ಯ. ವಿವಾದಾತ್ಮಕ ವಿಷಯಗಳ ಬಗ್ಗೆ ಅಭಿಪ್ರಾಯ ನೀಡದಿರುವುದೇ ಉತ್ತಮ. ಮಾಧ್ಯಮ ಕ್ಷೇತ್ರದಲ್ಲಿ ತೊಡಗಿರುವವರಿಗೆ ವಿಶೇಷ ಅನುಕೂಲ.

ಕನ್ಯಾ: ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಧಾರ್ಮಿಕ ಸಮಾರಂಭಗಳಲ್ಲಿ ಸಕ್ರಿಯವಾಗಿ ಭಾಗವಹಿಸಲಿದ್ದೀರಿ. ಸಾಮಾಜಿಕ ಗೌರವಾದರಗಳಿಗೆ ಭಾಜನರಾಗುವ ಸಾಧ್ಯತೆ.

ತುಲಾ: ಹೊಸದಾಗಿ ಆರಂಭಿಸಲಿರುವ ಉದ್ಯಮ/ ಯೋಜನೆಗಳಲ್ಲಿ ಯಶಸ್ಸನ್ನು ಕಾಣಲಿದ್ದೀರಿ. ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗಿ ಹೊಗಳಿಕೆಗೆ ಪಾತ್ರರಾಗಲಿದ್ದೀರಿ. ವಾಹನ ಖರೀದಿ ಸಾಧ್ಯತೆ.

ವೃಶ್ಚಿಕ: ಆಸ್ತಿ ಅಭಿವೃದ್ಧಿಗಾಗಿ ಹೊಸ ಯೋಜನೆಗೆ ಚಾಲನೆ ನೀಡಲಿದ್ದೀರಿ. ಪ್ರಯಾಣ ಸುಖಾನುಭವವನ್ನು ಹೊಂದುವಿರಿ. ಬರವಣಿಗೆಯಲ್ಲಿ ತೊಡಗಿರುವವರಿಗೆ ಕೀರ್ತಿ ಲಾಭವಾಗಲಿದೆ. ಸಾಂಸಾರಿಕ ಜೀವನದಲ್ಲಿ ಸುಖಾನುಭವ.

ಧನು: ಹೊಸ ವಸ್ತುಗಳ ಖರೀದಿ ಸಾಧ್ಯತೆ. ಮಾತೃವರ್ಗದವರಿಂದ ಸಹಕಾರವನ್ನು ನಿರೀಕ್ಷಿಸಬಹುದು. ಆಧ್ಯಾತ್ಮಿಕ ವಿಚಾರಗಳ ಚಿಂತನೆಯಿಂದ ಆತ್ಮ ತೃಪ್ತಿ ಹೊಂದಲಿದ್ದೀರಿ.

ಮಕರ: ಹೊಸ ಯೋಜನೆಯೊಂದಕ್ಕೆ ಚಾಲನೆ ನೀಡಲಿದ್ದೀರಿ. ನಿಮ್ಮ ಮಾನಸಿಕ ಇಷ್ಟಾರ್ಥಗಳು ಸಿದ್ಧಿಸಲಿದೆ. ಪಿತ್ರಾರ್ಜಿತ ಆಸ್ತಿ ನಿಮ್ಮದಾಗಲಿದೆ. ಗೃಹ ಕಾರ್ಯದಲ್ಲಿ ಉತ್ತಮ ಪ್ರಗತಿ. ಗುರುದೇವತಾ ದರ್ಶನ ಭಾಗ್ಯ ನಿಮ್ಮದಾಗಲಿದೆ.

ಕುಂಭ: ಆಸ್ತಿ ಖರೀದಿ ಮಾಡುವ ಸಾಧ್ಯತೆ. ಸರ್ಕಾರಿ ಅಧಿಕಾರಿಗಳು ಮೇಲಾಧಿಕಾರಿಗಳಿಂದ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ಅಪರಿಚಿತ ವ್ಯಕ್ತಿಯಿಂದ ಸಹಾಯ ದೊರಕಲಿದೆ. ವೈದ್ಯಕೀಯ ಸಲಹೆಯನ್ನು ಪಡೆಯಬೇಕಾದೀತು.

ಮೀನ: ವಿದ್ವಾಂಸರಿಗೆ ಗೌರವಾದರಗಳು ದೊರಕಲಿವೆ. ಭೂಮಿ ವ್ಯವಹಾರದಲ್ಲಿ ಧನಲಾಭವನ್ನು ಕಾಣುವಿರಿ. ಚಿನ್ನಾಭರಣಗಳ ಖರೀದಿ ಮಾಡಲಿದ್ದೀರಿ. ಹೊಸ ಹೊಸ ವ್ಯಾಪಾರಗಳತ್ತ ಮನಸ್ಸನ್ನು ಹರಿಯಬಿಡುವಿರಿ.

ನಿಮ್ಮ ಜನ್ಮದಿನ 10-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಆರ್ಥಿಕ ಪ್ರಗತಿಗಾಗಿ ಕೈಗೊಂಡ ಯೋಜನೆಗಳಲ್ಲಿ ಶ್ರಮವಹಿಸಿ ಯಶಸ್ಸನ್ನು ಸಾಧಿಸಲಿದ್ದೀರಿ. ಅಮೂಲ್ಯ ಸಂಪತ್ತನ್ನು ಖರೀದಿಸುವ ಯೋಗವು ಕೂಡಿಬರಲಿದೆ. ನ್ಯಾಯಾಲಯಗಳಲ್ಲಿನ ಕಟ್ಲೆಗಳು ನಿಮ್ಮ ಪರವಾಗಿ ತೀರ್ಮಾನವಾಗುವ ಸ್ಪಷ್ಟ ಸೂಚನೆ ಕಂಡುಬರುತ್ತಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರಪಂಚವನ್ನು ತುಂಬಿದ ಕಾಂತಿ

ಹೃದಯ ಪುಷ್ಪಮರಂದವಾತ್ಮಕೆ ನಿಜಾನಂದ |
ಉದಿಪುದಾರಸ ಸುಂದರದ ಕಿರಣ ಸೋಕೆ ||
ಬದುಕಿನೊಳ್ ಕವಿತೆಯೊಳ್ ಕಲೆಗಳೊಳ್ ಪ್ರಕೃತಿಯೊಳ್ |
ಪುದಿದಿರ್ಪ ಕಾಂತಿಯದು – ಮಂಕುತಿಮ್ಮ
|| 459 ||

ಪದ-ಅರ್ಥ: ಪುಷ್ಪಮರಂದವಾತ್ಮಕೆ = ಪುಷ್ಪ + ಮರಂದ (ಮಕರಂದ) + ಆತ್ಮಕೆ, ಉದಿಪುದಾ = ಉದಿಪುದು (ಒಸರುವುದು) + ಆ, ಪುದಿದಿರ್ಪ = ತುಂಬಿರುವ.

ವಾಚ್ಯಾರ್ಥ: ಬದುಕಿನಲ್ಲಿ, ಕವಿತೆಯಲ್ಲಿ, ಕಲೆಗಳಲ್ಲಿ, ಪ್ರಕೃತಿಯಲ್ಲಿ ಕಂಡ ಸೌಂದರ್ಯದ ಕಿರಣ ಸೋಕಿದೊಡನೆ ಹೃದಯವೆಂಬ ಪುಷ್ಪದ ಮಕರಂದ ಜಿನುಗುವುದು. ಅದರಿಂದ ಆತ್ಮಕ್ಕೆ ನಿಜವಾದ ಆನಂದ. ಎಲ್ಲೆಡೆಯೂ ತುಂಬಿರುವ ಕಾಂತಿ ಆ ಸೌಂದರ್ಯ.

ವಿವರಣೆ: ಭಗವಾನ್ ಶಂಕರಾಚಾರ್ಯರು ರಚಿಸಿದ ಸೌಂದರ್ಯ ಲಹರಿಯೊಂದು ಅದ್ಭುತ ಕಾವ್ಯಸೃಷ್ಟಿ. ಅದರಲ್ಲಿ ಶ್ಲೋಕವೊಂದು ಹೀಗಿದೆ:

ಕಿರಂತೀಮಂಗೇಭ್ಯಃ ಕಿರಣನಿಕುರುಂಬಾಮೃತರಸಂ ಹೃದಿ ತ್ವಾಮಾಧತ್ತೇ ಹಿಮಕರ ಶಿಲಾಮೂರ್ತಿಮಿನ ಯಃ |
ಸ ಸರ್ಪಾಣಾಂ ದರ್ಪಂ ಶಮಯತಿ ಶಕಂತಾಧಿಪ ಇವ ಜ್ವರಪ್ಲು ಷ್ಟಾನ್ ದೃಷ್ಟ್ಯಾ ಸುಖಯತಿ ಸುದಾಧಾರಸಿಯಾ ||

'ಹೇ ಜಗನ್ಮಾತೆ, ನಿನ್ನ ಅವಯವಗಳು ಹೊರಸೂಸುವ ಕಾಂತಿಭರಿತ ಕಿರಣಗಳು, ಅಮೃತಧಾರೆಯನ್ನು ಸುರಿಸುವ ಚಂದ್ರಕಾಂತ ಶಿಲೆಯ ಮುದ್ದುಬೊಂಬೆಯಂತಹ ನಿನ್ನ ಮೋಹಕರೂಪವನ್ನು ಯಾವ ಸಾಧಕನು ತನ್ನ ಹೃದಯಕಮಲದಲ್ಲಿ ಪ್ರತಿಷ್ಠಾಪಿಸಿ ಧ್ಯಾನಿಸುತ್ತಾನೋ, ಆತನಿಗೆ, ಗರುಡನು ಹಾವಿನ ಸೊಕ್ಕಡಗಿಸುವಂತೆ, ನಿನ್ನ ಅಮೃತನಾಡಿಯುಕ್ತ ನೋಟ ಮಾತ್ರದಿಂದಲೇ ಜ್ವರಪೀಡಿತರಾದವರನ್ನು ಹಾಗೂ ಬಯಸಿ ಬಂದವರನ್ನು ಸುಖವಾಗಿಸುವ ಶಕ್ತಿ ಬರುತ್ತದೆ'.

ಈ ಜಗನ್ಮಾತೆ ಪ್ರಪಂಚದ ಎಲ್ಲೆಡೆಯಲ್ಲಿ ಪಸರಿಸಿದ್ದಾಳೆ. ಸೃಷ್ಟಿಯ ಪ್ರತಿಯೊಂದರಲ್ಲೂ, ಮನುಷ್ಯರ, ಪ್ರಾಣಿಗಳ ಗುಣಗಳಲ್ಲಿಯೂ ಆಕೆಯ ಸುಸ್ಥಿತಿ ಇದೆ. ಎಲ್ಲ ರಸಗಳ ಮೂಲ ಆಕೆ. ಆ ರಸ ನಮ್ಮ ಬದುಕಿನ ಕ್ಷಣಗಳಲ್ಲಿ, ಕಾವ್ಯದಲ್ಲಿ, ಕಲೆಗಳಲ್ಲಿ ತುಂಬಿಕೊಂಡಿದೆ. ಆ ಸೌಂದರ್ಯದ ಕಿರಣಗಳು ನಮ್ಮನ್ನು ತಾಗಿದಾಗ, ನಮ್ಮ ಹೃದಯವೆಂಬ ಪುಷ್ಪದಲ್ಲಿ ಮಕರಂದವೆಂಬ ರಸ ಒಸರುತ್ತದೆ. ಅದರಿಂದ ಆತ್ಮಕ್ಕೆ ನಿಜವಾದ ಆನಂದ ದೊರಕುತ್ತದೆ. ಸೌಂದರ್ಯ ಎನ್ನುವುದು ಎಲ್ಲವೂ 'ಅಲಂಕಾರ' ಮತ್ತು 'ರಸ' ಎನ್ನುವ ಎರಡು ಪದಗಳಲ್ಲಿ ಅಡಕವಾಗಿದೆ. ಇವೆರಡೂ ಪದಗಳು ಸೌಂದರ್ಯವನ್ನು ಸೂಚಿಸುವ ಅತ್ಯಂತ ಪ್ರಾಚೀನ ಪದಗಳು. ಪ್ರಪಂಚದ ಅನುಭವಗಳಿಂದ, ಕಾವ್ಯ-ನಾಟ್ಯಾದಿಗಳಿಂದ ಸಹೃದಯನ ಹೃದಯದಲ್ಲಿ ಹೇಗೆ ರಸಾನುಭವ ಉಂಟಾಗುತ್ತದೆಂಬುದನ್ನು ನಮ್ಮ ಅಲಂಕಾರಿಕರು ಅನ್ಯಾದೃಶವಾಗಿ ಪರಿಶೀಲಿಸಿದ್ದಾರೆ. ಬಾಹ್ಯದಲ್ಲಿ ಆದ ಸೌಂದರ್ಯದ ಅನುಭವ ನಮ್ಮ ಹೃದಯದಲ್ಲಿ ಪ್ರತಿಫಲಿಸಿದಾಗ ಈ ರಸ ಉಕ್ಕುತ್ತದೆ. ಆಗ ನಮಗರಿವಿಲ್ಲದಂತೆ ಆನಂದದ ಅನುಭೂತಿಯಾಗುತ್ತದೆ. ರಸವನ್ನು ಉಕ್ಕಿಸುವ ಈ ವಿಶೇಷ ಕಾಂತಿ ಎಲ್ಲೆಡೆಯೂ ತುಂಬಿಕೊಂಡಿದೆ. ❖

ಪದಬಂಧ 4715 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರಾಜ,ಕಾಲಾಳು ಮುಂತಾದ ಕಾಯಿಗಳಿಂದಾಡುವ ಆಟ (4)
3.ಮನಸ್ಸಿನ ಆಲಸ್ಯವಿದು (4)
4. ಪ್ರವಾಸಿ ಇಲ್ಲಿದ್ದಾನೆ (3)
5.ಒಳ್ಳೆಯ ನಡತೆ (4)
7.ದ್ರವದಿಂದ ತುಂಬಿರುವಂಥದ್ದು (4)
9.ದೇವಾಲಯದ ಸಭಾಮಂಟಪ (4)
11.ವೃಕ್ಷದ ಹತ್ತಿರವಿರುವ ಪಕ್ಷಿ (4)
12.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
14.ಆಹಾರವನ್ನು ಸೇವಿಸದಿರುವುದು (4)
15.ಕತ್ತು ಬಗ್ಗಿಸಿ ಹಾಕಿದ ಸಹಿ! (4)

ಮೇಲಿಂದ ಕೆಳಕ್ಕೆ

1.ಹಣವನ್ನು ಸಾಗಿಸುವ ಬಿದಿರಿನ ಚೌಕಟ್ಟು (2)
2.ಸಮಯ ಸೂಚಕ ಯಂತ್ರ (4)
3.ಮರದ ಸುತ್ತ ಹಾರಾಡುತ್ತಿರುವ ದುಂಬಿ (4)
6.ದಾನ ಕೇಳುತ್ತಿರುವ ರಾಕ್ಷಸ (3)
8.ಈತ ಬಹಳ ಹಳಬ (3)
10.ಮರ ಕೊಯ್ಯುವ ಸಾಧನ (4)
11.ಹೂವಿನಲ್ಲಿನ ಸಿಹಿ ರಸ (4)
13.ಒಂದು ಸಲಕ್ಕೆ ನುಂಗುವಷ್ಟು ಆಹಾರ (2)

1			2	■	3			
	■	■		■		■	■	■
■	■	■	4			■	■	■
5	6			■	7		8	
■		■	■	■	■	■		■
9			10	■	11			
■	■	■	12			■	■	■
■	■	■		■		■	■	13
14				■	15			

4714ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿಭೂತಿಪೂಜೆ 3.ಆಡವಿ 5.ವರ್ಗೀಕರಣ 7.ಕಷಾಯ 8.ಹುಸಿಮುನಿಸು 11.ಕುರುಳು 12.ನಾಮಕರಣ 14.ಪಿನಾಕ 15.ವಿಮಾನಯಾನ

ಮೇಲಿಂದ ಕೆಳಕ್ಕೆ: 1.ವಿಭಾವನೆ 2.ತಿರುಕ 4.ವಿದಾಯ 6.ರಕ್ಕಸಿ 7.ಕಡಸು 8.ಹುರುಳು 9.ನಿಯಮ 10.ಜಾಣತನ 11.ಕುರೂಪಿ 13.ಕದನ

ಸುಡೊಕು 5101

				9		1		8
	1			3			6	
		7	4		1	3		9
2	9				4	6		
1	4			5				
			1				9	4
3		9			5		7	
	8			1		9		3
4		1			9		8	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5100 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕೃಭಾಜನಿನಿ, ಎ.ಎಲ್.ಬಿ.ಸಿ ವಿಭಾಗ, ಆಲಮಟ್ಟಿ–586201, ತಾಲ್ಲೂಕು: ಬಸವನ ಬಾಗೇವಾಡಿ, ಜಿಲ್ಲೆ: ವಿಜಯಪುರ. ಫೋನ್: 08426–281044. ಇ–ಮೇಲ್: ee09albc@gmail.com
ಸಂಖ್ಯೆ: ಕೃಭಾ.ಜ.ನಿ.ನಿ/ಎ.ಎಲ್.ಬಿ.ಸಿ ವಿಭಾಗ/ಡಿ ಎಮ್/ಎನ್‌ಎಲ್‌ಐಎಸ್–ಇಐನ್‌ವಿ–ಕ್ಲಿಯರನ್ಸ್/2021–22/1278 ದಿನಾಂಕ: 07.09.2021
ಸಾರ್ವಜನಿಕರ ಪ್ರಕಟಣೆ
ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರವು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತರವರು ವಿಜಯಪುರ ಜಿಲ್ಲೆಯಲ್ಲಿ ಪ್ರಸ್ತಾಪಿಸಿರುವ **ನಾಗರಬೆಟ್ಟ ಏತ ನೀರಾವರಿ ಯೋಜನೆಗೆ ಪರಿಸರ ವಿಮೋಚನಾ ಪತ್ರವನ್ನು** ದಿನಾಂಕ: 31.10.2018 ರಂದು ಪತ್ರ ಸಂಖ್ಯೆ SEIAA 14 IND 2017ರಲ್ಲಿ ನೀಡಿರುತ್ತಾರೆ. ಈ ಪರಿಸರ ವಿಮೋಚನಾ ಪತ್ರವನ್ನು ಪರಿಸರ ಸಚಿವಾಲಯದ ವೆಬ್‌ಸೈಟ್: **https://parivesh.nic.in** ನಲ್ಲಿ ನೋಡಬಹುದಾಗಿದೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿಯೂ ಸಹ ಲಭ್ಯವಿರುತ್ತದೆ.
ದಿನಾಂಕ: 06.09.2021
ಸ್ಥಳ: ಆಲಮಟ್ಟಿ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ.ಎಲ್.ಬಿ.ಸಿ ವಿಭಾಗ, ಆಲಮಟ್ಟಿ
ವಾಸಾಸಂಇ/ವಿಜಯಪುರ/276/ಜಿಎ/2021–22

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ., ನಂ.4, ಬಿ.ಆರ್.ಎಲ್.ಬಿ.ಸಿ, ವಿಭಾಗ, ಭದ್ರಾವತಿ.
ಸಂ: ಕಾ.ಇಂ/ಕನೀನಿನಿ/ಬಿಡಿಯನ್–4/ಪಿ.ಬಿ–2/ಟೆಂಡರ್ ಪ್ರಕಟಣೆ ಸಂಖ್ಯೆ:07/2021–22/ ದಿ: 04.09.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.
1. ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 08.09.2021 ರಿಂದ 16.09.2021 ರವರೆಗೆ 17.30 ಗಂಟೆಗೆ 2. ಪ್ರೀ–ಬಿಡ್ ಸಭೆಯ ದಿನಾಂಕ: 13.09.2021 ರಂದು ಬೆಳಿಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಕಛೇರಿಯಲ್ಲಿ 3. ತಾಂತ್ರಿಕ ಬಿಡ್ ತೆರೆಯುವ ದಿ:17.09.2021 ಸಂಜೆ 17.31 ಗಂಟೆಗೆ 4. ಆರ್ಥಿಕ ಬಿಡ್ ತೆರೆಯುವ ದಿನಾಂಕ: After obtaining approval of technical bid from competent authority, the financial bid will be opened 5. ಕಾಲಾವಧಿ : 06 ತಿಂಗಳು (ಮಳೆಗಾಲ ಸಹಿತ) 6. ಟೆಂಡರಿಗಿಟ್ಟ ಮೊತ್ತ : ರೂ. 140.16 ಲಕ್ಷಗಳು 7. ಇ.ಎಂ.ಡಿ ಮೊತ್ತ: ರೂ. 1.41 ಲಕ್ಷಗಳು ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್: 08282–271063
ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ನಂ.4 ಬಿ.ಆರ್.ಎಲ್.ಬಿ,.ಸಿ ವಿಭಾಗ, ಭದ್ರಾವತಿ
ವಾ.ಸಾ.ಸಂ.ಇ/ಶಿ/ನಂ–41/09/ಎಂಸಿಎ/21–22/580

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2021–22/2912 ದಿನಾಂಕ:08.09.2021
–: ಟೆಂಡರ ಅಧಿಸೂಚನೆ (ಇ–ಪ್ರೊಕ್ಯೂರಮೆಂಟ್‌ನಲ್ಲಿ):–
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರಮೆಂಟನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1, 2, 3 & 4 ರಲ್ಲಿ ಲೆಕ್ಕ ಶೀರ್ಷಿಕೆ 8443 ಠೇವಣಿ ವಂತಿಕೆ, 5054-SCP, 5054- TSP,4059–ಅಪೇಂಡಿಕ್ಸ್–ಇ, 5054–ಜಿ.ಮು.ರ ಸುಧಾರಣೆ ಮತ್ತು ನಬಾರ್ಡ–25 ಅಡಿಯಲ್ಲಿ ಒಟ್ಟು 28 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ 401.70 ಲಕ್ಷಗಳು ಹಾಗೂ 0.30 ಲಕ್ಷಗಳು ಇದ್ದು, ಮುಂಗಡ ಠೇವಣಿ ಮೊತ್ತವು ಸರ್ಕಾರದ ಆದೇಶ ಸಂಖ್ಯೆ: ಆಇ 675/ವೆಚ್ಚ–12/2020, ಬೆಂಗಳೂರು, ದಿನಾಂಕ : 22–12–2020 ರಂತೆ ಇರುತ್ತದೆ. ಭಾಗ–1: ಟೆಂಡರಗಳನ್ನು ಸ್ವೀಕರಿಸುವ ದಿನಾಂಕ 23–09–2021 ರ ಸಂಜೆ 4.30 ಘಂಟೆಯರೆಗೆ ಮತ್ತು ಟೆಂಡರಗಳನ್ನು ತೆರೆಯುವ ದಿನಾಂಕ 24–09–2021 ರ ಸಂಜೆ 4.45 ಘಂಟೆ ನಂತರ, ಭಾಗ–2: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋ.ಇ. ಸುವರ್ಣ ಸೌಧ ಉಪ–ವಿಭಾಗ, ಬೆಳಗಾವಿ ಇವರ ಕಛೇರಿಯಲ್ಲಿ ಜಾಹೀರ್ ಲಿಲಾವು ಗುತ್ತಿಗೆಯನ್ನು ಸ್ವೀಕರಿಸುವ ದಿನಾಂಕ 16–09–2021 ರ ಮುಂಜಾನೆ 11.00 ಘಂಟೆಯ ಒಳಗೆ (ಜಾಹೀರ್ ಲಿಲಾವು ಗುತ್ತಿಗೆಯಲ್ಲಿ ಭಾಗವಹಿಸು ವವರು ರೂ.1000/– ಮುಂಗಡ ಠೇವಣಿ ಹಣ ಡಿ.ಡಿ. ಮುಖಾಂತರ ಕಟ್ಟಿ ಭಾಗವಹಿಸುವುದು), ಭಾಗ–3: ಟೆಂಡರಗಳನ್ನು ಸ್ವೀಕರಿಸುವ ದಿನಾಂಕ 23–09–2021 ರ ಸಂಜೆ 4.30 ಘಂಟೆಯರೆಗೆ ಮತ್ತು ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 24–09–2021 ರ ಸಂಜೆ 4.45 ಘಂಟೆ, ನಂತರ ಮತ್ತು ಭಾಗ–4: ಟೆಂಡರಗಳನ್ನು ಸ್ವೀಕರಿಸುವ ದಿನಾಂಕ 23–09–2021 ರ ಸಂಜೆ 4.30 ಘಂಟೆಯರೆಗೆ ಮತ್ತು ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 24–09–2021 ರ ಸಂಜೆ 4.45 ಘಂಟೆ, ನಂತರ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ದಿನಾಂಕ: 08–09–2021 ರ ನಂತರ ಪಡೆಯಬಹುದು.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-735/MCA/2021-22

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ANAB ISO 9001:2015 NVT-QC CERTIFICATE NO. 2790095
ಜಲಭವನ, ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು – 560029, ದೂ : 080–41106504–18/26
ಇ–ಮೇಲ್: cekwbbng@gmail.com ವೆಬ್‌ಸೈಟ್: https://eproc.karnataka.gov.in
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಈ ಕೆಳಕಂಡ ಕಾಮಗಾರಿಗೆ ಬಿಡ್ ದಾಖಲಾತಿಯಲ್ಲಿ ವಿವರಿಸಲಾದ ಆರ್ಥಿಕ ಮತ್ತು ತಾಂತ್ರಿಕ ಅರ್ಹತಾ ಅಗತ್ಯತೆಗಳನ್ನು ಪೂರೈಸುವ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐಟಂ ದರದ ಆಧಾರದ ಮೇಲೆ ಟೆಂಡರ್‌ಗಳನ್ನು (ದ್ವಿ ಲಕೋಟೆ ಪದ್ಧತಿಯಲ್ಲಿ) ಆಹ್ವಾನಿಸಲಾಗಿದೆ.
ಸಂಖ್ಯೆ: KWB/TEC/CE/DC Works Dvg/1006/2021-22 Dated: 08-09-2021
ಕಾಮಗಾರಿಯ ಹೆಸರು ಹಾಗೂ ವಿವರಗಳು : ದಾವಣಗೆರೆ ನಗರ ಮಹಾನಗರ ಪಾಲಿಕೆ ಠೇವಣಿ ಕೊಡುಗೆ ಕಾಮಗಾರಿಯಡಿ ನಗರ ವ್ಯಾಪ್ತಿಯ ವಾರ್ಡ್ – ನಂ. 41 ರ ಶಿರಮಗೊಂಡನಹಳ್ಳಿ ಮತ್ತು ವಾರ್ಡ್– ನಂ.44 ರ ರಾಘವೇಂದ್ರ ಬಡಾವಣೆಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿ
ಕೆಲಸದ ಇಂಡೆಂಟ್ ಸಂಖ್ಯೆ: KUWSDB/2021-22/WS/WORK_INDENT3039
ಕಾಮಗಾರಿಯ ಅಂದಾಜು ಮೌಲ್ಯ (ರೂ.ಲಕ್ಷಗಳಲ್ಲಿ) : 157.40 (ಜಿಎಸ್‌ಟಿ ಹೊರತುಪಡಿಸಿ)
ಟೆಂಡರ್ ಪ್ರಕ್ರಿಯೆ ಶುಲ್ಕ (ಇಎಂಡಿ) (ರೂ.) : ಇಲ್ಲ
ಟೆಂಡರ್ ಪ್ರಕ್ರಿಯೆ ಶುಲ್ಕ : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ
ಪೂರ್ಣಗೊಳಿಸಲು ಕಾಲಾವಧಿ ಮಳೆಗಾಲ ಸೇರಿ (ತಿಂಗಳು) : 6 ತಿಂಗಳು.
ಟೆಂಡರ್ ಕಾರ್ಯ ಸೂಚಿ:–
1) ದಾಖಲೆಗಳ ಲಭ್ಯತೆ: 09–09–2021 ರಂದು 11.00 ಗಂಟೆಯ ನಂತರ. 2) ವಿಚಾರಣೆಗೆ / ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ಸಮಯ : 24–09–2021 ರಂದು 11.00 ಗಂಟೆಯವರೆಗೆ. 3) ಬಿಡ್ ಪೂರ್ವ ಸಭೆ : 24–09–2021 ರಂದು 11.30 ಗಂಟೆಗೆ. 4) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು/ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಹಾಗೂ ಸಮಯ : 07–10–2021 ರಂದು 17.30 ಗಂಟೆಯವರೆಗೆ. 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: 11–10–2021 ರಂದು 11.00 ಗಂಟೆಯ ನಂತರ. 6) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : ಯಶಸ್ವಿ ಟೆಂಡರ್‌ದಾರರಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತಿಳಿಸಲಾಗುವುದು.
ಹೆಚ್ಚಿನ ವಿವರಗಳನ್ನು ಮುಖ್ಯ ಅಭಿಯಂತರರು, ಕ.ನ.ನೀ.ಸ ಮತ್ತು ಒ.ಚ. ಮಂಡಳಿ, ಬೆಂಗಳೂರು ರವರ ಕಚೇರಿ ಅಥವಾ ವೆಬ್‌ಸೈಟ್: (https://eproc.karnataka.gov.in) ನಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ : 080– 22371090 / 22373788, ಇ –ಮೇಲ್ ಸಹಾಯ: hphelpdesk.blr@intarvo.com ಸಂಪರ್ಕಿಸಬಹುದು.
ಸಹಿ/– ಮುಖ್ಯ ಅಭಿಯಂತರರು, ಕನನಿಸ ಮತ್ತು ಒಚ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ಬೆಂ.ನಗರ/1478/ಆಕಾರ್/2021–22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ
(ರಾಷ್ಟ್ರೀಯ ಪ್ರಾಮುಖ್ಯತಾ ಸಂಸ್ಥೆ), ಬೆಂಗಳೂರು–560029
ಸೂಚನೆ
ಶಾಸನಬದ್ಧ ಪ್ರಾಧಿಕಾರವು ಅನುಮೋದಿಸಿರುವ ವೈದ್ಯಕೀಯ ದಾಖಲೆಗಳ ಧಾರಣ ನೀತಿಯ ಪ್ರಕಾರ, 1974 ರಿಂದ ಮಾರ್ಚ್ 2018ರ ವರೆಗೆ ರೋಗಿಗಳ ವೈದ್ಯಕೀಯ ದಾಖಲೆಗಳನ್ನು ತ್ಯಜಿಸಲಾಗುವುದು. ಯಾವುದೇ ರೋಗಿಯು ದಾಖಲೆಗಳ ಖಾಯಂ ಪ್ರತಿಗಳನ್ನು ಪಡೆದುಕೊಳ್ಳಲು ಇಚ್ಛಿಸಿದಲ್ಲಿ, **mrdinfo@nimhans.ac.in** ಗೆ ಇ–ಮೇಲ್ ಕಳುಹಿಸುವುದರ ಮೂಲಕ ನೋಂದಣಿ ಮಾಡಿಕೊಂಡು, ಈ ಕೆಳಗಿನ ದಾಖಲೆಗಳೊಂದಿಗೆ (ಲಗತ್ತುಗಳಂತೆ), ಈ ಅಧಿಸೂಚನೆ ಪ್ರಕಟಿಸಿದ ದಿನಾಂಕದಿಂದ 15 ದಿನಗಳ ಒಳಗೆ, ವೈದ್ಯಕೀಯ ದಾಖಲೆಗಳ ವಿಭಾಗಕ್ಕೆ ಬೇಡಿಕೆಯನ್ನು ಸಲ್ಲಿಸಬೇಕು.
(1) ಓಪಿಡಿ ಚೀಟಿ / ಆಸ್ಪತ್ರೆ ದಾಖಲೆಗಳು.
(2) ಆಧಾರ್ ಕಾರ್ಡ್ / ಮತದಾರರ ಗುರುತಿನ ಚೀಟಿ / ಪ್ಯಾನ್ ಕಾರ್ಡ್
ಉತ್ತರ ಸಂವಹನವನ್ನು, ಮುಂದಿನ ಕ್ರಮದ ಕುರಿತಾದ ಸೂಚನೆಗಳೊಂದಿಗೆ, ಇ–ಮೇಲ್ ಮೂಲಕ ಕಳುಹಿಸಲಾಗುತ್ತದೆ.
ಟಿಪ್ಪಣಿ: ವೈದ್ಯಕೀಯ–ಕಾನೂನು ಮೊಕದ್ದಮೆ ದಫ್ತರುಗಳಿಗೆ ಹಾಗೂ ಮರಣಹೊಂದಿರುವ ರೋಗಿಗಳ ದಾಖಲೆಗಳಿಗೆ ಅನ್ವಯಿಸುವುದಿಲ್ಲ. ಹೆಚ್ಚಿನ ವಿವರಗಳಿಗೆ ನಿಮ್ಹಾನ್ಸ್ ವೈದ್ಯಕೀಯ ದಾಖಲೆಗಳ ಅಧಿಕಾರಿಯವರನ್ನು ಸಂಪರ್ಕಿಸಿ ದೂರವಾಣಿ ಸಂಖ್ಯೆ: 080–26995520/22. ಸಮಯ: ಕೆಲಸದ ದಿನಗಳಲ್ಲಿ ಬೆಳಗ್ಗೆ 9:00 ರಿಂದ ಸಂಜೆ 4:00ರ ವರೆಗೆ.
ಸಹಿ/–, ನಿರ್ದೇಶಕರು

ಜಿಲ್ಲಾ ಪಂಚಾಯತ್, ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ–ಮಧುಗಿರಿ
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ:09/2020–21
ದಿನಾಂಕ: 04.09.2021
ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ ವ್ಯಾಪ್ತಿಯ ಪಾವಗಡ ತಾಲ್ಲೂಕಿನ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅನ್ನು ಕರೆಯಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಾಗಿ ಅರ್ಹ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿ ಸಲ್ಲಿಸಲು ಹಾಗೂ ಭರ್ತಿಮಾಡಿದ ಟೆಂಡಗಳನ್ನು, ಸ್ವೀಕರಿಸಲು ಟೆಂಡರ್ ಗಳಿಗೆ ದಿ:07.09.2021 ದಿ: 21.09.2021 ರಂದು ಕೊನೆಯ ದಿನಾಂಕ ವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 080–25501216, 080–25501227 ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ http://www. eproc.karnataka,gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಮಧುಗಿರಿ
DIPR/TUM/278/MCA/2021-22

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು
ದೂರವಾಣಿ: 0824-2413205. E-mail ID:supwenlock@gmail.com
ಸಂಖ್ಯೆ: ಎಸ್‌ಯುಪಿ(1)ಡಿ–7/2021–22 ದಿನಾಂಕ: 31.08.2021
ಅಲ್ಪಾವಧಿ ಟೆಂಡರ್ ಅಧಿಸೂಚನೆ(ದ್ವಿ–ಲಕೋಟೆ ಪದ್ಧತಿಯಲ್ಲಿ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ವಿಷಯ: ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು ಇಲ್ಲಿಯ ರೋಗಿಗಳ ಉಪಯೋಗಕ್ಕಾಗಿ ಜನರಿಕ್ ಔಷಧಗಳ ಖರೀದಿಗಾಗಿ ಟೆಂಡರ್ ಅಧಿಸೂಚನೆ.
ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ ಜನರಿಕ್ ಔಷಧಗಳ ಖರೀದಿಗಾಗಿ ಕೆ.ಟಿ.ಪಿ.ಪಿ 1999–2000 ನಿಯಮ ದಂತೆ **ದ್ವಿ–ಲಕೋಟೆ** ಪದ್ಧತಿಯಲ್ಲಿ ಟೆಂಡರ್‌ಗಳನ್ನು e-procurement portal ಮೂಲಕ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಇ–ಟೆಂಡರ್ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಂಡು ಪ್ರೊಸೆಸಿಂಗ್ ಶುಲ್ಕ ರೂ.550/–, ಅಂದಾಜು ಟೆಂಡರ್ ಮೊಬಲಗು ರೂ. 97,00,000/– ಹಾಗೂ ಸರ್ಕಾರ ಆದೇಶ ಸಂಖ್ಯೆ: ಆಇ 675 ವೆಚ್ಚ–12/2020, ಬೆಂಗಳೂರು, ದಿ: 22.12.2020ರಂತೆ ಇ.ಎಂ.ಡಿ ಮೊತ್ತವನ್ನು ಪಾವತಿಸುವ ಬಗ್ಗೆ ಮುಂದಿನ ಆದೇಶದವರೆಗೆ ತಡೆ ಹಿಡಿಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಇ – ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ವೆಬ್‌ಸೈಟ್: **www.eproc.karnataka.gov.in** ನಲ್ಲಿ ದಿ. **07.09.2021** ರಿಂದ ವೀಕ್ಷಿಸಬಹುದು.
(1) ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಪ್ರಾರಂಭ **ದಿನಾಂಕ: 07.09.2021**
(2) ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಅಂತಿಮ **ದಿನಾಂಕ: 21.09.2021** ಅಪರಾಹ್ನ 4.30 ರ ಒಳಗಾಗಿ (3) ಬಿಡ್ ಗಳನ್ನು ತೆರೆಯುವ **ದಿನಾಂಕ: 22.09.2021** (ಅಥವಾ ಅಂತಿಮ ದಿನಾಂಕದಂದು ಸರ್ಕಾರಿ ರಜೆ ಘೋಷಣೆಯಾದರೆ ಮರುದಿನ ಸರ್ಕಾರಿ ಕೆಲಸದ ದಿನದಂದು ಬಿಡ್‌ಗಳನ್ನು ತೆರೆಯಲಾಗುವುದು) ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳ ಸಹಿದಾರರಿಗೆ ಕಾಯ್ದಿರಿಸಿಕೊಳ್ಳಲಾಗಿದೆ.
ಸಹಿ/– ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು.
DIPR/ADM/MCA/452/21-22 dt.09.09.2021

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.5, ಚಿತ್ರದುರ್ಗ.
Ph/Fax: 08194-230102 E-Mail: eeubp.d5cta@gmail.com
ಸಂ.: ಕಾಇಂ/ವಿಜನಿನಿ/ಭಮೇಯೋ/ವಿ–5/ಚಿ/ಪತ್ರಿಕಾ ಪ್ರಕಟಣೆ 2021–22/358 & 733 ದಿನಾಂಕ: 06.09.2021
ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ" ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭಧ್ರಾ ಮೇಲ್ದಂಡೆ ಯೋಜನೆಯಡಿ ಬರುವ ಕಾಮಗಾರಿಯ ಟೆಂಡರ್ ಕರೆಯಲಾಗಿದ್ದು. ಕಾಮಗಾರಿಗಳಿಗೆ ದ್ವಿ–ಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡವಾರು ದರಗಳ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. 1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: 14.09.2021 ಸಂಜೆ 05:00 ಗಂಟೆಯವರೆಗೆ. 2) ಪ್ರಿ–ಬಿಡ್ ಸಭೆಯನ್ನು ಮುಖ್ಯ ಇಂಜಿನಿಯರ್, ವಿಜನಿನಿ, ಭಮೇಯೋ ವಲಯ ಚಿತ್ರದುರ್ಗ ಕಛೇರಿ ಸಭಾಂಗಣದಲ್ಲಿ ದಿನಾಂಕ: 15.09.2021ರಂದು ಬೆಳಗ್ಗೆ 11:00 ಗಂಟೆಗೆ ನಿಗಧಿಪಡಿಸಲಾಗಿದೆ. 3) ಟೆಂಡರ್‌ನ್ನು ದಿನಾಂಕ: 17.09.2021ರಂದು ಸಂಜೆ 04:00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. 4) ತಾಂತ್ರಿಕ ಬಿಡ್ಡುಗಳನ್ನು ದಿನಾಂಕ: 18.09.2021ರಂದು ಸಂಜೆ 04:30 ಗಂಟೆ ನಂತರ ತೆರೆಯಲಾಗುವುದು. 5) ಆರ್ಥಿಕ ಬಿಡ್ಡನ್ನು "ತಾಂತ್ರಿಕ ಬಿಡ್ ಅನುಮೊದನೆಯಾದ ನಂತರ ತೆರೆಯಲಾಗುವುದು. ಟೆಂಡರ್‌ನಲ್ಲಿನ ಮುಂದಿನ ಇತರೆ ಬದಲಾವಣೆ, ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು www.eproc.Karnataka.gov.in/ ವೆಬ್‌ಸೈಟ್‌ನಿಂದ ಪಡೆಯಲು ತಿಳಿಸಲಾಗಿದೆ.
ಕಾಮಗಾರಿಗಳ ವಿವರ: (1) ಚಿತ್ರದುರ್ಗ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮದಕರಿ ವೃತ್ತದಿಂದ ಜೋಗಿಮಟ್ಟಿಗೆ ಹೋಗುವ ರಸ್ತೆಯ ಉಳಿದ ಭಾಗದಲ್ಲಿ ಸಿ.ಸಿ. ರಸ್ತೆ ನಿರ್ಮಾಣ. (VINL/2021-22/RD/WORK_INDENT1701). ಟೆಂಡರ್‌ಗಿಟ್ಟ ಮೊತ್ತ: ರೂ. 2,16,79,711.06/–. (2) ಚಿತ್ರದುರ್ಗ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವೇಕಾನಂದ ನಗರದಿಂದ ಜಿಲ್ಲಾ ಆಸ್ಪತ್ರೆ ಕಡೆಗೆ ಸಿ.ಸಿ. ರಸ್ತೆ ನಿರ್ಮಾಣ. (VJNL/2021-22/RD/WORK_INDENT1702). ಟೆಂಡರ್‌ಗಿಟ್ಟ ಮೊತ್ತ: ರೂ. 2,16,62,327.62/–.
ಸಹಿ/– ಕಾರ್ಯಪಾಲಕ ಅಭಿಯಂತರರು
RO No. 441: DIPR/CTA/MCA/2021-22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ
ನಂ:ಗ್ರಾಕುನೀಮತ್ತುನೈವಿ/ಬಾಗಲಕೋಟ/ಪಿಬಿ–3,4 ಟೆಂಡರ್/2020–21/1178 ದಿನಾಂಕ:08–09–2021
ಅಲ್ಪಾವಧಿ ಇ-ಪ್ರೋಕ್ಯೂರಮೆಂಟ್-ಟೆಂಡರ ಪ್ರಕಟಣೆ
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ: ಬಾಗಲಕೋಟೆ ಜಿಲ್ಲೆ
1) AUGMENTATION OF NAINEGALI MULTIVILLAGE SCHEME & OTHER 9 VILLAGES **Indent No** 34914 -APT-118.25 lakhs
2) Renovation of district water testing labortatory at Bagalkot (2021-22ನೇ ಸಾಲಿನ WQMSP) **Indent No34916** -APT- 27.94 lakhs
3) Lab Package -1:- Providing & Supplying instruments to Bagalkot Division laboratary, jamakhandi & hungunda subdivision laboratary of Bagalkot dist **Indent No** 34915 APT-31.62 lakhs
2) ಲೆಕ್ಕ ಶೀರ್ಷಿಕೆ: ಜಲ ಜೀವನ ಮೀಷನ್–2021–22
3) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್ ಡಿ ಮೊತ್ತ ಇ–ಪ್ರೋಕ್ಯೂರಮೆಂಟ್ ಪ್ರಕಾರ
4) ಟೆಂಡರ್ ಪಾರಂ ಸಲ್ಲಿಸುವ ಅಂತಿಮ ದಿನಾಂಕ:20–09–2021 ಸಾಯಂಕಾಲ 5.30 ಗಂಟೆಯ ವರೆಗೆ
5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:22–09–2021 ಮಧ್ಯಾಹ್ನ 11.00 ಗಂಟೆಯ ನಂತರ
6) ಆರ್ಥಿಕ ಬಿಡ್ ತೆರೆಯುವ ದಿನಾಂಕ: 24–09–2021 11.00 ಗಂಟೆಯ ನಂತರ
7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ
8) ಪ್ರೀ–ಬಿಡ್ ಮಿಟಿಂಗ್ ದಿನಾಂಕ: 18–09–2021
ಟಿಪ್ಪಣಿ :– 1) ಟೆಂಡರ ಮೊತ್ತಕ್ಕಿಂತ ಕಡಿಮೆ ದರವನ್ನು ನಮೂದಿಸಿದಲ್ಲಿ ಒಟ್ಟು ವ್ಯತ್ಯಾಸ ಮೊತ್ತದ DD/FDR ನ್ನು ಕಾರ್ಯನಿರ್ವಾಹಕ ಇಂಜಿನೀಯರರು, **ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ** ಇವರ ಹೆಸರಿನಲ್ಲಿ ಪಡೆದು ಸ್ಕ್ಯಾನ್ ಮಾಡಿ ಆನ್‌ಲೈನ್ ಮುಖಾಂತರ ಟೆಂಡರ ಜೊತೆಗೆ ಅಪ್‌ಲೋಡ್ ಮಾಡಬೇಕು. ಟೆಂಡರ ಅನುಮೋದನೆಗಿಂತ ಮುಂಚಿತವಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.
2) ಗುತ್ತಿಗೆ ಮೊತ್ತಕ್ಕೆ 12% GSTಯನ್ನು ಸೇರಿಸಿ ಕೆಲಸದ ಆದೇಶ ನೀಡಲಾಗುವುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾಕುನೀ ಮತ್ತು ನೈ ವಿಭಾಗ, ಬಾಗಲಕೋಟ
ವಾ.ಸಾ.ಇ/ಬಾ/280/2021–22/ದೇಶಪಾಂಡೆಪಬ್ಲಿಸಿಟಿ
ಕೋವಿಡ್–19–ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೊಂಕು ದೂರವಿಡಿ–ಸೊಂಕಿತರನ್ನಲ್ಲ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಾನನಷ್ಟ ಮೊಕದ್ದಮೆ: ಕಂಗನಾ ಅರ್ಜಿ ವಜಾ

ಮುಂಬೈ (ಪಿಟಿಐ): ತಮ್ಮ ವಿರುದ್ಧ ದಾಖಲಾಗಿರುವ ಮಾನನಷ್ಟ ಮೊಕದ್ದಮೆಯನ್ನು ರದ್ದುಪಡಿಸಬೇಕು ಎಂದು ನಟಿ ಕಂಗನಾ ರನೌತ್ ಸಲ್ಲಿಸಿದ್ದ ಅರ್ಜಿಯನ್ನು ಬಾಂಬೆ ಹೈಕೋರ್ಟ್ ವಜಾಗೊಳಿಸಿದೆ.

ಕಳೆದ ವರ್ಷ ನವೆಂಬರ್‌ನಲ್ಲಿ ಅಂಧೇರಿ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಗೀತ ರಚನೆಕಾರ, ಲೇಖಕ ಜಾವೇದ್ ಅಖ್ತರ್ ಅವರು ಕಂಗನಾ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದರು. ಟಿವಿ ಸಂದರ್ಶನಗಳಲ್ಲಿ ತನ್ನ ವಿರುದ್ಧ ಮಾನಹಾನಿ ಮತ್ತು ಆಧಾರರಹಿತ ಆರೋಪಗಳನ್ನು ಮಾಡಿದ್ದಾರೆ ಎಂದು ಅಖ್ತರ್ ಆರೋಪಿಸಿದ್ದರು.

ಕಂಗನಾ ರನೌತ್

'ಅಖ್ತರ್ ದೂರಿನ ಅನ್ವಯ ಪೊಲೀಸರು ನಡೆಸಿರುವ ತನಿಖೆ ಏಕಪಕ್ಷೀಯವಾಗಿದೆ. ನನ್ನ ಕಕ್ಷಿದಾರರ ವಿಚಾರಣೆಯನ್ನೇ ನಡೆಸಿಲ್ಲ' ಎಂದು ಕಂಗನಾ ಪರ ವಕೀಲರಾದ ಸಿದ್ದಿಕಿ ಈ ಹಿಂದೆ ಹೈಕೋರ್ಟ್‌ಗೆ ತಿಳಿಸಿದ್ದರು ಹಾಗೂ ಮೊಕದ್ದಮೆ ರದ್ದುಪಡಿಸಲು ಮನವಿ ಮಾಡಿದ್ದರು.

ಅರ್ಜಿಯ ವಿಚಾರಣೆ ನಡೆಸಿದ್ದ ಬಾಂಬೆ ಹೈಕೋರ್ಟ್ ಏಕಸದಸ್ಯ ಪೀಠವು ಆದೇಶ ಕಾಯ್ದಿರಿಸಿತ್ತು.

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗ, ಕೊಪ್ಪಳ ಇವರ ಕಾರ್ಯಾಲಯ
ಇ–ಮೇಲ್– dcfsfkpl1@gmail.com
ಸಂಖ್ಯೆ:ಬಿಜೆಟಿ/SMAF/ನರ್ಸರಿ/ಅಭಿವೃದ್ಧಿ/ಸಿಆರ್– /2021–22 ದಿನಾಂಕ: 7–9–2021
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಇಪ್ರೋಕ್ಯೂರ್‌ಮೆಂಟ್ ಮೂಲಕ)
ಕೊಪ್ಪಳ ಸಾಮಾಜಿಕ ಅರಣ್ಯ ವಿಭಾಗದಲ್ಲಿ 2021–22ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಲೆಕ್ಕ ಶೀರ್ಷಿಕೆ "2406–01–102–2–38–ಕೃಷಿಅರಣ್ಯ ಉಪ–ಅಭಿಯಾನ–139–ಪ್ರಧಾನ ಕಾಮಗಾರಿಗಳು" ಯೋಜನೆಯಡಿ ನರ್ಸರಿ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಅಲ್ಪಾವಧಿ ಇ–ಟೆಂಡರ್‌ನ್ನು ಆಹ್ವಾನಿಸಿದ್ದು, ನೊಂದಾಯಿತ ಅರಣ್ಯ ಕಂ ಪಿ.ಡ್ಲೂ.ಡಿ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಮುಂದೆ ಹೇಳಿದ ವೆಬ್‌ಸೈಟ್‌ನ್ನು ಆನ್‌ಲೈನ್ ಮುಖಾಂತರ ಸಂಪರ್ಕಿಸುವುದು. https://eproc.karnataka.gov.in **ಕಾಮಗಾರಿಗಳ ವಿವರ: ವಲಯ:** 1. ಕೊಪ್ಪಳ. **ಕಾಮಗಾರಿ ವಿವರ:** ಚಿಲವಾಡಗಿ ನರ್ಸರಿಗೆ ಚೈನ್‌ಲಿಂಕ್ ಫೆನ್ಸಿಂಗ್ ನಿರ್ಮಾಣ, ಪೈಪ್‌ಲೈನ್ ನಿರ್ಮಾಣ, ಶೆಡ್‌ನೆಟ್ ನಿರ್ಮಾಣ ಹಾಗೂ ಇತರೇ ಅಭಿವೃದ್ಧಿ ಕಾಮಗಾರಿ. **ಮೊತ್ತ:** 960427.00. **ವರ್ಕ ಇಂಡೆಂಟ್ ಸಂ:** 43123. 2. ಗಂಗಾವತಿ. **ಕಾಮಗಾರಿ ವಿವರ:** ವಿಠಲಾಪುರ ನರ್ಸರಿಗೆ ಚೈನ್‌ಲಿಂಕ್ ಫೆನ್ಸಿಂಗ್ ನಿರ್ಮಾಣ, ಪೈಪ್‌ಲೈನ್ ನಿರ್ಮಾಣ, ಶೆಡ್‌ನೆಟ್ ನಿರ್ಮಾಣ ಹಾಗೂ ಇತರೇ ಅಭಿವೃದ್ಧಿ ಕಾಮಗಾರಿ. **ಮೊತ್ತ:** 784522.00. **ವರ್ಕ ಇಂಡೆಂಟ್ ಸಂ:** 43124. 3. ಯಲಬುರ್ಗಾ. **ಕಾಮಗಾರಿ ವಿವರ:** ಕುದರಿಕೋಟಗಿ ನರ್ಸರಿಗೆ ಚೈನ್‌ಲಿಂಕ್ ಫೆನ್ಸಿಂಗ್ ನಿರ್ಮಾಣ, ಪೈಪ್‌ಲೈನ್ ನಿರ್ಮಾಣ ಹಾಗೂ ಇತರೇ ಅಭಿವೃದ್ಧಿ ಕಾಮಗಾರಿ. **ಮೊತ್ತ:** 1000000.00. **ವರ್ಕ ಇಂಡೆಂಟ್ ಸಂ:** 43125. **ಒಟ್ಟು: 2744949.00**
ಟೆಂಡರ್ ವೇಳಾಪಟ್ಟಿ: 1. ಟೆಂಡರ್ ವಿಚಾರಣೆ / ಸ್ಪಷ್ಟಿಕರಣಕ್ಕೆ ಕೊನೆಯ ದಿನಾಂಕ: **22–9–2021 ಸಾಯಂಕಾಲ 4.00 ಗಂಟೆಗೆ.** 2. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **27–9–2021 ಸಾಯಂಕಾಲ 4.00 ಗಂಟೆಗೆ.** 3. ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **28–9–2021 ಸಾಯಂಕಾಲ 4.15 ಗಂಟೆಗೆ.** 4. ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **29–9–2021 ಸಾಯಂಕಾಲ 4.30 ಗಂಟೆಗೆ**
ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛೆಯಿಸುವ ಟೆಂಡರ್‌ದಾರರು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಸಲ್ಲಿಸುವುದು ಹೆಚ್ಚಿನ ವಿವರಗಳಿಗಾಗಿ 08539–295453 ದೂರವಾಣಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/258/ಎಂಸಿಎ/2021–22

ಕರ್ನಾಟಕ ಸರ್ಕಾರ (ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ
ಕ್ರಸಂ ಃ ಕಾನಿಇಂಧಾ/ಪಿಬಿ–3/ಗುತ್ತಿಗೆ/2021–22/3193 ದಿನಾಂಕ : 06/09/2021
ಅಲ್ಪಾವಧಿ ಟೆಂಡರ ಪ್ರಕಟಣೆ – I.F.T – KW- 1
ಇ–ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗೆ e-Proc- ಸ್ಟ್ಯಾಂಡರ್ಡ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ– ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **www.eproc.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಮಾಹಿತಿ ಪಡೆಯಬಹುದು. ಕಾಮಗಾರಿಯ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ.

ಕ್ರ. ಸಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಭರ್ತಿ ಮಾಡಿದ ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ (e-Proc)	ತಾಂತ್ರಿಕ ಬಿಡ್ ತೆರೆಯುವ ದಿನಾಂಕ (e-Proc)	ಆರ್ಥಿಕ ಬಿಡ್ ತೆರೆಯುವ ದಿನಾಂಕ (e-Proc)
2021–22 ನೇ ಸಾಲಿನ 3054–03–337–0–05–200 ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆ ಅಡಿಯ ಕಾಮಗಾರಿ					
1	IMPROVEMENTS TO GAJENDRAGAD SORAB SH-136 FROM KM.78.95 TO KM.79.60 AND IMPROVEMENTS TO PAVEDIP AT KM.79.35 IN NAVALGUND TALUK OF DHARWAD DISTRICT KPWD/2021-22/RD/WORK_INDENT 141186	170.00	18–09–2021	20–09–2021	21–09–2021

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಲೋ.ಬಂ. ಮತ್ತು ಒ.ಜ.ಸಾ. ಇಲಾಖೆ, ಧಾರವಾಡ ವಿಭಾಗ, ಧಾರವಾಡ
ವಾಸಾಸಂಇ/ಧಾರವಾಡ/ಎಂಸಿಎ/478/2021–22

ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ –577501
ದೂರವಾಣಿ: 08194 – 225713 ಇ–ಮೇಲ್: dudc_ctg@yahoo.co.ln
ನಂ. ಡಿಯುಡಿಸಿ/ನಗರೋತ್ಥಾನ(ಮುನಿಸಿಪಾಲಿಟಿ)–3/ ಸಿ.ಆರ್102/2017–18 ದಿನಾಂಕ: 06.09.2021
ಮರು ಅಲ್ಪಾವಧಿ ಟೆಂಡರ್ ಪ್ರಕಟಣೆ
ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ರವರು ನಗರೋತ್ಥಾನ (ಮುನಿಸಿಪಾಲಿಟಿ)–3 ರ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಪುರಸಭೆಯ ಕಾಮಗಾರಿಗಳಿಗೆ ದ್ವಿ–ಲಕೋಟೆಯಲ್ಲಿ ಕೆಡಬ್ಲ್ಯೂ–4 1ನೇ ದರ್ಜೆ ಟೆಂಡರ್ ದಾಸ್ತವೇಜಿನಂತೆ, ಪಿ.ಡಬ್ಲ್ಯೂಡಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ (ಸಿವಿಲ್) 2ನೇ ದರ್ಜೆ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
ಹೊಸದುರ್ಗ ಪುರಸಭೆ
ಕಾಮಗಾರಿಯ ವಿವರ: ಹೊಸದುರ್ಗ ಪುರಸಭೆಗೆ ಸೇರಿದ ಖಾಲಿ ಜಾಗದಲ್ಲಿ ಖಾಸಗಿ ಬಸ್ ನಿಲ್ದಾಣ ಸಂತೆ ಹೊಂಡದ ಉತ್ತರಕ್ಕಿರುವ 24.00 x 25.00 ಮೀಟರ್ ಅಳತೆಯ ವಾಣಿಜ್ಯ ಸಂಕೀರ್ಣ ಕಟ್ಟಡ ನಿರ್ಮಿಸುವ ಕಾಮಗಾರಿ. DMA/2020-21/BD/WORK_INDENT 112143/CALL-2. **ಕಾಮಗಾರಿಯ ಅಂದಾಜು ಮೊತ್ತ:** ರೂ. 116.46 ಲಕ್ಷಗಳು, **ಟೆಂಡರ್‌ಗಿಟ್ಟ ಮೊತ್ತ:** ರೂ. 97.46 ಲಕ್ಷಗಳು, **ಇಎಂಡಿ ಮೊತ್ತ:** ಸರ್ಕಾರದ ನಿರ್ದೇಶನದಂತೆ ಠೇವಣಿ ಮೊತ್ತಕ್ಕೆ ಇ–ಪೋರ್ಟಲ್‌ನಲ್ಲಿ ದಾಖಲೆಗಳನ್ನು ಅಪ್‌ಲೋಡ್ ಮಾಡುವುದು, **ಕಾಮಗಾರಿಯ ಅವಧಿ (ಮಳೆಗಾಲ ಸೇರಿದಂತೆ):** 12 ತಿಂಗಳು,
ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿ, ಟೆಂಡರ್ ದಾಖಲೆಗಳು ಮತ್ತು ಇತರೆ ಸೂಚನೆಗಳನ್ನು (www.eproc.karnataka.gov.in) ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಹಾಗೂ ಠೇವಣಿ ಮತ್ತು ಟೆಂಡರ್ ಫೀಗಳನ್ನು ಆನ್‌ಲೈನ್‌ನಲ್ಲಿ (www.eproc.karnataka.gov.in) ಪಾವತಿಸತಕ್ಕದ್ದು.
ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಪೂರ್ವಭಾವಿ ಸಭೆಯ **ದಿನಾಂಕ: 14.09.2021ರ ಬೆಳಿಗ್ಗೆ 11:00 ಗಂಟೆಗೆ.** 2) ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 20.09.2021ರ ಸಂಜೆ 5.30 ಗಂಟೆಯವರೆಗೂ.** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 22.09.2021ರ ಸಂಜೆ 5.30 ಗಂಟೆಗೆ.** 4) ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್‌ನ ಅನುಮೋದನೆಯ ನಂತರ ತೆರೆಯಲಾಗುವುದು.
ಟೆಂಡರ್ ನಿಬಂಧನೆಗಳ ಬಗ್ಗೆ ಏನಾದರೂ ಬದಲಾವಣೆಯಾದರೂ ಅಥವಾ ದಿನಾಂಕ ಮುಂದೂಡಿದರೂ ಸಹ ಈ ಬಗ್ಗೆ ಮಾಹಿತಿಯನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸುವುದಿಲ್ಲ.
ಸಹಿ/– ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ
ವಾಸಾಸಂಇ/ಚಿತ್ರದುರ್ಗ/ಜಿಎ/435/2020–21

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಹೊಸಪೇಟೆ, ವಿಜಯನಗರ ಜಿಲ್ಲೆ, ಕರ್ನಾಟಕ – ೫೮೩ ೨೭೬
ಕವಿಹಂ:ಕುಸ:371ಜೆ–ಬೋಧಕ ನೇಮಕಾತಿ:2021–22 ದಿನಾಂಕ : 03.09.2021
ಬೋಧಕ ಹುದ್ದೆಗಳ ನೇಮಕಾತಿ ಅಧಿಸೂಚನೆ–2021
ವಿಷಯ: ಕನ್ನಡ ವಿಶ್ವವಿದ್ಯಾಲಯದಲ್ಲಿ ಸ್ಥಳೀಯ ವೃಂದದಲ್ಲಿ (ಕಲ್ಯಾಣ ಕರ್ನಾಟಕ 371ಜೆ ಗೆ ಅನ್ವಯಿಸಿ) ರಿಕ್ತವಿರುವ ಬೋಧಕ ಹುದ್ದೆಗಳ ಖಾಯಂ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಕುರಿತು.
ಉಲ್ಲೇಖ: 1.ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಅನುಮೋದನೆ ದಿನಾಂಕ 13.01.2020.
2.ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಅನುಮತಿ ಪತ್ರ ಸಂಖ್ಯೆ: ಇಡಿ 18 ಕೆವಿವಿ 2020 ದಿ. 17.08.2021
3.ಮಾನ್ಯ ಕುಲಪತಿಯವರ ಅನುಮೋದನೆ ಕಂಡಿಕೆ 12 ದಿ. 03.09.2021
ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಯುಜಿಸಿ ರೆಗ್ಯುಲೇಷನ್ 2018ರ ರೀತ್ಯಾ ರಿಕ್ತ ಬೋಧಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಿದ ನಿಗದಿತ ನಮೂನೆಯ ಎಂಟು ಸೆಟ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ರಿಕ್ತ ಬೋಧಕ ಹುದ್ದೆಗಳ ವಿಭಾಗವಾರು ಮೀಸಲಾತಿಯು ಕೆಳಕಂಡಂತಿದೆ. ಹೆಚ್ಚಿನ ವಿವರಗಳು ಮತ್ತು ಷರತ್ತುಗಳನ್ನು ಕನ್ನಡ ವಿಶ್ವವಿದ್ಯಾಲಯದ ಜಾಲತಾಣ www.kannadauniversity.org ರಲ್ಲಿ ಪ್ರಕಟಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿ. 08.10.2021

ರಿಕ್ತ ಹುದ್ದೆಗಳ ವಿಭಾಗವಾರು ಮೀಸಲಾತಿ ವಿವರಗಳು

ಹುದ್ದೆ	ವಿಭಾಗ		ಆದ್ಯತೆ ಮೀಸಲಾತಿ	ಆದ್ಯತೆ ಮೀಸಲಾತಿಯ ಅಭ್ಯರ್ಥಿಯು ಲಭ್ಯವಾಗದಿದ್ದಲ್ಲಿ ಬದಲಿ ಮೀಸಲಾತಿ
ಪ್ರಾಧ್ಯಾಪಕರು – 1 ವೇತನಶ್ರೇಣಿ ರೂ. 144200–218200	ಕನ್ನಡ ಸಾಹಿತ್ಯ ಅಧ್ಯಯನ	1	ಸಾಮಾನ್ಯ	–
ಸಹ ಪ್ರಾಧ್ಯಾಪಕರು – 7 ವೇತನಶ್ರೇಣಿ ರೂ. 131400–217100	ಕನ್ನಡ ಸಾಹಿತ್ಯ ಅಧ್ಯಯನ / ಮಹಿಳಾ ಅಧ್ಯಯನ	1	ಸಾಮಾನ್ಯ	–
		1	ಪ್ರವರ್ಗ–1	–
	ಜಾನಪದ ಅಧ್ಯಯನ	1	ಸಾಮಾನ್ಯ	–
	ಭಾಷಾಂತರ ಅಧ್ಯಯನ (ಇಂಗ್ಲಿಷ್)	1	ಸಾಮಾನ್ಯ	–
	ಅಭಿವೃದ್ಧಿ ಅಧ್ಯಯನ (ಗ್ರಾಮೀಣಾಭಿವೃದ್ಧಿ)	1	ಸಾಮಾನ್ಯ (ಗ್ರಾಮೀಣ)	ಸಾಮಾನ್ಯ
	ಅಭಿವೃದ್ಧಿ ಅಧ್ಯಯನ (ಅರ್ಥಶಾಸ್ತ್ರ)	1	ಸಾಮಾನ್ಯ (ಮಹಿಳೆ)	ಸಾಮಾನ್ಯ
	ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ	1	ಸಾಮಾನ್ಯ	–
ಸಹಾಯಕ ಪ್ರಾಧ್ಯಾಪಕರು – 9 ವೇತನಶ್ರೇಣಿ ರೂ. 57700–182400	ಕನ್ನಡ ಸಾಹಿತ್ಯ ಅಧ್ಯಯನ / ಮಹಿಳಾ ಅಧ್ಯಯನ	1	ಸಾಮಾನ್ಯ (ಕನ್ನಡ ಮಾಧ್ಯಮ)	ಸಾಮಾನ್ಯ
		2	ಸಾಮಾನ್ಯ	–
	ಕನ್ನಡ ಸಾಹಿತ್ಯ (ನಾಟಕ)	1	ಸಾಮಾನ್ಯ	–
	ಭಾಷಾಂತರ ಅಧ್ಯಯನ (ಇಂಗ್ಲಿಷ್)	1	ಪ.ಜಾ. (ವಿಕಲಚೇತನ)	ಪ.ಜಾ.
	ಶಾಸನಶಾಸ್ತ್ರ	1	ಸಾಮಾನ್ಯ (ಮಾಜಿ ಸೈನಿಕ)	ಸಾಮಾನ್ಯ
	ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ	1	ಸಾಮಾನ್ಯ	–
	ಅಭಿವೃದ್ಧಿ ಅಧ್ಯಯನ (ಸಮಾಜಶಾಸ್ತ್ರ)	1	ಸಾಮಾನ್ಯ	–
	ಸಂಗೀತ ಮತ್ತು ನೃತ್ಯ	1	2 ಎ (ವಿಕಲಚೇತನ)	2 ಎ

ಡಿಐಪಿಆರ್/ಬಳ್ಳಾರಿ/06/ಎಂಸಿಎ/2020–21
ಸಹಿ/– ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಡ್ರಗ್ಸ್ ಪ್ರಕರಣ: ಇ.ಡಿ. ಎದುರು ಹಾಜರಾದ ತೆಲುಗು ನಟ ರವಿತೇಜ

ಹೈದರಾಬಾದ್ (ಪಿಟಿಐ): ನಾಲ್ಕು ವರ್ಷಗಳ ಹಿಂದೆ ನಗರದಲ್ಲಿ ನಡೆದಿದ್ದ 'ಡ್ರಗ್ಸ್ ಪ್ರಕರಣ'ಕ್ಕೆ ಸಂಬಂಧಿಸಿದಂತೆ ತೆಲುಗು ಸಿನಿಮಾ ರಂಗದ ಖ್ಯಾತ ನಟ ರವಿತೇಜ ಗುರುವಾರ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಎದುರು ವಿಚಾರಣೆಗೆ ಹಾಜರಾದರು.


ನಟ ರವಿತೇಜ

2017ರಲ್ಲಿ ನಡೆದ ಡ್ರಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ವಿಚಾರಣೆಗೆ ಹಾಜರಾಗುವಂತೆ ನಟ ರವಿತೇಜ ಸೇರಿ ತೆಲುಗು ಸಿನಿಮಾ ರಂಗದ ನಟರು ಮತ್ತು ನಿರ್ದೇಶಕರು ಸೇರಿ ಹತ್ತು ಮಂದಿಗೆ ನೋಟಿಸ್ ಜಾರಿ ಮಾಡಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ಮಾಪಕ ಪುರಿ ಜಗನ್ನಾಥ, ನಟಿಯರಾದ ಚಾರ್ಮಿ ಕೌರ್ ಮತ್ತು ರಕುಲ್ ಪ್ರೀತ್ ಸಿಂಗ್, ನಟರಾದ ನಂದು ಮತ್ತು ರಾಣಾ ದಗ್ಗುಬಾಟಿ ಅವರು ಈಗಾಗಲೇ ಜಾರಿ ನಿರ್ದೇಶನಾಲಯದ ಎದುರು ವಿಚಾರಣೆಗೆ ಹಾಜರಾಗಿದ್ದಾರೆ.

'ಲೋಕಪಾಲ ಆದೇಶ ಮರುಪರಿಶೀಲನೆ: ಸದ್ಯ ಕಾಯ್ದೆಯಲ್ಲಿ ಅವಕಾಶವಿಲ್ಲ'

ನವದೆಹಲಿ (ಪಿಟಿಐ): 'ಲೋಕಪಾಲ ಹೊರಡಿಸಿದ್ದ ಆದೇಶದ ಮರುಪರಿಶೀಲನೆ ಕೋರಿದ್ದ ಮನವಿ, ಅರ್ಜಿಯನ್ನು ಪುರಸ್ಕರಿಸಲಾಗದು. ಕಾಯ್ದೆಯಲ್ಲಿ ಇದಕ್ಕೆ ಅವಕಾಶವಿಲ್ಲ' ಎಂದು ದೂರುದಾರರಿಗೆ ಲೋಕಪಾಲ ತಿಳಿಸಿದೆ.

ಭ್ರಷ್ಟಾಚಾರ ತಡೆಗೆ ರಚಿಸಲಾಗಿರುವ ಲೋಕಪಾಲವು, ಆದೇಶವನ್ನು ಮರುಪರಿಶೀಲನೆ ಕೋರಿ ಕೆಲ ದೂರುದಾರರು ಅರ್ಜಿ ಸಲ್ಲಿಸಿರುವುದನ್ನು ಉಲ್ಲೇಖಿಸಿ ಈ ಮಾಹಿತಿ ನೀಡಿದೆ.

ಲೋಕಪಾಲ ಮತ್ತು ಲೋಕಾಯುಕ್ತ ಕಾಯ್ದೆ 2013ರ ಅನುಸಾರ ಆದೇಶ ಮರುಪರಿಶೀಲನೆಗೆ ಅವಕಾಶವಿಲ್ಲ. ಹೀಗಾಗಿ, ಇಂಥ ಯಾವುದೇ ಮನವಿಯನ್ನು ಪರಿಗಣಿಸುವುದಿಲ್ಲ ಎಂದು ಈ ಕುರಿತ ಪ್ರಕಟಣೆಯಲ್ಲಿ ತಿಳಿಸಿದೆ.

ಈ ವಿಷಯ ಸಂಸದೀಯ ಸಮಿತಿ ಮುಂದೆಯೂ ಬಂದಿದ್ದು, ಕಳೆದ ಮಾರ್ಚ್ ತಿಂಗಳಲ್ಲಿ ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ನಿಯಮ ತಿದ್ದುಪಡಿ ಸಾಧ್ಯತೆ ಕುರಿತು ಪರಿಶೀಲಿಸಲು ಶಿಫಾರಸು ಮಾಡಿದೆ ಎಂದು ಸಮಿತಿಯು ಬೇಡಿಕೆ ಮತ್ತು ಅನುದಾನ ಕುರಿತ 106ನೇ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಆದೇಶ ಮರುಪರಿಶೀಲನೆಗೆ ಅವಕಾಶ ಇರಬೇಕು ಎಂಬ ಅರ್ಜಿಗಳ ಪರಿಶೀಲನೆಗಾಗಿ ಲೋಕಪಾಲ ಅಧ್ಯಕ್ಷ ಪಿನಾಕಿ ಚಂದ್ರಘೋಷ್ ಅವರು ತ್ರಿಸದಸ್ಯರ ಸಮಿತಿಯನ್ನು ಜ. 6.2020ರಲ್ಲಿ ರಚಿಸಿದ್ದರು. ನ್ಯಾಯಮೂರ್ತಿಗಳಾದ ಅಭಿಲಾಷಾ ಕುಮಾರಿ, ಡಿ.ಕೆ.ಜೈನ್ ಮತ್ತು ಐ.ಪಿ.ಗೌತಮ್ ಅವರಿದ್ದ ಸಮಿತಿಯು, ನಿಯಮ ತಿದ್ದುಪಡಿ ಮಾಡಬೇಕು ಎಂಬುದಾಗಿ ಸರ್ಕಾರ ಪರಿಶೀಲಿಸಬಹುದು ಎಂದು ಶಿಫಾರಸು ಮಾಡಿತ್ತು.

ನಿಫಾ: ಬಾಲಕನ ಸಂಪರ್ಕದಲ್ಲಿದ್ದವರ ವರದಿ ನೆಗೆಟಿವ್

ಕೋಯಿಕ್ಕೋಡ್ (ಪಿಟಿಐ): 'ನಿಫಾ ವೈರಸ್ ಸೋಂಕಿನಿಂದ ಮೃತಪಟ್ಟ 12 ವರ್ಷದ ಬಾಲಕನ ಸಂಪರ್ಕದಲ್ಲಿದ್ದ 61 ಜನರ ಪರೀಕ್ಷಾ ವರದಿ ನೆಗೆಟಿವ್ ಬಂದಿದ್ದು, ಯಾರಿಗೂ ಸೋಂಕು ತಗುಲಿಲ್ಲ' ಎಂದು ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ಗುರುವಾರ ತಿಳಿಸಿದ್ದಾರೆ.

'ಬುಧವಾರ46ಮಂದಿಯಮಾದರಿಯನ್ನು ಪರೀಕ್ಷೆಗೆ ಕಳುಹಿಸ ಲಾಗಿತ್ತು. ಅವೆಲ್ಲವೂ ನೆಗಟಿವ್ ಬಂದಿದ್ದವು. ನಂತರ ಕಳುಹಿಸಿದ್ದ 15 ಜನರ ಮಾದರಿಯೂ ನೆಗೆಟಿವ್ ಎಂದು ದೃಢಪಟ್ಟಿದೆ' ಎಂದು ಸಚಿವರು ಹೇಳಿದ್ದಾರೆ.

ಬಿಬಿಎಂಪಿ ಕೇಂದ್ರ ಕಚೇರಿ ಎದುರು ಪ್ರತಿಭಟನೆ • 12 ಅಡಿ ಎತ್ತರದ ಗಣಪತಿ ಮೂರ್ತಿ ತಂದ ಪ್ರತಿಭಟನಕಾರರು

ನಿರ್ಬಂಧ: ಮುಖ್ಯ ಆಯುಕ್ತರ ಕಾರಿಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ವಿಧಿಸಿರುವ ನಿರ್ಬಂಧಗಳನ್ನು ಸಡಿಲಿಕೆ ಮಾಡಬೇಕು' ಎಂದು ಒತ್ತಾಯಿಸಿ ನಗರದ ಬಿಬಿಎಂಪಿ ಕೇಂದ್ರ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದ 'ಬೆಂಗಳೂರು ಮಹಾನಗರ ಗಣೇಶೋತ್ಸವ ಸಮಿತಿ' ಸದಸ್ಯರು, ಮುಖ್ಯ ಆಯುಕ್ತ ಗೌರವ್ ಗುಪ್ತ ಅವರ ಕಾರು ಅಡ್ಡಗಟ್ಟಿ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ), ಹಿಂದೂ ಜಾಗರಣ ವೇದಿಕೆ ಹಾಗೂ ಬಜರಂಗದಳ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಗಣಪತಿ ಮೂರ್ತಿಗಳನ್ನು ಹೊತ್ತು ತಂದಿದ್ದ ಪ್ರತಿಭಟನಕಾರರು, 'ನಿರ್ಬಂಧಗಳನ್ನು ಕೂಡಲೇ ಸಡಿಲಿಕೆ ಮಾಡಬೇಕು. ಹಬ್ಬ ಆಚರಿಸಲು ಮುಕ್ತ ವಾತಾವರಣ ನಿರ್ಮಿಸಬೇಕು' ಎಂದು ಒತ್ತಾಯಿಸಿದರು.

ಕಚೇರಿ ಎದುರು ಸೇರಿದ್ದ 200ಕ್ಕೂ ಹೆಚ್ಚು ಮಂದಿ, ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿ ವಿರುದ್ಧ ಘೋಷಣೆ ಕೂಗಿದರು. ಮುಂಜಾಗ್ರತಾ ಕ್ರಮವಾಗಿ ಕಚೇರಿ ಸುತ್ತಲೂ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಪೊಲೀಸರು ಕಾವಲು ಕಾಯುತ್ತಿದ್ದರು.

ಪ್ರತಿಭಟನೆ ಚುರುಕುಗೊಳಿಸಿದ ಸಮಿತಿ ಸದಸ್ಯರು, ಬ್ಯಾರಿಕೇಡ್‌ಗಳನ್ನು ತಳ್ಳಿ ಕಚೇರಿಯೊಳಗೆ ಹೊರಟಿದ್ದರು. ಸ್ಥಳದಲ್ಲಿದ್ದ ಕೇಂದ್ರ ವಿಭಾಗದ ಪೊಲೀಸರು, ಪ್ರತಿಭಟನಕಾರರನ್ನು ತಡೆದು ನಿಲ್ಲಿಸಿದರು. ಇದೇ ಸಂದರ್ಭದಲ್ಲೇ ಗೌರವ್ ಗುಪ್ತ ಅವರು ಕಾರಿನಲ್ಲಿ ಸ್ಥಳಕ್ಕೆ ಬಂದಿದ್ದರು. ಕಾರು ಅಡ್ಡಗಟ್ಟಿದ್ದ ಪ್ರತಿಭಟನಕಾರರು, ಕಾರಿನ ಮುಂದೆ ಮಲಗಿ ಪ್ರತಿಭಟನೆ ಮುಂದುವರಿಸಿದರು. ಮಧ್ಯಪ್ರವೇಶಿಸಿದ್ದ ಪೊಲೀಸರು, ಪ್ರತಿಭಟನಕಾರರನ್ನು ಎಳೆದು ಕಾರು ಹೋಗಲು ದಾರಿ ಮಾಡಿಕೊಟ್ಟರು. ಪೊಲೀಸರು ಹಾಗೂ ಪ್ರತಿಭಟನಕಾರರ ನಡುವೆ ತಳ್ಳಾಟ ನಡೆಯಿತು. ಸ್ಥಳದಲ್ಲಿದ್ದವರನ್ನು ಚದುರಿಸಿದ ಪೊಲೀಸರು, ಪರಿಸ್ಥಿತಿ ತಿಳಿಗೊಳಿಸಿದರು.

ಪ್ರತಿಭಟನೆ ವೇಳೆ ಬ್ಯಾರಿಕೇಡ್‌ಗಳನ್ನು ಪ್ರತಿಭಟನಕಾರರು ಎಳೆದಾಡಿದರು – ಪ್ರಜಾವಾಣಿ ಚಿತ್ರ

> **ಗಣೇಶೋತ್ಸವ ಆಚರಣೆ ಸಂಬಂಧ ಸರ್ಕಾರದ ಮಾರ್ಗ ಸೂಚಿಗೆ ಬಿಬಿಎಂಪಿ ವ್ಯತಿರಿಕ್ತ ಅಂಶ ಸೇರಿಸಿಲ್ಲ. ವಾರ್ಡ್‌ಗೆ ಒಂದೇ ಗಣೇಶ ಎಂಬ ನಿರ್ಬಂಧದ ಬಗ್ಗೆ ಅಧಿಕಾರಿಗಳು ಚರ್ಚಿಸಿ ತೀರ್ಮಾನಿಸುತ್ತಾರೆ**
> **ಗೌರವ್ ಗುಪ್ತ**
> ಬಿಬಿಎಂಪಿ ಮುಖ್ಯ ಆಯುಕ್ತ

'ಪ್ರತಿಭಟನೆ ಸಂದರ್ಭದಲ್ಲಿ ಗೊಂದಲದಿಂದಾಗಿ ಪರಸ್ಪರ ತಳ್ಳಾಟ ನಡೆಯಿತು. ನಂತರ, ಮುಖಂಡರನ್ನು ಸಮಾಧಾಪಡಿಸಲಾಯಿತು. ಶಾಂತಿಯುತವಾಗಿ ಪ್ರತಿಭಟನೆ ಅಂತ್ಯಗೊಂಡಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ನಮ್ಮ ಹಬ್ಬಕ್ಕೆ ನಿರ್ಬಂಧ ಏಕೆ? ; 'ದೇಶದ ಪ್ರತಿಯೊಬ್ಬ ಪ್ರಜೆಯೂ ತಮ್ಮ ಧಾರ್ಮಿಕ ಆಚರಣೆಗಳನ್ನು ನೆರವೇರಿಸಲು ಸಂವಿಧಾನ ಮುಕ್ತ ಅವಕಾಶ ನೀಡಿದೆ. ಆದರೆ, ನಮ್ಮ ಧರ್ಮದ ಹಬ್ಬಕ್ಕೆ ಸರ್ಕಾರ ನಿರ್ಬಂಧ ವಿಧಿಸಿರುವುದು ಏಕೆ' ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ರಾಜು ಪ್ರಶ್ನಿಸಿದರು.

'ವಾರ್ಡ್‌ಗೆ ಒಂದೇ ಮೂರ್ತಿ ಪ್ರತಿಷ್ಠಾಪನೆ ಮಾಡಬೇಕು, ಮೂರ್ತಿ 4 ಅಡಿಗಿಂತ ಹೆಚ್ಚು ಎತ್ತರ ಇರಬಾರದು, ಮೂರು ದಿನ ಮಾತ್ರ ಉತ್ಸವ ಆಚರಿಸಬೇಕೆಂಬ ನಿರ್ಬಂಧಗಳನ್ನು ವಿಧಿಸಿರುವುದು ಖಂಡನೀಯ. ಇದರಿಂದ ಧಾರ್ಮಿಕ ಭಾವನೆಗೆ ಧಕ್ಕೆ ಆಗಿದೆ. ಈ ನಿರ್ಬಂಧಗಳನ್ನು ಹಿಂದಕ್ಕೆ ಪಡೆಯಬೇಕು' ಎಂದೂ ಅವರು ಆಗ್ರಹಿಸಿದರು.

'ಜನರ ಆರೋಗ್ಯವೂ ನಮಗೆ ಮುಖ್ಯ. ಕೊರೊನಾ ನಿಯಮಗಳನ್ನು ಪಾಲಿಸಲು ನಾವೆಲ್ಲರೂ ಸಿದ್ಧರಿದ್ದೇವೆ. 12 ಅಡಿ ಎತ್ತರದವರೆಗಿನ ಮೂರ್ತಿಗಳನ್ನು ಪ್ರತಿಷ್ಠಾಪಿಸಲು ಅನುಮತಿ ನೀಡಬೇಕು. ಕನಿಷ್ಠ ಐದು ದಿನವಾದರೂ ಉತ್ಸವ ಆಚರಿಸಲು ಅವಕಾಶ ನೀಡಬೇಕು' ಎಂದೂ ಅವರು ಕೋರಿದರು.

ಪ್ರತಿಷ್ಠಾಪನೆಗಾಗಿ ತಯಾರಿಸಿದ್ದ 4 ಅಡಿಗಿಂತ ಹೆಚ್ಚು ಎತ್ತರದ ಮೂರ್ತಿಗಳನ್ನು ಪ್ರತಿಭಟನಾ ಸ್ಥಳಕ್ಕೆ ತಂದಿದ್ದ ಕೆಲವರು, 'ಇಂಥ ಮೂರ್ತಿಗಳನ್ನು ಎಲ್ಲಿ ಪ್ರತಿಷ್ಠಾಪಿಸುವುದು? ಎಲ್ಲಿ ವಿಸರ್ಜನೆ ಮಾಡುವುದು' ಎಂದು ಪ್ರಶ್ನಿಸಿದರು.

'140 ವಾರ್ಡ್‌ಗಳಲ್ಲಿ ಅನುಮತಿ'

ಪ್ರತಿಭಟನಾ ಸ್ಥಳಕ್ಕೆ ಬಂದಿದ್ದ ವಿಶೇಷ ಆಯುಕ್ತ ಡಿ. ರಂದೀಪ್, 'ನಿರ್ಬಂಧಗಳನ್ನು ಸಡಿಲಿಕೆ ಮಾಡುವಂತೆ ಗಣೇಶೋತ್ಸವ ಸಮಿತಿಗಳು ಮನವಿ ಮಾಡಿವೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಲಾಗಿದೆ' ಎಂದರು.

'140 ವಾರ್ಡ್‌ಗಳಲ್ಲಿ ಒಂದು ಮೂರ್ತಿ ಪ್ರತಿಷ್ಠಾಪನೆ ಈಗಾಗಲೇ ಅನುಮತಿ ನೀಡಲಾಗಿದೆ. ಉಳಿದಂತೆ, ಕೆಲ ವಾರ್ಡ್‌ಗಳಲ್ಲಿ ಒಂದಕ್ಕಿಂತ ಹೆಚ್ಚು ಮೂರ್ತಿ ಪ್ರತಿಷ್ಠಾಪಿಸಲು ಅನುಮತಿ ಕೇಳಿದ್ದಾರೆ. ಇದನ್ನು ಪರಿಶೀಲಿಸಲಾಗುವುದು. ಹಬ್ಬವು ಶಾಂತಿಯುತವಾಗಿ ಆಚರಿಸಬೇಕೆಂಬುದು ನಮ್ಮ ಉದ್ದೇಶ' ಎಂದೂ ಅವರು ವಿವರಿಸಿದರು.

ಪ್ರಕಾಶ್ ರಾಜು, 'ನಾವು ಮೂರ್ತಿ ಪ್ರತಿಷ್ಠಾಪನೆ ಮಾಡುತ್ತೇವೆ. ಎಷ್ಟು ದಿನ ಉತ್ಸವ ಮಾಡಬೇಕು ಎಂಬುದನ್ನು ಸರ್ಕಾರ ಸ್ಪಷ್ಟವಾಗಿ ಹೇಳಲಿ. ನಿಯಮ ಉಲ್ಲಂಘಿಸಿದ ನೆಪದಲ್ಲಿ ಸಮಿತಿಯ ಯಾರನ್ನಾದರೂ ವಶಕ್ಕೆ ಪಡೆದು ಠಾಣೆಯಲ್ಲಿ ಕೂರಿಸಿದರೆ ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಸಿದರು.

ಕೊರೊನಾ ನಿಯಂತ್ರಣ ನಿಯಮ ಉಲ್ಲಂಘನೆ

ಬೆಂಗಳೂರು ಮಹಾನಗರ ಗಣೇಶೋತ್ಸವ ಸಮಿತಿ ಸದಸ್ಯರು ಪ್ರತಿಭಟನೆ ಸಂದರ್ಭದಲ್ಲಿ ಕೊರೊನಾ ನಿಯಂತ್ರಣ ನಿಯಮಗಳನ್ನು ಉಲ್ಲಂಘಿಸಿದರು. ಇದರ ವಿರುದ್ಧ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲವೆಂಬ ಆರೋಪ ವ್ಯಕ್ತವಾಗಿದೆ.

'ಪ್ರತಿಭಟನೆಯಲ್ಲಿ ಪರಸ್ಪರ ಅಂತರವಿರಲಿಲ್ಲ. ಬಹುತೇಕರು ಮಾಸ್ಕ್ ಧರಿಸಿರಲಿಲ್ಲ' ಎಂದೂ ಹಲವರು ಆರೋಪಿಸಿದ್ದಾರೆ.

ಪ್ರಜಾವಾಣಿ DH
EXAM ಪರಿಚಯಿಸುತ್ತಿದ್ದೇವೆ
MASTERMIND

ಪ್ರಿಯ ಸ್ಪರ್ಧಾರ್ಥಿಗಳೇ,

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದೀರಾ? ರ‍್ಯಾಂಕ್, ಅತ್ಯುತ್ತಮ ಅಂಕ ಗಳಿಸಿ ಸರ್ಕಾರಿ ಉದ್ಯೋಗ ಗಿಟ್ಟಿಸುವ ಕನಸು ಕಂಡಿದ್ದೀರಾ? ಹಾಗಾದರೆ ನಿಮ್ಮ ಕನಸನ್ನು ನನಸಾಗಿಸಲು ನಿಮ್ಮ ಹೆಮ್ಮೆಯ 'ಪ್ರಜಾವಾಣಿ –ಡೆಕ್ಕನ್ ಹೆರಾಲ್ಡ್' ಇನ್ನೊಂದು ಮಹತ್ವದ ಹೆಜ್ಜೆ ಇಟ್ಟಿವೆ ಯುಪಿಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂಗ್, ರೈಲ್ವೆ, ಸಬ್ ಇನ್‌ಸ್ಪೆಕ್ಟರ್, ಪೊಲೀಸ್ ಕಾನ್‌ಸ್ಟೇಬಲ್, ಎಫ್‌ಡಿಎ.. ಹೀಗೆ ಎಲ್ಲಾ ಬಗೆಯ ಸ್ಪರ್ಧಾತ್ಮಕ ಪರೀಕ್ಷೆಗಳ ಓದಿಗೆ ನೆರವು ನೀಡುವ 'ಎಕ್ಸಾಂ ಮಾಸ್ಟರ್‌ಮೈಂಡ್' ಇ–ಪೇಪರ್ ಹೊರತರುತ್ತಿವೆ.

ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಯಲ್ಲಿರುವ ಮತ್ತು ವಾರದ ಐದು ದಿನ ಲಭ್ಯವಿರುವ 'ಎಕ್ಸಾಂ ಮಾಸ್ಟರ್‌ಮೈಂಡ್' ಈ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಸೂಕ್ತ ಅಧ್ಯಯನ ಸಾಮಗ್ರಿಯನ್ನು ಒಳಗೊಂಡಿದೆ. ಜನರಲ್ ಸ್ಟಡೀಸ್, ಸ್ಟ್ಯಾಟಿಕ್, ಕರೆಂಟ್ ಅಫೇರ್ಸ್, ರೀಸನಿಂಗ್ ಎಬಿಲಿಟಿ, ಇಂಗ್ಲಿಷ್ ಲ್ಯಾಂಗ್ವೇಜ್ ಆ್ಯಂಡ್ ವರ್ಬಲ್ ಎಬಿಲಿಟಿ, ಕ್ವಾಲಿಟೇಟಿವ್ ಆಪ್ಟಿಟ್ಯೂಡ್, ಪ್ರಬಂಧಗಳು, ಉಪಯುಕ್ತ ಸಲಹೆಗಳು ಮುಂತಾದವುಗಳ ಜೊತೆಗೆ ಮಾದರಿ ಪ್ರಶ್ನೋತ್ತರಗಳನ್ನು ಹಾಗೂ ಪೂರಕವಾದ ಆಡಿಯೊ ಮತ್ತು ವಿಡಿಯೊಗಳನ್ನು ನೀಡಲಿದೆ.

ಚಂದಾದಾರರಾಗಲು ಸಂಪರ್ಕಿಸಿ
ಎಕ್ಸಿಕ್ಯೂಟಿವ್ ಹೆಸರು: ಅರುಣ್ ಸ್ಟ್ಯಾನ್ಲಿ
ಮೊಬೈಲ್: 98454 42703
bit.ly/emmstudent

'ಬೆಂಗಳೂರು – ಕೋಲಾರ ಮಧ್ಯೆ ಹಾರ್ಡ್‌ವೇರ್ ಪಾರ್ಕ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಬೆಂಗಳೂರು–ಕೋಲಾರ ಮಧ್ಯೆ ಹಾರ್ಡ್‌ವೇರ್ ಪಾರ್ಕ್ ನಿರ್ಮಿಸಲು ನಿರ್ಧರಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಎರಡು ದಿನಗಳ ದೆಹಲಿ ಪ್ರವಾಸ ಫಲಪ್ರದವಾಗಿದೆ' ಎಂದರು.

'ಗ್ರಾಮೀಣ ಪ್ರದೇಶದಲ್ಲಿ ಡಿಜಿಟಲ್ ಸೌಲಭ್ಯ ಹಾಗೂ ಆಪ್ಟಿಕಲ್ ಫೈಬರ್ ಸಂಪರ್ಕ ಕಲ್ಪಿಸುವ ಕುರಿತು ಕೇಂದ್ರ ಐಟಿ-ಬಿಟಿ ಮತ್ತು ಕೌಶಲ ಅಭಿವೃದ್ಧಿ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರೊಂದಿಗೆ ಚರ್ಚಿಸಿದ್ದೇನೆ. ರಾಜ್ಯದಲ್ಲಿ ಕೌಶಲ (ಸ್ಕಿಲ್) ವಿಶ್ವವಿದ್ಯಾಲಯ ಆರಂಭಿಸುವ ಉದ್ದೇಶವು ಸಚಿವರಿಗಿದ್ದು, ಈ ಬಗ್ಗೆ ಪರಿಶೀಲಿಸಲಾಗುವುದು' ಎಂದರು.

'ಎರಡು ವರ್ಷದಿಂದ ನನೆಗುದಿಗೆ ಬಿದ್ದಿರುವ ಸೆಟಲೈಟ್ ಟೌನ್ ರಿಂಗ್ ರೋಡ್ (ದಾಬಸ್‌ಪೇಟೆಯಿಂದ ಮೈಸೂರು ರಸ್ತೆವರೆಗೆ) ನಿರ್ಮಾಣ ಕಾಮಗಾರಿ ಶೀಘ್ರದಲ್ಲಿಯೇ ಆರಂಭವಾಗಲಿದೆ' ಎಂದು ಹೇಳಿದರು.

'ಉತ್ತರ ಕರ್ನಾಟಕದ ವಿಜಯಪುರ- ಸಂಕೇಶ್ವರ ರಾಷ್ಟ್ರೀಯ ಹೆದ್ದಾರಿಗೆ ಡಿಪಿಆರ್ ಆಗುತ್ತಿದ್ದು, ಭಾರತ್ ಮಾಲಾ ರಸ್ತೆ ಯೋಜನೆಯ ಎರಡನೇ ಹಂತದಲ್ಲಿ ಇನ್ನೂ ಐದು ರಸ್ತೆಗಳ ಕಾಮಗಾರಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ' ಎಂದರು.

> **ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ಪರಿಹಾರವನ್ನು 2022ರವರೆಗೆ ಮುಂದುವರಿಸುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಮನವಿ ಮಾಡಿದ್ದೇನೆ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

'ಪ್ರಧಾನಮಂತ್ರಿ ಆವಾಸ್ ಯೋಜನೆಯಲ್ಲಿ ₹ 400 ಕೋಟಿ ಬಿಡುಗಡೆಗೆ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಹರದೀಪ್ ಸಿಂಗ್ ಪುರಿ ಸೂಚಿಸಿದ್ದಾರೆ. ಇನ್ನು ₹ 1,500 ಕೋಟಿ ಬಿಡುಗಡೆ ಆಗಬೇಕಿದೆ' ಎಂದರು.

'ರೈಲ್ವೆ ಯೋಜನೆಗಳ ಬಗ್ಗೆಯೂ ಚರ್ಚಿಸಲಾಯಿತು. ಉಪನಗರ ರೈಲು ಯೋಜನೆ ಹಾಗೂ ಬೈಯ್ಯಪ್ಪನಹಳ್ಳಿ ರೈಲ್ವೆ ನಿಲ್ದಾಣ ಕಾರ್ಯ ಕೈಗೆತ್ತಿಕೊಳ್ಳುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಅಲ್ಲದೆ, ತುಮಕೂರು–ದಾವಣಗೆರೆ, ಹುಬ್ಬಳ್ಳಿ – ಬೆಳಗಾವಿ, ಬೀದರ್- ಕಲಬುರ್ಗಿ ರೈಲ್ವೆ ಮಾರ್ಗ ಅಭಿವೃದ್ಧಿಗೂ ಮನವಿ ಮಾಡಲಾಗಿದೆ' ಎಂದರು.

ತೊಗರಿ ಹೊಲದಲ್ಲಿ ಬೆಳೆದಿದ್ದ ಗಾಂಜಾ ಗಿಡಗಳು ವಶಕ್ಕೆ

ದೊಡ್ಡಬಳ್ಳಾಪುರ: ತೊಗರಿ ಗಿಡಗಳ ಮಧ್ಯೆ ಗಾಂಜಾ ಗಿಡಗಳನ್ನು ಬೆಳೆದಿರುವ ಮಾಹಿತಿ ಖಚಿತ ಮಾಹಿತಿ ಮೇರೆಗೆ ಅಬಕಾರಿ ಅಧಿಕಾರಿಗಳು ದಾಳಿ ನಡೆಸಿ ಸುಮಾರು ₹1 ಲಕ್ಷ ಮೌಲ್ಯದ ಗಾಂಜಾ ಗಿಡಗಳನ್ನು ಜಪ್ತಿ ಮಾಡಲಾಗಿದೆ.

ತಾಲ್ಲೂಕಿನ ಸುತ್ತಳ್ಳಿ ತಾಂಡಾದಲ್ಲಿ ಗ್ರಾಮದ ರೈತ ಹನುಮ ನಾಯಕ್ ತನ್ನ ತೊಗರಿ ಹೊಲದ ಮಧ್ಯೆ ಯಾರಿಗೂ ತಿಳಿಯದಂತೆ ಗಾಂಜಾ ಗಿಡಗಳನ್ನು ಬೆಳೆಯಲಾಗಿತ್ತು.

ಮೋದಿ ಜನ್ಮದಿನ: 3 ವಾರ ಸಂಭ್ರಮಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಹುಟ್ಟಿದ ದಿನ ಮತ್ತು ಆಡಳಿತಗಾರನಾಗಿ 20 ವರ್ಷ ಪೂರ್ಣಗೊಂಡ ಬಗ್ಗೆ ಮೂರು ವಾರಗಳ ಸಂಭ್ರಮಾಚರಣೆಗೆ ಬಿಜೆಪಿ ಸಿದ್ಧತೆ ಮಾಡಿಕೊಳ್ಳುತ್ತಿದೆ. ಮೋದಿ ಅವರ ಚಿತ್ರ ಇರುವ ಪಡಿತರ ತುಂಬಿದ ಕೋಟ್ಯಂತರ ಚೀಲಗಳು, ಐದು ಕೋಟಿ ಪೋಸ್ಟ್ ಕಾರ್ಡ್ ಹಂಚಿಕೆ ಸೇರಿದಂತೆ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳುವ ಬಗ್ಗೆ ಚಿಂತನೆ ನಡೆದಿದೆ.

ಆದರೆ, ಬಿಜೆಪಿಯ ಈ ನಡೆಯನ್ನು ವಿರೋಧ ಪಕ್ಷಗಳು ಖಂಡಿಸಿವೆ. ಜನರು ಸಂಕಷ್ಟದಲ್ಲಿರುವಾಗ ಬಿಜೆಪಿ ಸಂಭ್ರಮ ಪಡುವುದು ದುರಂತ ಎಂದು ಹೇಳಿವೆ.

ಸೆಪ್ಟೆಂಬರ್ 17 ಮೋದಿ ಅವರು ಹುಟ್ಟಿದ ದಿನ. 20 ವರ್ಷಗಳ ಹಿಂದೆ ಅಕ್ಟೋಬರ್ 7ರಂದು ಅವರು ಗುಜರಾತ್ ಮುಖ್ಯಮಂತ್ರಿಯಾದರು. ಹಾಗಾಗಿ, ಸೆಪ್ಟೆಂಬರ್ 17ರಿಂದ ಅಕ್ಟೋಬರ್ 7ರ ನಡುವೆ ವಿವಿಧ ಕಾರ್ಯಕ್ರಮ ನಡೆಸಲು ಬಿಜೆಪಿ ಸಜ್ಜಾಗಿದೆ. ರಾಜಕೀಯವಾಗಿ ಮಹತ್ವದ್ದಾದ ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನಸಭೆಗಳಿಗೆ ಮುಂದಿನ ವರ್ಷ ಚುನಾವಣೆ ನಡೆಯಲಿದೆ. ಮೂರು ವಾರಗಳ ಕಾರ್ಯಕ್ರಮಗಳು ಬಿಜೆಪಿ ಕಾರ್ಯಕರ್ತರಲ್ಲಿ ಹುರುಪು ತುಂಬುವುದಕ್ಕೂ ನೆರವಾಗಬಹುದು ಎಂಬ ಲೆಕ್ಕಾಚಾರ ಬಿಜೆಪಿಯಲ್ಲಿ ಇದೆ.

> **ಅರ್ಥ ವ್ಯವಸ್ಥೆಯು ಬಿಕ್ಕಟ್ಟಿನಲ್ಲಿದೆ. ಆದರೆ ಸಂಭ್ರಮಾಚರಣೆಯ ವಿವರ ನೋಡಿದರೆ ಬಿಜೆಪಿ ಖಜಾನೆ ತುಂಬಿ ತುಳುಕುತ್ತಿದೆ ಅನಿಸುತ್ತಿದೆ**
> **ಜೈರಾಮ್ ರಮೇಶ್,** ರಾಜ್ಯಸಭೆಯಲ್ಲಿ ಕಾಂಗ್ರೆಸ್ ಮುಖ್ಯ ಸಚೇತಕ

> **ಮಾರ್ಗದರ್ಶಕ ಮಂಡಳಿ ಸೇರಲು ಇನ್ನು ನಾಲ್ಕು ವರ್ಷವಷ್ಟೇ ಇದೆ. ಆರೋಗ್ಯವಾಗಿರಿ. ಸ್ವಪ್ರತಿಷ್ಠೆಯನ್ನು ಇನ್ನಷ್ಟು ಹೆಚ್ಚಿಸಿ**
> **ಡೆರೆಕ್ ಒ ಬ್ರಿಯಾನ್,** ರಾಜ್ಯಸಭೆಯಲ್ಲಿ ಟಿಎಂಸಿ ಸದನ ನಾಯಕ

ಮೋದಿ ಅವರಿಗೆ ಮುಂದಿನ ವಾರ 71 ವರ್ಷ ಆಗಲಿದೆ.

ಕೋವಿಡ್ ಎರಡನೇ ಅಲೆ ನಿರ್ವಹಣೆ, ಮೊದಲ ಅಲೆ ಸಂದರ್ಭದಲ್ಲಿ ವಲಸೆ ಕಾರ್ಮಿಕರ ಬಿಕ್ಕಟ್ಟು, ಆರ್ಥಿಕ ಸಮಸ್ಯೆಗಳು, ಕೃಷಿ ಕಾಯ್ದೆಗಳ ವಿರುದ್ಧ ರೈತರ ಪ್ರತಿಭಟನೆ ಮುಂತಾದವುಗಳಿಂದಾಗಿ ಕೇಂದ್ರ ಸರ್ಕಾರ ಮತ್ತು ಮೋದಿ ಅವರ ವರ್ಚಸ್ಸು ಕುಗ್ಗಿದೆ ಎಂಬ ಮಾತು ಬಿಜೆಪಿ ಒಳಗೇ ಕೇಳಿಬರುತ್ತಿದೆ. ಅಂತಹ ಸಂದರ್ಭದಲ್ಲಿಯೇ 'ಸೇವೆ ಮತ್ತು ಸಮರ್ಪಣೆ ಅಭಿಯಾನ' ನಡೆಸಲು ಬಿಜೆಪಿ ಮುಂದಾಗಿದೆ.

'ಬಡ ಜನರ ದೇವದೂತ' ಎಂದು ಮೋದಿ ಅವರನ್ನು ಬಿಂಬಿಸುವ ಉದ್ದೇಶವನ್ನು ಬಿಜೆಪಿ ಹೊಂದಿದೆ. ಆದರೆ, ಅವರ ಜನಪ್ರಿಯತೆಯು ಶೇ 66ರಿಂದ ಶೆ 24ಕ್ಕೆ ಕುಸಿದಿದೆ ಎಂದು ಇತ್ತೀಚಿನ ಸಮೀಕ್ಷೆಯೊಂದು ಹೇಳಿದೆ.

ದೊಡ್ಡಬೊಮ್ಮಸಂದ್ರದಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಗೌರಿ ಗಣೇಶ ಮೂರ್ತಿಯನ್ನು ವಿತರಿಸಲಾಯಿತು. ಎ.ರವಿ, ಎಂ.ಈ.ಪಿಳ್ಳಪ್ಪ, ಅಶ್ವಥನಾರಾಯಣಗೌಡ, ನಾರಾಯಣಸ್ವಾಮಿ, ಡಾ.ಜಗನ್ನಾಥ, ಶೋಭಾ ಹರೀಶ್ ಇತರರು ಇದ್ದರು

ಗೌರಿ–ಗಣೇಶ ಮೂರ್ತಿ ವಿತರಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಗೌರಿ ಗಣೇಶ ಹಬ್ಬದ ಪ್ರಯುಕ್ತ ಬ್ಯಾಟರಾಯನಪುರ ಕ್ಷೇತ್ರದ ಬಿಜೆಪಿ ಘಟಕದ ವತಿಯಿಂದ ದೊಡ್ಡಬೊಮ್ಮಸಂದ್ರದಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಗೌರಿ-ಗಣೇಶ ಮೂರ್ತಿಯನ್ನು ವಿತರಿಸಲಾಯಿತು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎ.ರವಿ, 'ಪರಿಸರ ಸಂರಕ್ಷಣೆಗೆ ಪೂರಕವಾಗಿ ದೊಡ್ಡಬೊಮ್ಮಸಂದ್ರ ವಾರ್ಡ್‌ನಲ್ಲಿ ಪರಿಸರ ಸ್ನೇಹಿ ಗಣಪನನ್ನು ಪೂಜಿಸಿ, ವಿಸರ್ಜನೆ ಮಾಡಬೇಕು ಎಂದು ತೀರ್ಮಾನಿಸಿ, ಮಣ್ಣಿನಿಂದ ತಯಾರಿಸಿದ ಗೌರಿ-ಗಣೇಶನ ಮೂರ್ತಿಯನ್ನು ಸಾರ್ವಜನಿಕರಿಗೆ ಉಚಿತವಾಗಿ ವಿತರಿಸಲಾಗಿದೆ' ಎಂದು ತಿಳಿಸಿದರು.

ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ನಾರಾಯಣ, ಬಿಎಂಟಿಸಿ ನಿರ್ದೇಶಕ ಟಿ.ಪಿ.ಪ್ರಕಾಶ್, ಪಾಲಿಕೆ ಮಾಜಿ ಸದಸ್ಯರಾದ ಎಂ.ಈ.ಪಿಳ್ಳಪ್ಪ, ಅಶ್ವತ್ಥ ನಾರಾಯಣಗೌಡ, ಆರ್.ಎಸ್.ಎಸ್ ಮುಖಂಡ ಶ್ರೀಧರ್, ಬಿಜೆಪಿ ಮುಖಂಡರಾದ ಪ್ರಕಾಶ್, ನಂಜಪ್ಪ, ನಾರಾಯಣಸ್ವಾಮಿ, ಮಂಜುನಾಥ್, ಶೋಭ ಹರೀಶ್ ಉಪಸ್ಥಿತರಿದ್ದರು.

ಸ್ಯಾಂಡಲ್‌ವುಡ್ ಡ್ರಗ್ಸ್ ಪ್ರಕರಣ: ನಟಿ ಅನುಶ್ರೀ ಹೇಳಿಕೆ

'ನನ್ನ ಮೇಲಿನ ಆರೋಪಗಳೆಲ್ಲವೂ ಸುಳ್ಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕವಸ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳೂರು ಸಿಸಿಬಿ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ಚಾರ್ಜ್‌ಶೀಟ್ ಕುರಿತು ಪ್ರತಿಕ್ರಿಯೆ ನೀಡಿರುವ ನಟಿ ಅನುಶ್ರೀ, 'ಕಿಶೋರ್ ಅಮಾನ್ ಶೆಟ್ಟಿ ಮಾಡಿರುವ ಆರೋಪಗಳೆಲ್ಲವೂ ಸುಳ್ಳು. ಆರೋಪಿಗಳು ಸಾವಿರ ಹೇಳುತ್ತಾರೆ. ಹೇಳಿಕೆಯಲ್ಲಿ ಏನು ಬೇಕಾದರೂ ಹೇಳಬಹುದು. ಪೊಲೀಸರು ಯಾವುದು ಸತ್ಯ, ಯಾವುದು ಸುಳ್ಳು ಎನ್ನುವುದನ್ನು ಪರಿಶೀಲನೆ ಮಾಡುತ್ತಾರೆ' ಎಂದಿದ್ದಾರೆ.

ಅನುಶ್ರೀ

'ಅನುಶ್ರೀ ಡ್ರಗ್ಸ್ ಸೇವನೆ ಜೊತೆಗೆ ಅದರ ಸಾಗಾಟ ಮಾಡುತ್ತಿದ್ದರು' ಎಂದು ಪ್ರಕರಣದ ಎರಡನೇ ಆರೋಪಿ ಕಿಶೋರ್ ಪೊಲೀಸರಿಗೆ ಹೇಳಿಕೆ ನೀಡಿದ್ದನ್ನು ಆಧರಿಸಿ ಚಾರ್ಜ್‌ಶೀಟ್‌ನಲ್ಲಿ ಅನುಶ್ರೀ ಹೆಸರು ಪ್ರಸ್ತಾಪಿಸಲಾಗಿದೆ. ಈ ಕುರಿತು ಸುದ್ದಿಗಾರರ ಜೊತೆ ಮಾತನಾಡಿದ ಅನುಶ್ರೀ, 'ಕಳೆದ ಬಾರಿ ವಿಚಾರಣೆಗೆ ಕರೆದ ಸಂದರ್ಭದಲ್ಲಿ ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರ ಕೊಟ್ಟಿದ್ದೇನೆ. ನನಗೆ ಯಾರ ಸಹಾಯವೂ ಬೇಕಿಲ್ಲ. ಮೂರು ಗಂಟೆಗಳ ಕಾಲ ವಿಚಾರಣೆಗೆ ಒಳಪಟ್ಟಿದ್ದೆ. ಯಾವ ಪ್ರಭಾವಶಾಲಿಗಳಿಗೂ ನಾನು ಕರೆ ಮಾಡಿಲ್ಲ. ಯಾರ ಸಹಾಯವನ್ನೂ ತೆಗೆದುಕೊಂಡಿಲ್ಲ' ಎಂದಿದ್ದಾರೆ.

'ನಾನು ಭಯಪಟ್ಟುಕೊಂಡು ಓಡಿಹೋಗಿದ್ದೇನೆ ಎಂಬ ಸುದ್ದಿ ಹರಿದಾಡುತ್ತಿದೆ. ಕೆಲಸದ ನಿಮಿತ್ತ ಬೆಂಗಳೂರಿನಿಂದ ಮುಂಬೈಗೆ ನಾನು ಸೋಮವಾರವೇ ಹೋಗಿದ್ದೆ. ನಾನು ಎಲ್ಲಿಯೂ ಹಾರಿಹೋಗಿಲ್ಲ. ಇದು ನನ್ನ ನೆಲ. ಯಾವ ಆರೋಪಗಳು ಬಂದರೂ ನಾನು ಎದುರಿಸುತ್ತೇನೆ. ಮತ್ತೆ ವಿಚಾರಣೆಗೆ ಕರೆದರೆ ಖಂಡಿತಾ ಹಾಜರಾಗುತ್ತೇನೆ. ಈ ಬೆಳವಣಿಗೆಯ ಬಗ್ಗೆ ನನಗೆ ಬೇಜಾರಿದೆ. ಯಾವುದೂ ನನ್ನ ಆತ್ಮವಿಶ್ವಾಸವನ್ನು ಕುಗ್ಗಿಸುವುದಿಲ್ಲ. ನಾನು ಬಹಳ ಸರಳ ವ್ಯಕ್ತಿ. ನಾನು ಯಾವ ಪಾರ್ಟಿ, ಪಬ್‌ಗಳಿಗೆ ಹೋಗುವುದಿಲ್ಲ. ಯಾಕೆ ನನ್ನನ್ನು ಟಾರ್ಗೆಟ್ ಮಾಡುತ್ತಿದ್ದಾರೆ ಎಂದು ತಿಳಿದಿಲ್ಲ. ನಾನು ಸತ್ಯವಾಗಿದ್ದೇನೆ' ಎಂದು ಹೇಳಿದ್ದಾರೆ.

ಆಸ್ತಿಗೆ ಸಂಬಂಧಿಸಿದಂತೆ ಕೇಳಿಬರುತ್ತಿರುವ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಅನುಶ್ರೀ, 'ಹೌದು ನನ್ನ ಮನೆ ಓರಾಯನ್ ಮಾಲ್ ಎದುರಿಗೇ ಇದೆ. ಆದರೆ ಅದು ಬಾಡಿಗೆ ಮನೆ. ಇಡೀ ಕಟ್ಟಡವೇನೂ ನನ್ನದಲ್ಲ. ಈ ಕುರಿತು ಮನೆ ಮಾಲೀಕರನ್ನೇ ಕೇಳಬಹುದು. ಮಂಗಳೂರಿನ ಕದ್ರಿಯಲ್ಲಿ ಒಂದು ಮನೆ ಇದೆ. ಅದರ ಸಾಲ ಇನ್ನೂ ಬಾಕಿ ಇದೆ' ಎಂದಿದ್ದಾರೆ.

ನಗರದ ರಾಜಭವನ ರಸ್ತೆಯಲ್ಲಿ ಗಣಪತಿ ವೇಷಧಾರಿಯೊಬ್ಬರು ರಸ್ತೆ ಸಂಚಾರ ನಿಯಮಗಳ ಪಾಲನೆಯ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಗುರುವಾರ ಜಾಗೃತಿ ಮೂಡಿಸಿದರು

ವಿವಿಧೆಡೆ ವಿದ್ಯುತ್ ವ್ಯತ್ಯಯ ಇದೇ 12ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ವಹಣಾ ಕಾರ್ಯಕೈಗೆತ್ತಿಕೊಳ್ಳುತ್ತಿರುವುದರಿಂದ ಇದೇ 12ರಿಂದ 14ರವರೆಗೆ ಬೆಳಿಗ್ಗೆ 10ರಿಂದ ಸಂಜೆ 4ರ ತನಕ ನಗರದ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಓಕಳೀಪುರ, ಸ್ವತಂತ್ರಪಾಳ್ಯ, ದಯಾನಂದ ನಗರ, ರಾಬರ್ಟ್‌ಸನ್ ಬ್ಲಾಕ್, ಜಕ್ಕರಾಯನ ಕೆರೆ, ಹನುಮಂತಪ್ಪ ಕಾಲೊನಿ, ಪ್ಲ್ಯಾಟ್‌ಫಾರಂ ರಸ್ತೆ, ರಾಮಚಂದ್ರಾಪುರ, ಕುಮಾರ ಪಾರ್ಕ್, ಶೇಷಾದ್ರಿಪುರ, ನೆಹರೂನಗರ, ಜೆಸಿಡಬ್ಲ್ಯು ನಗರ, ವಿ.ವಿ. ಗಿರಿ ಕಾಲೊನಿ, ಮಲ್ಲೇಶ್ವರ, ಶಿರೂರು ಪಾರ್ಕ್, ಮಂತ್ರಿ ಗ್ರೀನ್ಸ್ ಅಪಾರ್ಟ್‌ಮೆಂಟ್ಸ್ ಸಮುಚ್ಚಯ, ಅಪೋಲೊ ಆಸ್ಪತ್ರೆ, ಶ್ರೀಪುರ, ಮಂತ್ರಿ ಮಾಲ್ ಮತ್ತು ಸುತ್ತ–ಮುತ್ತಲಿನ ಪ್ರದೇಶ.

13: ಜಾನ್ಸನ್ ಮಾರುಕಟ್ಟೆ, ರಿಚ್ಮಂಡ್ ಟೌನ್, ಲ್ಯಾಂಗ್‌ಫೋರ್ಡ್ ರಸ್ತೆ, ಅಶೋಕನಗರ, ಶಾಪರ್ಸ್ ಸ್ಟಾಪ್, ಮಾರ್ಕಂ ರಸ್ತೆ, ಬ್ರಿಗೇಡ್ ರಸ್ತೆ, ವಾಣಿಜ್ಯ ಕಾಲೇಜು, ರಿಚ್ಮಂಡ್ ರಸ್ತೆ, ಲ್ಯಾವೆಲ್ಲೆ ರಸ್ತೆ, ವಿಠಲ ಮಲ್ಯ ರಸ್ತೆ, ಸಿದ್ದಯ್ಯ ರಸ್ತೆ, ವುಡ್ ಸ್ಟ್ರೀಟ್, ಸೇಂಟ್ ಮಾರ್ಕ್ ರಸ್ತೆ, ನೀಲಸಂದ್ರ, ಆನೆಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶ.

14: ಪಿಳ್ಳಣ್ಣ ಗಾರ್ಡನ್, ಕಂದಸ್ವಾಮಿ ಮೊದಲಿಯಾರ್ ರಸ್ತೆ, ಹಳೇ ಬಾಗಲೂರು ಬಡಾವಣೆ, ವಿಲಿಯಮ್ಸ್ ಟೌನ್, ಬಿದರಹಳ್ಳಿ, ಪಾಟರಿ ಟೌನ್, ರಾಬರ್ಟ್‌ಸನ್ ರಸ್ತೆ, ವ್ಹೀಲರ್ ರಸ್ತೆ, ಕಾಕ್ಸ್ ಟೌನ್, ಸುಂದರಮೂರ್ತಿ ರಸ್ತೆ, ಎಂ.ಎಂ. ರಸ್ತೆ, ಎಂ.ಕೆ. ಪಾಳ್ಯ, ರಾಯಪ್ಪ ರಸ್ತೆ, ರತನ್ ಸಿಂಗ್ ರಸ್ತೆ, ಮೋರ್ ರಸ್ತೆ, ಮಸೀದಿ ರಸ್ತೆ, ಹಿದಾಯತ್ ನಗರ, ಮುಕ್ತಿನಗರ, ವಿನೋಬನಗರ, ಎ.ಕೆ.ಹಳ್ಳಿ, ರಾಬರ್ಟ್‌ಸನ್ ರಸ್ತೆ, ಕಥಲಿ ಪಾಳ್ಯ, ಟ್ಯಾಂಕ್ ರಸ್ತೆ, ಟ್ಯಾನಿ ರಸ್ತೆ, ವೆಂಕಟೇಶಪುರ, ವಿನಾಯಕ ದೇವಸ್ಥಾನದ ರಸ್ತೆ, ಟ್ಯಾಂಕ್ ರಸ್ತೆ.

ಓಸ್ಬರ್ನ್ ರಸ್ತೆ, ಸೆಂಟ್ ಜಾನ್ಸ್ ರಸ್ತೆ, ರುಕ್ಮಿಣಿ ಕಾಲೊನಿ, ಅಣ್ಣಪ್ಪ ಸ್ವಾಮಿ ಮೊದಲಿಯಾರ್ ರಸ್ತೆ, ಓಸ್ಬರ್ನ್ ರಸ್ತೆ, ಕೋದಂಡರಾಮ ಬಡಾವಣೆ, ನಾರಾಯಣ ರೆಡ್ಡಿ ಕಾಲೊನಿ, ಐಟಿಐ ಬಡಾವಣೆ, ಎಸ್.ಕೆ. ಗಾರ್ಡನ್, ಚಿನ್ನಪ್ಪ ಗಾರ್ಡನ್, ಮುದ್ದಮ್ಮ ಗಾರ್ಡನ್, ಕೃಷ್ಣಮ್ಮ ಗಾರ್ಡನ್, ಎನ್.ಡಿ.ರಸ್ತೆ, ಕಾಕ್ಸ್ ಟೌನ್, ಬುದ್ಧ ವಿಹಾರ್ ರಸ್ತೆ, ಹೇನ್ಸ್ ರಸ್ತೆ, ಸ್ಪೆನ್ಸರ್ ರಸ್ತೆ, ನೇತಾಜಿ ರಸ್ತೆ, ಕೋಲ್ಸ್ ರಸ್ತೆ, ಕುಕ್ಸ್ ಟೌನ್, ರಿಚರ್ಡ್ಸ್ ಟೌನ್, ಲಾವಣ್ಯ ಥಿಯೇಟರ್ ಸುತ್ತ–ಮುತ್ತಲಿನ ಪ್ರದೇಶಗಳು.

ಶಿವಾಜಿನಗರದ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್‌ನ ವಾರ್ಷಿಕೋತ್ಸವದ ಅಂಗವಾಗಿ ಚರ್ಚ್‌ನ ಆವರಣದಲ್ಲಿ ಬುಧವಾರ ಉತ್ಸವ ನಡೆಯಿತು. ಮೆರವಣಿಗೆಗೆ ಯಾವುದೇ ಅವಕಾಶ ಇರಲಿಲ್ಲ.
'ಪ್ರಜಾವಾಣಿ'ಯ ಗುರುವಾರದ (ಸೆ.9) ಸಂಚಿಕೆಯಲ್ಲಿ ಸಂಗ್ರಹ ಚಿತ್ರವು ತಪ್ಪಾಗಿ ಪ್ರಕಟವಾಗಿತ್ತು.

ವಿದ್ಯಾರ್ಥಿಗಳಿಂದ ಅಪ್ಪಿಕೊ ಚಳವಳಿ

ರಸ್ತೆ ವಿಸ್ತರಣೆಗಾಗಿ ಮರಗಳನ್ನು ಕಡಿಯದಂತೆ ಒತ್ತಾಯ

ಪ್ರಜಾವಾಣಿ ವಾರ್ತೆ

ದಾಸರಹಳ್ಳಿ: ಅಬ್ಬಿಗೆರೆಯಿಂದ ಚಿಕ್ಕಬಾಣಾವರ ನಡುವಿನ ಮುಖ್ಯ ರಸ್ತೆ ವಿಸ್ತರಣೆಗಾಗಿ ಮರಗಳನ್ನು ಕಡಿಯಬಾರದು ಎಂದು ಅಬ್ಬಿಗೆರೆ ಶಾಲಾ ವಿದ್ಯಾರ್ಥಿಗಳು ಮರಗಳನ್ನು ತಬ್ಬಿಕೊಳ್ಳುವ ಮೂಲಕ (ಅಪ್ಪಿಕೊ ಚಳವಳಿ) ಪ್ರತಿಭಟನೆ ನಡೆಸಿದರು.

ಬಿಬಿಎಂಪಿಯ ಶೆಟ್ಟಿಹಳ್ಳಿ ವಾರ್ಡ್‌ನ ವ್ಯಾಪ್ತಿಯಲ್ಲಿರುವ ಅಬ್ಬಿಗೆರೆ ಸರ್ಕಾರಿ ಶಾಲೆಯ ಆವರಣದಲ್ಲಿನ ಮರಗಳನ್ನು ಕಡಿಯಲು ಬಿಬಿಎಂಪಿ ಸಿಬ್ಬಂದಿ ಮುಂದಾದಾಗ ಮರಗಳನ್ನು ಅಪ್ಪಿಕೊಂಡ ವಿದ್ಯಾರ್ಥಿಗಳು ಅವುಗಳನ್ನು ಕಡಿಯದಂತೆ ತಡೆದರು. ಶಾಲಾ ಮಕ್ಕಳಿಗಾಗಿ ಮೀಸಲಿಟ್ಟಿರುವ ಮೈದಾನವನ್ನು ಯಾವುದೇ ಕಾರಣಕ್ಕೂ ರಸ್ತೆ ಅಭಿವೃದ್ಧಿಗೆ ಬಳಸಬಾರದು ಎಂದು ಒತ್ತಾಯಿಸಿದರು.

'ಶಾಲೆ ಆವರಣದಲ್ಲಿ ನೂರಾರು ಮರಗಳಿವೆ. ನಮ್ಮ ಹಿರಿಯ ವಿದ್ಯಾರ್ಥಿಗಳು ಮೈಲು ದೂರದಿಂದ ನೀರು ಹೊತ್ತು ತಂದು ಇವುಗಳನ್ನು ಬೆಳೆಸಿದ್ದಾರೆ. ಈಗ ರಸ್ತೆ ವಿಸ್ತರಣೆಗಾಗಿ ಅವುಗಳನ್ನು ಕಡಿಯದಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೂಚನೆ ನೀಡಬೇಕು' ಎಂದು ವಿದ್ಯಾರ್ಥಿಗಳು ಮನವಿ ಮಾಡಿದರು.

ರಸ್ತೆ ವಿಸ್ತರಣೆಗಾಗಿ ಮರ ಕಡಿಯಬಾರದು ಎಂದು ಒತ್ತಾಯಿಸಿ ಅಬ್ಬಿಗೆರೆ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಅಪ್ಪಿಕೊ ಚಳವಳಿ ನಡೆಸಿದರು

'ಶಾಲಾ ಆವರಣದಲ್ಲಿರುವ ಮರಗಳನ್ನು ತೆರವುಗೊಳಿಸುವ ಕುರಿತು ಶಿಕ್ಷಣ ಇಲಾಖೆಯಾಗಲಿ ಅಥವಾ ಅರಣ್ಯ ಇಲಾಖೆಯಾಗಲಿ ಯಾವುದೇ ಸೂಚನೆ ಅಥವಾ ನೋಟಿಸ್ ನೀಡಿಲ್ಲ' ಎಂದು ಶಿಕ್ಷಕರು ತಿಳಿಸಿದರು.

'ಈ ಬಗ್ಗೆ ಪಾಲಿಕೆ ಅಧಿಕಾರಿಗಳನ್ನು ಸಂಪರ್ಕಿಸಿದರೂ ಯಾವುದೇ ಸ್ಪಂದನೆ ನೀಡಲಿಲ್ಲ' ಎಂದು ಅಸಮಧಾನ ವ್ಯಕ್ತಪಡಿಸಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಭಿಮತ

'ಸಂಸ್ಕೃತ ಪ್ರಸಾರಗೊಂಡಲ್ಲಿ ಸಂಸ್ಕೃತಿ ಸುಭದ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯ ಸಂಸ್ಕೃತಿ ಹಾಗೂ ಪುರಾತನ ಭಾಷೆಯಾದ ಸಂಸ್ಕೃತ ಒಂದಕ್ಕೊಂದು ನಿಕಟ ಸಂಬಂಧ ಹೊಂದಿವೆ. ದೇಶದ ಸಂಸ್ಕೃತಿ ಸುಭದ್ರಗೊಳ್ಳಬೇಕಾದರೆ ಸಂಸ್ಕೃತದ ಪ್ರಚಾರ ನಡೆಯಬೇಕು' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ತಿಳಿಸಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ನಗರದಲ್ಲಿ ಗುರುವಾರ ಹಮ್ಮಿಕೊಂಡ ಸಮಾರಂಭದಲ್ಲಿ 'ಸಂಸ್ಕೃತ ಮಹೋತ್ಸವ'ವನ್ನು ಉದ್ಘಾಟಿಸಿದ ಅವರು, ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ 15 ಮಂದಿಗೆ 'ಸಂಸ್ಕೃತ ಗ್ರಂಥ ಪುರಸ್ಕಾರ' ಪ್ರದಾನ ಮಾಡಿದರು.

'ಸಂಸ್ಕೃತವು ವಿಶ್ವದ ಹಲವು ಭಾಷೆಗಳ ತಾಯಿ. ಹೇರಳ ಭಾಷಾ ಸಂಪನ್ಮೂಲವನ್ನು ಹೊಂದಿರುವ ಸಂಸ್ಕೃತವನ್ನು ಸಂಕುಚಿತ ದೃಷ್ಟಿಕೋನದಿಂದ ನೋಡುವ ಮನೋಭಾವ ತೊಲಗಬೇಕು. ಭಾಷೆಯು ಸರ್ವವ್ಯಾಪಿ, ಸರ್ವಸ್ಪರ್ಶಿಯಾದಲ್ಲಿ ದೇಶದ ಸಂಸ್ಕೃತಿಯೂ ಶ್ರೀಮಂತಗೊಳ್ಳುತ್ತದೆ. ಹಾಗಾಗಿ, ಈ ಭಾಷೆಯ ಪ್ರಸಾರಕ್ಕೆ ವಿದ್ವಾಂಸರು ಹಾಗೂ ವಿಶ್ವವಿದ್ಯಾಲಯ ಶ್ರಮಿಸಬೇಕು' ಎಂದರು.

'ಸಂಸ್ಕೃತವು ಪರಿಪೂರ್ಣ ವ್ಯಾಕರಣವನ್ನು ಹೊಂದಿದೆ. ಕಂಪ್ಯೂಟರ್ ಭಾಷೆಗಳನ್ನು ಅಭಿವೃದ್ಧಿಪಡಿಸುವಲ್ಲಿಯೂ ಈ ಭಾಷೆ ನೆರವಾಗಿದೆ. 'ವಸುಧೈವ ಕುಟುಂಬಕಂ' ಪರಿಕಲ್ಪನೆಯ ಹಿಂದೆಯೂ ಈ ಭಾಷೆಯ ಪ್ರಭಾವವಿದೆ. ಈ ಭಾಷೆ ಹಾಗೂ ಸಂಸ್ಕೃತಿಯ ಪ್ರಸಾರಕ್ಕೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಸಹಕಾರಿ. ಶಿಕ್ಷಣ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಆಗಲಿವೆ' ಎಂದು ತಿಳಿಸಿದರು.

ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ರಾಮಚಂದ್ರ ಭಟ್ ಕೋಟೆಮನೆ, 'ಸರ್ವರ ಕಲ್ಯಾಣ ಸಂಸ್ಕೃತದ ಆಶಯ. ಕನ್ನಡದ ವೈಜ್ಞಾನಿಕ ಹಾಗೂ ವೈಚಾರಿಕ ಸಾಹಿತ್ಯಕ್ಕೆ ಸಂಸ್ಕೃತದ ಕೊಡುಗೆ ಮಹತ್ವದ್ದು. ಸಂಸ್ಕೃತ ವಿಶ್ವವಿದ್ಯಾಲಯವು ಬೋಧನೆಯ ಜೊತೆಗೆ ಸಂಶೋಧನೆಯನ್ನೂ ಕೈಗೊಳ್ಳಬೇಕು' ಎಂದು ಹೇಳಿದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಇ. ದೇವನಾಥನ್, 'ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ನಿರ್ದೇಶನದಂತೆ ವಿಶ್ವವಿದ್ಯಾಲಯದಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಈ ವರ್ಷದಿಂದ ಅನುಷ್ಠಾನಗೊಳಿಸಲಾಗುತ್ತಿದೆ' ಎಂದು ಹೇಳಿದರು.

ಸಮಾರಂಭದಲ್ಲಿ 'ಸಂಸ್ಕೃತ ಗ್ರಂಥ ಪುರಸ್ಕಾರ' ಪ್ರದಾನ ಮಾಡಲಾಯಿತು. (ಕುಳಿತವರು ಎಡದಿಂದ) ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಎಂ. ಕೊಟ್ರೇಶ್, ಪ್ರೊ. ರಾಮಚಂದ್ರ ಭಟ್ ಕೋಟೆಮನೆ, ಥಾವರಚಂದ್ ಗೆಹಲೋತ್, ಪ್ರೊ.ಕೆ.ಇ. ದೇವನಾಥನ್, (ನಿಂತವರು) 'ಸಂಸ್ಕೃತ ಗ್ರಂಥ ಪುರಸ್ಕಾರ' ಸ್ವೀಕರಿಸಿದ ಡಾ.ಎಸ್.ಐ. ಹೆಗಡೆ, ಪುಷ್ಕರದೇವ ಪೂಜಾರಿ, ವಿದ್ವಾನ್ ಕೃಷ್ಣಪ್ರಸಾದ ಜಿ., ಕೆ. ಮಹೇಶ, ಕೊಕ್ಕಡ ಅನಂತಪದ್ಮನಾಭ ಶಾಸ್ತ್ರಿ, ಪ್ರೊ.ವಿ. ಗಿರೀಶ್ ಚಂದ್ರ, ಡಾ. ವಿಜಯಲಕ್ಷ್ಮಿ ಎಚ್.ಪಿ., ಡಾ.ಬಿ.ಎಸ್. ಮಹದೇವಯ್ಯ, ಡಾ. ಅನುಪಮಾ ಬಿ., ಡಾ.ಮ. ಜಯರಾಮ, ಡಾ. ದಿದ್ದಿಗಿ ವಂಶೀಕೃಷ್ಣ, ಡಾ. ವಿಶ್ವನಾಥ ಹೆಗಡೆ, ಡಿ. ಗಣಪತಿ ಶಾಸ್ತ್ರಿ, ಡಾ. ಸುನಂದಾ ಗುರಪ್ಪ ಭೂಪಾಳಿ ಹಾಗೂ ಪ್ರೊ. ಶ್ರೀನಿವಾಸ ವರಖೇಡಿ ಇದ್ದರು – ಪ್ರಜಾವಾಣಿ ಚಿತ್ರ

ವಂಚನೆ: ಎಂಜಿನಿಯರಿಂಗ್ ವಿದ್ಯಾರ್ಥಿ ವಿರುದ್ಧ ಆರೋಪ

ಫೋನ್‌ಪೇ ನಕಲಿ ಸಂದೇಶ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫೋನ್ ಪೇ' ಆ್ಯಪ್ ಮೂಲಕ ಹಣ ಪಾವತಿಸಿದ ರೀತಿಯಲ್ಲಿ ನಕಲಿ ಸಂದೇಶ ಕಳುಹಿಸಿ ವ್ಯಾಪಾರಿಗಳನ್ನು ವಂಚಿಸುತ್ತಿದ್ದ ಆರೋಪದಡಿ ಎಂಜಿನಿಯರಿಂಗ್ ವಿದ್ಯಾರ್ಥಿಯೊಬ್ಬನನ್ನು ಪಶ್ಚಿಮ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನಗರದ ಎಂಜಿನಿಯರಿಂಗ್ ಕಾಲೇಜೊಂದರಲ್ಲಿ ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಆರೋಪಿ, ನಿತ್ಯದ ಖರ್ಚಿಗಾಗಿ ಹಣ ಹೊಂದಿಸಲು ಕೃತ್ಯ ಎಸಗುತ್ತಿದ್ದ. ತನಿಖೆ ದೃಷ್ಟಿಯಿಂದ ಆತನ ಹೆಸರು ಗೌಪ್ಯವಾಗಿರಿಸಲಾಗಿದೆ. ಆತನಿಂದ ₹ 2 ಲಕ್ಷ ಮೌಲ್ಯದ 10 ಗ್ರಾಂ ಚಿನ್ನಾಭರಣ, 1.50 ಕೆ.ಜಿ ಬೆಳ್ಳಿ ಸಾಮಗ್ರಿ ಹಾಗೂ ಕ್ಯಾಮೆರಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರೋಪಿಯಿಂದ ಜಪ್ತಿ ಮಾಡಲಾದ ಬೆಳ್ಳಿ ಸಾಮಗ್ರಿ ಹಾಗೂ ಕ್ಯಾಮೆರಾ

'ಬೆಳ್ಳಿ ಸಾಮಗ್ರಿ ಮಾರಾಟ ಮಳಿಗೆಗೆ ಇತ್ತೀಚೆಗೆ ಹೋಗಿದ್ದ ಆರೋಪಿ, ₹ 1.06 ಲಕ್ಷ ಮೌಲ್ಯದ ಸಾಮಗ್ರಿಗಳನ್ನು ಖರೀದಿಸಿದ್ದ. ಮೊಬೈಲ್‌ನಿಂದ ಫೋನ್ ಪೇ ಆ್ಯಪ್ ಮೂಲಕ ಹಣ ಪಾವತಿಸಿದ್ದ. ಅದಕ್ಕೆ ಪುರಾವೆಯಾಗಿ ಸಂದೇಶವೂ ಬಂದಿತ್ತು. ಆರೋಪಿ ಮಳಿಗೆಯಿಂದ ಹೊರಟು ಹೋಗಿದ್ದ.'

ಅಪರಾಧ ಸುದ್ದಿ

'ಕೆಲ ಹೊತ್ತಿನ ನಂತರ, 'ಹಣ ಪಾವತಿ ಆಗಿಲ್ಲ' ಎಂಬ ಸಂದೇಶ ಮಾಲೀಕರಿಗೆ ಬಂದಿತ್ತು. ಆ ಬಗ್ಗೆ ಪರಿಶೀಲಿಸಿದಾಗ, ಆರೋಪಿ ನಕಲಿ ಸಂದೇಶ ಕಳುಹಿಸಿದ್ದ ಮಾಹಿತಿ ಗೊತ್ತಾಗಿತ್ತು. ಆರೋಪಿ ಮೊಬೈಲ್ ನಂಬರ್ ಸಹ ಸ್ವಿಚ್ ಆಫ್ ಆಗಿತ್ತು. ವಂಚನೆಗೀಡಾಗಿದ್ದ ಮಳಿಗೆ ಮಾಲೀಕ, ಠಾಣೆಗೆ ದೂರು ನೀಡಿದ್ದರು. ಅದರನ್ವಯ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬಡ ಕುಟುಂಬದ ಪೋಷಕರು, ವಿದ್ಯಾಭ್ಯಾಸದಲ್ಲಿ ಮುಂದಿದ್ದ ಮಗನನ್ನು ಎಂಜಿನಿಯರಿಂಗ್ ಕಾಲೇಜ್‌ಗೆ ಸೇರಿಸಿದ್ದರು. ಆರೋಪಿ ತನ್ನ ನಿತ್ಯದ ಖರ್ಚಿಗೆ ಹಣ ಹೊಂದಿಸಲು ಕೃತ್ಯ ಎಸಗುತ್ತಿದ್ದ. ಈ ಬಗ್ಗೆ ಹೇಳಿಕೆ ನೀಡಿದ್ದಾನೆ' ಎಂದೂ ಮೂಲಗಳು ಹೇಳಿವೆ.

'ಕೆಲ ದಿನಗಳ ಹಿಂದಷ್ಟೇ ಆರೋಪಿ, ಅಂಗಡಿಯೊಂದರಲ್ಲಿ ನಕಲಿ ಸಂದೇಶ ಕಳುಹಿಸಿ ಹಣ ಉಳಿಸಿಕೊಂಡಿದ್ದ. ಆ ಬಗ್ಗೆ ಯಾರಿಗೂ ಅನುಮಾನ ಬಂದಿರಲಿಲ್ಲ. ಹೀಗಾಗಿ, ಕೃತ್ಯ ಮುಂದುವರಿಸಿದ್ದ. ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಹೇಳಿವೆ.

ಎಚ್ಚರಿಕೆ ವಹಿಸಿ: 'ಅಂಗಡಿಗೆ ಹೋಗುತ್ತಿದ್ದ ಆರೋಪಿ, ಫೋನ್ ಪೇ ಮೂಲಕವೇ ಹಣ ಪಾವತಿ ಮಾಡುತ್ತೇನೆಂದು ಹೇಳಿ ವಂಚಿಸುತ್ತಿದ್ದ. ಆ್ಯಪ್ ಮೂಲಕ ಹಣ ವರ್ಗಾವಣೆ ಸಮಯದಲ್ಲಿ ವ್ಯಾಪಾರಿಗಳು ಎಚ್ಚರಿಕೆ ವಹಿಸಬೇಕು' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ದೌರ್ಜನ್ಯ: ಆರೋಪಿಗಳ ಬಂಧನಕ್ಕೆ ಆಗ್ರಹ

ದೊಡ್ಡಬಳ್ಳಾಪುರ: 'ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ನಡೆದ ಘಟನೆ ಬಗ್ಗೆ ಗೃಹಸಚಿವರು ಹೇಳಿಕೆಯನ್ನು ನೀಡಿಲ್ಲ. ಹೆಣ್ಣು ಮಕ್ಕಳ ಮೇಲೆ ನಡೆದ ದೌರ್ಜನ್ಯ ಘಟನೆ ಜಗಜ್ಜಾಹೀರಾದರೂ ಪೊಲೀಸರು ಯಾರನ್ನೂ ಬಂಧಿಸದೆ ಇರುವುದು ಖಂಡನೀಯ' ಎಂದು ಪಿವಿಸಿ ರಾಜ್ಯ ಸಮಿತಿ ರಾಜ್ಯ ಅಧ್ಯಕ್ಷ ಮುನಿಆಂಜಿನಪ್ಪ ಹೇಳಿದರು.

ನಗರದ ತಾಲ್ಲೂಕು ಕಚೇರಿ ಮುಂದೆ ಪ್ರಜಾ ವಿಮೋಚನ ಚಳವಳಿ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

'ಶ್ರೀನಿವಾಸಪುರ ಘಟನೆಗೆ ಕಾರಣರಾದವರನ್ನು ಬಂಧಿಸುವ ಪ್ರಯತ್ನ ಮಾಡಿಲ್ಲ. ಗೃಹ ಸಚಿವರು ನೈತಿಕ ಹೊಣೆ ಹೊತ್ತು ಈ ಕೂಡಲೇ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದರು.

'ಕಿರುಕುಳ ನೀಡುತ್ತಿದ್ದ ಹುಡುಗರಿಗೆ ವಿದ್ಯಾರ್ಥಿನಿಯರ ಪೋಷಕರು ಬುದ್ಧಿಮಾತು ಹೇಳಿದ್ದರು. ಈ ಕುರಿತು ಕೋಪಗೊಂಡ ಪುಂಡರು ಮತ್ತು ಅವರ ಬೆಂಬಲಿಗರು ಚಲಿಸುತ್ತಿದ್ದ ಬಸ್ಸನ್ನು ಅಡ್ಡಗಟ್ಟಿ ವಿದ್ಯಾರ್ಥಿಗಳನ್ನು ಕೆಳಗಿಳಿಸಿ ಹಲ್ಲೆ ಮಾಡಿದ್ದಾರೆ. ವಿದ್ಯಾರ್ಥಿಗಳು ಮತ್ತು ಅವರ ಪೋಷಕರ ಮೇಲೆ ದೌರ್ಜನ್ಯ ನಡೆಸಿದ್ದು ತಲೆ ತಗ್ಗಿಸಬೇಕಾದ ವಿಚಾರವಾಗಿದೆ' ಎಂದರು.

IN THE COURT OF XXX ADDL. CITY CIVIL JUDGE, BANGALORE (CCH-31)
EXECUTION PETITION No. 649/2021
IN
O.S. No. 1156/2014

BETWEEN: C. Bharath Kumar S/o Chandmal, aged about 67 years, No. 13, 4th Cross, Shankarpuram, Bangalore - 560 004. ... DECREE HOLDER

AND: K Thayanayagi, Since Dead by LRs K. VIJAYALAKSHMI and others ... JUDGEMENT DEBTORS

NOTICE TO JUDGEMENT DEBTOR UNDER ORDER V RULE 20 (1-A)

To, JUDGEMENT DEBTOR NO. 1: SMT. K. THAYANAYAGI, SINCE DEAD BY LR'S,

1. K. VIJAYALAKSHMI W/o NARASIMHA MURTHY, AGED MAJOR, R/AT; DOMBARAHALLI, LAKSHMIPURA POST, BANGALORE NORTH TALUK.

WHEREAS the above named has filed the above petition for execution of the decree passed in O.S. No. 1156/2014 dated 06/01/2021, for delivery of vacant possession of the schedule property in favour of the Decree Holder and other reliefs. You, the LR of Judgement Debtor No. 1 is hereby summoned to appear in this court in person on 29-09-2021 at 11 O'clock in the forenoon to answer the question to the same.

Take notice that, in default of your appearance on the day before mentioned, the petition will be heard and determined in your absence.

SCHEDULE

ALL that piece and parcel of entire residential property bearing Katha No. 1500, Sy No. 16/3A, situated at 1st Cross lake View, Vidyanagara (Dasarahalli), Bangalore, Consisting of Ground floor and first floor, measuring east to west 34.5 feet and north to south 40 feet totally measuring 1380 sq ft and bounded on the East by: Vasudeva Rao's Property, West by: Nanjappa's Property, North by: Somaiah & Doreswamy Reddy Property, South by: 20 feet Road.

Given under my hand and seal of the Court on 08-09-2021.

By order of the court, Assistant Registrar, City Civil Court, Bangalore.

Advocate for Decree Holder:
GANESH NAG B.V.
SAPPANNAVAR AND GSK LEGAL
No. 1, 2nd Floor, 2nd Main Road, (Opp. Hotel Kanishka), Gandhinagar, Bengaluru-560009.

ಸಾರ್ವಜನಿಕ ಪ್ರಕಟಣೆ

ಈ ದಿನ ಪ್ರಕಟಿಸುತ್ತಿರುವ ಸಾರ್ವಜನಿಕ ಪ್ರಕಟಣೆಯ ವಿಚಾರವೇನೆಂದರೆ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು (1) ಶ್ರೀದೇವಿ .ಟಿ.ಎಸ್, ಕೋಂ ಮಾರುತಿ .ಎಸ್.ಕೆ, (2) ದೀಪಕ್ ಸ್ಕೂಲ್ ಪರವಾಗಿ ಪ್ರತಿನಿಧಿಸಿರುವ ಕಾರ್ಯದರ್ಶಿ (3) ಮೆ. ದೀಪಕ್ ಎಜುಕೇಷನ್ ಅಂಡ್ ವುಮೆನ ವೆಲ್‌ಫೇರ್ ಟ್ರಸ್ಟ್, 4) Varthana Finance Pvt. Ltd. (Formerly known as Thirumani Finance Pvt. Ltd.) ರವರಿಂದ ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ.

ಕ್ರಯಕ್ಕೆ ಪಡೆದವರು: ರಾಜ್‌ಕುಮಾರ್, ನಂ. 146, 9ನೇ ಮುಖ್ಯರಸ್ತೆ, 60 ಅಡಿ ರಸ್ತೆ, ಜೆ.ಸಿ. ನಗರ, ಮಹಾಲಕ್ಷ್ಮಿಪುರಂ ಲೇಔಟ್, ಬೆಂಗಳೂರು–560086.

ಯಾರಾದರೂ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ತಕರಾರು/ಹಕ್ಕು ಹೊಂದಿರುವವರು/ವ್ಯಾಜ್ಯ ಇದ್ದರೆ ಅವರು/ಅವನು/ಅವಳು ಸರಿಯಾದ ದಾಖಲಾತಿಯೊಂದಿಗೆ ಸಾರ್ವಜನಿಕ ಪ್ರಕಟಣೆ ದಿನಾಂಕದಿಂದ 15 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು. ಒಂದು ವೇಳೆ ಯಾವುದೇ ರೀತಿಯ ತಕರಾರು/ಹಕ್ಕು ಹೊಂದಿರುವವರು/ವ್ಯಾಜ್ಯಗಳು ಬರದಿದ್ದ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಮೇಲ್ಕಂಡ ಸ್ವತ್ತಿನ ಮಾಲೀಕರಿಂದ ಕ್ರಯದ ಪ್ರಕ್ರಿಯೆಯನ್ನು ಮಾಡಿಕೊಳ್ಳುತ್ತಾರೆ. ಈ ಸಾರ್ವಜನಿಕ ಪ್ರಕಟಣೆಗೆ ಸಂಬಂಧಿಸಿದಂತೆ 15 ದಿನಗಳ ನಂತರದ ಯಾವುದೇ ತಕರಾರು/ಹಕ್ಕು ಹೊಂದಿರುವವರು/ವ್ಯಾಜ್ಯಗಳು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಅನುಸೂಚಿ ವಿವರ

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಕರಿವೋಬನಹಳ್ಳಿ ಗ್ರಾಮದ ಅಸೆಸ್‌ಮೆಂಟ್ ನಂ. 54, ಖಾತ ನಂ. 134 ಮತ್ತು 273, ಸೈಟ್ ನಂ. 62, 63, 64 ಮತ್ತು 65ನೇ ನಂಬರು ನಿವೇಶನಗಳಾಗಿದ್ದು, ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ 4980 ಚದರಡುಗಳು ಅಳತೆಯುಳ್ಳ (ಸೂಚನೆ ಕ್ರಯಪತ್ರದಲ್ಲಿ ನಮೂದಿಸಿರುವ 5400 ಚದರಡಿಗಳು) ಕಟ್ಟಡ ಸಹಿತವಾದ ಸ್ವತ್ತಿಗೆ.

ಚಕ್ಕುಬಂದಿ: 62ನೇ ನಂಬರು ನಿವೇಶನಕ್ಕೆ: ಪೂರ್ವಕ್ಕೆ: ಸೈಟ್ ನಂ. 63, ಪಶ್ಚಿಮಕ್ಕೆ: ಸೈಟ್ ನಂ. 61, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸೈಟ್ ನಂ. 65.

63ನೇ ಮತ್ತು 64ನೇ ನಂಬರು ನಿವೇಶನಗಳಿಗೆ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ನಂ. 62 ಮತ್ತು 65, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ರಸ್ತೆ.

65ನೇ ನಂಬರು ನಿವೇಶನಕ್ಕೆ: ಪೂರ್ವಕ್ಕೆ: ಸೈಟ್ ನಂ. 64, ಪಶ್ಚಿಮಕ್ಕೆ: ಸೈಟ್ ನಂ. 66, ಉತ್ತರಕ್ಕೆ: ಸೈಟ್ ನಂ. 62, ದಕ್ಷಿಣಕ್ಕೆ: ರಸ್ತೆ.

ಸಹಿ/– ಚಂದ್ರಶೇಖರ ಎನ್., ವಕೀಲರು
ನಂ. 36, ಶಾಂತಿ ಕಾಂಪ್ಲೆಕ್ಸ್, ಬಿ.ಎಂ.ಟಿ.ಸಿ ಬಸ್ ಡಿಪೋ ರಸ್ತೆ, ಸೀಗೇಹಳ್ಳಿ ಗೇಟ್, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು–560091. ಮೊ: 8861172474

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಪ್ರಕಟಣೆ

ರೆವಿನ್ಯೂ ನಿವೇಶನದಾರರಿಗೆ 30x40 ಅಡಿ ಅಳತೆಯ ನಿವೇಶನದ ಹಂಚಿಕೆ
(ಪ್ರಸ್ತಾವಿತ ಡಾ॥ ಶಿವರಾಮ ಕಾರಂತ್ ಬಡಾವಣೆ)
(ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಸಂಖ್ಯೆ Misc. No. 1614-1616/2019, CA No. 7661-7663/2018, dated 07.09.2021)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಲು ಉದ್ದೇಶಿಸಿರುವ ಡಾ. ಕೆ. ಶಿವರಾಮಕಾರಂತ ಬಡಾವಣೆಗೆ ಸಂಬಂಧಪಟ್ಟಂತೆ ರೆವಿನ್ಯೂ ನಿವೇಶನದಾರರಿಗೆ 30X40 ಅಡಿ ಅಳತೆಯ ನಿವೇಶನಕ್ಕೆ ಅರ್ಜಿಯನ್ನು ಸಲ್ಲಿಸಲು 17.09.2021ರಂದು ಕೊನೆಯ ದಿನಾಂಕವನ್ನು ನಿಗದಿಪಡಿಸಲಾಗಿತ್ತು.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಪ್ರಾಧಿಕಾರಕ್ಕೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ದಿನಾಂಕ 31.10.2021ರೊಳಗೆ ಸಲ್ಲಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ಅಧಿಕೃತ ಜಾಲತಾಣವಾದ www.bdabangalore.org ಸಂಪರ್ಕಿಸಿ. ಉಳಿದಂತೆ ನಿಯಮ ಹಾಗೂ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/- ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಪೊಲೀಸರಿಂದ ಇಬ್ಬರ ಬಂಧನ • ₹ 3 ಲಕ್ಷ ಮೌಲ್ಯದ ಆಭರಣ ಜಪ್ತಿ

ನಕಲಿ ಪಿಸ್ತೂಲ್ ತೋರಿಸಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಪಿಸ್ತೂಲ್ ತೋರಿಸಿ ಕೊಲೆ ಬೆದರಿಕೆಯೊಡ್ಡಿ ರೈಲು ಪ್ರಯಾಣಿಕರನ್ನು ಸುಲಿಗೆ ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

'ಬಿಹಾರದ ರವಿ ಸಿಂಗ್ (27) ಹಾಗೂ ಉತ್ತರ ಪ್ರದೇಶದ ಸಂದೀಪ್ ಅಲಿಯಾಸ್ ರಜಪೂತ್ ಸಿಂಗ್ (32) ಬಂಧಿತರು. ಅವರಿಂದ ಸುಮಾರು ₹ 3 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ನಕಲಿ ಪಿಸ್ತೂಲ್ ಜಪ್ತಿ ಮಾಡಲಾಗಿದೆ' ಎಂದು ಬೆಂಗಳೂರು ರೈಲ್ವೆ ಪೊಲೀಸರು ಹೇಳಿದರು.

ರವಿ ಸಿಂಗ್

ಸಂದೀಪ್

'ಕೆಲ ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದ ಆರೋಪಿಗಳು, ಬಾರ್, ಗ್ಯಾರೇಜ್ ಹಾಗೂ ಇತರೆಡೆ ಕೆಲಸ ಮಾಡುತ್ತಿದ್ದರು. ಅಕ್ರಮವಾಗಿ ಹಣ ಸಂಪಾದಿಸಲು ಮುಂದಾಗಿದ್ದ ಆರೋಪಿಗಳು, ಸುಲಿಗೆ ಮಾಡಲು ಸಂಚು ರೂಪಿಸಿದ್ದರು. ಅದಕ್ಕಾಗಿ ನಕಲಿ ಪಿಸ್ತೂಲ್ ಖರೀದಿಸಿದ್ದರು' ಎಂದೂ ತಿಳಿಸಿದರು.

ಮೂರು ಬಾರಿ ಕೃತ್ಯ: 'ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ನಿಲುಗಡೆಗೆ ಜಾಗವಿಲ್ಲದಿದ್ದಾಗ, ತುಮಕೂರು ಕಡೆಯಿಂದ ಬರುವ ರೈಲುಗಳನ್ನು ಶೇಷಾದ್ರಿಪುರ ಬಳಿ ಕೆಲ ನಿಮಿಷ ನಿಲ್ಲಿಸಲಾಗುತ್ತದೆ. ಇದೇ ಸಂದರ್ಭದಲ್ಲಿ ಬೋಗಿ ಏರುತ್ತಿದ್ದ ಆರೋಪಿಗಳು, ಒಂಟಿಯಾಗಿದ್ದವರನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದರು' ಎಂದು ಪೊಲೀಸರು ವಿವರಿಸಿದರು.

'ಆ. 22, 25 ಹಾಗೂ 30ರಂದು ಆರೋಪಿಗಳು ಕೃತ್ಯ ಎಸಗಿದ್ದರು. ಈ ಬಗ್ಗೆ ಪ್ರಕರಣಗಳೂ ದಾಖಲಾಗಿದ್ದವು. ತನಿಖೆ ಕೈಗೊಂಡಿದ್ದ ವಿಶೇಷ ತಂಡ, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ' ಎಂದೂ ಹೇಳಿದರು.

ಮಹಿಳೆಯರೇ ಗುರಿ: 'ಬೋಗಿಯಲ್ಲಿ ಇರುತ್ತಿದ್ದ ಒಂಟಿ ಮಹಿಳೆಯರನ್ನೇ ಗುರಿಯಾಗಿಸಿಕೊಂಡು ಆರೋಪಿಗಳು ಕೃತ್ಯ ಎಸಗುತ್ತಿದ್ದರು. ಮಹಿಳೆಯರ ಹಣೆಗೆ ನಕಲಿ ಪಿಸ್ತೂಲ್ ಹಿಡಿದು, 10 ಎಣಿಸುವ ಮುಂಚೆ ಚಿನ್ನಾಭರಣ ಹಾಗೂ ನಗದು ನೀಡುವಂತೆ ಒತ್ತಾಯಿಸುತ್ತಿದ್ದರು. ಜೀವಭಯದಿಂದ ಮಹಿಳೆಯರು, ಚಿನ್ನಾಭರಣ ಬಿಚ್ಚಿ ಕೊಡುತ್ತಿದ್ದರು. ವಿರೋಧ ವ್ಯಕ್ತಪಡಿಸಿದರೆ, ಆರೋಪಿಗಳೇ ಚಿನ್ನಾಭರಣ ಕಿತ್ತುಕೊಳ್ಳುತ್ತಿದ್ದರು' ಎಂದೂ ಪೊಲೀಸರು ವಿವರಿಸಿದರು.

ಯೋಧ ಸಾವು

ಪ್ರಜಾವಾಣಿ ವಾರ್ತೆ

ಕೆರೂರ (ಬಾಗಲಕೋಟೆ ಜಿಲ್ಲೆ): ಜಮ್ಮು ಕಾಶ್ಮೀರದಲ್ಲಿ ಕರ್ತವ್ಯ ನಿರತರಾಗಿದ್ದ ವೇಳೆ ಹಾವು ಕಚ್ಚಿ ಇಲ್ಲಿಗೆ ಸಮೀಪದ ಹಲಕುರ್ಕಿ ಗ್ರಾಮದ ಯೋಧ ಚಿದಾನಂದ ಚನ್ನಬಸಪ್ಪ ಶಿರಸ್ತೇದಾರ (25) ಬುಧವಾರ ರಾತ್ರಿ ಮೃತಪಟ್ಟಿದ್ದಾರೆ.

ಯೋಧ ಚಿದಾನಂದ ಹಲಕುರ್ಕಿ

ಅವರಿಗೆ ತಂದೆ ಚನ್ನಬಸಪ್ಪ, ತಾಯಿ ರತ್ನಮ್ಮ, ಸಹೋದರ ಬಸವರಾಜ ಇದ್ದಾರೆ. ಆರೂವರೆ ವರ್ಷಗಳ ಹಿಂದೆ ಅವರು ಭಾರತೀಯ ಸೇನೆಯ ಮರಾಠಾ ರೆಜಿಮೆಂಟ್‌ನಲ್ಲಿ ಸೈನಿಕರಾಗಿ ಆಯ್ಕೆಗೊಂಡು ಜಮ್ಮುವಿನಲ್ಲಿ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ನಾಳೆ ಸಂಜೆ ಪಾರ್ಥಿವ ಶರೀರ : ಯೋಧನ ಪಾರ್ಥಿವ ಶರೀರ ಸ್ವಗ್ರಾಮಕ್ಕೆ ಶುಕ್ರವಾರ ಸಂಜೆ ಬರಲಿದ್ದು ಅಂತ್ಯ ಸಂಸ್ಕಾರದ ಸ್ಥಳ ನಿಗದಿಗಾಗಿ ಬಾದಾಮಿ ತಾಲ್ಲೂಕು ಆಡಳಿತ ಸಿದ್ಧತೆ ನಡೆಸಿದೆ.

ಬಾದಾಮಿ ತಹಶೀಲ್ದಾರ್ ಎಸ್.ಬಿ. ಇಂಗಳೆ, ಸಿಪಿಐ ರಮೇಶ ಹಾನಾಪುರ ಯೋಧನ ಗ್ರಾಮಕ್ಕೆ ತೆರಳಿ, ಅಂತ್ಯಸಂಸ್ಕಾರದ ಸ್ಥಳ ನಿಗದಿಗಾಗಿ ಗ್ರಾಮದ ಹಿರಿಯರು, ಪ್ರಮುಖರೊಂದಿಗೆ ಚರ್ಚಿಸಿದರು. ಬಾದಾಮಿ ಮಾರ್ಗದ ಗ್ರಾಮದ ಅಗಸಿ ಬಳಿ ಅಂತ್ಯಸಂಸ್ಕಾರ ಹಾಗೂ ಪುತ್ಥಳಿ ನಿರ್ಮಾಣಕ್ಕೆ ಸ್ಥಳ ನಿಗದಿ ಮಾಡಲಾಯಿತು ಗ್ರಾಮಸ್ಥರು 'ಪ್ರಜಾವಾಣಿ'ಗೆ ತಿಳಿಸಿದರು.

₹ 17 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಸುಲಿಗೆ: ಆರೋಪಿಗಳು ಬಲೆಗೆ

ಬೆಂಗಳೂರು: ರಸ್ತೆಯಲ್ಲಿ ಸಾರ್ವಜನಿಕರನ್ನು ಅಡ್ಡಗಟ್ಟಿ ಚಾಕು ತೋರಿಸಿ ಸುಲಿಗೆ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಅನ್ನಪೂರ್ಣೇಶ್ವರಿನಗರ ಪೊಲೀಸರು ಬಂಧಿಸಿದ್ದಾರೆ.

'ಅರಸೀಕೆರೆಯ ಪರಮೇಶ್ವರಯ್ಯ, ಜಗದೀಶ್, ಶಶಿಕುಮಾರ್ ಬಂಧಿತರು. ಅವರಿಂದ ₹ 17 ಲಕ್ಷ ಮೌಲ್ಯದ 347 ಗ್ರಾಂ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ಬೈಕ್ ಚಾಕು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರೋಪಿಗಳಿಂದ ಜಪ್ತಿ ಮಾಡಲಾದ ಚಿನ್ನಾಭರಣ

'ಸಂಬಂಧಿಕರೇ ಆಗಿರುವ ಆರೋಪಿಗಳು, ಕೆಲಸ ಹುಡುಕಿಕೊಂಡು 5 ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದರು. ಪರಮೇಶ್ವರಯ್ಯ ಹಾಗೂ ಜಗದೀಶ್, ಪೇಟಿಂಗ್ ಕೆಲಸಕ್ಕೆ ಸೇರಿದ್ದರು. ಶಶಿಕುಮಾರ್, ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು.'

'ಕುಟುಂಬ ನಿರ್ವಹಣೆಗೆ ಸಂಬಳ ಸಾಲದ ಕಾರಣ ಆರೋಪಿಗಳು, ಸುಲಿಗೆ ಮಾಡಲು ಸಂಚು ರೂಪಿಸಿದ್ದರು. ಸರದಿ ಪ್ರಕಾರ ಪಲ್ಸರ್ ಬೈಕ್‌ನಲ್ಲಿ ಸುತ್ತಾಡಿ ಸಾರ್ವಜನಿಕರನ್ನು ಬೆದರಿಸಿ ಚಿನ್ನಾಭರಣ ಹಾಗೂ ಮೊಬೈಲ್ ಕಿತ್ತೊಯ್ಯುತ್ತಿದ್ದರು. ಚಿನ್ನಾಭರಣವನ್ನು ಅಡವಿಟ್ಟು, ಅದರಿಂದ ಬಂದ ಹಣವನ್ನು ಹಂಚಿಕೊಳ್ಳುತ್ತಿದ್ದರು' ಎಂದೂ ಮೂಲಗಳು ಹೇಳಿವೆ.

'ನಿತ್ಯವೂ ಕೃತ್ಯ ಎಸಗಿದರೆ ಪೊಲೀಸರು ಬಂಧಿಸುತ್ತಾರೆ ಎಂದು, ಅವರು ತಿಂಗಳಿಗೊಮ್ಮೆ ಮಾತ್ರ ಸುಲಿಗೆ ಮಾಡುತ್ತಿದ್ದರು. ಅದೇ ಕಾರಣಕ್ಕೆ, 2018ರಿಂದ ಕೃತ್ಯ ಎಸಗಿದರೂ ಸುಳಿವು ಸಿಕ್ಕಿರಲಿಲ್ಲ.'

'ಅನ್ನಪೂರ್ಣೇಶ್ವರಿನಗರ, ಬಸವೇಶ್ವರನಗರ, ರಾಜರಾಜೇಶ್ವರಿನಗರ, ದಾಬಸ್‌ಪೇಟೆ, ಹೊಸಕೋಟೆ, ಮಾದನಾಯಕನಹಳ್ಳಿ, ಕೊರಟಗೆರೆ, ನಾಗಮಂಗಲ, ಬೆಸಗರನಹಳ್ಳಿ ಹಾಗೂ ಐಜೂರು ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಸುಲಿಗೆ ಮಾಡಿರುವುದು ತನಿಖೆಯಿಂದ ತಿಳಿದುಬಂದಿದೆ.'

ಸಿ.ಸಿ.ಟಿ.ವಿ ಕ್ಯಾಮೆರಾ ಸುಳಿವು: 'ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ನಿವಾಸಿಯೊಬ್ಬರು ಆ. 26ರಂದು ವಾಯುವಿಹಾರ ಮಾಡುತ್ತಿದ್ದರು. ಅವರನ್ನು ಅಡ್ಡಗಟ್ಟಿದ್ದ ಆರೋಪಿಗಳು, ಚಾಕು ತೋರಿಸಿ ಬೆದರಿಸಿ 22 ಗ್ರಾಂ ಚಿನ್ನದ ಸರವನ್ನು ಸುಲಿಗೆ ಮಾಡಿಕೊಂಡು ಪರಾರಿಯಾಗಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನಿವಾಸಿ ನೀಡಿದ್ದ ದೂರು ಆಧರಿಸಿ ಘಟನಾ ಸ್ಥಳ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಿದಾಗ, ಆರೋಪಿಗಳ ಸುಳಿವು ಸಿಕ್ಕಿತ್ತು' ಎಂದೂ ಮೂಲಗಳು ತಿಳಿಸಿವೆ.

ಬೆಂಬಲ ಬೆಲೆಗೆ ಒತ್ತಾಯ

ದೇವನಹಳ್ಳಿ: ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಘೋಷಿಸುವಂತೆ ಒತ್ತಾಯಿಸಿ ಜಿಲ್ಲಾ ಕರ್ನಾಟಕ ಪ್ರದೇಶ ಭಾರತೀಯ ಕಿಸಾನ್ ಸಂಘದ ವತಿಯಿಂದ ತಾಲ್ಲೂಕಿನ ಬೀರಸಂದ್ರ ಗ್ರಾಮದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

ಜಿಲ್ಲಾ ಭಾರತೀಯ ಕಿಸಾನ್ ಸಂಘದ ಅಧ್ಯಕ್ಷ ಅರುಣ್ ಕುಮಾರ್ ಮಾತನಾಡಿ, 'ರೈತನು ಬೆಳೆದ ಬೆಳೆಗಳಿಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆಯಿಲ್ಲ, ಬೆಂಬಲ ಬೆಲೆಯೂ ಇಲ್ಲ' ಎಂದರು.

ಜಿಲ್ಲಾ ಭಾರತೀಯ ಕಿಸಾನ್ ಸಂಘದ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಬಿ.ಎಸ್. ಶಿವಕುಮಾರ್ ಆರಾಧ್ಯ ಮಾತನಾಡಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ವಿಜಯ ಈ ರವಿಕುಮಾರ್ ಅವರ ಮೂಲಕ ಪ್ರಧಾನಿ ನರೇಂದ್ರಮೋದಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಕ್ಲಬ್‌ನಲ್ಲಿ ಅಕ್ರಮವಾಗಿ ಜೂಜಾಟ; ಇನ್‌ಸ್ಪೆಕ್ಟರ್ ತಲೆದಂಡ

ಬೆಂಗಳೂರು: ಕ್ಲಬ್‌ನಲ್ಲಿ ಅಕ್ರಮವಾಗಿ ಜೂಜಾಟ ನಡೆಯುತ್ತಿದ್ದರೂ ಕಾನೂನು ಕ್ರಮ ಕೈಗೊಳ್ಳದೇ ಕರ್ತವ್ಯಲೋಪ ಎಸಗಿದ್ದ ಆರೋಪದಡಿ ಸಂಪಿಗೆಹಳ್ಳಿ ಠಾಣೆ ಇನ್‌ಸ್ಪೆಕ್ಟರ್ ಎಚ್.ಬಿ. ಸುರೇಶ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಠಾಣೆ ವ್ಯಾಪ್ತಿಯಲ್ಲಿರುವ 'ಕಿಂಗ್ಸ್ ವಿನ್ನರ್ಸ್' ಕ್ಲಬ್ ಮೇಲೆ ಸೆ. 4ರಂದು ಸಿಸಿಬಿ ಪೊಲೀಸರ ತಂಡ ದಾಳಿ ಮಾಡಿತ್ತು. ಅಕ್ರಮವಾಗಿ ಜೂಜು ಆಡುತ್ತಿದ್ದವರನ್ನು ಬಂಧಿಸಿತ್ತು. ನಗದು ಜಪ್ತಿ ಮಾಡಿತ್ತು. ಈ ಬಗ್ಗೆ ಠಾಣೆಯಲ್ಲಿ ಎಫ್‌ಐಆರ್ ಸಹ ದಾಖಲಾಗಿತ್ತು. 'ಸದಸ್ಯರಲ್ಲದ ವ್ಯಕ್ತಿಗಳು ಕ್ಲಬ್‌ಗೆ ಬಂದು ಜೂಜು ಆಡುತ್ತಿದ್ದರು. ಈ ಬಗ್ಗೆ ಸ್ಥಳೀಯ ಪೊಲೀಸರಿಗೆ ಮಾಹಿತಿ ಇದ್ದರೂ ಕ್ರಮ ಕೈಗೊಂಡಿರಲಿಲ್ಲ. ನಮಗೆ ಮಾಹಿತಿ ಬರುತ್ತಿದ್ದಂತೆ ಕ್ಲಬ್ ಮೇಲೆ ದಾಳಿ ಮಾಡಿ ಅಕ್ರಮ ಬಯಲು ಮಾಡಲಾಗಿದೆ. ಜೂಜಾಟ ತಡೆಯುವಲ್ಲಿ ಇನ್‌ಸ್ಪೆಕ್ಟರ್ ನಿರ್ಲಕ್ಷ್ಯ ತೋರಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ' ಎಂದು ಸಿಸಿಬಿ ಪೊಲೀಸರು, ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ವರದಿ ಸಲ್ಲಿಸಿದ್ದರು.

ವರದಿ ಪರಿಶೀಲಿಸಿದ ಕಮಿಷನರ್, ಇನ್‌ಸ್ಪೆಕ್ಟರ್ ಸುರೇಶ್ ಅವರನ್ನು ಸೇವೆಯಿಂದ ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ. ಇನ್‌ಸ್ಪೆಕ್ಟರ್ ವಿರುದ್ಧ ಇಲಾಖೆ ವಿಚಾರಣೆ ನಡೆಸುವಂತೆ ಈಶಾನ್ಯ ವಿಭಾಗದ ಡಿಸಿಪಿ ಅವರಿಗೆ ಸೂಚಿಸಿದ್ದಾರೆ.

ಕೆಲದಿನಗಳ ಹಿಂದಷ್ಟೇ ಹಾಜರು: 'ಬೇರೆ ಠಾಣೆಯಲ್ಲಿದ್ದ ಸುರೇಶ್ ಅವರನ್ನು ಸಂಪಿಗೆಹಳ್ಳಿ ಠಾಣೆಗೆ ಇತ್ತೀಚೆಗಷ್ಟೇ ವರ್ಗಾವಣೆ ಮಾಡಲಾಗಿತ್ತು. ಸಿಸಿಬಿ ದಾಳಿ ನಡೆಯುವುದಕ್ಕೂ ಕೆಲದಿನಗಳ ಹಿಂದಷ್ಟೇ ಇನ್‌ಸ್ಪೆಕ್ಟರ್ ಕರ್ತವ್ಯಕ್ಕೆ ಹಾಜರಾಗಿದ್ದರು' ಎಂದು ಠಾಣೆ ಮೂಲಗಳು ಹೇಳಿವೆ.

ಮಹಿಳಾ ಹಕ್ಕುಗಳ ಕಾರ್ಯಕರ್ತೆ ಶುಕ್ಲಾ ನಿಧನ

ಮುಂಬೈ (ಪಿಟಿಐ): ಮಹಿಳಾ ಹಕ್ಕುಗಳ ಖ್ಯಾತ ಕಾರ್ಯಕರ್ತೆ ಸೋನಾಲ್ ಶುಕ್ಲಾ(80) ಅವರು ಗುರುವಾರ ಮುಂಬೈನಲ್ಲಿ ಹೃದಯಾಘಾತದಿಂದ ನಿಧನರಾದರು.

ಶುಕ್ಲಾ ಅವರು 'ವಾಚಾ ಚಾರಿಟೇಬಲ್ ಟ್ರಸ್ಟ್'ನ ಸಂಸ್ಥಾಪಕರಾಗಿದ್ದರು ಮತ್ತು ವ್ಯವಸ್ಥಾಪನಾ ಟ್ರಸ್ಟಿಯೂ ಆಗಿದ್ದರು. ಕಳೆದ ನಾಲ್ಕು ದಶಕಗಳಿಂದ ಶುಕ್ಲಾ ಅವರು ಬಾಲಕಿಯರು ಮತ್ತು ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸಿದ್ದರು.



ಸೋನಾಲ್ ಶುಕ್ಲಾ

1987ರಲ್ಲಿ ಗ್ರಂಥಾಲಯ ಮತ್ತು ಮಹಿಳೆಯರ ಸಂಪನ್ಮೂಲ ಕೇಂದ್ರವನ್ನಾಗಿ 'ವಾಚಾ' ಆರಂಭಿಸಲಾಗಿತ್ತು. ಇದು ಮಹಿಳೆಯರ ಮೊದಲ ಗ್ರಂಥಾಲಯವಾಗಿತ್ತು. ಈ ಗ್ರಂಥಾಲಯದಲ್ಲಿ ಸುಮಾರು ಮೂರು ಸಾವಿರ ಪುಸ್ತಕಗಳ ಸಂಗ್ರಹವಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದ ಮಹಿಳೆಯರ ಬಗ್ಗೆ ಎರಡು ಸಂಗೀತ ಅಲ್ಬಮ್‌ಗಳು ಮತ್ತು ಎರಡು ಸಾಕ್ಷ್ಯಚಿತ್ರಗಳನ್ನು 'ವಾಚಾ' ಸಂಸ್ಥೆಯು 1991ರಲ್ಲಿ ನಿರ್ಮಿಸಿತ್ತು.

ಕಾಲೇಜು ಶಿಕ್ಷಕಿಯಾಗಿದ್ದ ಸೋನಾಲ್ ಶುಕ್ಲಾ ಅವರು, ಮುಂಬೈನ ಸ್ವಚ್ಛತಾ ಕಾರ್ಮಿಕರು ಮತ್ತು ಮೀನುಗಾರರಿಗೆ ಸಂಬಂಧಿಸಿದ ಯೋಜನೆಗಳ ಉಸ್ತುವಾರಿಯನ್ನು ಸಹ ವಹಿಸಿಕೊಂಡಿದ್ದರು.

ಪನಸಮಾಕನಹಳ್ಳಿಯಲ್ಲಿ ಜಿಗಿಯುವ ಕಪ್ಪೆಗಳು

ಹಳ್ಳಿಗೆ ಬಂದ ಹಾರುವ ಕಪ್ಪೆಗಳು

• ಆರ್.ಚೌಡರೆಡ್ಡಿ

ಶ್ರೀನಿವಾಸಪುರ: ತಾಲ್ಲೂಕಿನ ಪನಸಮಾಕನಹಳ್ಳಿಯಲ್ಲಿ ಜಿಗಿಯುವ ಕಪ್ಪೆಗಳು ಕಂಡುಬಂದಿವೆ. ಮಳೆ ಸುರಿಯುವಾಗ ಮನೆ ಪ್ರವೇಶಿಸುವ ಈ ಕಪ್ಪೆಗಳು ಒಂದು ಗೋಡೆಯಿಂದ ಇನ್ನೊಂದು ಗೋಡೆಗೆ ಸಲೀಸಾಗಿ ಹಾರಬಲ್ಲವು. ಹಿಡಿಯಲು ಹೋದರೆ ದೂರದ ಗೋಡೆಗೂ ಜಿಗಿಯಬಲ್ಲವು.

ಕಪ್ಪೆಗಳು ಸಾಮಾನ್ಯವಾಗಿ ಕುಪ್ಪಳಿಸುತ್ತವೆ. ಹೊಸ ನೀರು ಬಂದಾಗ ವಟಗುಟ್ಟುತ್ತವೆ. ಆದರೆ, ನಯವಾದ ದೇಹ ರಚನೆ ಹೊಂದಿರುವ ಹೊಸ ಕಪ್ಪೆಗಳು ವಟಗುಟ್ಟುವುದಿಲ್ಲ. ಮಹಾಮೌನಿಗಳು. ಹಿಡಿಯಲು ಹೋದರೆ ಹಾರಿ ಗೋಡೆಗೆ ಕಚ್ಚಿಕೊಳ್ಳುತ್ತವೆ.

ಕಪ್ಪೆಗಳಲ್ಲಿ ಹಲವು ಪ್ರಭೇದಗಳಿವೆ. ಉಭಯವಾಸಿಯಾದ ಕಪ್ಪೆಯನ್ನು ನೀರಿನಲ್ಲಿ, ಬಯಲಲ್ಲಿ, ಭೂಮಿಯಲ್ಲಿ ಹಾಗೂ ಬಂಡೆಗಳ ನಡುವೆ ಕಾಣಲು ಸಾಧ್ಯ. ಗ್ರಾಮೀಣ ಪ್ರದೇಶದಲ್ಲಿ ಕಪ್ಪೆಗಳನ್ನು ಊದು ಕಪ್ಪೆ, ಮಣ್ಣು ಕಪ್ಪೆ ಹಾಗೂ ನೀರು ಕಪ್ಪೆ ಎಂದು ವಿಂಗಡಿಸಲಾಗಿದೆ. ಇವು ನೀರಿನಲ್ಲಿರುವಾಗ, ನೀರಿನಲ್ಲಿನ ಕ್ರಿಮಿಕೀಟ ತಿಂದು, ನೀರನ್ನು ಶುದ್ಧಗೊಳಿಸುತ್ತವೆ.

ಮನೆಗೋಡೆ ಮೇಲೆ ಕಂಡುಬಂದ ಹಾರುವ ಕಪ್ಪೆ

ಜೈವಿಕ ನಿಯಂತ್ರಣದಲ್ಲಿ ಕಪ್ಪೆಗಳ ಪಾತ್ರ ಹಿರಿದು. ಅವು ಬೆಳೆಗಳನ್ನು ಬಾಧಿಸುವ ಕ್ರಿಮಿಕೀಟಗಳನ್ನು ತಿಂದು ರೈತರಿಗೆ ಉಪಕಾರ ಮಾಡುತ್ತವೆ. ಆದರೆ, ಈ ಹಾರುವ ಕಪ್ಪೆಗಳು ಮನೆಗಳನ್ನು ಪ್ರವೇಶಿಸಿ ಗೋಡೆಗಳ ಮೇಲೆ ಕೂರುವ ಸೊಳ್ಳೆಯಂತಹ ಕೀಟಗಳನ್ನು ಹಿಡಿದು ಭಕ್ಷಿಸುತ್ತವೆ. ನಯವಾದ ಗೋಡೆಗಳ ಮೇಲೆ ಹಿಡಿತ ಸಾಧಿಸಲು ಪೂರಕವಾಗಿ ಕಾಲುಗಳ ರಚನೆಯಿದೆ.

'ನಾನು ಹೀಗೆ ಹಾರುವ ಕಪ್ಪೆಗಳನ್ನು ನೋಡಿಯೇ ಇಲ್ಲ. ಮನೆಯಲ್ಲಿ ಮರೆಯಲ್ಲಿ ಅಡಗಿ ಕುಳಿತುಕೊಳ್ಳುವ ಕಪ್ಪೆಗಳು, ಗೋಡೆಗಳ ಮೇಲೆ ಆಟವಾಡುತ್ತವೆ' ಎಂದು ಗ್ರಾಮದ ನಿವಾಸಿ ವೆಂಕಟಮ್ಮ ಎಂಬುವವರು ಹೇಳಿದರು.

ಮನೆ ಪ್ರವೇಶಿಸುವ ಕಪ್ಪೆಗಳನ್ನು ಹುಷಾರಾಗಿ ಪೊರಕೆಯಲ್ಲಿ ಹಿಡಿದು ಹೊರಗೆ ಹಾಕಲಾಗುತ್ತಿದೆ. ಆದರೂ, ಅವು ಮತ್ತೆ ಮತ್ತೆ ಮನೆಯಲ್ಲಿ ಪ್ರತ್ಯಕ್ಷವಾಗುತ್ತವೆ ಎಂಬುದು ಅವರ ಅಳಲು.

ಮನೆಯಲ್ಲಿ ಕಪ್ಪೆ ಇದ್ದರೆ ಹಾವುಗಳು ಬರುತ್ತವೆ ಎಂಬ ಭಯ ಕಾಡುತ್ತದೆ. ಆದರೂ, ಗ್ರಾಮೀಣ ಪ್ರದೇಶದ ಜನರು ಯಾವುದೇ ಕಾರಣಕ್ಕೂ ಕಪ್ಪೆಯನ್ನು ಕೊಲ್ಲುವುದಿಲ್ಲ. ಕಪ್ಪೆಗಳನ್ನು ಕೊಲ್ಲುವುದು ಪಾಪದ ಕೆಲಸ ಎನ್ನುವ ಭಾವನೆ ಅವರಲ್ಲಿದೆ. ಕಪ್ಪೆಯನ್ನು ಕಾಲಿನಲ್ಲಿ ಒದ್ದರೆ ಕಪ್ಪೆ ಕುರು ಏಳುತ್ತದೆ ಎಂಬ ನಂಬಿಕೆಯೂ ಇದೆ. ಇದೆಲ್ಲವೂ ರೈತ ಸ್ನೇಹಿಯಾದ ಕಪ್ಪೆಗಳನ್ನು ಉಳಿಸಲು, ಹಿರಿಯರು ಹುಟ್ಟು ಹಾಕಿರುವ ನಂಬಿಕೆ ಎಂದು ಹೇಳುವವರಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

JOB OPPORTUNITIES

Teachers/ Professors

SIRI SCHOOL, Laggere, Bangalore-58 requires Female Science TEACHER-B.Sc., B.Ed., for High School. Contact: 9448182234

BUSINESS

Business to Business

Finance

AISHWARYA GROUP (Bengaluru) Invest Min.20K to 5-Lakhs in Trading, Multiple Businesses. Weekly/ Monthly-10% Secured Fixed Returns. Investors, Referral Welcome.Good Regular Income. Phone:-7892818780.

Business Offers

Finance

FINANCE AGAINST Land & Building Properties Industries Schools Hospitals Projects & NRI Funds.7358729820

OTHERS

Medical

HOME NURSES available for HOME/ HOSPITAL/ PATIENT CARE 24/7. MAJ Gandhinagar, Bangalore. Contact: 7022399993, 6366883838

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

PUBLIC NOTICE

PUBLIC NOTICE

Notice is hereby given to the general public that a purchase transaction is envisaged in connection with the immovable properties morefully described in the 'Schedule' hereto and hereinafter referred to as 'Schedule Properties'. The owners detailed in the Schedule below have represented that they are the absolute owners of their respective portions of the Schedule Properties, as detailed in the Schedule hereto, with unrestricted rights of alienation over the same. Any person/s other than the owners mentioned below, asserting any right, title, charge, lien, interest or claims whatsoever in respect of the Schedule Properties are hereby called upon to submit to the undersigned, their objections, if any, to the proposed purchase transaction in connection with the Schedule Properties. The said objections must be in writing, together with the documentary proof of such claim/s and should reach the address given below within a period of 7 (Seven) days from the date of publication of this Notice. If no such objections are received, it shall be deemed that no one else other than the owners mentioned below has/ have any right, title, interest or claim whatsoever in respect of the Schedule Properties.

SCHEDULE
(Description of the Schedule Properties)
All that piece and parcel of immovable properties totally admeasuring 06 Acres, situated at Bettahalasuru Village, Jala Hobli, Yalahanka Taluk, Bangalore Urban District, morefully described in the table hereunder:

Sl. No.	Sy. No.	Extent Acres	Extent Guntas	Boundaries	Name of the Owner/ s
1.	381/1	01	00	East by: Survey No. 381/2; West by: Survey Nos. 345 & 276; North by: Survey No. 381/4; and South by: Survey Nos. 276 & 277	(i) Mr. E. Sujatha, wife of Late E. Ella Reddy; (ii) Mr. E. Sudhir Reddy, son of Late E Ella Reddy; and (iii) Mr. E. Sunil Reddy, son of Late E Ella Reddy
2	381/2	01	00	East by: Survey No. 259 & Road; West by: Survey No. 381/1; North by: Survey No. 381/3; and South by: Survey Nos. 277 & 323.	Mrs. P. Damayanti, wife of Mr. P. Ganeswara Rao
3	381/3	01	00	East by: Survey No. 259 & Road; West by: Survey No. 381/4; North by: Survey No. 381/6; and South by: Survey No. 381/2	Mrs. V. Sreedevi, daughter of Late L.S.C. Bose
4	381/4	00	20	East by: Survey No. 381/3; West by: Survey No. 345; North by: Survey No. 381/5; and South by: Survey No. 381/1	Mr. V.S.S. Raju, son of Mr. V.V. Tirupathi Raju.
5	381/5	00	20	East by: Survey No. 381/3; West by: Survey No. 345; North by: Survey No. 381/6; and South by: Survey No. 381/4	Mr. N.S. Phanindra, son of Late N. Venkateshwara Sastry.
6	381/6	02	00	East by: Survey No. 259; West by: Survey No. 345; North by: Survey No. 259 and South by: Survey Nos. 381/3 & 381/5	Mr. K. Durga Prasad Raju, son of Mr. K. Seetha Rama Raju

Sd/-
Sravan Kumar Reddy
Address: No. 327, 7th 'A' Main, 4th Block, Koramangala, Bangalore-560 034
Phone: 8495892989
Date: 09-09-2021
Place: Bangalore

ADMISSION CORNER

R.E.S. POLYTECHNIC
Recognised by Govt. of Karnataka & Approved by AICTE
Inst. Code: 450 Estd: 1986
SPOT ADMISSION FOR MANAGEMENT & Merit / Govt. QUOTA STARTED FOR 10th PASS or PUC FAIL / PASS
3 Years Diploma for - 10th Pass
2 Years Diploma for - PUC / 12th / ITI Pass
CS | IS | EC | EE | Civil | Mech | Auto | CP | FT
5, Sunkadakatte, Magadi Main Road, Hegganahalli Cross, B'lore-91 Phone: 080-23484814, 99166 46466, 99166 39466
RES-21203

PERSONAL

Change of Name

WE, SYED Hashim and Kousar Khanum r/at. No.40/A, 9th cross, 1st stage, 2nd block, HBR Layout, Yasin Nagar, Bengaluru- 560043 declare our names wrongly entered as Hashim and Kausar Khanum in our Son's ICSE X Statement Of Marks and Pass Certificate. Our True & correct name is SYED HASHIM and KOUSAR KHANUM vide Affidavit 09/09/2021 before notary K.Venkateshan, Bangalore

I, EVELYN Dorothea Morris, aged 48 years, W/o late Cedric Joseph Morris Residing at #43, 1st Main, S.T. Bed Layout, Koramangala, Bengaluru-34. have changed my Son's name from Shannon Gerard Morris to KESTON KASSIUS MORRIS vide affidavit dated 01.09.2021 before notary H.G. Venkataramu, Bangalore.

I, KARTHI D.S D/o. D.S. Subramanya Gurukul residing at No.B-105, Gagan Gauravi apartment, 2nd Cross, Kavalbyrasandra, Near GVR Plaza, R.T. Nagar Post, Bangalore- 560032, have changed my name from Karthi Ramachandran to KARTHI. D.S vide affidavit dated 09/09/2021 before notary S. Nagaraja, Bangalore.

I, SHAIK FIRDOS R/a No. 4/5, Sanders Road, Frazer Town Bangalore- 560005. Have change my Name as SHAIK FIRDOSE Vide affidavit dt: 9/9/2021 before Notary Meer Hassan, Bangalore

I, MANJULA PATIL residing at G09, S.K.Brindavan Apartment, K.Channasandra, Lakeview Garden Road, Horamavu Post, Bangalore-43 have changed my name to MANJULA GANGADHAR PATIL vide affidavit dated 31.08.21 before Notary Uday Kumar.K, Bangalore

SANGITA DEVI W/o JC673116W- Nb/Sub-SANTOSH KUMAR GUPTA R/a Gangotri Nagar, Naini, Allahabad, Uttar Pradesh changed name from SANGITA DEVI to SANGEETA GUPTA notary KV Mani, Bangalore.

I, UMME SALMA NAZIA, R/a No. 4/5, Sanders Road, Frazer Town, Bangalore-560005, have change my name as UMME SALMA FIRDOSE vide affidavid dt: 9/9/2021, before Notary Meer Hassan, Bangalore

Lost

LOST DOCUMENT

I, S Sukumaran, R/a. # 15/A, ITC Colony, Main Road, 1 st Cross, Cox Town, Jeevanahalli Post, Bangalore - 560 033. have lost original GPA document, Document No./ Identification : MPL/B100/07-03 No.424706, issued by State Bank of Mysore. While transit. Finders please Contact : 81976 15078

DH ಪ್ರಜಾವಾಣಿ
Wishes all Readers & Advertisers a very Happy
GANESHA CHATURTHI

Classifieds
More value, more impact
For Advertisement booking contact:
9845114560, 9731810277, 9886213331, 9606912256

₹99 ಲಕ್ಷ ವೆಚ್ಚದಲ್ಲಿ ನವೀಕರಣ; ಸೆ.12ರಂದು ಉದ್ಘಾಟನೆ

ಕೆಎಸ್‌ಆರ್‌ಟಿಸಿ: 50 ಹಾಸಿಗೆಗಳ ಕೋವಿಡ್ ಆಸ್ಪತ್ರೆ

• ವಿಜಯ್ ಕುಮಾರ್ ಎಸ್.ಕೆ.

ಬೆಂಗಳೂರು: ಜಯನಗರದಲ್ಲಿನ ಕೆಎಸ್‌ಆರ್‌ಟಿಸಿ ಆಸ್ಪತ್ರೆ ಈಗ ಸುಸಜ್ಜಿತ ಕೋವಿಡ್ ಆಸ್ಪತ್ರೆಯಾಗಿ ಮಾರ್ಪಟ್ಟಿದೆ. ₹99 ಲಕ್ಷ ವೆಚ್ಚದಲ್ಲಿ ಆಸ್ಪತ್ರೆಯನ್ನು ನವೀಕರಿಸಿರುವ ಕೆಎಸ್‌ಆರ್‌ಟಿಸಿ, ಸಂಭಾವ್ಯ ಕೋವಿಡ್ ಮೂರನೇ ಅಲೆ ಎದುರಿಸಲು ಸಿದ್ಧವಾಗಿದೆ.

ನವೀಕರಣಗೊಂಡಿರುವ ಈ ಆಸ್ಪತ್ರೆಯಲ್ಲಿ ಆಮ್ಲಜನಕ ಪೂರಣ ವ್ಯವಸ್ಥೆ ಇರುವ 50 ಹಾಸಿಗೆಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಇದೇ 12ರಂದು (ಭಾನುವಾರ) ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆಸ್ಪತ್ರೆಯನ್ನು ಲೋಕಾರ್ಪಣೆ ಮಾಡಲಿದ್ದಾರೆ.

ಆಮ್ಲಜನಕ ಪೂರೈಕೆಗೆ ಹೈ-ನೇಸಲ್ ಫ್ಲೋ ವ್ಯವಸ್ಥೆ, ಆಮ್ಲಜನಕ ಘಟಕವನ್ನೂ ಈ ಆಸ್ಪತ್ರೆ ಒಳಗೊಂಡಿದೆ. ಕೋವಿಡ್ ಸೋಂಕಿತರ ಚಿಕಿತ್ಸೆಗೆ ಅಗತ್ಯ ಇರುವ ಎಲ್ಲಾ ರೀತಿಯ ಯಂತ್ರೋಪಕರಣಗಳನ್ನೂ ಅಳವಡಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ವಿವರಿಸಿದರು.

ಸೋಂಕಿತರ ದೇಹಸ್ಥಿತಿ ಗಂಭೀರ ಹಂತವನ್ನು ತಲುಪಿದರೆ, ಅವರಿಗೆ ಉನ್ನತ ಚಿಕಿತ್ಸೆ ಕೊಡಿಸಲು ಪಕ್ಕದಲ್ಲೇ ಇರುವ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರ ಮಾಡಬಹುದು ಎಂದು ಅವರು ಹೇಳಿದರು.

'ಮೂರನೇ ಅಲೆ ಕಾಣಿಸಿಕೊಂಡರೆ ಮಕ್ಕಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಆದ್ದರಿಂದ ಮಕ್ಕಳ ಚಿಕಿತ್ಸೆಗೂ ಈ ಆಸ್ಪತ್ರೆಯಲ್ಲಿ ವಿಶೇಷ ವ್ಯವಸ್ಥೆ ಕಲ್ಪಿಸಿದ್ದೇವೆ. ಸಾರಿಗೆ ಸಂಸ್ಥೆ ನೌಕರರ ಕೋವಿಡ್ ಚಿಕಿತ್ಸೆಗೆ ಆದ್ಯತೆ ನೀಡಲಿದ್ದೇವೆ. ನಗರದ ನಾಗರಿಕರೂ ಇದರ ಪ್ರಯೋಜನ ಪಡೆಯಬಹುದು' ಎಂದು ತಿಳಿಸಿದರು.

'ಆಸ್ಪತ್ರೆ ನವೀಕರಣಕ್ಕೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಸಂಸದರ ನಿಧಿಯಿಂದ ₹35 ಲಕ್ಷ ಅನುದಾನ ಒದಗಿಸಿದ್ದಾರೆ. ಕರ್ನಾಟಕ ರಾಜ್ಯ ವಿಪತ್ತು ಪರಿಹಾರ ನಿಧಿ, ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕಾ ನಿಧಿಯಿಂದಲೂ ನೆರವು ಪಡೆಯಲಾಗಿದೆ. ಅಗತ್ಯ ಇರುವ ಯಂತ್ರೋಪಕರಣಗಳನ್ನು ಈ ಹಣದಲ್ಲಿ ಖರೀದಿಸಲಾಗಿದೆ' ಎಂದು ಅವರು ವಿವರಿಸಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

29,59,164 ▲	ಒಟ್ಟು ಸೋಂಕಿತರು (29,58,090 ನಿನ್ನೆಯ ವಿವರ)
16,992 ▼	ಸಕ್ರಿಯ ಪ್ರಕರಣಗಳು
29,04,683 ▲	ಗುಣಮುಖರಾದವರು
37,462 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,074	▲
ಗುಣಮುಖ	1,136	▼
ಸಾವು	04	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಅವರು ಕೋವಿಡ್ ಆಸ್ಪತ್ರೆಯನ್ನು ಪರಿಶೀಲಿಸಿದರು

ಕೋವಿಡ್ ನಿಯಂತ್ರಣಕ್ಕೆ ಕೊಡುಗೆ ನೀಡುವ ನಿಟ್ಟಿನಲ್ಲಿ ಕೆಎಸ್‌ಆರ್‌ಟಿಸಿ ಈ ಆಸ್ಪತ್ರೆಯನ್ನು ನವೀಕರಿಸಿದೆ. ನೌಕರರು ಮತ್ತವರ ಕುಟುಂಬ ಸದಸ್ಯರ ಜತೆಗೆ ನಾಗರಿಕರೂ ಪ್ರಯೋಜನ ಪಡೆಯಬಹುದು

ಶಿವಯೋಗಿ ಸಿ. ಕಳಸದ,
ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ

ನಗರದ ಕೋವಿಡ್ ಅಂಕಿ–ಅಂಶ

12,40,653 ▲	ಒಟ್ಟು ಪ್ರಕರಣಗಳು
7,208 ▲	ಸಕ್ರಿಯ ಪ್ರಕರಣಗಳು
12,17,401 ▲	ಗುಣಮುಖರಾದವರು
16,043 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	343	▲
ಗುಣಮುಖ	251	▼
ಸಾವು	3	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಮತ್ತೊಂದು ಕಡಲಾಮೆ ಕಳೇಬರ ಪತ್ತೆ

ಕಾರವಾರ: ಅಪರೂಪದ ಹಸಿರು ಕಡಲಾಮೆಯ ಮೃತದೇಹವೊಂದು ಇಲ್ಲಿನ ರವೀಂದ್ರನಾಥ ಟ್ಯಾಗೋರ್ ಕಡಲತೀರದಲ್ಲಿ ಗುರುವಾರ ಪತ್ತೆಯಾಗಿದೆ. ಕಾರವಾರ ಸುತ್ತಮುತ್ತ ಒಂದು ತಿಂಗಳ ಅವಧಿಯಲ್ಲಿ ಪತ್ತೆಯಾದ ಆಮೆಯ ನಾಲ್ಕನೇ ಕಳೇಬರ ಇದಾಗಿದೆ.

ಹೆಣ್ಣು ಆಮೆ ಆಗಿದ್ದು, ಮೀನುಗಾರಿಕೆಯ ಬಲೆಗೆ ಸಿಲುಕಿ ಮೃತಪಟ್ಟಿರುವ ಸಾಧ್ಯತೆಯಿದೆ ಎಂದು ಊಹಿಸಲಾಗಿದೆ. ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ವಸಂತ ರೆಡ್ಡಿ ಅವರ ಮಾರ್ಗದರ್ಶನದಂತೆ ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ಅದರ ವರದಿ ಬಂದ ಬಳಿಕ ನಿಖರ ಕಾರಣ ತಿಳಿಯಲಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡಿದ ವಲಯ ಅರಣ್ಯ ಸಂರಕ್ಷಣಾಧಿಕಾರಿ ಪ್ರಮೋದ್, 'ಹಸಿರು ಕಡಲಾಮೆಗಳು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅನುಕ್ರಮ 1ರ ಅಡಿಯಲ್ಲಿ ಅಳಿವಿನ ಅಂಚಿನಲ್ಲಿರುವ ಜೀವಿ ಎಂದು ಗುರುತಿಸಲಾಗಿದೆ. ಅವು ಈ ಭಾಗದಲ್ಲಿ ಅತ್ಯಂತ ವಿರಳವಾಗಿ ಕಾಣಿಸಿಕೊಳ್ಳುತ್ತವೆ. ಗರಿಷ್ಠ ಜೀವಿತಾವಧಿಯಲ್ಲಿ 100 ವರ್ಷಕ್ಕೂ ಅಧಿಕ ಬದುಕುತ್ತವೆ. ಒಂದು ಮೀಟರ್‌ಗೂ ಅಧಿಕ ಸುತ್ತಳತೆಯಲ್ಲಿ ಬೆಳೆಯುತ್ತವೆ. ಇದು ಸಣ್ಣದಾಗಿದ್ದು, ವಯಸ್ಸು ಮತ್ತಿತರ ಮಾಹಿತಿಗಳು ಮರಣೋತ್ತರ ಪರೀಕ್ಷೆಯ ವರದಿಯಿಂದ ಗೊತ್ತಾಗಲಿದೆ' ಎಂದು ಹೇಳಿದರು.

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	22.37 ಕೋಟಿ ▲	3.31 ಕೋಟಿ
ಸಕ್ರಿಯ ಪ್ರಕರಣ	1.88 ಕೋಟಿ	3.84 ಲಕ್ಷ ▼
ಗುಣಮುಖ	20.02 ಕೋಟಿ ▲	3.23 ಕೋಟಿ ▲
ಸಾವು	46.14 ಲಕ್ಷ ▲	4.42 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	6.07 ಲಕ್ಷ ▲	24,042 ▼
ಗುಣಮುಖ	6.18 ಲಕ್ಷ ▲	24,005 ▼
ಸಾವು	9,836 ▲	263 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ಬ್ರೆಜಿಲ್
1.57 ಲಕ್ಷ ▲	38,797 ▲	14,430 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ಬ್ರೆಜಿಲ್
90.58 ▲	12.63 ▲	3.76 ▲

(*ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.379 ಲಕ್ಷ ▲
ತಮಿಳುನಾಡು	35,094 ▲
ದೆಹಲಿ	25,083

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	64.97 ▲
ಕೇರಳ	43.09 ▲
ತಮಿಳುನಾಡು	26.28

ಪ್ರಜಾವಾಣಿ ಗ್ರಾಫಿಕ್ಸ್

'ಇಬ್ಬರ ಸ್ವಾರ್ಥಕ್ಕೆ ಉರುಳಿದ ಧರಂಸಿಂಗ್ ಸರ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಬ್ಬರು ನಾಯಕರು ತಮ್ಮ ಸ್ವಾರ್ಥಕ್ಕಾಗಿ ಧರಂಸಿಂಗ್ ನೇತೃತ್ವದ ಸರ್ಕಾರವನ್ನು ಉರುಳಿಸಿದರು. ಆ ಮೂಲಕ ರಾಜ್ಯ ರಾಜಕಾರಣಕ್ಕೆ ಬರಬಾರದ ರೋಗ ತಂದಿಟ್ಟರು' ಎಂದು ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ಹೇಳಿದರು.

'ಒಂದು ವೇಳೆ ಧರಂಸಿಂಗ್ ಅವರು ಪ್ರಬಲ ಸಮುದಾಯಕ್ಕೆ ಸೇರಿದವರಾಗಿದ್ದರೆ ಇಂತಹ ಕಾರ್ಯ ಮಾಡಲು ಸಾಧ್ಯವಿತ್ತೇ' ಎಂದು ಪ್ರಶ್ನಿಸಿದ ಅವರು, 'ಸಿಂಗ್ ಅವರು ದುರ್ಬಲ ಸಮುದಾಯಕ್ಕೆ ಸೇರಿದ್ದರಿಂದಾಗಿ ಈ ಇಬ್ಬರು ಮಹಾನ್ ಮುಖಂಡರು ಪಿತೂರಿ ನಡೆಸಿ ಸರ್ಕಾರವನ್ನು ನಿರಾಯಾಸವಾಗಿ ಕೆಡವಿದರು' ಎಂದರು.

ಪತ್ರಕರ್ತ ಆರ್.ಟಿ. ವಿಠ್ಠಲಮೂರ್ತಿ ಅವರು ಕರ್ನಾಟಕದ ರಾಜಕೀಯ ಕುರಿತು ಬರೆದ 'ರಾಜ ಚರಿತೆ' ಪುಸ್ತಕವನ್ನು ಗುರುವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಕೆಂಗಲ್ ಹನುಮಂತಯ್ಯ ಅವರದ್ದು ಹಲವು ಮಹಾನುಭಾವರಿದ್ದ ಸತ್ಯಹರಿಶ್ಚಂದ್ರನ ಸಂಪುಟ. ಇನ್ನು ಮುಂದೆ ಕನಸಿನಲ್ಲೂ ಅಂತಹ ಸಂಪುಟವನ್ನು ನೋಡಲು ಸಾಧ್ಯವಿಲ್ಲ. ಕೆಂಗಲ್ ಅವರ ಸಂಪುಟದಲ್ಲಿದ್ದ ಸಿದ್ಧಲಿಂಗಯ್ಯ ಅವರು ತಮ್ಮ ಕುಟುಂಬದವರೊಬ್ಬರ ವಿರುದ್ಧ ಆರೋಪ ಬಂದಾಗ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಆದರೆ ಈಗಿನ ಆಡಳಿತಗಾರರ ಬಾಯಿ ದೊಡ್ಡದು. ಹಡಗನ್ನೇ ಸುಲಭವಾಗಿ ನುಂಗಿ ಜೀರ್ಣಿಸಿಕೊಳ್ಳುತ್ತಾರೆ ಎಂದು ಅವರು ಟೀಕಿಸಿದರು.

ಈಗಿನ ರಾಜಕಾರಣ ತಲುಪಿರುವ ಸ್ಥಿತಿ ನೋಡಿದರೆ ಗಾಬರಿಯಾಗುತ್ತದೆ. ಒಂದು ಕಾಲದಲ್ಲಿ ಅಡುಗೆ ಅನಿಲಕ್ಕೆ ಎರಡು ರೂಪಾಯಿ ಹೆಚ್ಚಳವಾದರೆ ರಾಜಕೀಯ ಪಕ್ಷಗಳು ಬೀದಿಗಿಳಿಯುತ್ತಿದ್ದವು. ಆದರೆ ಈಗ ಇಪ್ಪತ್ತೈದು ರೂಪಾಯಿ ಜಾಸ್ತಿಯಾದರೆ ಜನರೂ ಮಾತನಾಡುವುದಿಲ್ಲ. ವಿರೋಧ ಪಕ್ಷಗಳಿಗೂ ಅದರ ವಿರುದ್ಧ ಹೋರಾಡುವ ಕೆಚ್ಚಿಲ್ಲ ಎಂದು ವಾಟಾಳ್ ಹೇಳಿದರು.

ಕೃತಿ ಕುರಿತು ಮಾತನಾಡಿದ ಪತ್ರಕರ್ತ ಬೆಲಗೂರು ಸಮೀವುಲ್ಲಾ, 'ಕರ್ನಾಟಕದ ರಾಜಕಾರಣ ನಡೆದುಕೊಂಡು ಬಂದ ರೀತಿಯನ್ನು ವಿವರಿಸುವ ಪುಸ್ತಕ, ಜಾತಿ ಸೈನ್ಯಗಳಿಗೆ ಮಠಾಧಿಪತಿಗಳು ಸೇನಾಧಿಪತಿಗಳಾದ ದುರಂತ ಸ್ಥಿತಿಯನ್ನು ಹೇಳುತ್ತದೆ' ಎಂದರು. ಸಾಧನ ಪಬ್ಲಿಕೇಷನ್ಸ್‌ನ ರವಿಚಂದ್ರ ಹಾಗೂ ಪತ್ರಕರ್ತ ರಾಜಶೇಖರ್ ಉಪಸ್ಥಿತರಿದ್ದರು.


ಪತ್ರಕರ್ತ ಆರ್.ಟಿ. ವಿಠ್ಠಲಮೂರ್ತಿ ಅವರ 'ರಾಜ ಚರಿತೆ' ಪುಸ್ತಕವನ್ನು ವಾಟಾಳ್ ನಾಗರಾಜ್ ಬಿಡುಗಡೆ ಮಾಡಿದರು. ಪತ್ರಕರ್ತ ಬೆಲಗೂರು ಸಮೀವುಲ್ಲಾ ಹಾಗೂ ಪ್ರಕಾಶಕ ರವಿಚಂದ್ರ ಇದ್ದರು

ಐಟಿಆರ್ ಗಡುವು ಡಿ.31ರವರೆಗೆ ವಿಸ್ತರಣೆ

ನವದೆಹಲಿ: 2021–22ನೇ ಮೌಲ್ಯ ಮಾಪನ ವರ್ಷಕ್ಕೆ ಸಂಬಂಧಿಸಿದಂತೆ ವೈಯಕ್ತಿಕ ಆದಾಯ ತೆರಿಗೆ ಲೆಕ್ಕಪತ್ರ ಸಲ್ಲಿಕೆಯ (ಐಟಿಆರ್) ಗಡುವನ್ನು ಡಿಸೆಂಬರ್ 31ರವರೆಗೆ ವಿಸ್ತರಿಸಲಾಗಿದೆ.

ಕೋವಿಡ್ ಸಾಂಕ್ರಾಮಿಕ ಹಾಗೂ ಐ.ಟಿ. ಜಾಲತಾಣದಲ್ಲಿ ತಾಂತ್ರಿಕ ದೋಷಗಳು ಇರುವ ಕಾರಣಗಳಿಂದಾಗಿ ಕೇಂದ್ರ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ. ಈ ಮುಂಚೆ ಸೆಪ್ಟೆಂಬರ್ 30ರ ಗಡುವು ನೀಡಲಾಗಿತ್ತು.

ರಮೇಶ್ ಅರವಿಂದ್

ಅಕ್ಟೋಬರ್‌ನಲ್ಲಿ ಸೆಟ್ಟೇರಲಿದೆ ಶಿವಾಜಿ ಸುರತ್ಕಲ್–2

2020ರಲ್ಲಿ ಬಿಡುಗಡೆಯಾಗಿದ್ದ ರಮೇಶ್ ಅರವಿಂದ್ ಅವರ ಅಭಿನಯದ 101ನೇ ಚಿತ್ರ 'ಶಿವಾಜಿ ಸುರತ್ಕಲ್' ಪ್ರೇಕ್ಷಕರ ಮನಗೆದ್ದಿತ್ತು. ಪತ್ತೆದಾರಿಯಾಗಿ ಕಾಣಿಸಿಕೊಂಡಿದ್ದ ರಮೇಶ್ ಅರವಿಂದ್ ಅವರ ಪಾತ್ರವನ್ನು ಜನ ಮೆಚ್ಚಿದ್ದರು. ಇದೇ ತಂಡ ಇದೀಗ ಚಿತ್ರದ ಎರಡನೇ ಭಾಗವನ್ನು ತೆರೆಯ ಮೇಲೆ ತರಲು ಸಜ್ಜಾಗಿದೆ.

ಸಂಪೂರ್ಣವಾಗಿ ಕಥೆ-ಚಿತ್ರಕಥೆ ಮುಗಿಸಿಕೊಂಡಿರುವ ಚಿತ್ರತಂಡ ಅಕ್ಟೋಬರ್‌ನಿಂದ ಚಿತ್ರೀಕರಣ ಪ್ರಾರಂಭಿಸುವ ಯೋಚನೆಯಲ್ಲಿದೆ. ಶುಕ್ರವಾರ(ಸೆ.10) ರಮೇಶ್ ಅರವಿಂದ್ ಅವರ ಜನ್ಮದಿನದಂದೇ ಚಿತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಆಕಾಶ್ ಶ್ರೀವತ್ಸ ನಿರ್ದೇಶಿಸಿದ ರೊಮ್ಯಾಂಟಿಕ್, ಆ್ಯಕ್ಷನ್, ಥ್ರಿಲ್ಲರ್ ಕಥನ ಹೊಂದಿದ್ದ ಸಿನಿಮಾದ ಮೊದಲ ಭಾಗ ಚಿತ್ರಮಂದಿರದಲ್ಲಿ ಬಿಡುಗಡೆಯಾಗಿತ್ತು. ಉತ್ತಮವಾಗಿ ಪ್ರದರ್ಶನ ಕಾಣುತ್ತಿದ್ದ ವೇಳೆಯೇ ಕೊರೊನಾ ಲಾಕ್‌ಡೌನ್ ಬಿಸಿಯು ಇದಕ್ಕೂ ತಟ್ಟಿತ್ತು. ಹೀಗಾಗಿ ಕೊನೆಯಲ್ಲಿ ಚಿತ್ರತಂಡವು ಒಟಿಟಿ ಮೊರೆಹೋಗಿತ್ತು.

'ಶಿವಾಜಿಯಾಗಿ ರಮೇಶ್ ಅರವಿಂದ್ ಅವರು ಬಣ್ಣ ಹಚ್ಚಲಿದ್ದು, ರಾಧಿಕಾ ನಾರಾಯಣ್, ರಘು ರಾಮನಕೊಪ್ಪ ಮತ್ತು ವಿದ್ಯಾಮೂರ್ತಿ ಭಾಗ-2ರಲ್ಲೂ ಮುಂದುವರಿಯಲಿದ್ದಾರೆ. ಉಳಿದ ತಾರಾಗಣದಲ್ಲಿ ಹೊಸಮುಖಗಳು ಪರಿಚಯಗೊಳ್ಳಲಿದ್ದಾರೆ. ಶಿವಾಜಿ ಸುರತ್ಕಲ್ ಎರಡು ಕಾಲಘಟ್ಟದಲ್ಲಿ ನಡೆಯುವ ಚಿತ್ರವಾಗಿತ್ತು. ಆದರೆ ಭಾಗ-2 ಬಹುಕೋನಗಳಿರುವ ಚಿತ್ರಕಥೆ ಹೊಂದಿದ್ದು, ಪತ್ತೆದಾರಿ ಕಥೆಯಾಗಿರುವುದರಿಂದ ಕೊಲೆಗಾರನ ಹುಡುಕಾಟದ ಮಾರ್ಗದಲ್ಲಿ ಚಲಿಸುತ್ತಿರುತ್ತದೆ. ಚಿತ್ರಮಂದಿರ ಭೇಟಿಯ ಸಂದರ್ಭ ಎದುರಾಗಿದ್ದ ಅನೇಕ ಪ್ರಶ್ನೆಗಳಿಗೆ, ವಿಶೇಷವಾಗಿ 'ಶಿವಾಜಿ ಸುರತ್ಕಲ್' ಎಂಬ ಶೀರ್ಷಿಕೆಗೆ ಈ ಚಿತ್ರದಲ್ಲಿ ಉತ್ತರವಿದೆ' ಎನ್ನುತ್ತಾರೆ ಆಕಾಶ್ ಶ್ರೀವತ್ಸ.

ರೇಖಾ ಕೆ. ಎನ್. ಹಾಗೂ ಅನೂಪ್ ಚಿತ್ರದ ನಿರ್ಮಾಪಕರಾಗಿದ್ದು, ತಮಿಳು, ಮಲಯಾಳಂ, ತೆಲುಗಿಗೆ ಭಾಗ–1ರ ರಿಮೇಕ್ ಹಕ್ಕು ಮಾರಾಟವಾಗಿರುವುದರಿಂದ ಮತ್ತಷ್ಟು ಹುರುಪಿನಿಂದ ಅದ್ದೂರಿಯಾಗಿ ಚಿತ್ರ ನಿರ್ಮಿಸುವ ತಯಾರಿಯಲ್ಲಿದೆ ಚಿತ್ರತಂಡ. ❖

'ಹ್ಯಾಂಗೋವರ್'ನಲ್ಲಿ ನರ್ಸಮ್ಮ

'ಪಂಚತಂತ್ರ' ಮೂಲಕ ಕೋಸ್ಟಲ್‌ವುಡ್‌ನಿಂದ ಚಂದನವನಕ್ಕೆ ನಾಯಕಿಯಾಗಿ ಹೆಜ್ಜೆ ಇಟ್ಟಿದ್ದ ನಟಿ ಸೋನಲ್ ಮೊಂತೆರೋ ಈಗ ಬಹುಬೇಡಿಕೆಯ ನಟಿ. 'ರಾಬರ್ಟ್' ಸಿನಿಮಾದ 'ತನು' ಪಾತ್ರದ ಯಶಸ್ಸಿನ ನಂತರ ಇಂತಹ ಕ್ಯಾಮಿಯೊ ಪಾತ್ರಗಳನ್ನು ಅರಸುತ್ತಿರುವ ಸೋನಲ್ ಕೈಯಲ್ಲಿ ಸದ್ಯ ಅರ್ಧ ಡಜನ್ ಸಿನಿಮಾಗಳಿವೆ. ಸಿನಿಮಾ ಕ್ಷೇತ್ರವೇ ಬೇಡವೆಂದು ನಿರ್ಧರಿಸಿದ್ದ 'ನರ್ಸಮ್ಮ' ಹೀಗನ್ನುತ್ತಾರೆ.....

ಸೋನಲ್ ಮೊಂತೆರೋ

ಅಭಿಲಾಷ್ ಪಿ.ಎಸ್.

• ಕೋಸ್ಟಲ್‌ವುಡ್‌ನಿಂದ ಸ್ಯಾಂಡಲ್‌ವುಡ್‌ನತ್ತ ಬಂದ ಸೋನಲ್, ಫುಲ್ ಬ್ಯುಸಿಯಾಗಿದ್ದಾರೆ ಅಲ್ಲವೇ?

ನಾನು ಇವತ್ತು ನಟಿಯಾಗಿ ಈ ಮಟ್ಟಕ್ಕೆ ಬೆಳೆಯಬೇಕಾದರೆ ಅದಕ್ಕೆ ಮುಖ್ಯ ಕಾರಣ ತುಳು ಸಿನಿಮಾ. ಕೋಸ್ಟಲ್‌ವುಡ್‌ಗೆ ಪ್ರವೇಶಿಸುವ ಮೊದಲು ನಾನು ಮಾಡೆಲಿಂಗ್ ಮಾಡುತ್ತಿದ್ದೆ. 2013ರಲ್ಲಿ ಮಿಸ್ ಮಂಗಳೂರು ಸ್ಪರ್ಧೆಯಲ್ಲಿ ಮಿಸ್ ಬ್ಯೂಟಿಫುಲ್ ಸ್ಮೈಲ್ ಪ್ರಶಸ್ತಿಯನ್ನು ನಾನು ಪಡೆದಿದ್ದೆ. ಇದಾದ ನಂತರ ನನ್ನ ಸಿನಿಪಯಣ ಆರಂಭವಾಯಿತು. ನಾನು ಯಾವತ್ತೂ ನಟನೆಯ ತರಗತಿಗಳಿಗೆ ಹೋಗಿಲ್ಲ, ಕ್ಯಾಮೆರಾ ಮುಂದೆ ಹೇಗೆ ನಟಿಸಬೇಕು ಎನ್ನುವುದರ ಕುರಿತು ಕಿಂಚಿತ್ತೂ ಅಭ್ಯಾಸ ಇರಲಿಲ್ಲ. ನನಗೆ ಆಸಕ್ತಿ ಇದ್ದಿದ್ದು ಕ್ಲಿನಿಕಲ್ ಸೈಕಾಲಜಿಯಲ್ಲಿ. ಸಂಗೀತದಲ್ಲಿ ಅಭಿರುಚಿ ಇತ್ತು. ಆದರೆ ನಟಿಯಾಗಬೇಕು ಎನ್ನುವ ಯಾವ ಆಸೆಯೂ ಇರಲಿಲ್ಲ. ನಾನು ಸಿನಿಮಾ ಕ್ಷೇತ್ರಕ್ಕೆ ಇಳಿದಿದ್ದೇ ಅಮ್ಮನ ಒತ್ತಾಯಕ್ಕೆ. 'ಎಕ್ಕಸಕ' ಸಿನಿಮಾ ಮುಂಚೆ ಅಮ್ಮನ ಬಳಿ 'ಇದೇ ನನ್ನ ಕೊನೆಯ ಸಿನಿಮಾ. ಇದು ನನ್ನ ಆಸಕ್ತಿಯ ಕ್ಷೇತ್ರವೇ ಅಲ್ಲ. ನಾನು ಸಿನಿಮಾ ಇಂಡಸ್ಟ್ರಿಗೆ ಫಿಟ್ ಅಲ್ಲ' ಎಂದಿದ್ದೆ. ಆದರೆ ಆಗಿದ್ದೇ ಬೇರೆ. ಆ ಸಿನಿಮಾ 100 ದಿನ ಓಡಿತು. ಅಲ್ಲಿಂದ ಇಲ್ಲಿಯವರೆಗೂ ನಿತ್ಯವೂ ಬ್ಯುಸಿಯಾಗಿದ್ದೇನೆ. 15 ಸಿನಿಮಾಗಳಾಗುತ್ತಾ ಬಂತು. ಒಂದಲ್ಲಾ ಒಂದು ಆಫರ್‌ಗಳು ಬರುತ್ತಲೇ ಇವೆ.

• 'ಪಂಚತಂತ್ರ' ಹಾಗೂ 'ರಾಬರ್ಟ್' ಬಳಿಕ ನಿಮಗೆ ಹಲವು ನಾಮಕರಣವಾಗಿದೆಯಲ್ಲವೇ?

ಹೌದು. 'ಪಂಚತಂತ್ರ'ದಿಂದ ಜನರಿಗೆ ಸೋನಲ್ ಮೊಂತೆರೋ ಯಾರೆಂದು ತಿಳಿಯಿತು. ಆದರೆ ಅದಕ್ಕೂ ಮುನ್ನವೇ ನಾನು ಬಹಳಷ್ಟು ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರ ಮಾಡಿದ್ದೆ. 'ಪಂಚತಂತ್ರ'ದವರೆಗೆ ನನ್ನ ಜೀವನ ಸಾಮಾನ್ಯವಾಗಿತ್ತು. ಆದರೆ ನಂತರ ನನ್ನ ಸಿನಿಗ್ರಾಫ್ ಒಂದೇ ಸಲ ಏರಿಕೆಯಾಯಿತು. ಯೋಗರಾಜ್ ಭಟ್ ಅವರ ಸಿನಿಮಾದಲ್ಲಿ ನಟಿಸಬೇಕು ಎನ್ನುವ ಆಸೆ ಮೊದಲೇ ಇತ್ತು. 'ಪಂಚತಂತ್ರ' ಸಿನಿಮಾ ಬಳಿಕ ಜನರು ನನ್ನನ್ನು ಸ್ವೀಕರಿಸಿದರು. ಈ ಸಿನಿಮಾದಲ್ಲಿ ನನ್ನ ಪಾತ್ರ ಬಹಳ ಬಬ್ಲಿಯಾಗಿತ್ತು. ಶೇ100ರಷ್ಟು ಓವರ್‌ಆ್ಯಕ್ಟಿಂಗ್ ಪಾತ್ರವದು. ಜನರಿಗೆ ಆ ಪಾತ್ರ ಬಹಳ ಕನೆಕ್ಟ್ ಆಯಿತು.

ನನ್ನ ಸಿನಿಮಾ ಜೀವನಕ್ಕೆ ಮತ್ತೊಂದು ದೊಡ್ಡ ತಿರುವು ನೀಡಿದ ಸಿನಿಮಾ 'ರಾಬರ್ಟ್'. 'ಪಂಚತಂತ್ರ' ಸಿನಿಮಾದಲ್ಲಿ ನಾಯಕಿಯಾಗಿದ್ದ ಕಾರಣ ಬಹಳ ನಿರೀಕ್ಷೆ ಇತ್ತು. ಆದರೆ 'ರಾಬರ್ಟ್' ಯಶಸ್ಸು ಅನಿರೀಕ್ಷಿತ. 'ರಾಬರ್ಟ್'ನಲ್ಲಿ ತೆರೆಯ ಮೇಲೆ ಕೆಲವೇ ಹೊತ್ತು ಬಂದು ಹೋಗುವ ಪಾತ್ರ ನನ್ನದಾಗಿತ್ತು. ಆದರೆ ಈ ಪಾತ್ರ ನನಗೊಂದು ಪ್ರೊಫೈಲ್ ನೀಡಲಿದೆ ಎನ್ನುವ ಭರವಸೆ ನನಗಿತ್ತು. 'ತನು' ಪಾತ್ರವನ್ನು ಜನ ಈ ಮಟ್ಟಕ್ಕೆ ಮೆಚ್ಚುತ್ತಾರೆ ಎಂದು ದೇವರಾಣೆಗೂ ಊಹಿಸಿರಲಿಲ್ಲ. ಇದೀಗ ಹಲವು ನಾಮಕರಣಗಳಾಗಿವೆ. 'ಸಾಹಿತ್ಯ', 'ಹೊಂಗೆಮರ', 'ನರ್ಸಮ್ಮ', 'ಹೊಂಗೆಹೂವು' ಹೀಗೆ ಹಲವು ಹೆಸರುಗಳಿಂದ ಜನರು ನನ್ನನ್ನು ಕರೆಯುತ್ತಾರೆ.

• ರಾಬರ್ಟ್‌ನ 'ರಾಘವ' ಮತ್ತು 'ತನು' ಜೋಡಿ ಯಾವಾಗ ಮತ್ತೆ ತೆರೆಗೆ?

'ರಾಬರ್ಟ್' ಸಿನಿಮಾದ ಬಳಿಕ ನಾನು 'ತನು' ಮಾದರಿಯ ಪಾತ್ರವನ್ನು ಹುಡುಕುತ್ತಿದ್ದೇನೆ. ನನಗೆ ನಾಯಕಿಯ ಪಾತ್ರವೇ ಬೇಕೆಂದಿಲ್ಲ. ಸಣ್ಣ ಪಾತ್ರವಾದರೂ ಸರಿ, ಜನರ ಮನಸ್ಸಿನಲ್ಲಿ ಉಳಿಯುವ ಪಾತ್ರವನ್ನು ಮಾಡಬೇಕು ಎನ್ನುವ ಅಭಿಲಾಷೆ ಇದೆ. ತೆರೆಯ ಮೇಲೆ ಐದು ನಿಮಿಷವಾದರೂ ಸರಿ ಪ್ರೇಕ್ಷಕರ ಮೇಲೆ ಪರಿಣಾಮ ಬೀರುವ ಪಾತ್ರವನ್ನು ನಿಭಾಯಿಸಬೇಕು.

'ರಾಘವ' ಮತ್ತು 'ತನು' ಜೋಡಿ ಮತ್ತೆ ತೆರೆಯ ಮೇಲೆ ಯಾವಾಗ ಎಂದು ಹೋದಲ್ಲೆಲ್ಲ ಜನ ಕೇಳುತ್ತಿದ್ದಾರೆ. ಖಂಡಿತ ಈ ಜೋಡಿ ಮತ್ತೆ ತೆರೆ ಮೇಲೆ ಬರಲಿದೆ. ಲಾಕ್‌ಡೌನ್ ಸಮಯದಲ್ಲಿ ನನಗೆ ಹಾಗೂ ವಿನೋದ್ ಪ್ರಭಾಕರ್ ಅವರಿಗೆ ಬಹಳ ಕಥೆಗಳು ಬಂದವು. ನಾನು ಒಪ್ಪಿಕೊಂಡಿದ್ದ ಹಲವು ಸಿನಿಮಾಗಳಲ್ಲೂ ನಾಯಕರನ್ನಾಗಿ ವಿನೋದ್‌ಪ್ರಭಾಕರ್‌ಅವರನ್ನುಹಾಕುವಯೋಚನೆಯನ್ನು ನಿರ್ದೇಶಕರು ಮಾಡಿದ್ದರು. ಆದರೆ ನಾವು ಒಂದು ಅತ್ಯುತ್ತಮವಾದ, ಸೂಕ್ತ ಕಥೆಗೆ ಕಾಯುತ್ತಿದ್ದೇವೆ. ಒಂದು ಸಿನಿಮಾ ಒಪ್ಪುವುದು ದೊಡ್ಡ ವಿಷಯವಲ್ಲ. ಆದರೆ ಜನರ ನಿರೀಕ್ಷೆ ಹುಸಿಯಾಗಬಾರದು. ಈ ವಿಚಾರದಲ್ಲಿ ನಾವಿಬ್ಬರೂ ಪರಸ್ಪರ ಮಾತನಾಡಿಕೊಳ್ಳುತ್ತಿದ್ದೇವೆ.

• 'ಶುಗರ್ ಫ್ಯಾಕ್ಟರಿ' ತೆರೆದಿದ್ದೀರಿ. ಹೇಗಿದೆ 'ಹ್ಯಾಂಗೋವರ್'?

'ಶುಗರ್ ಫ್ಯಾಕ್ಟರಿ' ಸಿನಿಮಾ ನಾನು ಬಹಳ ಇಷ್ಟಪಟ್ಟು ಮಾಡಿದ ಚಿತ್ರ. ನಾನು 'ಅದಿತಿ' ಎಂಬ ಪಾತ್ರಕ್ಕೆ ಬಣ್ಣಹಚ್ಚಿದ್ದು, ಈ ಪಾತ್ರವನ್ನು ನಾನು ಬಹಳ ಇಷ್ಟಪಡುತ್ತೇನೆ. ವಿಭಿನ್ನವಾದ ಪಾತ್ರವದು. 'ವರ್ಕ್ ಹಾರ್ಡ್–ಪಾರ್ಟಿ ಹಾರ್ಡ್' ಹೀಗೆ 'ಅದಿತಿ'ಯನ್ನು ಈ ಸ್ಲೋಗನ್ ಮುಖಾಂತರ ವಿವರಿಸಬಹುದು. ಪಾರ್ಟಿ ಇಷ್ಟಪಡುವ ಹೆಣ್ಣುಮಕ್ಕಳಿಗೆ 'ಹ್ಯಾಂಗೋವರ್' ಹಾಡು ಬಹಳ ಇಷ್ಟವಾಗಲಿದೆ.

• ಹೊಸ ಸಿನಿಮಾ ಒಪ್ಪಿಕೊಂಡಿದ್ದೀರಾ?

ಹರಿಪ್ರಸಾದ್ ಅವರ ನಿರ್ದೇಶನದ 'ಪದವಿಪೂರ್ವ'ದಲ್ಲೂ ನನ್ನದು ವಿಶೇಷ ಪಾತ್ರ. ಈ ಚಿತ್ರದ ಚಿತ್ರೀಕರಣ ಇನ್ನಷ್ಟೇ ಆರಂಭವಾಗಬೇಕಾಗಿದೆ. ಅನೂಪ್ ಆ್ಯಂಟೋನಿ ನಿರ್ದೇಶನದ 'ಭಗವಾನ್ ಶ್ರೀಕೃಷ್ಣಪರಮಾತ್ಮ' ಚಿತ್ರದ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದೇನೆ. 'ಬನಾರಸ್' ಚಿತ್ರ ಈ ವರ್ಷದ ಅಂತ್ಯಕ್ಕೆ ತೆರೆ ಕಾಣುವ ಸಾಧ್ಯತೆ ಇದೆ. 'ಶುಗರ್ ಫ್ಯಾಕ್ಟರಿ', 'ತಲ್ವಾರ್ ಪೇಟೆ', 'ನಟವರ್‌ಲಾಲ್', 'ಶಂಭೋ ಶಿವಶಂಕರ', 'ಬುದ್ಧಿವಂತ–2' ಚಿತ್ರಗಳ ಚಿತ್ರೀಕರಣ ಬಾಕಿ ಇದೆ. ಲಾಕ್‌ಡೌನ್ ಆಗದೇ ಹೋಗಿದ್ದರೆ ಬಹುತೇಕ ಚಿತ್ರೀಕರಣ ಪೂರ್ಣಗೊಳ್ಳುತ್ತಿತ್ತು. ಹೊಸ ಸಿನಿಮಾಗಳನ್ನು ಸದ್ಯಕ್ಕೆ ಒಪ್ಪಿಕೊಂಡಿಲ್ಲ. ❖



ವಿಜಯ್ ರಾಘವೇಂದ್ರ

'ಚಿನ್ನಾರಿಮುತ್ತ'ನ ಕೈಯಲ್ಲಿ ಸಿಗರೇಟ್!

ಚಂದನವನದಲ್ಲಿ ಬಹಳ ಸರಳ ಹಾಗೂ ಸಜ್ಜನಿಕೆಯ ನಟನೆಂದೇ ಗುರುತಿಸಿಕೊಂಡಿರುವ, ಜನಕ್ಕೆ 'ಚಿನ್ನಾರಿಮುತ್ತ' ಎಂದೇ ಚಿರಪರಿಚಿತರಾದ ನಟ ವಿಜಯ್ ರಾಘವೇಂದ್ರ ಅವರು ಇದೀಗ ಸಿಗರೇಟ್ ಚಟಕ್ಕೆ ಬಿದ್ದಿದ್ದಾರೆ! ಆದರೆ, ಇದು ನಿಜಜೀವನದಲ್ಲಿ ಅಲ್ಲ. 'ಕದ್ದ ಚಿತ್ರ' ಎಂಬ ವಿಭಿನ್ನವಾದ ಶೀರ್ಷಿಕೆ ಹೊಂದಿರುವ ಸಿನಿಮಾದಲ್ಲಿ ಲೇಖಕನ ಪಾತ್ರಕ್ಕೆ ವಿಜಯ್ ಬಣ್ಣಹಚ್ಚಿದ್ದು, ಸಿಗರೇಟ್ ಸೇದುತ್ತಾ ರಗಡ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಸುಹಾಸ್ ಕೃಷ್ಣ ನಿರ್ದೇಶನದ ಈ ಚಿತ್ರದ ಫಸ್ಟ್‌ಲುಕ್ ಇತ್ತೀಚೆಗೆ ಬಿಡುಗಡೆಯಾಗಿದೆ. ಪಾತ್ರದ ಕುರಿತು ಮಾತನಾಡಿದ ವಿಜಯ್, '25 ವರ್ಷದಲ್ಲಿ ವಿಜಯ್ ರಾಘವೇಂದ್ರನ ಕೈಯಲ್ಲಿ ಇರದ ಸಿಗರೇಟ್ ಈಗೇಕೆ ಎನ್ನುವ ಪ್ರಶ್ನೆ ಬರುತ್ತದೆ. ಈ ಪಾತ್ರಕ್ಕೆ ನಾನು ಸರಿಹೋಗುತ್ತೇನೆಯೇ ಎನ್ನುವ ಪ್ರಶ್ನೆ ನನ್ನಲ್ಲಿಯೇ ಇತ್ತು. ಇದಕ್ಕೆ ಹಿಂದೆ ನಾನು ಸಿಗರೇಟ್ ಅಥವಾ ಮದ್ಯದ ಬಾಟಲ್ ಹಿಡಿದರೆ ಜನವೇ ಬೈಯುತ್ತಿದ್ದರು. ಬರದಿರುವ ಕೆಲಸ ಇವರಿಗೆ ಏಕೆ ಎನ್ನುತ್ತಿದ್ದರು. ಸಿಗರೇಟ್ ಸೇದುವುದು ಜೀವಕ್ಕೆ ಹಾನಿಕಾರಕ. ಆದರೆ ಕೆಲ ಪಾತ್ರ, ಕೆಲವರ ವ್ಯಕ್ತಿತ್ವ ಸಿಗರೇಟ್ ಜೊತೆಗೆ ಗುರುತಿಸಿಕೊಳ್ಳುತ್ತದೆ. ಚಿತ್ರದಲ್ಲಿ ನನ್ನ ಪಾತ್ರವೂ ಇದೇ ರೀತಿ ಇದೆ. ಕೃತಿ ಚೌರ್ಯದ ಕಥಾಹೊಂದಿರುವ ಸೈಕಾಲಾಜಿಕಲ್ ಥ್ರಿಲ್ಲರ್ ಸಿನಿಮಾ ಇದು. ಪಾತ್ರಕ್ಕಾಗಿ ಸಿಗರೇಟ್ ಸೇದುವ ಅಭ್ಯಾಸ ಮಾಡಿದೆ. ಈ ಸಂದರ್ಭದಲ್ಲಿ ತಲೆಸುತ್ತು ಬಂದು ಬಿದ್ದಿರುವ ಘಟನೆಯೂ ಇದೆ. ಸಿಗರೇಟ್ ಸೇದುವ ವಿಡಿಯೊ ಮಾಡಿ ಮನೆಗೆ ಕಳುಹಿಸಿದಾಗ ಬೈಗುಳ ತಿಂದದ್ದೂ ಇದೆ' ಎಂದರು.

'ವಿಜಯ್ ರಾಘವೇಂದ್ರನ ಬಾಯಲ್ಲಿ ಸಿಗರೇಟ್ ಇದೆಯೇ? ಸಿಗರೇಟ್ ಹಿಡಿದುಕೊಳ್ಳುವುದಕ್ಕೂ ಯೋಗ್ಯತೆ ಇರಬೇಕು. ಸಿಗರೇಟ್ ಮರ್ಯಾದೆಯನ್ನೂ ನಾನು ತೆಗೆದಿದ್ದೇನೆ. ಆದರೆ ಈ ಸಿನಿಮಾದಲ್ಲಿ ಪಾತ್ರಕ್ಕಾಗಿ ಈ ಅಭ್ಯಾಸ ಕಲಿತು ನಿಭಾಯಿಸಿದ್ದೇನೆ. ನಿಜಜೀವನದಲ್ಲಿ ಎಂದೂ ನಾನು ಸಿಗರೇಟ್ ಇಷ್ಟಪಟ್ಟವನಲ್ಲ, ಇಷ್ಟಪಡುವುದೂ ಇಲ್ಲ' ಎನ್ನುತ್ತಾರೆ ವಿಜಯ್.

'ಬೆಂಗಳೂರು, ವಯನಾಡ್‌ನಲ್ಲಿ ಚಿತ್ರದ ಚಿತ್ರೀಕರಣ ನಡೆದಿದೆ. ಚಿತ್ರಕಥೆ ಬರೆಯುವ ಸಂದರ್ಭದಲ್ಲೇ ವಿಜಯ್ ರಾಘವೇಂದ್ರ ಅವರನ್ನು ಬೇರೆ ರೀತಿ ತೆರೆಯ ಮೇಲೆ ತೋರಿಸಬೇಕು ಎನ್ನುವ ಯೋಚನೆ ನಮ್ಮದಾಗಿತ್ತು. ಇದನ್ನು ನಾವು ಸಾಧಿಸಿದ್ದೇವೆ. ಇನ್ನು 8 ದಿನಗಳ ಚಿತ್ರೀಕರಣ ಬಾಕಿ ಇದೆ. ಸ್ಟೈಲ್, ನಡವಳಿಕೆಯಲ್ಲಿ ಬೇರೆಯೇ ವಿಜಯ್ ರಾಘವೇಂದ್ರ ಕಾಣಿಸಿಕೊಳ್ಳಲಿದ್ದಾರೆ' ಎಂದರು ಸುಹಾಸ್ ಕೃಷ್ಣ. ❖

ಡಿ.31ಕ್ಕೆ '777 ಚಾರ್ಲಿ' ತೆರೆಗೆ

ಸಿನಿ ಸಂಕ್ಷಿಪ್ತ

ನಟ ರಕ್ಷಿತ್ ಶೆಟ್ಟಿ ಅಭಿನಯದ '777 ಚಾರ್ಲಿ' ಚಿತ್ರವು ಕನ್ನಡ, ತೆಲುಗು, ತಮಿಳು, ಮಲಯಾಳಂ ಹಾಗೂ ಹಿಂದಿ ಭಾಷೆಯಲ್ಲಿ 2021ರ ಡಿ.31ರಂದು ತೆರೆ ಕಾಣಲಿದೆ.

ಕಿರಣ್ ರಾಜ್ ಕೆ. ನಿರ್ದೇಶನದ ಈ ಚಿತ್ರದ ಮೊದಲ ವಿಡಿಯೊ ಹಾಡು 'ಹೆಂಗೋ ಇದ್ದ ಧರ್ಮ, ತಗಲ್ಲಾಕ್ಕೋತು ಕರ್ಮ..' ಗುರುವಾರ ಬಿಡುಗಡೆಯಾಗಿದ್ದು, 6 ನಿಮಿಷಗಳ ಹಾಡಿನಲ್ಲಿ ಧರ್ಮ ಮತ್ತು ಚಾರ್ಲಿ ನಡುವೆ ನಡೆಯಲಿರುವ ಟಾಮ್ ಆ್ಯಂಡ್ ಜೆರ್ರಿ ಆಟ, ಧರ್ಮನಿಗೆ ಚಾರ್ಲಿ ನೀಡುವ ಚಿತ್ರಹಿಂಸೆಯನ್ನು ಸೆರೆಹಿಡಿಯಲಾಗಿದೆ. ಜಿ.ಎಸ್.ಗುಪ್ತ ಹಾಗೂ ರಕ್ಷಿತ್ ಶೆಟ್ಟಿ ಈ ಚಿತ್ರದ ನಿರ್ಮಾಪಕರು. ಸಂಗೀತಾ ಶೃಂಗೇರಿ ಚಿತ್ರದ ನಾಯಕಿ. ಚಿತ್ರದಲ್ಲಿ ನಟ, ನಿರ್ದೇಶಕ ರಾಜ್ ಬಿ.ಶೆಟ್ಟಿ, ಡ್ಯಾನಿಶ್ ಸೇಟ್ ತಾರಾಗಣದಲ್ಲಿದ್ದಾರೆ.

ರಕ್ಷಿತ್ ಶೆಟ್ಟಿ ಅಭಿನಯದ 'ಕಿರಿಕ್ ಪಾರ್ಟಿ', 'ಅವನೇ ಶ್ರೀಮನ್ನಾರಾಯಣ' ಚಿತ್ರವೂ ವರ್ಷದ ಕೊನೆಯ ಶುಕ್ರವಾರ ಬಿಡುಗಡೆಯಾಗಿತ್ತು. ❖

777 ಚಾರ್ಲಿ

ರಕ್ಷಿತ್ ಶೆಟ್ಟಿ

ಸಂಸಾರ ಸರಿಗಮದ 'ಪುರುಷೋತ್ತಮ'

ಸಂಸಾರದಲ್ಲಿ ಒಡಕು ಮೂಡಿದಾಗ ಅದನ್ನು ಸರಿಪಡಿಸಿಕೊಂಡು ಹೋಗುವುದೇ ಜೀವನ ಎಂಬುದನ್ನು ಹೇಳಿದೆ 'ಪುರುಷೋತ್ತಮ' ಚಿತ್ರ ಎಂದರು ನಿರ್ದೇಶಕ ಅಮರನಾಥ್.

ಜಿಮ್ ರವಿ ಅಭಿನಯದ ಪುರುಷೋತ್ತಮ ಚಿತ್ರದ ಆಡಿಯೋ ಬಿಡುಗಡೆ ಸಂದರ್ಭ ಅಮರನಾಥ್ ಅವರು ಚಿತ್ರದ ತಿರುಳು ತೆರೆದಿಟ್ಟರು. ಕಾರ್ಯಕ್ರಮಕ್ಕೆ ನಟ ಶರಣ್ ಚಾಲನೆ ನೀಡಿದರು.

ಅಪೂರ್ವಾ, ಜಿಮ್ ರವಿ

ಶರಣ್ ಮಾತನಾಡಿ, 'ನಾನು 100 ಚಿತ್ರಗಳ ನಂತರ ನಾಯಕನಾಗಿ ಬಡ್ತಿ ಪಡೆದುಕೊಂಡೆ. ರವಿ ಅವರು 150 ಸಿನಿಮಾಗಳ ನಂತರ ಹೀರೋ ಆಗಿ ಕಾಣಿಸಿಕೊಂಡಿದ್ದಾರೆ. ನನ್ನ ದಾಖಲೆಯನ್ನು ಪ್ರಾಮಾಣಿಕವಾಗಿ ಮುರಿದಿದ್ದಾರೆ. ಅವರ ಶಾಲೆಯಲ್ಲಿ ಜಿಮ್ ತರಬೇತಿ ಪಡೆದಿದ್ದೇನೆ. ಶಾಲೆಯಲ್ಲಿ ಅವರು ತುಂಬ ಶಿಸ್ತಿನ ಮಾಸ್ಟರ್. ರವಿ ಸರ್ ಹಾಗೂ ಡ್ಯಾನ್ಸ್ ಹೇಳಿಕೊಟ್ಟ ಕಲ್ಯೆ ಇಬ್ಬರಿಗೂ ಆಭಾರಿಯಾಗಿದ್ದೇನೆ' ಎಂದರು.

ಪತ್ನಿಗೆ ರವಿ ಕ್ರೆಡಿಟ್: 'ಪೋಷಕ ಪಾತ್ರ ಮಾಡಿದ್ದ ನನ್ನನ್ನು, ನಾಯಕನಾಗಲು ಪ್ರೇರೇಪಿಸಿದ್ದು ಪತ್ನಿಯೇ' ಎಂದು ಹೇಳಿದರು ರವಿ.

ನಾಯಕಿ ಅಪೂರ್ವಾ, ಸಂಗೀತ ಸಂಯೋಜಕ ಶ್ರೀಧರ್ ಸಂಭ್ರಮ್, ನಟಿ ನಿವೇದಿತಾ, ನೃತ್ಯ ನಿರ್ದೇಶಕ ಕಲ್ಯೆ, ಛಾಯಾಗ್ರಾಹಕ ಕುಮಾರ್ ಸಂತಸ ಹಂಚಿಕೊಂಡರು. ❖

PVR | FORUM | ORION VAISHNAVI | VEGA REGALIA | ARENA MARKETCITY | GT SPIRIT | SPI AURA VR | UPTOWN MANGALORE | HUBLI | INOX LIVE the MOVIE | MANTRI | CENTRAL SWAGATH | YELAHANKA GARUDA | BROOKFIELD VALUE MALL | LIDO | RMZ MYSORE | MANIPAL | BELGAUM | Cinépolis MEENAKSHI | FUN SJR | SHANTINIKETAN ETA | ORION EAST MANGALORE | HUBLI | INNOVATIVE MARATHHALLI | GOPALAN ARCH | LEGACY | GRAND SIGNATURE | INNOVATION | KIN CINEMAS KADUGODI | DRC MYSORE | VISION CINEMAS MYSORE | MOVIE TIME DAVANAGERE | Bharath Cinemas MANGALORE | MANIPAL SHIMOGA | KUNDAPURA | SHETTY'S MULTIPLEX GULBARGA | SAPNA BIDAR

ಅನುಪಮ

ಕೆ.ಜಿ.ರಸ್ತೆ A/C dts 7.1 DOLBY ATMOS

NEWLY RENOVATED

10:30AM, 1:30, 4:00, 6:30PM

ಮಾಗಡಿ ರಸ್ತೆ ವೀರೇಶ್	ಹೊಸದುರ್ಗ ಜ್ಯೋತಿ
ರಾಜಾಜಿನಗರ ನವರಂಗ್	ಹಿರಿಯೂರು ನಂಜುಂಡೇಶ್ವರ
ಸುಂಕದಕಟ್ಟೆ ಮೋಹನ್	ಬಳ್ಳಾರಿ ನಟರಾಜ ಕಾಂಪ್ಲೆಕ್ಸ್
ರಾಜಗೋಪಾಲನಗರ ಮಾರುತಿ	ಹೊಸಪೇಟೆ ಲಕ್ಷ್ಮಿ
ಜೆ.ಪಿ.ನಗರ ಸಿದ್ಧೇಶ್ವರ	ಹಗರಿಬೊಮ್ಮನಹಳ್ಳಿ ವಿಷ್ಣು
ಕಮಲಾನಗರ ವೀರಭದ್ರೇಶ್ವರ	ಕಂಪಿಲಿ ಚಂದ್ರಕಲಾ
ತಾವರೆಕೆರೆ ಬಾಲಾಜಿ	ಹುಬ್ಬಳ್ಳಿ ಸುಧಾ
ಕೆಂಗೇರಿ ರಾಬಿನ್	ಧಾರವಾಡ ಪದ್ಮ
ಉಲ್ಲಾಳ ವಜ್ರೇಶ್ವರಿ	ಬೆಳಗಾವಿ ನಿರ್ಮಲ್
ಯಶವಂತಪುರ ಉಲ್ಲಾಸ್	ಬಿಜಾಪುರ ಲಕ್ಷ್ಮಿ
ಗೊಟ್ಟಿಗೆರೆ ಲಕ್ಷ್ಮಿ	ಗದಗ್ ಮಹಾಲಕ್ಷ್ಮಿ
ತುಮಕೂರು ಮಾರುತಿ	ರಾಣೆಬೆನ್ನೂರು ಶಂಕರ್
ರಾಮನಗರ ಶ್ರೀರಾಮ	ಬಾಗಲಕೋಟೆ ಶಕ್ತಿ
ಹಾರೋಹಳ್ಳಿ ವಿನಾಯಕ	ಹಾವೇರಿ ಮಾಧವಿ
ದೊಡ್ಡಬಳ್ಳಾಪುರ ಸೌಂದರ್ಯಮಹಲ್	ಲಕ್ಷ್ಮೇಶ್ವರ ರವಿ
ಮೈಸೂರು ವುಡ್‌ಲ್ಯಾಂಡ್ಸ್	ಇಳಕಲ್ ಶ್ರೀನಿವಾಸ
ಕುಂಬಾರಕೊಪ್ಪಲು ಮಹದೇಶ್ವರ	ಬ್ಯಾಡಿಗಿ ಶೋಭ
ಮಂಡ್ಯ ಮಹಾವೀರ್	ಸಿಂಧಗಿ ವಿನಾಯಕ
ಹಾಸನ ಪಿಕ್ಚರ್ ಪ್ಯಾಲೇಸ್	ಶಿರಸಿ ನಟರಾಜ
ಟಿ.ನರಸೀಪುರ ವಿಜಯಭಗವಾನ್	ರಾಮದುರ್ಗ ಶ್ರೀನಿವಾಸ
ಚಾಮರಾಜನಗರ ಬಸವೇಶ್ವರ	ಮುದ್ದೇಬಿಹಾಳ ಗಿರಿಜಾಶಂಕರ್
ಪಾಂಡವಪುರ ಲಾಲ್ ಬಹದ್ದೂರ್	ಅಂಕಲಿ ಮಯೂರ
ಬನ್ನೂರು ಸೋಮೇಶ್ವರ	ಗುಲ್ಬರ್ಗ ಸಂಗಮ್
ಅರಕಲಗೂಡು ಮಂಜುನಾಥ	ಕೊಪ್ಪಳ ಶಾರದ
ಚಿಕ್ಕಮಗಳೂರು ನಾಗಲಕ್ಷ್ಮಿ	ಸಿಂಧನೂರು ಸಂಗಮೇಶ್ವರ
ಚಿತ್ರದುರ್ಗ ಪ್ರಸನ್ನ	ಗಂಗಾವತಿ ಶಿವ
ದಾವಣಗೆರೆ ಅಶೋಕ	ಕುಷ್ಟಗಿ ಬಸವೇಶ್ವರ

FACE MASK COMPULSORY

ಪ್ರತಿಭಟನಕಾರರ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ: ನಗರಗಳಲ್ಲಿ ಭದ್ರತೆ ಹೆಚ್ಚಳ

ಪ್ರತಿಭಟನೆಗೆ ತಾಲಿಬಾನ್ ಕೆಂಗಣ್ಣು

ಕಾಬೂಲ್ (ಎಎಫ್‌ಪಿ): ಅಫ್ಗಾನಿಸ್ತಾನದಲ್ಲಿ ಪ್ರತಿಭಟನೆಗಳನ್ನು ನಿಷೇಧಿಸಲಾಗಿದೆ. ಇದನ್ನು ಉಲ್ಲಂಘಿಸಿ ಪ್ರತಿಭಟನೆ ನಡೆಸಿದವರ ಮೇಲೆ ಕಾನೂನಿನ ಅನ್ವಯ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಾಲಿಬಾನ್ ಎಚ್ಚರಿಸಿದೆ. ಪರಿಣಾಮವಾಗಿ ಕಾಬೂಲ್‌ನಲ್ಲಿ ನಡೆಸಲು ಉದ್ದೇಶಿಸಿದ್ದ ಪ್ರತಿಭಟನೆಗಳನ್ನು ಸಂಘಟಕರು ರದ್ದುಪಡಿಸಿದ್ದಾರೆ.

ರಾಜಧಾನಿ ಕಾಬೂಲ್, ಈಶಾನ್ಯದ ನಗರ ಫೈಜಾಬಾದ್, ಪಶ್ಚಿಮದ ನಗರ ಹೆರಾತ್ ಸೇರಿ ಅಫ್ಗಾನಿಸ್ತಾನದ ವಿವಿಧ ಭಾಗಗಳಲ್ಲಿ ಈ ವಾರ ಪ್ರತಿಭಟನೆ ನಡೆಸಿದವರನ್ನು ತಾಲಿಬಾನ್ ಸೈನಿಕರು ಚೆದುರಿಸಿದ್ದರು. ತಾಲಿಬಾನ್ ಸೈನಿಕರು ಹಾರಿಸಿದ ಗುಂಡಿಗೆ ಇಬ್ಬರು ಪ್ರತಿಭಟನಕಾರರು ಬಲಿಯಾಗಿದ್ದರು.

ದೇಶದ ಹಲವೆಡೆಗೆ ವ್ಯಾಪಿಸುತ್ತಿರುವ ಪ್ರತಿಭಟನೆಗಳನ್ನು ದಮನ ಮಾಡಲು ತಾಲಿಬಾನ್ ಭಾರಿ ಪ್ರಯತ್ನ ನಡೆಸುತ್ತಿದೆ. ಪ್ರತಿಭಟನೆ ನಡೆಸಬೇಕಿದ್ದರೆ ನ್ಯಾಯಾಂಗ ಸಚಿವಾಲಯದ ಪೂರ್ವಾನುಮತಿ ಕಡ್ಡಾಯ ಎಂದು ಬುಧವಾರವೇ ಹೇಳಲಾಗಿತ್ತು. ಆದರೆ, ಸದ್ಯಕ್ಕೆ ಪ್ರತಿಭಟನೆಗೆ ಅವಕಾಶವೇ ಇಲ್ಲ ಎಂದೂ ತಿಳಿಸಲಾಗಿತ್ತು.

ಕಾಬೂಲ್ ಮತ್ತು ಇತರ ನಗರಗಳಲ್ಲಿ ತಾಲಿಬಾನ್ ಸೈನಿಕರ ಗಸ್ತನ್ನು ಗುರುವಾರ ಹೆಚ್ಚಿಸಲಾಗಿದೆ. ವಿಶೇಷ ಪಡೆಯ ಸೈನಿಕರು ಕಾಬೂಲ್‌ನ ಬೀದಿಗಳಲ್ಲಿ ಶಸ್ತ್ರಸಜ್ಜಿತರಾಗಿ ಕಾವಲು ನಿಂತಿದ್ದರು. ಹಲವು ಕಡೆ ಬ್ಯಾರಿಕೇಡ್‌ಗಳನ್ನು ಹಾಕಿ ತಪಾಸಣೆಯನ್ನೂ ನಡೆಸಲಾಗುತ್ತಿದೆ.

ಕಾಬೂಲ್‌ನಲ್ಲಿರುವ ಪಾಕಿಸ್ತಾನ ರಾಯಭಾರ ಕಚೇರಿಯ ಹೊರಭಾಗದಲ್ಲಿ ಪ್ರತಿಭಟನೆ ನಡೆಸಲು ಕೆಲವು ಜನರು ಗುರುವಾರ ಬೆಳಿಗ್ಗೆ ಸೇರಿದ್ದರು. ಸೈನಿಕರು ಗಾಳಿಯಲ್ಲಿ ಗುಂಡು ಹಾರಿಸಿ ಅವರನ್ನು ಚೆದುರಿಸಿದ್ದಾರೆ.

ಕಾಬೂಲ್‌ನ ಇಬ್ಬರು ಪತ್ರಕರ್ತರಿಗೆ ತಾಲಿಬಾನ್ ಸೈನಿಕರು ಥಳಿಸಿದ್ದಾರೆ ರಾಯಿಟರ್ಸ್ ಚಿತ್ರ

ಕಾಬೂಲ್ ಬೀದಿಯಲ್ಲಿ ಗುರುವಾರ ಭದ್ರತೆ ಹೆಚ್ಚಿಸಲಾಗಿತ್ತು ಎಎಫ್‌ಪಿ ಚಿತ್ರ

ಪ್ರತಿಭಟನೆ ವರದಿ ಮಾಡಿದ ಪತ್ರಕರ್ತರಿಗೆ ಥಳಿತ

ಕಾಬೂಲ್‌ನಲ್ಲಿ ನಡೆದ ಪ್ರತಿಭಟನೆಗಳ ವರದಿ ಮಾಡಿದ ಅಫ್ಗಾನಿಸ್ತಾನದ ಇಬ್ಬರು ಪತ್ರಕರ್ತರನ್ನು ತಾಲಿಬಾನ್ ಸೈನಿಕರು ವಶಕ್ಕೆ ಪಡೆದು ಥಳಿಸಿದ್ದಾರೆ ಎಂದು ವರದಿಯಾಗಿದೆ.

ಪ್ರತಿಭಟನಾ ಸ್ಥಳವೊಂದರಿಂದ ಅವರಿಬ್ಬರನ್ನು ಬುಧವಾರ ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಒಯ್ಯಲಾಗಿತ್ತು. ಪ್ರತಿಭಟನೆಯನ್ನು ಅವರೇ ಸಂಘಟಿಸಿದ್ದಾರೆ ಎಂದು ಆರೋಪಿಸಿ ಅವರಿಗೆ ದೊಣ್ಣೆ ಮತ್ತು ತಂತಿಯಲ್ಲಿ ಥಳಿಸಲಾಗಿದೆ. 'ತಾಲಿಬಾನ್‌ನ ಒಬ್ಬ ನನ್ನ ತಲೆ ಮೇಲೆ ಕಾಲು ಇರಿಸಿದ್ದ. ಮುಖವನ್ನು ಕಾಂಕ್ರೀಟ್‌ಗೆ ಉಜ್ಜಿದ. ಅವರು ನನ್ನ ತಲೆಗೆ ಒದ್ದರು. ಕೊಂದೇ ಬಿಡುತ್ತಾರೆ ಎಂದು ಭಯವಾಗಿತ್ತು' ಎಂದು ಪತ್ರಿಕಾ ಛಾಯಾಗ್ರಾಹಕ ನೇಮತ್ ಉಲ್ಲಾ ನಕ್ದಿ ಹೇಳಿದ್ದಾರೆ.

ನಕ್ದಿ ಮತ್ತು ಅವರ ಸಹೋದ್ಯೋಗಿ ವರದಿಗಾರ ತಕಿ ದರ್ಯಾಬಿ ಅವರು 'ಎತಿಲಾತ್ ರೋಜ್' ಎಂಬ ಪತ್ರಿಕೆಗೆ ಕೆಲಸ ಮಾಡುತ್ತಾರೆ. ಕಾಬೂಲ್‌ನಲ್ಲಿ ಮಹಿಳೆಯರು ನಡೆಸಿದ್ದ ಸಣ್ಣ ಪ್ರತಿಭಟನೆಯ ವರದಿಗೆ ಅವರಿಬ್ಬರನ್ನು ಕಳುಹಿಸಲಾಗಿತ್ತು.

ಪ್ರತಿಭಟನೆಯ ಚಿತ್ರ ತೆಗೆಯಲು ಆರಂಭಿಸಿದ್ದ ತಮ್ಮನ್ನು ಸೈನಿಕರು ತಡೆದರು. ಚಿತ್ರ ತೆಗೆಯುವಂತಿಲ್ಲ ಎಂದು ಹೇಳಿದರು. ಚಿತ್ರ ತೆಗೆಯುತ್ತಿದ್ದ ಇತರರ ಫೋನ್‌ಗಳನ್ನು ಕಸಿದುಕೊಂಡು ಅವರೆಲ್ಲರನ್ನೂ ಬಂಧಿಸಿದರು ಎಂದು ನಕ್ದಿ ಹೇಳಿದ್ದಾರೆ.

'ಅಫ್ಗನ್ ಅಭಿವೃದ್ಧಿಗೆ ಭಾರತ ಶ್ರಮಿಸಿದೆ'

ವಿದೇಶಾಂಗ ಖಾತೆಯ ರಾಜ್ಯ ಸಚಿವೆ ಮೀನಾಕ್ಷಿ ಲೇಖಿ

ನ್ಯೂಯಾರ್ಕ್ (ಪಿಟಿಐ): ಯುದ್ಧ, ಆಂತರಿಕ ಕಲಹದಿಂದ ತತ್ತರಿಸಿದ್ದ ಅಫ್ಗಾನಿಸ್ತಾನದಲ್ಲಿ ಅತಿಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ನಡೆಸಿದ ಶ್ರೇಯ ಭಾರತಕ್ಕೆ ಸಲ್ಲುತ್ತದೆ ಎಂದು ವಿದೇಶಾಂಗ ಖಾತೆ ರಾಜ್ಯ ಸಚಿವೆ ಮೀನಾಕ್ಷಿ ಲೇಖಿ ಹೇಳಿದ್ದಾರೆ.

ಇಲ್ಲಿ ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಅವರು ಈ ಮಾತು ಹೇಳಿದ್ದಾರೆ. ಅಫ್ಗಾನಿಸ್ತಾನದ ಜನರ ಶ್ರೇಯೋಭಿವೃದ್ಧಿಗಾಗಿ ಅಲ್ಲಿನ 34 ಪ್ರಾಂತ್ಯಗಳಲ್ಲೂ ಭಾರತವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ. ಅವನ್ನು ಭಾರತವೇ ಅನುಷ್ಠಾನ ಮಾಡಿದೆ. ಮಾನವೀಯ ನೆಲೆಯಲ್ಲಿ ಭಾರತ ಈ ಕೆಲಸ ಮಾಡಿದೆ. ಇದಕ್ಕಾಗಿ 300 ಕೋಟಿ ಅಮೆರಿಕನ್ ಡಾಲರ್ (ಅಂದಾಜು ₹ 22,000 ಕೋಟಿ) ವೆಚ್ಚ ಮಾಡಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷತೆ ಭಾರತದ್ದಾಗಿದ್ದಾಗ ಕಳೆದ ತಿಂಗಳು ಸದಸ್ಯ ರಾಷ್ಟ್ರಗಳು ಅವಿರೋಧವಾಗಿ ನಿರ್ಣಯ ಅಂಗೀಕರಿಸಿವೆ. ತಾಲಿಬಾನ್ ಹಿಡಿತದಲ್ಲಿರುವ ಅಫ್ಗಾನಿಸ್ತಾನದ ನೆಲವನ್ನು ಯಾವುದೇ ದೇಶದ ವಿರುದ್ಧ ಭಯೋತ್ಪಾದನೆ ನಡೆಸಲು, ಉಗ್ರರಿಗೆ ತರಬೇತಿ ನೀಡಲು ಮತ್ತು ಉಗ್ರರಿಗೆ ಹಣಕಾಸು ನೆರವು ನೀಡಲು ಬಳಸಿಕೊಳ್ಳಬಾರದು ಎಂದು ನಿರ್ಣಯ ಅಂಗೀಕರಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಅಫ್ಗಾನಿಸ್ತಾನದ ಜತೆಗೆ ಭಾರತವು ಐತಿಹಾಸಿಕ ಸಂಬಂಧ ಹೊಂದಿದೆ. ಹೀಗಾಗಿ ಅಲ್ಲಿನ ಜನರ ಜೀವನಮಟ್ಟ ಸುಧಾರಿಸಲು ಹಲವು ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗಿದೆ
ಮೀನಾಕ್ಷಿ ಲೇಖಿ, ಸಚಿವೆ

ಭದ್ರತಾ ಮಂಡಳಿಯ 1267ನೇ ನಿರ್ಣಯವು ತಾಲಿಬಾನ್‌ನ ಹಲವು ಉಗ್ರರನ್ನು ಪಟ್ಟಿ ಮಾಡಿದೆ. ಆ ಪಟ್ಟಿಯಲ್ಲಿರುವ ಉಗ್ರರ ಬಗ್ಗೆ ಭಾರತವು ತನ್ನ ಕಳವಳವನ್ನು ಒತ್ತಿ ಹೇಳಿದೆ. ಅವರಿಗೆ ಅಫ್ಗಾನಿಸ್ತಾನದಲ್ಲಿ ಯಾವುದೇ ನೆಲೆ ಸಿಗದೇ ಇರುವುದು ಭಾರತದ ದೃಷ್ಟಿಯಿಂದ ಅತ್ಯಂತ ಮುಖ್ಯ ಎಂದು ಅವರು ಪ್ರತಿಪಾದಿಸಿದ್ದಾರೆ. ಆದರೆ ಈ ಪಟ್ಟಿಯಲ್ಲಿರುವ 14 ಜನರಿಗೆ ತಾಲಿಬಾನ್ ತನ್ನ ಹಂಗಾಮಿ ಸರ್ಕಾರದಲ್ಲಿ ಸಚಿವ ಸ್ಥಾನ ನೀಡಿದೆ.

ಅಫ್ಗಾನಿಸ್ತಾನದಲ್ಲಿ ಮಾನವ ಹಕ್ಕುಗಳನ್ನು ಎತ್ತಿ ಹಿಡಿಯಬೇಕು ಎಂಬುದೂ ನಿರ್ಣಯದ ಪ್ರಮುಖ ಅಂಶವಾಗಿತ್ತು. ಅಲ್ಲಿ ಎಲ್ಲರನ್ನೂ ಒಳಗೊಂಡ ಸರ್ಕಾರ ರಚನೆಯಾಗಬೇಕು. ಮಕ್ಕಳು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಮಾನವ ಹಕ್ಕುಗಳನ್ನು ರಕ್ಷಿಸಬೇಕು ಎಂದು ಭಾರತವು ನಿರ್ಣಯ ಮಂಡನೆ ವೇಳೆ ಒತ್ತಿ ಹೇಳಿತ್ತು ಎಂದು ಅವರು ವಿವರಿಸಿದ್ದಾರೆ.

ಭದ್ರತಾ ಮಂಡಳಿಯ ಕಾಯಂ ಸದಸ್ಯ ರಾಷ್ಟ್ರವಲ್ಲದ ಭಾರತವು, ಆಗಸ್ಟ್ ತಿಂಗಳ ಮಟ್ಟಿಗೆ ಮಂಡಳಿಯ ಅಧ್ಯಕ್ಷತೆಯನ್ನು ವಹಿಸಿಕೊಂಡಿತ್ತು. ಸರದಿಯ ಮೇಲೆ ಎಲ್ಲಾ ಸದಸ್ಯ ರಾಷ್ಟ್ರಗಳೂ ಮಂಡಳಿಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುತ್ತವೆ.

ಬ್ರಿಕ್ಸ್ ಶೃಂಗಸಭೆಯಲ್ಲಿ ಸದಸ್ಯ ರಾಷ್ಟ್ರಗಳ ಘೋಷಣೆ

'ಉಗ್ರರ ನೆಲೆ ಆಗದಿರಲಿ ಅಫ್ಗನ್'

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನದ ನೆಲವನ್ನು ಬೇರೆ ದೇಶದ ಮೇಲೆ ಭಯೋತ್ಪಾದನೆ ನಡೆಸಲು ಬಳಸಿಕೊಳ್ಳಬಾರದು ಎಂದು ಬ್ರಿಕ್ಸ್ ಸಂಘಟನೆ ಒತ್ತಾಯಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ ಐದೂ ಸದಸ್ಯ ರಾಷ್ಟ್ರಗಳು ಅಫ್ಗನ್‌ನಲ್ಲಿನ ಸ್ಥಿತಿ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ಭಾರತವು ಆಯೋಜಿಸಿದ್ದ ಸಭೆಯಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಚೀನಾ ಅಧ್ಯಕ್ಷ ಷಿ-ಜಿನ್‌ಪಿಂಗ್, ದಕ್ಷಿಣ ಆಫ್ರಿಕಾ ಅಧ್ಯಕ್ಷ ಸಿರಿಲ್ ರಾಮಾಫೋಸಾ ಮತ್ತು ಬ್ರೆಜಿಲ್ ಅಧ್ಯಕ್ಷ ಜೈರ್ ಬೋಲ್ಸಾನ್ಯಾರೋ ಭಾಗಿಯಾಗಿದ್ದರು.

ಅಫ್ಗಾನಿಸ್ತಾನದಲ್ಲಿನ ಹಿಂಸಾಚಾರವನ್ನು ಕೊನೆಗೊಳಿಸಿ, ಶಾಂತಿ ಸ್ಥಾಪಿಸಬೇಕಿದೆ. ಅಫ್ಗಾನಿಸ್ತಾನದಲ್ಲಿ ಸುಸ್ಥಿರತೆ, ಶಾಂತಿ, ಕಾನೂನು ಮತ್ತು ಸುವ್ಯವಸ್ಥೆಯನ್ನು ಸ್ಥಾಪಿಸಲು ಅಫ್ಗನ್ ಅನ್ನೂ ಒಳಗೊಂಡು ಮಾತುಕತೆ ನಡೆಸಬೇಕು ಎಂದು ಶೃಂಗಸಭೆಯ ಅಂತ್ಯದಲ್ಲಿ ಘೋಷಣೆ ಹೊರಡಿಸಲಾಗಿದೆ.

ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಇಬ್ಬಂದಿತನವನ್ನು ತಿರಸ್ಕರಿಸುತ್ತೇವೆ. ಭಯೋತ್ಪಾದನೆ ತಡೆಗೆ ವಿಶ್ವಸಂಸ್ಥೆಯ ಕಾರ್ಯಸೂಚಿಯನ್ನು ಎಲ್ಲರೂ ಪಾಲಿಸಬೇಕು
ಬ್ರಿಕ್ಸ್ ಶೃಂಗಸಭೆ ಘೋಷಣೆ

'ಭಯೋತ್ಪಾದನೆಯನ್ನು ತಡೆಗಟ್ಟುವುದು ಆದ್ಯತೆಯಾಗಬೇಕು. ಬೇರೆ ದೇಶಗಳ ಮೇಲೆ ಭಯೋತ್ಪಾದನೆ ನಡೆಸಲು ಅಫ್ಗನ್ ನೆಲವನ್ನು ಬಳಸಿಕೊಳ್ಳುವುದನ್ನು ತಡೆಯಬೇಕಿದೆ. ಅಫ್ಗಾನಿಸ್ತಾನದ ಮೂಲಕ ನಡೆಯುವ ಮಾದಕ ವಸ್ತುಗಳ ಕಳ್ಳಸಾಗಣೆಯನ್ನೂ ತಡೆಗಟ್ಟಬೇಕು' ಎಂದು ಘೋಷಣೆಯಲ್ಲಿ ವಿವರಿಸಲಾಗಿದೆ.

ಭಯೋತ್ಪಾದನೆ ತಡೆಗಟ್ಟಲು ಬ್ರಿಕ್ಸ್ ಕಾರ್ಯ ಯೋಜನೆಗೆ ಸದಸ್ಯ ರಾಷ್ಟ್ರಗಳು ಅನುಮೋದನೆ ನೀಡಿವೆ. ಅದನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಬದ್ಧವಾಗಿರುವುದಾಗಿ ಘೋಷಿಸಿವೆ. ಯಾವುದೇ ಧರ್ಮ, ರಾಷ್ಟ್ರ, ನಾಗರಿಕತೆ ಮತ್ತು ಸಾಂಸ್ಕೃತಿಕ ಸಮುದಾಯಗಳ ವಿರುದ್ಧ ನಡೆಯುವ ಭಯೋತ್ಪಾದನೆಯನ್ನು ತಡೆಯಬೇಕು ಎಂದು ಹೇಳಿವೆ.

ಕಾಬೂಲ್‌ನಿಂದ ಮತ್ತೆ ತೆರವು ಕಾರ್ಯಾಚರಣೆಗೆ ಚಾಲನೆ

ಕಾಬೂಲ್ (ಎಪಿಎಫ್): ಅಮೆರಿಕದ ನಾಗರಿಕರೂ ಸೇರಿ ಸುಮಾರು 200 ಪ್ರಯಾಣಿಕರು ಕತಾರ್ ಏರ್‌ವೇಸ್‌ನ ವಿಮಾನದಲ್ಲಿ ಗುರುವಾರ ಕಾಬೂಲ್ ವಿಮಾನ ನಿಲ್ದಾಣದಿಂದ ಹೊರಟರು. ಆ.31ರಂದು ಅಮೆರಿಕ ತೆರವು ಕಾರ್ಯಾಚರಣೆಯನ್ನು ನಿಲ್ಲಿಸಿದ ಬಳಿಕ ಇದೇ ಮೊದಲ ಬಾರಿಗೆ ಅಫ್ಗನ್‌ನಿಂದ ವಿದೇಶಿಯರನ್ನು ತೆರವುಗೊಳಿಸುವ ಕಾರ್ಯ ನಡೆಯುತ್ತಿದೆ.

ಅಫ್ಗಾನಿಸ್ತಾನ ಮತ್ತು ಅಮೆರಿಕದ ಪೌರತ್ವ ಹೊಂದಿರುವ ವ್ಯಕ್ತಿಯೊಬ್ಬರು ತಮ್ಮ ಕುಟುಂಬದ ಜೊತೆ ವಿಮಾನ ಏರಲು ಕಾಯುತ್ತಿದ್ದರು. ಅಮೆರಿಕ ವಿದೇಶಾಂಗ ಸಚಿವಾಲಯದಿಂದ ತಮಗೆ ಬೆಳಿಗ್ಗೆ ಕರೆ ಬಂದಿತ್ತು ಎಂದು ಅವರು ಹೇಳಿದರು.

13 ಜನ ಡಚ್ಚರು ಅಫ್ಗನ್‌ನಲ್ಲಿ ಉಳಿದಿದ್ದರು. ಅವರು ಕೂಡಾ ವಿಮಾನ ಏರಿದ್ದಾರೆ. ಇದಕ್ಕಾಗಿ ಡಚ್ ವಿದೇಶಾಂಗ ಸಚಿವ ಸಿಗ್ರಿದ್ ಕಾಗ್, ಕತಾರ್ ಸರ್ಕಾರಕ್ಕೆ ಧನ್ಯವಾದ ಹೇಳಿದ್ದಾರೆ.

ಈ ಬೆಳವಣಿಗೆಯನ್ನು 'ಕಾಬೂಲ್ ವಿಮಾನ ನಿಲ್ದಾಣದಲ್ಲಿ ಐತಿಹಾಸಿಕ ದಿನ' ಎಂದು ಅಫ್ಗಾನಿಸ್ತಾನದ ಕತಾರ್ ವಿಶೇಷ ರಾಯಭಾರಿ ಮುಲ್ತಾಖ್ ಅಲ್-ಖಥಾನಿ ಕರೆದಿದ್ದಾರೆ. ವಿಮಾನ ನಿಲ್ದಾಣವನ್ನು ಅಂತರರಾಷ್ಟ್ರೀಯ ವಿಮಾನಗಳಿಗಾಗಿ ತೆರೆಯಲು ಈ ದಿನ ದಾರಿ ಮಾಡಿಕೊಟ್ಟಿದೆ ಎಂದಿದ್ದಾರೆ.

ಕೆಲವು ವರ್ಷಗಳಿಂದ ತಾಲಿಬಾನ್ ಮತ್ತು ಅಂತಾರಾಷ್ಟ್ರೀಯ ಸಮುದಾಯಗಳ ನಡುವೆ ಕತಾರ್ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿದೆ. ಅಫ್ಗಾನಿಸ್ತಾನವನ್ನು ತಾಲಿಬಾನ್ ವಶಕ್ಕೆ ತೆಗೆದುಕೊಂಡ ನಂತರ ಅಮೆರಿಕ ಸೇರಿ ಹಲವು ದೇಶಗಳು ತಮ್ಮ ರಾಯಭಾರ ಕಚೇರಿಯನ್ನು ಕಾಬೂಲ್‌ನಿಂದ ದೋಹಾಕ್ಕೆ ವರ್ಗಾಯಿಸಿವೆ.

ಅಲ್ ಕೈದಾ ಪುನಶ್ಚೇತನದ ಆತಂಕ

ಕುವೈತ್ (ಎಪಿ): 20 ವರ್ಷಗಳ ಹಿಂದೆ ಅಮೆರಿಕದ ಮೇಲೆ ದಾಳಿ ನಡೆಸಲು ಅಫ್ಗಾನಿಸ್ತಾನವನ್ನು ವೇದಿಕೆಯನ್ನಾಗಿ ಮಾಡಿಕೊಂಡಿದ್ದ ಅಲ್-ಕೈದಾ ಉಗ್ರ ಸಂಘಟನೆ ಈಗ ಮತ್ತೆ ಅಫ್ಗಾನಿಸ್ತಾನದಲ್ಲಿ ನೆಲೆ ಕಂಡುಕೊಳ್ಳಬಹುದು ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಅಸ್ಟಿನ್ ಗುರುವಾರ ಹೇಳಿದ್ದಾರೆ.

ಕೊಲ್ಲಿ ರಾಷ್ಟ್ರಗಳಿಗೆ ನಾಲ್ಕು ದಿನಗಳ ಪ್ರವಾಸಕ್ಕಾಗಿ ಬಂದಿದ್ದ ಅವರು, ಪ್ರವಾಸ ಮುಕ್ತಾಯ ದಿವಸ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದರು. 1996ರಿಂದ 2001ರ ವರೆಗೆ ಅಫ್ಗನ್‌ನಲ್ಲಿ ಆಡಳಿತ ನಡೆಸಿದ್ದ ತಾಲಿಬಾನ್, ಅಲ್-ಕೈದಾ ಸಂಘಟನೆಗೆ ಸುರಕ್ಷಿತವಾದ ನೆಲೆ ನೀಡಿತ್ತು. 2001ರ ಸೆ.11ರಂದು ಅಲ್-ಕೈದಾ ಸಂಘಟನೆಯು ಅಮೆರಿಕದ ವರ್ಲ್ಡ್ ಟ್ರೇಡ್ ಸೆಂಟರ್ ಕಟ್ಟಡದ ಮೇಲೆ ದಾಳಿ ನಡೆಸಿತ್ತು. ಅಮೆರಿಕವು ತಾಲಿಬಾನ್ ವಿರುದ್ಧ 20 ವರ್ಷ ನಡೆಸಿದ ಸಂಘರ್ಷದಲ್ಲಿ ಅಲ್-ಕೈದಾ ಸಂಘಟನೆ ಬಹುತೇಕವಾಗಿ ಉಡುಗಿಹೋಗಿತ್ತು. ಆದರೆ ತಾಲಿಬಾನ್ ಮತ್ತೆ ಅಧಿಕಾರ ಹಿಡಿದಿರುವುದರಿಂದ ಅಲ್-ಕೈದಾ ಮತ್ತೆ ತನ್ನ ಚಟುವಟಿಕೆಗಳನ್ನು ಆರಂಭಿಸುವ ಅಪಾಯ ಇದೆ ಎಂದು ಅಮೆರಿಕ ಹೇಳಿದೆ.

ಹರಿತಿಲಕಾ ಸಂಭ್ರಮ

ಹರಿತಿಲಕಾ ಹಬ್ಬದ ಪ್ರಯುಕ್ತ ಭಕ್ತಾದಿಗಳು ವಾರಾಣಸಿಯ ಗಂಗಾನದಿ ದಂಡೆಯಲ್ಲಿ ಗುರುವಾರ ಪ್ರಾರ್ಥನೆ ಸಲ್ಲಿಸಿದರು –ಪಿಟಿಐ ಚಿತ್ರ

ಅಸ್ಸಾಂ ದೋಣಿ ದುರಂತ: ಬದುಕುಳಿದ 84 ಮಂದಿ, ಒಬ್ಬ ವ್ಯಕ್ತಿ ಸಾವು

ಜೊರ್ಹಾತ್/ಗುವಾಹಟಿ (ಪಿಟಿಐ): ಬ್ರಹ್ಮಪುತ್ರ ನದಿಯಲ್ಲಿ ಮುಳುಗಿದ್ದ ದೋಣಿಯಲ್ಲಿನ 84 ಮಂದಿ ಬದುಕುಳಿದಿದ್ದು, ಒಬ್ಬರು ಸಾವಿಗೀಡಾಗಿರುವುದು ದೃಢಪಟ್ಟಿದೆ. ಆದರೆ, ಇನ್ನೂ ಇಬ್ಬರು ನಾಪತ್ತೆಯಾಗಿದ್ದಾರೆ.

ಬುಧವಾರ ನಿಮತಿ ಘಾಟ್‌ನಿಂದ ಮಜುಲಿ ಸಾಂಕ್‌ಗೆ ತೆರಳುತ್ತಿದ್ದ ಈ ದೋಣಿಯು ಸರ್ಕಾರಿ ಸ್ವಾಮ್ಯದ ದೋಣಿಗೆ ಡಿಕ್ಕಿಯಾಗಿತ್ತು. ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳು ಬುಧವಾರ ರಾತ್ರಿಯೂ ರಕ್ಷಣಾ ಕಾರ್ಯಾಚರಣೆ ಕೈಗೊಂಡಿದ್ದವು.

ಪತ್ತೆಯಾಗಿರುವ 84 ಮಂದಿಯಲ್ಲಿ ಹೆಚ್ಚಿನವರು ಜೊರ್ಹಾತ್ ಮತ್ತು ಮಜುಲಿ ಜಿಲ್ಲೆಗೆ ಸೇರಿದ್ದಾರೆ ಎಂದು ಜೊರ್ಹಾತ್ ಜಿಲ್ಲಾಧಿಕಾರಿ ಅಶೋಕ್ ಬರ್ಮನ್ ತಿಳಿಸಿದ್ದಾರೆ.

ಖಾಸಗಿ ದೋಣಿಯಲ್ಲಿದ್ದ ಪ್ರಯಾಣಿಕರ ಸಂಖ್ಯೆ ಬಗ್ಗೆ ಗೊಂದಲ ಉಂಟಾಗಿದೆ. ಪ್ರಯಾಣಿಕರಿಗೆ ಟಿಕೆಟ್ ನೀಡುವ ವ್ಯವಸ್ಥೆ ಖಾಸಗಿ ದೋಣಿಯಲ್ಲಿ ಇಲ್ಲದ ಕಾರಣ ಖಚಿತ ಸಂಖ್ಯೆ ಗೊತ್ತಾಗಿಲ್ಲ.

'ಘಟನೆ ಕುರಿತು ತನಿಖೆ ನಡೆಸಲು ಸಾರಿಗೆ ಇಲಾಖೆ ಕಾರ್ಯದರ್ಶಿ ಜಾದವ್ ಸೈಕಿಯಾ ಅವರಿಗೆ ಸೂಚಿಸಲಾಗಿದೆ. ಈಗಾಗಲೇ ಜಲ ಸಾರಿಗೆ ಇಲಾಖೆಯ ಮೂವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಸಿಬ್ಬಂದಿಯ ಲೋಪದಿಂದ ಈ ಘಟನೆ ನಡೆದಿರುವ ಸಾಧ್ಯತೆಗಳು ಹೆಚ್ಚಾಗಿವೆ' ಎಂದು ಸಾರಿಗೆ ಸಚಿವ ಚಂದ್ರ ಮೋಹನ್ ತಿಳಿಸಿದ್ದಾರೆ.

ಸಚಿವರಿಗೆ ಪ್ರತಿಭಟನೆ ಬಿಸಿ, ವಿದ್ಯಾರ್ಥಿಗಳಿಗೆ ಲಾಠಿ ರುಚಿ: ದೋಣಿ ದುರಂತಕ್ಕೆ ಸರ್ಕಾರ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ ವಿದ್ಯಾರ್ಥಿಗಳು ಸೇರಿದಂತೆ ಹಲವರು ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಭೇಟಿ ನೀಡಲು ಬಂದಿದ್ದ ರಾಜ್ಯದ ಇಂಧನ ಸಚಿವ ಬಿಮಲ್ ಬೋರಾಹ್ ಅವರನ್ನು ವಿದ್ಯಾರ್ಥಿಗಳು ತಡೆದರು. ತಮ್ಮೊಡನೆ ರಸ್ತೆಯಲ್ಲಿ ಅರ್ಧ ಗಂಟೆ ಕುಳಿತುಕೊಳ್ಳುವಂತೆ ವಿದ್ಯಾರ್ಥಿಗಳು ಒತ್ತಾಯಿಸಿದರು. ಪ್ರತಿಭಟನಕಾರರ ಮನವೊಲಿಸಲು ಸಚಿವರು ಮಾಡಿದ ಪ್ರಯತ್ನ ಸಫಲವಾಗಲಿಲ್ಲ.

ಸಚಿವರು ತೆರಳಿದ ನಂತರ ವಿದ್ಯಾರ್ಥಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿ, ಬ್ಯಾರಿಕೇಡ್‌ಗಳನ್ನು ದಾಟಲು ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು.

ಕ್ರಿಮಿನಲ್ ಪ್ರಕರಣ; ಉನ್ನತ ತನಿಖೆ

ದುರಂತಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಸೂಚಿಸಿರುವ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು, ದುರಂತ ಕುರಿತು ಉನ್ನತ ಮಟ್ಟದ ತನಿಖೆ ನಡೆಸುವುದಾಗಿ ತಿಳಿಸಿದರು.

ಹಿರಿಯ ಅಧಿಕಾರಿಗಳೊಂದಿಗೆ ಅಪಘಾತ ಸ್ಥಳಕ್ಕೆ ಭೇಟಿ ನೀಡಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ತಕ್ಷಣದಿಂದ ಜಾರಿಗೆ ಬರುವಂತೆ ಎಲ್ಲ ಸಿಂಗಲ್ ಎಂಜಿನ್ ಖಾಸಗಿ ದೋಣಿಗಳನ್ನು ನಿಷೇಧಿಸಿರುವುದಾಗಿ ಸಿ.ಎಂ ಪ್ರಕಟಿಸಿದರು. ಅಲ್ಲದೆ ಜೋರ್ಹತ್ ಮತ್ತು ಮಜುಲಿ ನಡುವೆ ಪ್ರಸ್ತಾವಿತ ಸೇತುವೆಯ ನಿರ್ಮಾಣ 2021ರ ನವೆಂಬರ್‌ನಲ್ಲಿ ಆರಂಭವಾಗಲಿದ್ದು, ನಾಲ್ಕು ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಘೋಷಿಸಿದರು.

ಅಫ್ಗನ್ ತೊರೆಯಲು ಮಾರ್ಗ ಹುಡುಕಾಟ

ಪ್ಯಾರಿಸ್ (ಎಎಫ್‌ಪಿ): ಕಾಬೂಲ್ ವಿಮಾನ ನಿಲ್ದಾಣದ ಮೂಲಕ ನಡೆಯುತ್ತಿದ್ದ ತೆರವು ಕಾರ್ಯಾಚರಣೆ ಆಗಸ್ಟ್ 31ರಂದು ಅಂತ್ಯಗೊಂಡಿದೆ. ಆದರೆ, ತಾಲಿಬಾನ್ ಆಳ್ವಿಕೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ದೇಶ ತೊರೆಯುವ ಅಫ್ಗಾನಿಸ್ತಾನದ ಸಾವಿರಾರು ಜನರ ಹತಾಶ ಪ್ರಯತ್ನ ಕೊನೆಯಾಗಿಲ್ಲ. ಅವರೆಲ್ಲರೂ ಈಗ ಪರ್ಯಾಯ ಮಾರ್ಗ ಹುಡುಕಾಟದಲ್ಲಿದ್ದಾರೆ.

ಕಾಬೂಲ್‌ನಿಂದ 300 ಕಿ.ಮೀ.ದೂರದಲ್ಲಿರುವ ಮಝರ್ ಇ ಷರೀಫ್ ವಿಮಾನ ನಿಲ್ದಾಣದತ್ತ ನೂರಾರು ಮಂದಿ ಹೋಗುತ್ತಿದ್ದಾರೆ. ಆದರೆ, ಈ ರಸ್ತೆಯಲ್ಲಿ ತಾಲಿಬಾನ್ ತಪಾಸಣಾ ಠಾಣೆಗಳನ್ನು ಆರಂಭಿಸಿದೆ.

ದೇಣಿಗೆಯ ಮೂಲಕ ವಿಶೇಷ ವಿಮಾನಗಳಲ್ಲಿ ನೂರಾರು ಮಂದಿ ದೇಶ ತೊರೆಯುತ್ತಿದ್ದಾರೆ.

'ಇನ್ನೂ ಹಲವರು ದೇಶ ತೊರೆಯುವ ಅನುಮತಿಗಾಗಿ ಕಾಯುತ್ತಿದ್ದಾರೆ' ಎಂದು ಸಯರ ಎಂಬ ಸಂಸ್ಥೆಯ ನಮ ವಾನಿಯರ್ ಹೇಳಿದ್ದಾರೆ. ಈ ಸಂಸ್ಥೆ 680 ಅಫ್ಗನ್ನರನ್ನು ದೇಶದಿಂದ ಹೊರಗೆ ಕರೆದು ಒಯ್ದಿದೆ.

ಪಾಕ್ ಗಡಿಯಿಂದ 40 ಕಿ.ಮೀ.ದೂರ: ಸಚಿವರಾದ ಗಡ್ಕರಿ, ರಾಜನಾಥ್ ಸಿಂಗ್ ಚಾಲನೆ

'ತುರ್ತು ಭೂಸ್ಪರ್ಶ ನೆಲೆ' ಉದ್ಘಾಟನೆ

ಬಾರ್ಮರ್ (ಪಿಟಿಐ): ಪಾಕಿಸ್ತಾನದ ಗಡಿಯಿಂದ ಕೇವಲ 40 ಕಿ.ಮೀ. ದೂರದಲ್ಲಿ ರಾಜಸ್ಥಾನದ ಬಾರ್ಮರ್‌ನಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 925ರಲ್ಲಿ ಭಾರತೀಯ ವಾಯುಪಡೆ (ಐಎಎಫ್) ವಿಮಾನಗಳಿಗಾಗಿ ನಿರ್ಮಿಸಲಾಗಿರುವ 3 ಕಿ.ಮೀ ಉದ್ದದ ತುರ್ತು ಭೂ ಸ್ಪರ್ಶ ನೆಲೆಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಗುರುವಾರ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಗಡ್ಕರಿ, ಸಶಸ್ತ್ರ ಪಡೆಗಳ ವಿಮಾನಗಳಿಗಾಗಿ 'ತುರ್ತು ಲ್ಯಾಂಡಿಂಗ್ ಸ್ಟ್ರಿಪ್'ಗಳನ್ನು ಒಂದೂವರೆ ವರ್ಷಗಳ ಬದಲಿಗೆ ಕೇವಲ 15 ದಿನಗಳಲ್ಲಿ ಅಭಿವೃದ್ಧಿ ಪಡಿಸಿಕೊಡಲು ಸಿದ್ಧರಿದ್ದೇವೆ ಎಂದು ಭರವಸೆ ನೀಡಿದರು.

'ಐಎಎಫ್ ಮುಖ್ಯಸ್ಥರು ನನ್ನನ್ನು ಭೇಟಿಯಾದಾಗ ಈ ಸ್ಟ್ರಿಪ್ ನಿರ್ಮಿಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ 19 ತಿಂಗಳು ತೆಗೆದುಕೊಂಡಿತು ಎಂದು ಹೇಳಿದ್ದರು . ಆಗ ನಾನು ಅವರಿಗೆ ಮುಂದಿನ ದಿನಗಳಲ್ಲಿ 15 ದಿನಗಳಲ್ಲಿ ಗುಣಮಟ್ಟದ ಲ್ಯಾಂಡಿಂಗ್ ಸ್ಟ್ರಿಪ್ ಅನ್ನು ಅಭಿವೃದ್ಧಿಪಡಿಸಿಕೊಡುವುದಾಗಿ ತಿಳಿಸಿದ್ದೇನೆ' ಎಂದು ಗಡ್ಕರಿ ಭಾಷಣದಲ್ಲಿ ಹೇಳಿದರು.

ಐಎಎಫ್ ವಿಮಾನಗಳು ತುರ್ತು ಭೂಸ್ಪರ್ಶಕ್ಕೆ ಬಳಸಲಾಗುತ್ತಿರುವ ದೇಶದ ಮೊದಲ ರಾಷ್ಟ್ರೀಯ ಹೆದ್ದಾರಿ ಎನ್‌ಎಚ್ 925 ಆಗಿದೆ. ಇಲ್ಲಿನ 350 ಕಿ.ಮೀ ವ್ಯಾಪ್ತಿಯಲ್ಲಿ ಯಾವುದೇ ವಿಮಾನ ನಿಲ್ದಾಣ ಇದ್ದಂತಿಲ್ಲ. ಹಾಗಾಗಿ ಸಶಸ್ತ್ರ ಪಡೆಗಳು ಇಲ್ಲಿ ಸಣ್ಣ ವಿಮಾನ ನಿಲ್ದಾಣ ನಿರ್ಮಿಸಿಕೊಳ್ಳಲು ಮುಂದಾದರೆ, ಅದಕ್ಕೆ ಅಗತ್ಯ ಸಹಕಾರ ನೀಡುವುದಾಗಿ ಅವರು ತಿಳಿಸಿದರು.

ರಾಜಸ್ಥಾನದ ಬಾರ್ಮರ್‌ನ ರಾ.ಹೆ.925ರಲ್ಲಿ ನಿರ್ಮಾಣವಾಗಿರುವ 'ತುರ್ತು ಭೂ ಸ್ಪರ್ಶ ನೆಲೆ' ಗುರುವಾರ ಉದ್ಘಾಟನೆಯಾಗಿದ್ದು, ಭಾರತೀಯ ವಾಯುಪಡೆಯ 'ಎಂಐ–17' ಹೆಲಿಕಾಪ್ಟರ್‌ಗಳು ಪೂರ್ವಾಭ್ಯಾಸ ನಡೆಸಿದವು

ಬಾರ್ಮರ್‌ನ ರಾ.ಹೆ.925ರಲ್ಲಿ ನಿರ್ಮಾಣವಾಗಿರುವ 'ತುರ್ತು ಭೂ ಸ್ಪರ್ಶ ನೆಲೆ'ಯನ್ನು ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ರಾಜನಾಥ್ ಸಿಂಗ್ ಗುರುವಾರ ಉದ್ಘಾಟಿಸಿದರು – ಪಿಟಿಐ ಚಿತ್ರ

ಔರಂಗಾಬಾದ್: ಮಳೆ, 600 ಕಿ.ಮೀ ರಸ್ತೆ ಹಾನಿ



ಔರಂಗಾಬಾದ್ (ಪಿಟಿಐ): ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಭಾರಿ ಮಳೆಯಿಂದಾಗಿ ಕಳೆದ ಎರಡು ದಿನದಲ್ಲಿ ಕನಿಷ್ಠ 600 ಕಿ.ಮೀ ರಸ್ತೆ, 200ಕ್ಕೂ ಹೆಚ್ಚು ಕಟ್ಟಡಗಳು ಹಾನಿಗೊಳಗಾಗಿವೆ.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನಿಲೇಶ್ ಗಟ್ನೆ ಈ ಬಗ್ಗೆ ಹೇಳಿಕೆ ನೀಡಿದ್ದು, 144 ಗ್ರಾಮ ಪಂಚಾಯಿತಿ ಕಟ್ಟಡ ಸೇರಿ 242 ಕಟ್ಟಡಗಳು ಹಾನಿಗೊಂಡಿವೆ. ₹ 29.04 ಕೋಟಿ ನಷ್ಟವಾಗಿದೆ ಎಂದಿದ್ದಾರೆ.

ಧಾರಾಕಾರ ಮಳೆಯಿಂದಾಗಿ ₹ 245 ಕೋಟಿ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ತಕ್ಷಣದ ದುರಸ್ತಿ ಕಾರ್ಯಕ್ಕೆ ₹ 9 ಕೋಟಿ ಅಗತ್ಯವಿದೆ ಎಂದಿದ್ದಾರೆ. ಈ ಭಾಗದಲ್ಲಿ ಈ ಮುಂಗಾರು ಹಂಗಾಮಿನಲ್ಲಿ 702 ಮಿ.ಮೀ ಮಳೆಯಾಗಿದೆ.

2021ರ ಗ್ಲೋಬಲ್ ಟೀಚರ್ ಪ್ರಶಸ್ತಿ ಪಟ್ಟಿಯಲ್ಲಿ ಇಬ್ಬರು ಭಾರತೀಯರು

ಲಂಡನ್ (ಪಿಟಿಐ): ಬಿಹಾರದ ಭಾಗಲ್ಪುರದ ಗಣಿತ ಶಿಕ್ಷಕ ಸತ್ಯಂ ಮಿಶ್ರ ಮತ್ತು ಹೈದರಾಬಾದಿನ ಸಮಾಜ, ಇಂಗ್ಲಿಷ್ ಮತ್ತು ಗಣಿತ ಶಿಕ್ಷಕಿ ಮೇಘನಾ ಮುಸುನುರಿ ಅವರು ಈ ವರ್ಷದ 'ಗ್ಲೋಬಲ್ ಟೀಚರ್ ಪ್ರೈಜ್'ಗೆ ಪಟ್ಟಿ ಮಾಡಿರುವ ಅಗ್ರ 50 ಶಿಕ್ಷಕರಲ್ಲಿ ಸ್ಥಾನ ಪಡೆದಿದ್ದಾರೆ.

ವಾರ್ಕಿ ಫೌಂಡೇಷನ್ ಯುನೆಸ್ಕೊ ಸಹಭಾಗಿತ್ವದಲ್ಲಿ ಈ ಪ್ರಶಸ್ತಿ ನೀಡುತ್ತಿದ್ದು, ಪ್ರಶಸ್ತಿಯ ಜತೆಗೆ 10 ಲಕ್ಷ ಡಾಲರ್ (ಸುಮಾರು ₹7.37 ಕೋಟಿ) ನಗದು ಕೂಡ ಇದೆ. 121 ದೇಶಗಳಿಂದ 8,000 ನಾಮನಿರ್ದೇಶನಗಳು ಮತ್ತು ಅರ್ಜಿಗಳು ಸಲ್ಲಿಕೆಯಾಗಿದ್ದವು.

ಶಿಕ್ಷಕ ಮಿಶ್ರಾ ಅವರು, ಮಕ್ಕಳು ಜಗತ್ತನ್ನು ನೋಡುವ ದೃಷ್ಟಿಕೋನ ಬದಲಿಸುವ ಸಂಕಲ್ಪ ಮಾಡಿದವರು. ವಿದ್ಯಾರ್ಥಿಗಳು ವಿಷಯವನ್ನು ಲವಲವಿಕೆಯಿಂದ ಕಲಿಯಲು ಮನಮುಟ್ಟುವಂತಹ ಬಹುವಿಧದ ತಂತ್ರಗಳನ್ನು ಬಳಸುವುದರಲ್ಲಿ ಹೆಸರುವಾಸಿ.

ಪ್ರಶಸ್ತಿ ಪಟ್ಟಿಯಲ್ಲಿರುವ ಎರಡನೇ ಭಾರತೀಯ ಶಿಕ್ಷಕಿಯಾದ ಮೇಘನಾ ಅವರು ಉದ್ಯಮಿ, ಕೊಡುಗೈ ದಾನಿಯಾಗಿ ಗುರುತಿಸಿಕೊಂಡಿದ್ದಾರೆ. ಫೌಂಟೇನ್‌ಹೆಡ್ ಗ್ಲೋಬಲ್ ಸ್ಕೂಲ್ ಮತ್ತು ಜೂನಿಯರ್ ಕಾಲೇಜಿನ ಸ್ಥಾಪಕಿ ಮತ್ತು ಅಧ್ಯಕ್ಷೆ ಕೂಡ. ಮಹಿಳೆಯರು ಉದ್ಯಮಿಗಳಾಗಲು ಮಾರ್ಗದರ್ಶನ ಸಹ ನೀಡುತ್ತಿದ್ದಾರೆ.

'ಶಿಕ್ಷಣಕ್ಕೆ ಆದ್ಯತೆ ನೀಡುವ ಮೂಲಕ ಮಾತ್ರ ನಾವು ನಮ್ಮ ಎಲ್ಲಾ ನಾಳೆಗಳನ್ನು ರಕ್ಷಿಸಬಹುದು. ಭವಿಷ್ಯವನ್ನು ಆತ್ಮವಿಶ್ವಾಸದಿಂದ ಎದುರಿಸಲು ಶಿಕ್ಷಣ ಪ್ರಮುಖವಾದುದು'
ಸನ್ನಿ ವಾರ್ಕಿ, ವಾರ್ಕಿ ಪ್ರತಿಷ್ಠಾನದ ಸಂಸ್ಥಾಪಕ

ಗ್ಲೋಬಲ್ ಸ್ಟೂಡೆಂಟ್ ಪ್ರೈಜ್ ಪಟ್ಟಿಯಲ್ಲಿ ನಾಲ್ವರು ಭಾರತೀಯರು: ಗ್ಲೋಬಲ್ ಸ್ಟೂಡೆಂಟ್ ಪ್ರೈಜ್‌ಗೆ ಆಯ್ಕೆ ಮಾಡಿರುವ ಅಗ್ರ 50 ಮಂದಿಯ ಪಟ್ಟಿಯಲ್ಲಿ ನವದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾದ ಆರ್ಕಿಟೆಕ್ಚರ್ ವಿದ್ಯಾರ್ಥಿ, 21 ವರ್ಷದ ಕೈಫ್ ಅಲಿಯೊಂದಿಗೆ ನಾಲ್ವರು ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ.

ಅಹ್ಮದಾಬಾದ್‌ನ ಎಂಬಿಎ ವಿದ್ಯಾರ್ಥಿ, 23 ವರ್ಷದ ಆಯುಷ್ ಗುಪ್ತಾ, ಜಾರ್ಖಂಡ್‌ನ 17 ವರ್ಷದ ವಿದ್ಯಾರ್ಥಿನಿ ಸೀಮಾ ಕುಮಾರಿ ಹಾಗೂ ಹರಿಯಾಣದ ಕೇಂದ್ರೀಯ ವಿಶ್ವವಿದ್ಯಾಲಯದ 24 ವರ್ಷದ ವಿದ್ಯಾರ್ಥಿ ವಿಪಿನ್ ಕುಮಾರ್ ಶರ್ಮಾ ಅಗ್ರ 50 ಮಂದಿಯ ಪಟ್ಟಿಯಲ್ಲಿದ್ದಾರೆ. ಈ ಬಾರಿ ಗ್ಲೋಬಲ್ ಸ್ಟೂಡೆಂಟ್ ಪ್ರೈಜ್ ಮೊತ್ತವನ್ನು ದ್ವಿಗುಣಗೊಳಿಸಲಾಗಿದ್ದು, ಸುಮಾರು ₹7.37 ಕೋಟಿಗೆ ಏರಿಸಲಾಗಿದೆ.

ಮುಂದಿನ ತಿಂಗಳು ಎರಡೂ ಪ್ರಶಸ್ತಿಗಳ ಅಗ್ರ 10 ಮಂದಿಯ ಹೆಸರನ್ನು ಪ್ರಕಟಿಸಲಾಗುತ್ತಿದೆ. ಪ್ರಶಸ್ತಿ ವಿಜೇತರನ್ನು ಕ್ರಮವಾಗಿ ಗ್ಲೋಬಲ್ ಟೀಚರ್ ಪ್ರೈಜ್ ಅಕಾಡೆಮಿ ಮತ್ತು ಗ್ಲೋಬಲ್ ಸ್ಟೂಡೆಂಟ್ ಪ್ರೈಜ್ ಅಕಾಡೆಮಿ ಆಯ್ಕೆ ಮಾಡಲಿವೆ. ನವೆಂಬರ್‌ನಲ್ಲಿ ಪ್ಯಾರಿಸ್‌ನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಕಳೆದ ವರ್ಷ ಗ್ಲೋಬಲ್ ಟೀಚರ್ ಪ್ರೈಜ್ ಪ್ರಶಸ್ತಿ ಮಹಾರಾಷ್ಟ್ರದ ರಂಜಿತ್ ಸಿನ್ಹಾ ದಿಸಳೆ ಅವರಿಗೆ ಲಭಿಸಿತ್ತು.

'ಛಗನ್ ಭುಜಬಲ್ ದೋಷಮುಕ್ತ

ಮುಂಬೈ (ಪಿಟಿಐ): ದೆಹಲಿಯಲ್ಲಿನ 'ಮಹಾರಾಷ್ಟ್ರ ಸದನ' ನಿರ್ಮಾಣದ ಹಗರಣಕ್ಕೆ ಸಂಬಂಧಿಸಿದಂತೆ ಎನ್‌ಸಿಪಿ ನಾಯಕ ಮತ್ತು ಸಚಿವ ಛಗನ್ ಭುಜಬಲ್ ಹಾಗೂ ಇತರ ಏಳು ಮಂದಿಯನ್ನು ವಿಶೇಷ ನ್ಯಾಯಾಲಯ ಗುರುವಾರ ದೋಷಮುಕ್ತಗೊಳಿಸಿದೆ.

ತಮ್ಮ ವಿರುದ್ಧ ಮೊಕದ್ದಮೆ ದಾಖಲಿಸಲು ಯಾವುದೇ ಸಾಕ್ಷ್ಯಗಳಿಲ್ಲ ಎಂದು ಇವರು ಪ್ರತಿಪಾದಿಸಿದ್ದರು. ಭುಜಬಲ್ ಅವರ ಜತೆಗೆ, ಅವರ ಪುತ್ರ ಪಂಕಜ್, ಸೋದರ ಸಂಬಂಧಿ ಸಮೀರ್ ಮತ್ತು ಇತರರನ್ನು ಖುಲಾಸೆಗೊಳಿಸಲಾಗಿದೆ.

ಭುಜಬಲ್ ಅವರ ವಿರುದ್ಧ ಮಾಡಿರುವ ಆರೋಪಗಳು ಸುಳ್ಳು ಮತ್ತು ತಪ್ಪು ಲೆಕ್ಕಾಚಾರದಿಂದ ಕೂಡಿವೆ ಎಂದು ಭುಜಬಲ್ ಅವರ ವಕೀಲರಾದ ಪ್ರಸಾದ್ ಢಾಕೆಫಾಲ್ಕರ್, ಸಜಲ್ ಯಾದವ್ ಮತ್ತು ಸುದರ್ಶನ್ ಖವಾಸೆ ಪ್ರತಿಪಾದಿಸಿದರು.

2016ರಲ್ಲಿ ಸಾವಿರಾರು ಪುಟಗಳ ಆರೋಪ ಪಟ್ಟಿ ಸಲ್ಲಿಸಿದ್ದರೂ ವಿಚಾರಣೆ ನಡೆಸಲು ಸಾಕಷ್ಟು ಸಾಕ್ಷ್ಯಾಧಾರಗಳು ಇಲ್ಲ ಎಂದು ಅವರು ವಾದಿಸಿದರು.

ಭುಜಬಲ್ ನಿರ್ಮಾಣ ಕಂಪನಿಯ ಕೆ.ಎಸ್. ಚಮಂಕಾರ್ ಎಂಟರ್‌ಪ್ರೈಸಸ್‌ನಿಂದ ಕಿಕ್‌ಬ್ಯಾಕ್ ಪಡೆದಿದ್ದಾರೆ.ಹೀಗಾಗಿ, ಅವರ ಅರ್ಜಿಯನ್ನು ವಜಾಗೊಳಿಸಬೇಕು ಎಂದು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಪರ ವಕೀಲರು ವಾದಿಸಿದ್ದರು.

ಫ್ಯೂಚರ್–ರಿಲಯನ್ಸ್ ಒಪ್ಪಂದ: ದೆಹಲಿ ಹೈಕೋರ್ಟ್ ವಿಚಾರಣೆಗೆ 'ಸುಪ್ರೀಂ' ತಡೆ

ನವದೆಹಲಿ (ಪಿಟಿಐ): ಫ್ಯೂಚರ್ ರಿಟೇಲ್ ಲಿಮಿಟೆಡ್ (ಎಫ್‌ಆರ್‌ಎಲ್) ಮತ್ತು ರಿಲಯನ್ಸ್ ರಿಟೇಲ್ ಒಪ್ಪಂದದ ಕುರಿತಂತೆ ದೆಹಲಿ ಹೈಕೋರ್ಟ್‌ನಲ್ಲಿ ನಡೆಯುತ್ತಿರುವ ಎಲ್ಲಾ ವಿಚಾರಣೆಗಳನ್ನು ನಾಲ್ಕು ವಾರಗಳವರೆಗೆ ಸುಪ್ರೀಂ ಕೋರ್ಟ್ ತಡೆಹಿಡಿದಿದೆ.

ಎಫ್‌ಆರ್‌ಎಲ್ ಕಂಪನಿಯನ್ನು ರಿಲಯನ್ಸ್ ರಿಟೇಲ್ ಜೊತೆ ವಿಲೀನ ಮಾಡುವಂತಿಲ್ಲ ಎಂದು ಸಿಂಗಪುರದ ತುರ್ತು ಮಧ್ಯಸ್ಥಿಕೆ ಕೇಂದ್ರ ನೀಡಿದ್ದ ಆದೇಶದ ಕುರಿತು ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ.

ವಿಲೀನ ಒಪ್ಪಂದದ ಕುರಿತಾಗಿ ನಾಲ್ಕು ವಾರಗಳವರೆಗೆ ಅಂತಿಮ ಆದೇಶ ಹೊರಡಿಸದಂತೆ ರಾಷ್ಟ್ರೀಯ ಕಂಪನಿ ಕಾಯ್ದೆ ನ್ಯಾಯಮಂಡಳಿ (ಎನ್‌ಸಿಎಲ್‌ಟಿ), ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ಹಾಗೂ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೂ (ಸೆಬಿ) ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವದ ಪೀಠವು ನಿರ್ದೇಶನ ನೀಡಿದೆ.

ಎರಡೂ ಕಡೆಯ ವಾದಗಳನ್ನು ಆಲಿಸಿದ ನಂತರ ಮಧ್ಯಸ್ಥಿಕೆ ಕೇಂದ್ರವು ಪ್ರಕರಣದ ಅಂತಿಮ ತೀರ್ಪನ್ನು ಕಾಯ್ದಿರಿಸಿದೆ ಎಂದು ಎಫ್‌ಆರ್‌ಎಲ್ ಮತ್ತು ಫ್ಯೂಚರ್ ಕೂಪನ್ಸ್ ಪ್ರೈವೇಟ್ ಲಿಮಿಟೆಡ್‌ನ (ಎಫ್‌ಸಿಪಿಎಲ್) ಪರ, ಹಿರಿಯ ವಕೀಲರಾದ ಹರೀಶ್ ಸಾಳ್ವೆ ಮತ್ತು ಮುಕುಲ್ ರೋಹಟಗಿ ಅವರ ಹೇಳಿಕೆಗಳನ್ನು ಪರಿಗಣಿಸಿ ಕೋರ್ಟ್ ಈ ಆದೇಶ ನೀಡಿದೆ.

ಎಫ್‌ಆರ್‌ಎಲ್, ಎಫ್‌ಸಿಪಿಎಲ್ ಮತ್ತು ನಿರ್ದೇಶಕರ ವಿರುದ್ಧ ಯಾವುದೇ ದಂಡನಾತ್ಮಕ ಕ್ರಮಕ್ಕೆ ಕಂಪನಿಯು ಆಸಕ್ತಿ ಹೊಂದಿಲ್ಲ ಎಂದು ಅಮೆಜಾನ್ ಪರ ಹಾಜರಾದ ಹಿರಿಯ ವಕೀಲ ಗೋಪಾಲ್ ಸುಬ್ರಮಣಿಯನ್ ಹೇಳಿದರು. ದೆಹಲಿ ಹೈಕೋರ್ಟ್‌ನಲ್ಲಿ ವಿಚಾರಣೆಯನ್ನು ತಡೆಹಿಡಿಯಲು ಅವರು ಒಪ್ಪಿದರು.

ಫ್ಯೂಚರ್ ರಿಟೇಲ್ ಲಿಮಿಟೆಡ್ (ಎಫ್‌ಆರ್‌ಎಲ್) ಕಂಪನಿಯನ್ನು ರಿಲಯನ್ಸ್ ರಿಟೇಲ್ ಜೊತೆ ವಿಲೀನ ಮಾಡುವಂತಿಲ್ಲ ಎಂದು ಸಿಂಗಪುರದ ತುರ್ತು ಮಧ್ಯಸ್ಥಿಕೆ ಕೇಂದ್ರ ನೀಡಿದ್ದ ಆದೇಶಕ್ಕೆ ಭಾರತದಲ್ಲಿಯೂ ಸಿಂಧುತ್ವ ಇದೆ ಎಂದು ಸುಪ್ರೀಂ ಕೋರ್ಟ್ ಆಗಸ್ಟ್ 6ರಂದು ಹೇಳಿತ್ತು.

'ಕೋವಿಡ್: ಮತ್ತೆ ಸಿ.ಎ ಪರೀಕ್ಷೆ ಬರೆಯಲು ಅವಕಾಶ'

ನವದೆಹಲಿ (ಪಿಟಿಐ): ಕೋವಿಡ್ ಕಾರಣದಿಂದ ಕಳೆದ ಜುಲೈ ತಿಂಗಳು ಸಿ.ಎ ಪರೀಕ್ಷೆಗೆ ಹಾಜರಾಗದಿದ್ದ ಅಭ್ಯರ್ಥಿಗಳು ಅವಕಾಶ ವಂಚಿತರಾಗುವುದಿಲ್ಲ ಎಂದು ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆಯು (ಐಸಿಎಐ) ಗುರುವಾರ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದೆ.

ಅವಕಾಶ ವಂಚಿತರಿಗೆ ಪರೀಕ್ಷೆ ನಡೆಸಲು ಸಂಸ್ಥೆಗೆ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಕೋರ್ಟ್, 'ಅಭ್ಯರ್ಥಿಗಳು ಈ ಬಗ್ಗೆ ಐಸಿಎಐಗೆ ಮನವಿ ಸಲ್ಲಿಸಬೇಕು' ಎಂದು ಸೂಚಿಸಿತು.

ಐಸಿಎಐ ಪ್ರತಿನಿಧಿಸಿದ್ದ ಹಿರಿಯ ವಕೀಲ ರಾಮ್‌ಜಿ ಶ್ರೀನಿವಾಸನ್ ಅವರು, ಐಸಿಎಐ ಈ ಕುರಿತು ಎರಡು ವಾರದಲ್ಲಿ ನಿರ್ಧಾರ ಕೈಗೊಳ್ಳಲಿದೆ ಎಂದು ನ್ಯಾಯಮೂರ್ತಿ ಎ.ಎಂ. ಖಾನ್‌ವಿಲ್ಕರ್ ನೇತೃತ್ವದ ಪೀಠಕ್ಕೆ ತಿಳಿಸಿದರು.

ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಭಾರತದ ಪ್ಯಾರಾ ಅಥ್ಲೀಟ್‌ಗಳ ಜೊತೆ ಪ್ರಧಾನಿ ನರೇಂದ್ರ ಮೋದಿ –ಪಿಟಿಐ ಚಿತ್ರ

ಮೋದಿ ಚಹಾ ಕೂಟದಲ್ಲಿ ಪ್ಯಾರಾ ಅಥ್ಲೀಟ್ಸ್ ಸಂಭ್ರಮ

ನವದೆಹಲಿ (ಪಿಟಿಐ): ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಐತಿಹಾಸಿಕ ಸಾಧನೆ ಮಾಡಿದ ಭಾರತದ ಪ್ಯಾರಾ ಅಥ್ಲೀಟ್‌ಗಳು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಗುರುವಾರ ಏರ್ಪಡಿಸಿದ್ದ ಚಹಾ ಕೂಟದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಕ್ರೀಡಾಪಟುಗಳನ್ನು ಅಭಿನಂದಿಸಿದ ಪ್ರಧಾನಿ ನಂತರ ಕೋಚ್‌ಗಳೂ ಒಳಗೊಂಡ ತಂಡದೊಂದಿಗೆ ಸಂವಾದ ನಡೆಸಿದರು.

ತಮ್ಮ ಸಹಿ ಒಳಗೊಂಡ ಶಾಲನ್ನು ಕ್ರೀಡಾಪಟುಗಳು ಮೋದಿ ಅವರಿಗೆ ಕಾಣಿಕೆಯಾಗಿ ನೀಡಿದರು. ಕೆಲವರು ತಾವು ಸ್ಪರ್ಧಿಸಿದ ಕ್ರೀಡೆಗೆ ಸಂಬಂಧಿಸಿದ ಸಾಮಗ್ರಿಯ ಮೇಲೆ ಸಹಿ ಮಾಡಿ ಪ್ರಧಾನಿಗೆ ಕೊಟ್ಟರು. ಈ ಸಾಮಗ್ರಿಗಳನ್ನು ಹರಾಜು ಹಾಕಲಾಗುವುದು ಎಂದು ಮೋದಿ ತಿಳಿಸಿದರು.

ಕಳೆದ ವಾರ ಕೊನೆಗೊಂಡ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ಸರ್ವಶ್ರೇಷ್ಠ 19 ಪದಕಗಳನ್ನು ಗೆದ್ದುಕೊಂಡಿತ್ತು. ಇದರಲ್ಲಿ ಐದು ಚಿನ್ನ ಮತ್ತು ಎಂಟು ಬೆಳ್ಳಿ ಪದಕಗಳು ಸೇರಿಕೊಂಡಿವೆ. ಪದಕ ಪಟ್ಟಿಯಲ್ಲಿ ಭಾರತ 24ನೇ ಸ್ಥಾನ ಗಳಿಸಿತ್ತು.

'ಪ್ಯಾರಾಲಿಂಪಿಯನ್ನರು ಮಾಡಿರುವ ಸಾಧನೆ ದೇಶದ ಕ್ರೀಡಾ ಕ್ಷೇತ್ರಕ್ಕೆ ಬಲ ತುಂಬಲಿದೆ. ಯುವ ಕ್ರೀಡಾಪಟುಗಳು ಇನ್ನಷ್ಟು ಉತ್ಸಾಹದಿಂದ ಅಭ್ಯಾಸದಲ್ಲಿ ತೊಡಗಲು ಮತ್ತು ಸಾಧನೆ ಮಾಡಲು ಇದು ನೆರವಾಗಲಿದೆ' ಎಂದು ಮೋದಿ ಅಭಿಪ್ರಾಯಪಟ್ಟರು.

ಟೋಕಿಯೊ ಪ್ಯಾರಾಲಿಂಪಿಕ್ಸ್‌ನ ಬ್ಯಾಡ್ಮಿಂಟನ್‌ನಲ್ಲಿ ಬೆಳ್ಳಿ ಗೆದ್ದ ಐಎಎಸ್ ಅಧಿಕಾರಿ, ಕನ್ನಡಿಗ ಸುಹಾಸ್ ಯತಿರಾಜ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದರು —ಪಿಟಿಐ ಚಿತ್ರ

ಪದಕಗಳನ್ನು ಗೆದ್ದಾಗ ಕ್ರೀಡಾಪಟುಗಳಿಗೆ ಕರೆ ಮಾಡಿ ಮಾತನಾಡಿದ ಮೋದಿ ಅವರು ಪ್ರತಿಯೊಬ್ಬರನ್ನೂ ಅಭಿನಂದಿಸಿದ್ದರು. ಬ್ಯಾಡ್ಮಿಂಟನ್‌ನಲ್ಲಿ ಬೆಳ್ಳಿ ಗೆದ್ದ ಉತ್ತರಪ್ರದೇಶದ ಐಎಎಸ್ ಅಧಿಕಾರಿ, ಕನ್ನಡಿಗ ಸುಹಾಸ್ ಯತಿರಾಜ್, ಚಿನ್ನ ಗೆದ್ದ ಕೃಷ್ಣ ನಗಾರ್, ಯುವ ಬ್ಯಾಡ್ಮಿಂಟನ್ ಪಟು ಪಲಕ್ ಕೊಹ್ಲಿ, ಶೂಟರ್‌ಗಳಾದ ಅವನಿ ಲೇಖರಾ, ಸಿಂಘರಾಜ್ ಅದಾನ, ಜಾವೆಲಿನ್ ಥ್ರೋ ಪಟು ದೇವೇಂದ್ರ ಜಜಾರಿಯ ಮತ್ತು ಹೈಜಂಪ್ ಪಟು ಮರಿಯಪ್ಪನ್ ತಂಗವೇಲು ಜೊತೆ ಗುರುವಾರ ಅವರು ವೈಯಕ್ತಿಕವಾಗಿ ಮಾತನಾಡಿದರು.

ಭಾರತದ ಕ್ರೀಡಾಪಟುಗಳ ಛಲ ಮತ್ತು ಬಲವನ್ನು ಕೊಂಡಾಡಿದ ಮೋದಿ ಪ್ಯಾರಾ ಅಥ್ಲೀಟ್ಸ್ ಎಲ್ಲ ಸವಾಲುಗಳನ್ನು ಮೆಟ್ಟಿನಿಂತು ಸಾಧನೆಯ ಹಾದಿಯಲ್ಲಿ ಹೆಜ್ಜೆ ಹಾಕಿರುವುದು ಅಭಿನಂದನೀಯ ಎಂದರು. ಪದಕಗಳನ್ನು ಗೆಲ್ಲಲಾಗದವರನ್ನು ಉದ್ದೇಶಿಸಿ ಮಾತನಾಡಿದ ಅವರು ನಿಜವಾದ ಕ್ರೀಡಾಪಟುಗಳು ಸೋಲು ಮತ್ತು ಗೆಲುವನ್ನು ಸಮಾನವಾಗಿ ಕಾಣುತ್ತಾರೆ. ಸ್ಪರ್ಧೆಯೇ ಅವರಿಗೆ ಮುಖ್ಯ ಎಂದರು.

ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮತ್ತು ಮಾಜಿ ಕ್ರೀಡಾ ಸಚಿವ, ಈಗಿನ ಕಾನೂನು ಸಚಿವ ಕಿರಣ್ ರಿಜಿಜು ಇದ್ದರು.

ಅಮೆರಿಕ ಓಪನ್ ಟೆನಿಸ್ ಟೂರ್ನಿ: ನಾಲ್ಕರ ಘಟ್ಟಕ್ಕೆ ಎಮಾ ರಡುಕಾನು, ಮರಿಯಾ ಸಕ್ರಿ

ದಾಖಲೆಯತ್ತ ಜೊಕೊವಿಚ್

ನ್ಯೂಯಾರ್ಕ್ (ಎಎಫ್‌ಪಿ): ಇನ್ನು ಎರಡನೇ ಹೆಜ್ಜೆ...ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಇನ್ನು ಎರಡು ಪಂದ್ಯಗಳನ್ನು ಗೆದ್ದರೆ ಮಹತ್ವದ ಮೈಲುಗಲ್ಲು ದಾಟಲಿದ್ದಾರೆ. ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿರುವ ಅವರು ಒಂದು ಋತುವಿನ ಎಲ್ಲ ಗ್ರ್ಯಾನ್‌ಸ್ಲಾಂ ಟೂರ್ನಿಗಳಲ್ಲಿ ಚಾಂಪಿಯನ್ ಆದ ಸಾಧನೆ ಮಾಡಲಿದ್ದಾರೆ.

ಬುಧವಾರ ರಾತ್ರಿ ನಡೆದ ಜಿದ್ದಾಜಿದ್ದಿಯ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಜೊಕೊವಿಚ್ ಇಟಲಿಯ ಮಟಿಯೊ ಬೆರೆಟಿನಿ ವಿರುದ್ಧ 5-7, 6-2, 6-2, 6-3ರಲ್ಲಿ ಜಯ ಗಳಿಸಿದರು. ಇದು ಜೊಕೊವಿಚ್ ಅವರ ಸತತ 26ನೇ ಜಯವಾಗಿದೆ. ಗ್ರ್ಯಾನ್‌ಸ್ಲಾಂ ಇತಿಹಾಸದ ಪುರುಷರ ವಿಭಾಗದಲ್ಲಿ 52 ವರ್ಷಗಳ ಹಿಂದೆ, 1969ರಲ್ಲಿ ರೋಡ್ ಲೇವರ್ ಒಂದು ಋತುವಿನ ಎಲ್ಲ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದರು.

ಶುಕ್ರವಾರದ ಸೆಮಿಫೈನಲ್‌ನಲ್ಲಿ ಜೊಕೊವಿಚ್ ಒಲಿಂಪಿಕ್ ಚಾಂಪಿಯನ್ ಅಲೆಕ್ಸಾಂಡರ ಜ್ವೆರೆವ್ ವಿರುದ್ಧ ಸೆಣಸುವರು. ಟೋಕಿಯೊದಲ್ಲಿ ಸೆಮಿಫೈನಲ್‌ನಲ್ಲಿ ಜ್ವೆರೆವ್ ಎದುರು ಜೊಕೊವಿಚ್ ಸೋತಿದ್ದರು. ಈ ಮೂಲಕ 'ಗೋಲ್ಡನ್ ಗ್ರ್ಯಾನ್‌ಸ್ಲಾಂ' ಗೆಲ್ಲುವ ಅವಕಾಶ ಕೈಚೆಲ್ಲಿದ್ದರು.

34 ವರ್ಷದ ಜೊಕೊವಿಚ್ ಅಮೆರಿಕ ಓಪನ್‌ನಲ್ಲಿ ನಾಲ್ಕನೇ ಪ್ರಶಸ್ತಿಯ ಗೆಲ್ಲುವತ್ತ ಸಾಗಿದ್ದಾರೆ. ಇಲ್ಲಿ ಚಾಂಪಿಯನ್ ಆದರೆ ಅದು ಅವರ 21ನೇ ಗ್ರ್ಯಾನ್ ಪ್ರಶಸ್ತಿ ಆಗಲಿದ್ದು ಹೊಸ ದಾಖಲೆ ನಿರ್ಮಾಣವಾಗಲಿದೆ. ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಮತ್ತು ಸ್ಪೇನ್‌ನ ರಫೆಲ್ ನಡಾಲ್ ಜೊತೆ ಜೊಕೊವಿಚ್ ಈಗ ದಾಖಲೆಯನ್ನು ಹಂಚಿಕೊಂಡಿದ್ದಾರೆ.

> **ಈ ಪಂದ್ಯದಲ್ಲಿ ಒಟ್ಟಾರೆಯಾಗಿ ಅತ್ಯುತ್ತಮ ಆಟವಾಡಲು ಸಾಧ್ಯವಾಯಿತು. ಕೊನೆಯ ಮೂರು ಸೆಟ್‌ಗಳಂತೂ ಟೂರ್ನಿಯಲ್ಲಿ ನಾನು ಆಡಿದ ಅತ್ಯುತ್ತಮ ಸೆಟ್‌ಗಳು**
> **ನೊವಾಕ್ ಜೊಕೊವಿಚ್**
> ಸರ್ಬಿಯಾ ಆಟಗಾರ



ರಡುಕಾನು ಸಂತಸ –ಎಎಫ್‌ಪಿ ಚಿತ್ರ

ನೊವಾಕ್ ಜೊಕೊವಿಚ್ ಸಂಭ್ರಮ —ಎಎಫ್‌ಪಿ ಚಿತ್ರ

ಹ್ಯಾರಿಸ್‌ಗೆ ಸೋಲುಣಿಸಿದ ಜ್ವೆರೆವ್: ಜರ್ಮನಿಯ ನಾಲ್ಕನೇ ಶ್ರೇಯಾಂಕಿತ ಅಲೆಕ್ಸಾಂಡರ್ ಜ್ವೆರೆವ್ ದಕ್ಷಿಣ ಆಫ್ರಿಕಾದ 46ನೇ ಶ್ರೇಯಾಂಕಿತ ಲಾಯ್ಡ್ ಹ್ಯಾರಿಸ್ ವಿರುದ್ಧ 7-6 (8/6), 6-3, 6-4ರಲ್ಲಿ ಗೆದ್ದು ನಾಲ್ಕರ ಘಟ್ಟ ಪ್ರವೇಶಿಸಿದರು. ಇದು ಅವರ ಸತತ 16ನೇ ಜಯವಾಗಿದೆ. ಇದರಲ್ಲಿ ಕಳೆದ ತಿಂಗಳು ನಡೆದ ಸಿನ್ಸಿನಾಟಿ ಟೂರ್ನಿಯ ಪ್ರಶಸ್ತಿಯೂ ಸೇರಿಕೊಂಡಿದೆ.

ಮಹಿಳೆಯರ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಬ್ರಿಟನ್‌ನ ಎಮಾ ರಡುಕಾನು 6-3, 6-4ರಲ್ಲಿ ಸ್ವಿಟ್ಜರ್ಲೆಂಡ್‌ನ ಬೆಲಿಂದಾ ಬೆನ್ಸಿಕ್ ವಿರುದ್ಧ ಜಯ ಗಳಿಸಿದರೆ ಗ್ರೀಸ್‌ನ ಮರಿಯಾ ಸಕ್ರಿ 6-4, 6-4ರಲ್ಲಿ ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೋವ ಎದುರು ಗೆದ್ದರು. ರಡುಕಾನು ಅವರು ಟೂರ್ನಿಯಲ್ಲಿ ಇದುವರೆಗೆ ಒಂದು ಸೆಟ್ ಕೂಡ ಸೋಲದೆ ಎಂಟರ ಘಟ್ಟ ಪ್ರವೇಶಿಸಿದ್ದಾರೆ.

ಮಣಿಕಾ ಬಾತ್ರಾ ಆರೋಪ: ಟಿಟಿಎಫ್‌ಐ ಸಭೆ ನಾಳೆ

ನವದೆಹಲಿ (ಪಿಟಿಐ): ಒಲಿಂಪಿಯನ್ ಮಣಿಕಾ ಬಾತ್ರಾ ಅವರು ರಾಷ್ಟ್ರೀಯ ತಂಡದ ಕೋಚ್ ಸೌಮ್ಯದೀಪ್ ರಾಯ್ ಅವರ ಮೇಲೆ ಮಾಡಿರುವ ಪಂದ್ಯ ಫಿಕ್ಸಿಂಗ್ ಆರೋಪದ ವಿಚಾರಣೆಗಾಗಿ ಶನಿವಾರ ಭಾರತ ಟೇಬಲ್ ಟೆನಿಸ್ ಫೆಡರೇಷನ್ (ಟಿಟಿಎಫ್‌ಐ) ಕಾರ್ಯನಿರ್ವಾಹಕ ಸಮಿತಿ ಸಭೆ ನಡೆಯಲಿದೆ.

ಮಣಿಕಾ ಅವರು ದೂರು ಕೊಟ್ಟ ನಂತರ ರಾಯ್ ಅವರಿಗೆ ಟಿಟಿಎಫ್‌ಐ ಶೋಕಾಸ್ ನೋಟಿಸ್ ಜಾರಿ ಮಾಡಿತ್ತು.

ಮಣಿಕಾ ಬಾತ್ರಾ

'ವರ್ಚುವಲ್ ಸಭೆಯಲ್ಲಿ ವಿಷಯವನ್ನು ಚರ್ಚಿಸಲಾಗುವುದು. ವಿಚಾರಣೆ ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿ ತೀರ್ಮಾನ ನೀಡಲಿದೆ' ಎಂದು ಟಿಟಿಎಫ್‌ಐ ಕಾರ್ಯದರ್ಶಿ ಅರುಣ್ ಬ್ಯಾನರ್ಜಿ ತಿಳಿಸಿದ್ದಾರೆ.

ಟಿ20: ಧೋನಿ ನೇಮಕಕ್ಕೆ ಸುನಿಲ್ ಗಾವಸ್ಕರ್ ಸಂತಸ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ದುಬೈನಲ್ಲಿ ನಡೆಯಲಿರುವ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಭಾರತ ತಂಡಕ್ಕೆ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಅವರನ್ನು ಮಾರ್ಗದರ್ಶಕರನ್ನಾಗಿ ನೇಮಕ ಮಾಡಿರುವುದು ಸ್ವಾಗತಾರ್ಹ ಎಂದು ಮಾಜಿ ಕ್ರಿಕೆಟಿಗ ಸುನಿಲ್ ಗಾವಸ್ಕರ್ ಹೇಳಿದ್ದಾರೆ.

ಇದೇ ಸಂದರ್ಭದಲ್ಲಿ ಅವರು ತಮ್ಮ ಹಾಗೂ ಭಾರತ ತಂಡದ ಮುಖ್ಯ ಕೋಚ್ ರವಿಶಾಸ್ತ್ರಿ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ ಎಂದೂ ಹೇಳಿದ್ದಾರೆ.

ಧೋನಿ ಹೋದ ವರ್ಷ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದರು. ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕರಾಗಿ ಮುಂದುವರಿದಿದ್ದಾರೆ.

'ಧೋನಿಯನ್ನು ಮೆಂಟರ್ ಆಗಿ ನೇಮಕ ಮಾಡಿರುವುದು ಭಾರತ ತಂಡದ ಬಲವನ್ನು ವರ್ಧಿಸಿದಂತಾಗಿದೆ. ಅವರಿಗೆ ಅಪಾರವಾದ ಅನುಭವ ಇದೆ. ಆಟದ ಪ್ರತಿಯೊಂದು ಸೂಕ್ಷ್ಮವೂ ಅವರಿಗೆ ಗೊತ್ತಿದೆ. ಅವರ ಮಾರ್ಗದರ್ಶನ ತಂಡಕ್ಕೆ ನೆರವಾಗುವುದು ಖಚಿತ' ಎಂದು ಗಾವಸ್ಕರ್ 'ಆಜ್ ತಕ್' ವಾಹಿನಿಯ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

'ಕೋಚ್ ರವಿಶಾಸ್ತ್ರಿ ಮತ್ತು ಧೋನಿ ಮಧ್ಯೆ ತಂಡದ ಆಯ್ಕೆ ಮತ್ತು ತಾಂತ್ರಿಕ ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯ ಬಂದರೆ ತಂಡಕ್ಕೆ ಕಷ್ಟವಾಗಲಿದೆ. ಹಾಗಾಗದಿರಲಿ ಎಂದು ಹಾರೈಸುತ್ತೇನೆ' ಎಂದರು.

ಷೇರುಪೇಟೆ ವಹಿವಾಟು

55



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,353
ಇಂದಿನ ಅಂತ್ಯ	17,369
▲	16
ದಿನದ ಗರಿಷ್ಠ	17,379

ವಿನಿಮಯ ದರ

$ ಡಾಲರ್	73.50
£ ಪೌಂಡ್	101.57
€ ಯುರೊ	--
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1575 (1575)
ಸೋಯಾ (ರಿಫೈನ್ಡ್)	₹1385(1385)
ಸೂರ್ಯಕಾಂತಿ(ರಿಫೈನ್ಡ್)	₹1440(1440)
ಪಾಮೋಲಿನ್	₹1242 (1243)

ದೇಶದಲ್ಲಿ ವಾಹನ ತಯಾರಿಕೆ ನಿಲ್ಲಿಸಲಿರುವ ಫೋರ್ಡ್

ನವದೆಹಲಿ (ಪಿಟಿಐ): ಅಮೆರಿಕದ ವಾಹನ ತಯಾರಿಕಾ ಕಂಪನಿ ಫೋರ್ಡ್ ಮೋಟರ್ ಕಂಪನಿಯು ಭಾರತದಲ್ಲಿ ವಾಹನ ತಯಾರಿಕೆಯನ್ನು ನಿಲ್ಲಿಸುವುದಾಗಿ ಘೋಷಿಸಿದೆ. ದೇಶದಲ್ಲಿ ಆಮದು ವಾಹನಗಳನ್ನು ಮಾತ್ರವೇ ಮಾರಾಟ ಮಾಡುವುದಾಗಿ ಅದು ತಿಳಿಸಿದೆ.

ಕಂಪನಿಯ ಈ ನಿರ್ಧಾರದಿಂದ ಸುಮಾರು 4 ಸಾವಿರ ಉದ್ಯೋಗಿಗಳ ಭವಿಷ್ಯದ ಮೇಲೆ ಪರಿಣಾಮ ಉಂಟಾಗಲಿದೆ. ಈ ಕುರಿತು ಮಾತನಾಡಿದ ಫೋರ್ಡ್ ಇಂಡಿಯಾದ ಅಧ್ಯಕ್ಷ ಅನುರಾಗ್ ಮೆಹೋತ್ರಾ, ಉದ್ಯೋಗಿಗಳಿಗೆ ನ್ಯಾಯಯುತ ಪ್ಯಾಕೇಜ್ ನೀಡಲಾಗುವುದು ಎಂದು ಹೇಳಿದ್ದಾರೆ.

ಸನಂದ್ ಘಟಕದಲ್ಲಿ ಎಂಜಿನ್ ತಯಾರಿಕೆಯನ್ನು ಮುಂದುವರಿಸಲಿದ್ದು ಅದನ್ನು ರಫ್ತು ಮಾಡಲಾಗುವುದು ಎಂದು ಕಂಪನಿ ತಿಳಿಸಿದೆ.

ವಾಹನ ತಯಾರಿಕೆ ನಿಲ್ಲಿಸುವುದರಿಂದ ಇಕೊಸ್ಪೋರ್ಟ್, ಫಿಗೊ, ಎಂಡೋವಿಯರ್, ಫ್ರೀಸ್ಟೈಲ್ ಮತ್ತು ಆಸ್ಪೈರ್‌ನಂತಹ ವಾಹನಗಳ ಮಾರಾಟವನ್ನೂ ಕಂಪನಿ ನಿಲ್ಲಿಸಬೇಕಾಗಲಿದೆ. ಆದರೆ, ಭಾರತದ ಗ್ರಾಹಕರಿಗೆ ವಾಹನಗಳ ಬಿಡಿ ಭಾಗಗಳು, ಖರೀದಿಯ ನಂತರದ ಸೇವೆಗಳು ಹಾಗೂ ಇನ್ನಿತರೆ ನೆರವನ್ನು ಮುಂದುವರಿಸುವುದಾಗಿ ಕಂಪನಿ ತಿಳಿಸಿದೆ.

'ಪೇಟಿಎಂ ಮನಿ'ಯಲ್ಲಿ ಸಂಪತ್ತು ಸೃಷ್ಟಿ, ಹೂಡಿಕೆಗೆ ಸಲಹಾ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನ್ನ ಅಂಗಸಂಸ್ಥೆ ಆಗಿರುವ ಪೇಟಿಎಂ ಮನಿ, ತನ್ನ ವೇದಿಕೆಯಲ್ಲಿ ರಿಟೇಲ್ ಹೂಡಿಕೆದಾರರಿಗಾಗಿ ಸಂಪತ್ತು ಮತ್ತು ಹೂಡಿಕೆಯ ಸಲಹಾ ಸೇವೆಗಳನ್ನು ಆರಂಭಿಸುತ್ತಿದೆ ಎಂದು ಡಿಜಿಟಲ್ ಪಾವತಿ ಮತ್ತು ಹಣಕಾಸು ಸೇವಾ ಕಂಪನಿ ಪೇಟಿಎಂ ಗುರುವಾರ ತಿಳಿಸಿದೆ.

ಮೊದಲ ಹಂತದಲ್ಲಿ 'ವೆಲ್ತ್‌ಬಾಸ್ಕೆಟ್ಸ್' ಎನ್ನುವ ಹೂಡಿಕೆಗೆ ಸಂಬಂಧಿಸಿದ ಆಯ್ಕೆಗಳನ್ನು ನೀಡಲು ಪೇಟಿಎಂ ಮನಿ ಸಂಸ್ಥೆಯು ವೆಲ್ತ್‌ಡೆಸ್ಕ್ ನವೋದ್ಯಮದೊಂದಿಗೆ ಪಾಲುದಾರಿಕೆ ಮಾಡಿಕೊಂಡಿದೆ.

ಪೇಟಿಎಂ ಮನಿ ಆ್ಯಪ್‌ನಲ್ಲಿ ಲಭ್ಯವಿರುವ ವೆಲ್ತ್‌ಬಾಸ್ಕೆಟ್ ಎನ್ನುವುದು 'ಸೆಬಿ'ಯಲ್ಲಿ ನೋಂದಾಯಿತ ಹೂಡಿಕೆ ವೃತ್ತಿಪರರಿಂದ ರೂಪಿಸಲ್ಪಟ್ಟಿರುವ ಸ್ಟಾಕ್‌ಗಳು ಮತ್ತು ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್‌ಗಳ ಕಸ್ಟಮ್ ಪೋರ್ಟ್‌ಫೋಲಿಯೊ ಆಗಿದೆ. ಉಚಿತ ಆರಂಭಿಕ ಪ್ಯಾಕ್ ಮೂಲಕ ಅಥವಾ ಲಭ್ಯವಿರುವ ಪ್ರೀಮಿಯಂ ಮಾಸಿಕ ಪ್ಯಾಕ್‌ಗಳಿಗೆ ಚಂದಾದಾರರಾಗಿ ಬಳಕೆದಾರರು ಹೂಡಿಕೆ ಮಾಡಬಹುದಾಗಿದೆ. ಹೂಡಿಕೆದಾರರು ತಮ್ಮ ಡಿಮ್ಯಾಟ್ ಖಾತೆಗಳಲ್ಲಿ ಸ್ಟಾಕ್‌ಗಳು/ಇಟಿಎಫ್‌ಗಳನ್ನು ಹೊಂದಿರುವುದರಿಂದ, ವೆಲ್ತ್‌ಬಾಸ್ಕೆಟ್‌ಗಳು ಹೆಚ್ಚಿನ ಪಾರದರ್ಶಕತೆ, ದ್ರವ್ಯತೆ ಮತ್ತು ನಿಯಂತ್ರಣವನ್ನು ನೀಡುತ್ತವೆ. ಹೂಡಿಕೆಗಳ ಹೆಚ್ಚಳಕ್ಕೆ ಸಂಬಂಧಿಸಿದಂತೆ ಯಾವುದೇ ಬದಲಾಗುವ ಶುಲ್ಕಗಳಿಲ್ಲದೇ ವೆಚ್ಚ ಪರಿಣಾಮಕಾರಿಯೂ ಆಗಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪೇಟಿಎಂ ಮನಿಯ ಸಲಹಾ ಮಾರುಕಟ್ಟೆಯು ಹೂಡಿಕೆದಾರರ ಅಗತ್ಯಗಳನ್ನು ಪೂರೈಸಲು ಪ್ರಮುಖ ತಾಣವಾಗಲಿದೆ. ಈ ಪ್ರಯಾಣದಲ್ಲಿ ವೆಲ್ತ್‌ಡೆಸ್ಕ್ ನಮ್ಮ ಮೊದಲ ಪಾಲುದಾರ ಆಗಿದೆ. ಈ ಸೇವೆಯ ಮೂಲಕ ರಿಟೇಲ್ ಹೂಡಿಕೆದಾರರಿಗೆ ಎದುರಾಗಬಹುದಾದ ಅಪಾಯಗಳನ್ನು ನಿವಾರಿಸುವ ಜೊತೆಗೆ ಕಡಿಮೆ ವೆಚ್ಚದ ಸಂಪತ್ತು ಸೃಷ್ಟಿಯ ತಂತ್ರಗಳೊಂದಿಗೆ ಹೂಡಿಕೆಯ ಅವಕಾಶಗಳನ್ನು ನೀಡುತ್ತದೆ ಎಂದು ಪೇಟಿಎಂ ಮನಿ ಸಿಇಒ ವರುಣ್ ಶ್ರೀಧರ್ ಹೇಳಿದರು.

ಆರಂಭದಲ್ಲಿ ಆಯ್ದ ಬಳಕೆದಾರರಿಗೆ ಈ ಸೇವೆಯು ಲಭ್ಯವಾಗಲಿದೆ ಎಂದು ತಿಳಿಸಿದೆ.

'ಚೇತರಿಕೆ ಹಾದಿಗೆ ಆರ್ಥಿಕತೆ'

ನವದೆಹಲಿ (ಪಿಟಿಐ): ಕೋವಿಡ್ ಸಾಂಕ್ರಾಮಿಕದ ಎರಡನೇ ಅಲೆಯ ನಡುವೆಯೂ ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಆರ್ಥಿಕತೆಯು ಉತ್ತಮ ಬೆಳವಣಿಗೆ ಕಂಡಿದ್ದು, ದೇಶದ ಆರ್ಥಿಕ ತಳಹದಿಯು ಬಲಿಷ್ಠವಾಗಿದೆ ಎನ್ನುವುದಕ್ಕೆ ಒಂದು ಸಾಕ್ಷ್ಯವಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಗುರುವಾರ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಶೇ 20.1ರಷ್ಟು ಬೆಳವಣಿಗೆ ಕಂಡಿದೆ. ಹಿಂದಿನ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಕೋವಿಡ್‌ನಿಂದಾಗಿ ಜಿಡಿಪಿಯು ಶೇ 24.4ರಷ್ಟು ಕುಸಿತ ಕಂಡಿತ್ತು.

ಕೇರಳ ಮತ್ತು ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಬಗ್ಗೆ ಸಚಿವಾಲಯವು ಆತಂಕ ವ್ಯಕ್ತಪಡಿಸಿದೆ. ಈ ಎರಡೂ ರಾಜ್ಯಗಳಲ್ಲಿ ಸಾಂಕ್ರಾಮಿಕದ ನಿಯಂತ್ರಣ ಮತ್ತು ನಿರ್ವಹಣೆ ಬಲಪಡಿಸುವ ಅಗತ್ಯವಿದೆ ಎಂದು ಸಚಿವಾಲಯವು ತನ್ನ ಈಚಿನ ತಿಂಗಳ ಆರ್ಥಿಕ ಪರಿಶೀಲನಾ ವರದಿಯಲ್ಲಿ ಹೇಳಿದೆ.

ಹಿಂದಿನ ವರ್ಷದ ಏಪ್ರಿಲ್–ಜುಲೈ ಅವಧಿಗೆ ಹೋಲಿಸಿದರೆ ಈ ಬಾರಿ ನೇರ ಮತ್ತು ಪರೋಕ್ಷದ ತೆರಿಗೆ ಸಂಗ್ರಹವು ವರ್ಷದಿಂದ ವರ್ಷಕ್ಕೆ ಗಮನಾರ್ಹವಾದ ಬೆಳವಣಿಗೆ ಕಾಣುತ್ತಿದೆ ಎಂದೂ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

9-9-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1585 (1585)
ಒಂದು ವಾರದ ಡೆಲಿವರಿ	1580 (1580)
ಸೋಯಾ ಕಚ್ಚಾ	1345 (1347)
ಪಾಮ್ ವಾರದ ಡೆಲಿವರಿ	1240 (1241)
ಸೂರ್ಯಕಾಂತಿ ಎಣ್ಣೆ ಕಚ್ಚಾ	1380 (1380)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,050 (46,950)
ಬೆಳ್ಳಿ ಕೆ.ಜಿ 64,100 (64,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪೌಷ್ಟಿಕ ಆಹಾರ ಸೇವಿಸಿ
ಪರಸ್ಪರ ಅಂತರ ಕಾಯ್ದುಕೊಳ್ಳಿ
ಹೊರಗೆ ಹೋಗುವಾಗ ಮುಖಗವಸು ಧರಿಸಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-47000
ಹಳತು	42500-50500
ಪುತ್ತೂರು	
ಕೋಕ	10500-26000
ಹೊಸತು	32500-47000
ಸಿದ್ದಾಪುರ	
ಬಿಳಿಗೋಟು	33899-37699
ಚಾಲಿ	40000-45009
ಕೋಕ	35299-36299
ಕೆಂಪುಗೋಟು	33499-33499
ರಾಶಿ	49899-52009
ತಟ್ಟಿಬೆಟ್ಟೆ	48099-49099
ಶಿರಸಿ	
ಬೆಟ್ಟೆ	39709-48889
ಬಿಳಿಗೋಟು	28829-39700
ಚಾಲಿ	42489-45098
ರಾಶಿ	47009-52208
ಯಲ್ಲಾಪುರ	
ಬಿಳಿಗೋಟು	30199-38509
ಚಾಲಿ	39012-45060
ಕೋಕ	22829-35812
ಕೆಂಪುಗೋಟು	3099-36701
ರಾಶಿ	48798-52090
ತಟ್ಟಿಬೆಟ್ಟೆ	40600-47590

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Marketing & Sales

WANTED DRA/NON DRA Field-Executives/Telecallers for Bangalore, Attractive Salary, PF+ESI Contact:-9113602995/ 8867052293

General

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಮನೆ ಕೆಲಸಕ್ಕೆ, ಅಡುಗೆಗೆ, ಮಕ್ಕಳನ್ನು ಮತ್ತು ರೋಗಿಗಳನ್ನು ನೋಡಿಕೊಳ್ಳಲು ಮಹಿಳೆಯರು / ಹುಡುಗಿಯರು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಸೌಲಭ್ಯವಿದೆ. ಸಂಬಳ: 15,000-20,000 ಸಾವಿರ ಸಂಪರ್ಕಿಸಿ: 9326447402, 9892396441

WANTED Staff for a dry cleaning showroom in Jayanagar. Age below 40 years only. People residing in and around Jayanagar can only apply. Salary: 10,000 to 13,000 (Freshers) and upto 25,000 for people with experience in dry cleaning. 8050666007

WORK STUDY and settle your future with salary. Are you a student with 10th, Plus-2, willing to work in HOMECARE-SERVICES, if yes call 6366883838, 9606347575. MAJ HEALTH CARE-SERVICES, Gandhinagar, Bangalore.

ಪ್ರವಾಸ

Travel

ಅಂಡಮಾನ್ ಹವಳದ್ವೀಪ ಸೆಪ್ಟಂಬರ್, ಅಕ್ಟೊಬರ್, ನವೆಂಬರ್‌ನಲ್ಲಿ 5 ದಿನಗಳು ವಿಮಾನದಲ್ಲಿ. Royal Package. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429.

ಗೌರಿಗಣೇಶ ಹಬ್ಬದ ಶುಭಾಶಯಗಳು: 16.10.2021 7ದಿನಗಳ ತಮಿಳುನಾಡು, 24.10.2021 6ದಿನಗಳ ಕಾಶಿ,ಗಯಾ, 18.10.2021 12ದಿನಗಳ ಗುಜರಾತ್, ಮಧ್ಯಪ್ರದೇಶ, 18.10.2021,24.10.2021 10ದಿನಗಳ ಲೇಹ್‌ಲಡಾಕ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್, 9342848791, 9880847001

ಕಾಶಿ, ಗಯಾ, ಬುದ್ಧಗಯಾ, ಕೋಲ್ಕತ, ಭುವನೇಶ್ವರ್, ಕೊನಾರ್ಕ್,ಪುರಿಜಗನ್ನಾಥ್, ನವಂಬರ್,ಡಿಸೆಂಬರಿನಲ್ಲಿ. ಪ್ರತಿದಿನ ತಿರುಪತಿ ಪ್ಯಾಕೇಜ್ ವಿಜಯ ಟ್ರಾವಲ್ಸ್ ಮಲ್ಲೇಶ್ವರಂ, ಬೆಂಗಳೂರು. 9448294477

ಭವಿಷ್ಯ

Astrology

★॥ಶ್ರೀಶಾಕಾಂಬರಿದೇವಿ॥★ ಆರಾಧಕರು ಸ್ತ್ರೀ_ಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂಯಾವುದೇ ಕಠಿಣ,ಗುಪ್ತ ಸಮಸ್ಯೆಗಳಿಗೆ 11 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900222591

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಪ್ರಜಾವಾಣಿ
ಮಾನ್ಯ ಓದುಗರು ಮತ್ತು ಜಾಹೀರಾತುದಾರರಿಗೆ
ಗಣೇಶ ಹಬ್ಬದ
ಹಾರ್ದಿಕ ಶುಭಾಶಯಗಳು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:
9845114560, 9731810277, 9886213331, 9606912256

ಪ್ರಜಾವಾಣಿ
ಪ್ರಶ್ನೆಯ ? ಗುಟ್ಟು ಮಾಡಿರಿ ರಟ್ಟು
ಗಲಿಬಿಲಿ ಪ್ರಶ್ನೆ ನಮ್ಮದು, ಚುರುಕು ಉತ್ತರ ನಿಮ್ಮದು
ಗಡಿಬಿಡಿ ಆಗದೆ ಸರಿಯಾದ ಉತ್ತರವನ್ನು www.bit.ly/pvgutturattuಗೆ ಇಂದು ಸಂಜೆ 6ರ ಒಳಗೆ ಕಳುಹಿಸಿ ಆಕರ್ಷಕ ಬಹುಮಾನ ಗೆಲ್ಲಿ!
ಪ್ರಶ್ನೆ 1 ಗುಂಡನ ಅಮ್ಮನಿಗೆ 3 ಮಕ್ಕಳು, 1ನೇ ಮಗು ಹೆಸರು ಏಪ್ರಿಲ್, 2ನೇ ಮಗು ಹೆಸರು ಜೂನ್, 3ನೇ ಮಗು ಹೆಸರೇನು?
ಪ್ರಶ್ನೆ 2 ಒಂದು ಕಾರಿನಲ್ಲಿ 2 ಅಪ್ಪ 2 ಮಗ ಇದ್ದಾರೆ, ಕಾರಿನಲ್ಲಿರುವವರ ಒಟ್ಟು ಸಂಖ್ಯೆ 3, ಹೇಗೆ?

ಬಂಪರ್ ಬಹುಮಾನ 1 ವಾಟರ್ ಪ್ಯೂರಿಫೈಯರ್
3D ಪಝಲ್ 3 ಸ್ಪೆಶಲ್ ಬಹುಮಾನ
ಗಿಫ್ಟ್ ವೌಚರ್ ₹ 500
ಪ್ರತಿ ದಿನ 10 ಅದೃಷ್ಟಶಾಲಿಗಳಿಗೆ
*ಷರತ್ತುಗಳು ಅನ್ವಯ
ಹಿಂದಿನ ಪ್ರಶ್ನೆಗೆ ಉತ್ತರ: 1) ಕಾಲುಗಳು । 2) ಚೇಳು

ಜೂನಿಯರ್ ಫಿಸಿಯೊಗೆ ಕೋವಿಡ್; ಆಟಗಾರರ ಪರೀಕ್ಷಾ ವರದಿ ನೆಗೆಟಿವ್

ಮ್ಯಾಂಚೆಸ್ಟರ್ ಟೆಸ್ಟ್: ದೂರವಾದ ಆತಂಕ?

ಮ್ಯಾಂಚೆಸ್ಟರ್(ಪಿಟಿಐ): ಭಾರತ ಮತ್ತು ಇಂಗ್ಲೆಂಡ್ ನಡುವೆ ಶುಕ್ರವಾರ ನಿಗದಿಯಾಗಿರುವ ಐದನೇ ಮತ್ತು ಕೊನೆಯ ಟೆಸ್ಟ್ ಪಂದ್ಯ ನಡೆಯುವ ಕುರಿತು ಇದ್ದ ಆತಂಕ ಬಹುತೇಕ ದೂರವಾಗಿದೆ.

ಭಾರತ ತಂಡದ ಜೂನಿಯರ್ ಫಿಸಿಯೊ ಯೋಗೇಶ್ ಪರ್ಮಾರ್ ಅವರಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡಿದ್ದರಿಂದ ಮ್ಯಾಂಚೆಸ್ಟರ್ ಟೆಸ್ಟ್ ನಡೆಯುವುದು ಸಂದೇಹ ಎಂದು ಗುರುವಾರ ಸಂಜೆ ವದಂತಿ ಹಬ್ಬಿತ್ತು. ಆದರೆ ಆಟಗಾರರೆಲ್ಲರ ಆರ್‌ಟಿ-ಪಿಸಿಆರ್ ವರದಿ ನೆಗೆಟಿವ್ ಬಂದಿರುವ ಕಾರಣ ಪಂದ್ಯಕ್ಕೆ ಇದ್ದ ಅಡ್ಡಿ ದೂರವಾಗಿದೆ.

ಹೀಗಿದ್ದೂ ಅನುಭವಿ ಆಟಗಾರರೊಬ್ಬರಿಗೆ ಸಂಬಂಧಿಸಿ ಆಕ್ಷೇಪವಿದ್ದು ಇದು ಪಂದ್ಯಕ್ಕೆ ಅಡ್ಡಿಯಾಗುವುದೇ ಎಂಬ ಸಂದೇಹವೂ ಉಳಿದಿದೆ.

ಭಾರತ ತಂಡದ ಕೋಚ್‌ಗಳಿಗೆ ಕೋವಿಡ್ ಸೋಂಕು ತಗುಲಿರುವ ಬೆನ್ನಲ್ಲೇ ಜೂನಿಯರ್ ಫಿಸಿಯೊ ಯೋಗೇಶ್ ಪರ್ಮಾರ್ ಸೋಂಕಿಗೆ ಒಳಗಾಗಿರುವ ವಿಷಯವನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಗುರುವಾರ ಬಹಿರಂಗಪಡಿಸಿತ್ತು. ಹೀಗಾಗಿ ಭಾರತ ತಂಡ ಅಭ್ಯಾಸ ಕಣಕ್ಕೆ ಇಳಿಯಲಿಲ್ಲ.

ಮುಖ್ಯ ಕೋಚ್ ರವಿಶಾಸ್ತ್ರಿ ಮತ್ತು ಬೌಲಿಂಗ್ ಕೋಚ್ ಭರತ್ ಅರುಣ್ ಅವರಿಗೆ ಸೋಂಕು ತಗುಲಿತ್ತು. ಹೀಗಾಗಿ ಅವರು ಮ್ಯಾಂಚೆಸ್ಟರ್ ಟೆಸ್ಟ್‌ಗೆ ತಂಡದ ಜೊತೆ ತೆರಳುವುದಿಲ್ಲ ಎಂದು ಬಿಸಿಸಿಐ ತಿಳಿಸಿತ್ತು. ಅವರಿಬ್ಬರು ಲಂಡನ್‌ನಲ್ಲಿಯೇ ಉಳಿದುಕೊಂಡಿದ್ದಾರೆ. ರವಿಶಾಸ್ತ್ರಿ ಅವರ ಸಂಪರ್ಕದಲ್ಲಿದ್ದ ಕಾರಣ ಮುಖ್ಯ ಫಿಸಿಯೊ ನಿತಿನ್ ಪಟೇಲ್ ಅವರನ್ನು ಪ್ರತ್ಯೇಕವಾಸದಲ್ಲಿ ಇರಿಸಲಾಗಿದೆ.

ವಿರಾಟ್ ಕೊಹ್ಲಿ –ಎಪಿ/ಪಿಟಿಐ ಚಿತ್ರ

‘ಎಲ್ಲ 21 ಆಟಗಾರರ ಪರೀಕ್ಷಾ ವರದಿ ನೆಗೆಟಿವ್ ಬಂದಿದೆ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ತಿಳಿಸಿದೆ. ಇದು ಸಂತೋಷದ ಸುದ್ದಿ. ಹೀಗಾಗಿ ಪಂದ್ಯ ನಿಗದಿಯಂತೆ ನಡೆಯಲಿದೆ ಎಂದು ಆಶಿಸೋಣ’ ಎಂದು ಬಿಸಿಸಿಐ ಟ್ವೀಟ್ ಮಾಡಿದೆ.

ಮ್ಯಾಂಚೆಸ್ಟರ್‌ನಲ್ಲಿ ಫಿಸಿಯೊ ಇಲ್ಲದೇ ವಿರಾಟ್ ಬಳಗ ಆಡಬೇಕಾಗಿದೆ. ಫಿಸಿಯೊ ಒಬ್ಬರನ್ನು ನಿಯೋಜಿಸುವಂತೆ ತಂಡದ ಆಡಳಿತ, ಕೋರಿದೆ. ಸದ್ಯ ಬ್ಯಾಟಿಂಗ್ ಕೋಚ್ ವಿಕ್ರಂ ರಾಥೋಡ್ ಮಾತ್ರ ತಂಡದ ಜೊತೆ ಇದ್ದಾರೆ.

ಪಂದ್ಯ ಡ್ರಾ ಆದರೂ ಭಾರತಕ್ಕೆ ಸರಣಿ: ಪಂದ್ಯದಲ್ಲಿ ಭಾರತ ಆತ್ಮವಿಶ್ವಾಸದಿಂದ ಕಣಕ್ಕೆ ಇಳಿಯಲಿದೆ. ಕಳೆದ ಪಂದ್ಯದಲ್ಲಿ ಅಮೋಘ ಜಯ ಸಾಧಿಸಿರುವ ವಿರಾಟ್ ಕೊಹ್ಲಿ ಬಳಗ ಸರಣಿಯಲ್ಲಿ ಈಗಾಗಲೇ 2–1ರಿಂದ ಮುನ್ನಡೆ ಸಾಧಿಸಿದೆ. ಹೀಗಾಗಿ ಕೊನೆಯ ಪಂದ್ಯ ಇಂಗ್ಲೆಂಡ್ ತಂಡಕ್ಕೆ ಮಹತ್ವದ್ದಾಗಿದೆ.

ಓಲ್ಡ್ ಟ್ರಾಫರ್ಡ್‌ಕ್ರೀಡಾಂಗಣದಲ್ಲಿ ಪಂದ್ಯ ಗೆದ್ದರೆ ಸರಣಿ ಸೋಲಿನಿಂದ ತಪ್ಪಿಸಿಕೊಳ್ಳುವ ಅವಕಾಶ ಆತಿಥೇಯರಿಗೆ ಇದೆ. ಆದ್ದರಿಂದ ಜೋ ರೂಟ್ ಬಳಗ ಗೆಲುವಿಗಾಗಿ ಕಾದಾಡಲಿದೆ. ಆದರೆ ಭಾರತವು ಈ ಪಂದ್ಯದಲ್ಲಿ ಡ್ರಾ ಮಾಡಿಕೊಂಡರೂ ಸಾಕು ಸರಣಿ ಗೆಲುವಿನ ಸಂಭ್ರಮ ಆಚರಿಸಬಹುದು. ಗೆದ್ದರಂತೂ 3–1ರಿಂದ ಕಿರೀಟ ಧರಿಸಬಹುದು.

ಎರಡನೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಟೂರ್ನಿಯ ಮೊದಲ ಸರಣಿ ಇದಾಗಿರುವುದರಿಂದ ಉಭಯ ತಂಡಗಳಿಗೂ ಇದು ಮಹತ್ವದ್ದೇ ಆಗಿದೆ. ಗೆದ್ದವರಿಗೆ ಅಂಕಗಳು ಸಿಗುವುದರಿಂದ ಡಬ್ಲ್ಯುಟಿಸಿ ಪಟ್ಟಿಯಲ್ಲಿ ಮುನ್ನಡೆ ಕಾಯ್ದುಕೊಳ್ಳಲು ಸಹಕಾರಿಯಾಗಲಿದೆ. ಈ ಸರಣಿಯಲ್ಲಿ ಗೆದ್ದರೆ ವಿದೇಶಿ ನೆಲದಲ್ಲಿ ಎರಡು ಸರಣಿಗಳನ್ನು ಗೆದ್ದ ಪ್ರಥಮ ನಾಯಕನೆಂಬ ಹೆಗ್ಗಳಿಕೆಗೆ ವಿರಾಟ್ ಪಾತ್ರರಾಗುವರು. 2018–19ರಲ್ಲಿ ವಿರಾಟ್ ನಾಯಕತ್ವದಲ್ಲಿ ಭಾರತ ತಂಡವು ಆಸ್ಟ್ರೇಲಿಯಾದಲ್ಲಿ ಸರಣಿ ಗೆದ್ದಿತ್ತು.

ಪಂದ್ಯ ಆರಂಭ: ಮಧ್ಯಾಹ್ನ 3.30 (ಭಾರತೀಯ ಕಾಲಮಾನ).

ನೇರ ಪ್ರಸಾರ: ಸೋನಿ ಸಿಕ್ಸ್

ಧೋನಿ ನೇಮಕ: ಹಿತಾಸಕ್ತಿ ಸಂಘರ್ಷ ನಿಯಮ ಉಲ್ಲಂಘನೆ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಟ್ವೆಂಟಿ-20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡದ ಮಾರ್ಗದರ್ಶಕರಾಗಿ ನೇಮಕವಾಗಿರುವ ಮಾಜಿ ಆಟಗಾರ ಮಹೇಂದ್ರಸಿಂಗ್ ಧೋನಿ ವಿರುದ್ಧ ಹಿತಾಸಕ್ತಿ ಸಂಘರ್ಷ ನಿಯಮ ಉಲ್ಲಂಘನೆಯ ದೂರು ದಾಖಲಾಗಿದೆ.

ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕರಾಗಿರುವ ಧೋನಿಯನ್ನು ಭಾರತ ತಂಡದ ಮೆಂಟರ್ ಆಗಿ ನೇಮಕ ಮಾಡಿರುವುದು ನಿಯಮಾವಳಿಯ ಉಲ್ಲಂಘನೆಯಾಗಿದೆ ಎಂದು ಮಧ್ಯಪ್ರದೇಶ ಕ್ರಿಕೆಟ್ ಸಂಸ್ಥೆ ಮಾಜಿ ಸದಸ್ಯ ಸಂಜೀವ್ ಗುಪ್ತಾ ಅವರು ಬಿಸಿಸಿಐ ಅಪೆಕ್ಸ್ ಕೌನ್ಸಿಲ್‌ಗೆ ದೂರು ನೀಡಿದ್ದಾರೆ.

‘ಗುಪ್ತಾ ಅವರು ದೂರು ಪತ್ರ ಬರೆದಿದ್ದಾರೆ. ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ, ಕಾರ್ಯದರ್ಶಿ ಜಯ್ ಶಾ ಸೇರಿದಂತೆ ಅಪೆಕ್ಸ್ ಕೌನ್ಸಿಲ್‌ಗೆ ಪತ್ರ ಹಾಕಿದ್ದಾರೆ. 38 (4) ನಿಯಮ ಉಲ್ಲಂಘನೆ ಆಗಿದೆ ಎಂದು ಅವರು ದೂರಿದ್ದಾರೆ. ಈ ನಿಯಮದ ಪ್ರಕಾರ ಒಬ್ಬ ವ್ಯಕ್ತಿಯು ಎರಡು ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವಂತಿಲ್ಲ. ಈ ಕುರಿತು ಅಪೆಕ್ಸ್ ಕೌನ್ಸಿಲ್ ಕಾನೂನು ತಜ್ಞರ ನೆರವು ಪಡೆಯಲಿದೆ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಇದೇ 19ರಿಂದ ಐಪಿಎಲ್ ಪಂದ್ಯಗಳು ಯುಎಇಯಲ್ಲಿ ಆರಂಭವಾಗಲಿವೆ. ಅದರಲ್ಲಿ ಧೋನಿ ನಾಯಕತ್ವದ ಚೆನ್ನೈ ಆಡಲಿದೆ. ಅಕ್ಟೋಬರ್‌ನಲ್ಲಿ ವಿಶ್ವಕಪ್ ಟೂರ್ನಿ ನಡೆಯಲಿದೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ಹೊನಲು ಬೆಳಕಿನ ಗೋಪುರ ಉದ್ಘಾಟನೆ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕ್ರಿಕೆಟ್ ಆಡಿದರು. ಸಚಿವರಾದ ನಾರಾಯಣಗೌಡ, ಮುನಿರತ್ನ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಕೆಎಸ್‌ಸಿಎ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಇದ್ದರು –ಪ್ರಜಾವಾಣಿ ಚಿತ್ರ

ನಾಳೆಯಿಂದ ಫುಟ್‌ಸಾಲ್ ಆಟದ ‘ಕಿಕ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುರುಕುತನ, ವೇಗ ಮತ್ತು ತಾಂತ್ರಿಕ ಪರಿಣಿತಿ ಬೇಡುವ ಫುಟ್‌ಸಾಲ್ ಕ್ರೀಡೆಯನ್ನು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯು ಮೊದಲ ಬಾರಿ ಆಯೋಜಿಸುತ್ತಿದೆ. ಶನಿವಾರ ಆರಂಭವಾಗುವ ಟೂರ್ನಿಗೆ ಇಲ್ಲಿಯ ಪಡುಕೋಣೆ–ದ್ರಾವಿಡ್ ಸ್ಪೋರ್ಟ್ಸ್ ಎಕ್ಸ್‌ಲೆನ್ಸ್ ಕ್ರೀಡಾಂಗಣ ಆತಿಥ್ಯ ವಹಿಸಲಿದೆ.

ವಿದೇಶಗಳಲ್ಲಿ ಈ ಕ್ರೀಡೆ ಜನಪ್ರಿಯವಾಗಿದೆ. 2017ರಲ್ಲಿ ಬ್ರೆಜಿಲ್‌ನ ರೊನಾಲ್ಡಿನೊ ಸೇರಿದಂತೆ ಹಲವು ಖ್ಯಾತ ಆಟಗಾರರು ಭಾಗವಹಿಸಿದ್ದ ಪ್ರೀಮಿಯರ್ ಫುಟ್‌ಸಾಲ್ ಲೀಗ್‌ನ ಪಂದ್ಯಗಳು ಬೆಂಗಳೂರಿನಲ್ಲಿ ನಡೆದಿದ್ದವು. 2016ರಲ್ಲಿ ಮೊದಲ ಬಾರಿ ಏಷ್ಯನ್ ಪ್ರೀಮಿಯರ್ ಫುಟ್‌ಸಾಲ್ ಚಾಂಪಿಯನ್‌ಷಿಪ್‌ಅನ್ನು ಭಾರತದಲ್ಲಿ ಆಯೋಜಿಸಲಾಗಿತ್ತು. ಈ ಟೂರ್ನಿಯಲ್ಲಿ ಮುಂಬೈ ತಂಡ ಚಾಂಪಿಯನ್ ಆಗಿತ್ತು.

> **ಮೊದಲು ಬೆಂಗಳೂರಿನಲ್ಲಿ, ಬಳಿಕ ಎಲ್ಲ ಜಿಲ್ಲೆಗಳಿಗೆ ವಿಸ್ತರಿಸಲಾಗುತ್ತದೆ. ಸಿದ್ಧತೆಗಳು ಪೂರ್ಣಗೊಂಡಿವೆ. ಈ ಕ್ರೀಡೆಯನ್ನು ಜನಪ್ರಿಯಗೊಳಿಸುವತ್ತ ಗಮನಹರಿಸಿದ್ದೇವೆ ಎಂ.**
>
> **ಸತ್ಯನಾರಾಯಣ್** ಕೆಎಸ್‌ಎಫ್‌ಎ ಪ್ರಧಾನ ಕಾರ್ಯದರ್ಶಿ

‘ಕೆಎಸ್‌ಎಫ್‌ಎ ನಡೆಸುತ್ತಿರುವ ಟೂರ್ನಿಗೆ ಎಂಟು ಕ್ಲಬ್‌ಗಳು ಭಾಗವಹಿಸುತ್ತಿವೆ. ಇವುಗಳನ್ನು ಎರಡು ಗುಂಪು ಗಳಾಗಿ ವಿಂಗಡಿಸಲಾಗಿದ್ದು, ಇಲ್ಲಿ ಚಾಂಪಿಯನ್ ಆದ ತಂಡವು ರಾಷ್ಟ್ರೀಯ ಫೈನಲ್ಸ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸಲಿದೆ’ ಎಂದು ಕೆಎಸ್‌ಎಫ್‌ಎ ಪ್ರಧಾನ ಕಾರ್ಯದರ್ಶಿ ಎಂ.ಸತ್ಯನಾರಾಯಣ್ ತಿಳಿಸಿದ್ದಾರೆ. ಎಮೆಟ್ ಎಫ್‌ಸಿ–ಫ್ರಾನ್ಸಿಸ್ ಜೇವಿಯರ್ ಎಫ್‌ಸಿ, ಬೆಟಾ ಸ್ಪೋರ್ಟ್ಸ್ ಕ್ಲಬ್–ಸೂಪರ್ ಸ್ಟ್ರೈಕರ್ಸ್, ಇಂಡಿಯನ್ ಫುಟ್‌ಬಾಲ್ ಫ್ಯಾಕ್ಟರಿ–ಸ್ಟೂಡೆಂಟ್ ಯೂನಿಯನ್, ರೆಬೆಲ್ಸ್ ಎಫ್‌ಸಿ–ಬೆಳಗಾವಿ ಯುನೈಟೆಡ್ ಎಫ್‌ಸಿ ಪೈಪೋಟಿ ನಡೆಸಲಿವೆ. ಸೆಪ್ಟೆಂಬರ್ 15ರಂದು ಫೈನಲ್ ಪಂದ್ಯ ನಡೆಯಲಿದೆ.

ಹಿನ್ನೆಲೆ, ಪ್ರಮುಖ ನಿಯಮಗಳು

1930ರಲ್ಲಿ ಉರುಗ್ವೆಯ ಜುವಾನ್ ಕಾರ್ಲೋಸ್ ಸೆರಿಯಾನಿ ಎಂಬ ಶಿಕ್ಷಕರೊಬ್ಬರು ಮನರಂಜನೆಯ ಉದ್ದೇಶಕ್ಕಾಗಿ ಆರಂಭಿಸಿದ ಈ ಕ್ರೀಡೆಗೆ 1933ರಲ್ಲಿ ನಿಯಮಗಳನ್ನು ರೂಪಿಸಲಾಯಿತು. ಬಳಿಕ ನಿಯಮಗಳನ್ನು ತಿದ್ದುಪಡಿ ಮಾಡಲಾಗುತ್ತ ಬರುತ್ತಿದೆ. ಅಂತರರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್ (ಫಿಫಾ) 1989ರಿಂದ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಫುಟ್‌ಸಾಲ್ ವಿಶ್ವಕಪ್ ಕೂಡ ಆಯೋಜಿಸುತ್ತದೆ. 2016ರಲ್ಲಿ ಕೊನೆಯ ಬಾರಿ ನಡೆದಿದ್ದ ಟೂರ್ನಿಯಲ್ಲಿ ಅರ್ಜೆಂಟೀನಾ ಚಾಂಪಿಯನ್ ಆಗಿತ್ತು.

ಫುಟ್‌ಸಾಲ್ ಕ್ರೀಡೆಯಲ್ಲಿ ಪ್ರತಿ ತಂಡದಲ್ಲಿ ಫೈವ್ ‘ಎ’ ಸೈಡ್ ಟೂರ್ನಿಯಲ್ಲಿರುವಂತೆಯೇ ತಲಾ ಐದು ಮಂದಿ ಆಟಗಾರರು ಮಾತ್ರ ಇರುತ್ತಾರೆ. ಅದರಲ್ಲಿ ಒಬ್ಬರು ಗೋಲ್‌ಕೀಪರ್. ಒಟ್ಟು 40 ನಿಮಿಷ ನಡೆಯುವ ಪಂದ್ಯವನ್ನು ನಾಲ್ಕು ಕ್ವಾರ್ಟರ್‌ಗಳಾಗಿ ವಿಂಗಡಿಸಲಾಗುತ್ತದೆ. ಆಟ ಫುಟ್‌ಬಾಲ್‌ನಂತೆಯೇ ನಡೆದರೂ ನಿಯಮಗಳಲ್ಲಿ ಕೆಲವು ಬದಲಾವಣೆಗಳು ಇವೆ. ಒಳಾಂಗಣ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯುತ್ತವೆ. ಸಾಮಾನ್ಯ ಫುಟ್‌ಬಾಲ್‌ಗೆ ಬಳಸುವುದಕ್ಕಿಂತ ಸಣ್ಣ ಅಂಗಣವನ್ನು ಇದಕ್ಕಾಗಿ ಸಜ್ಜುಗೊಳಿಸಲಾಗುತ್ತದೆ.

ಚೆಂಡಿನೊಂದಿಗೆ ಮುನ್ನುಗ್ಗಿದ ಬೆಂಗಳೂರು ಬ್ಲೂಸ್‌ನ ಶಿವಾನಿ –ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ಬೆಂಗಳೂರು ಬ್ಲೂಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಆಟವಾಡಿದ ಬೆಂಗಳೂರು ಬ್ಲೂಸ್ ಎಫ್‌ಸಿ ತಂಡ ರಾಜ್ಯ ಫುಟ್‌ಬಾಲ್ ಸಂಸ್ಥೆ ಆಯೋಜಿಸಿರುವ ಸ್ಪೋರ್ಟಿಂಗ್ ಪ್ಲಾನೆಟ್ ಟ್ರೋಫಿ ಮಹಿಳೆಯರ 'ಎ' ಡಿವಿಷನ್ ಟೂರ್ನಿಯಲ್ಲಿ ಭರ್ಜರಿ ಜಯ ಸಾಧಿಸಿತು.

ಗುರುವಾರ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಬೆಂಗಳೂರು ಬ್ಲೂಸ್ 4–0ಯಿಂದ ಜೋ'ಸ್ ಯುನೈಟೆಡ್ ತಂಡವನ್ನು ಮಣಿಸಿತು. 14ನೇ ನಿಮಿಷದಲ್ಲಿ ಮೆಹರ್ ಗಳಿಸಿದ ಗೋಲಿನೊಂದಿಗೆ ತಂಡ ಖಾತೆ ತೆರೆದಿತ್ತು. 32ನೇ ನಿಮಿಷದಲ್ಲಿ ಲಿಶಾ ಮುನ್ನಡೆ ಹೆಚ್ಚಿಸಿದರು. 55 ಮತ್ತು 59ನೇ ನಿಮಿಷಗಳಲ್ಲಿ ಶಿವಾನಿ ಚೆಂಡನ್ನು ಗುರಿ ಸೇರಿಸಿ ಗೆಲುವಿನ ಅಂತರವನ್ನು ಹಿಗ್ಗಿಸಿದರು.

ಪಯನೀರ್ ವಿಮೆನ್ಸ್ ಮತ್ತು ಪಾಸ್ ಎಫ್‌ಸಿ ನಡುವಿನ ಪಂದ್ಯ 1–1ರಲ್ಲಿ ಸಮವಾಯಿತು. ಪಯನೀರ್ ಪರವಾಗಿ 16ನೇ ನಿಮಿಷದಲ್ಲಿ ರೂಪಾ ಮತ್ತು ಪಾಸ್ ಪರವಾಗಿ 46ನೇ ನಿಮಿಷದಲ್ಲಿ ಐಶ್ವರ್ಯ ಗೋಲು ಗಳಿಸಿದರು.

ಶುಕ್ರವಾರ 'ಎ' ಗುಂಪಿನ ಪಂದ್ಯದಲ್ಲಿ ಯುನೈಟೆಡ್ ಎಫ್‌ಸಿ ಕೊಡಗು ಮತ್ತು ಸಾಯಿ ಸ್ಪೋರ್ಟ್ಸ್ ಅಕಾಡೆಮಿ ತಂಡಗಳು ಸೆಣಸಲಿವೆ. ಪಂದ್ಯ ಸಂಜೆ 4 ಗಂಟೆಗೆ ನಡೆಯಲಿದೆ.

ಬೆಂಗಳೂರು ಪ್ರೊ ಫುಟ್‌ಬಾಲ್ ಲೀಗ್ ಪಂದ್ಯಗಳು: ಎಫ್‌ಎಸ್‌ವಿ ಅರೆನಾದಲ್ಲಿ ಬೆಂಗಳೂರು ಪ್ರೊ ಫುಟ್‌ಬಾಲ್ ಲೀಗ್‌ನಲ್ಲಿ ಸೆಪ್ಟೆಂಬರ್ 11ರಂದು ನಾಲ್ಕು ಪಂದ್ಯಗಳು ನಡೆಯ ಲಿವೆ. 'ಸಿ' ಗುಂಪಿನಲ್ಲಿ ಎಫ್‌ಸಿ ಹೈದ್ರಾ ಮತ್ತು ರಾಮನ್ ಸ್ಪೋರ್ಟ್ಸ್ ಅಕಾಡೆಮಿ ತಂಡಗಳು ಬೆಳಿಗ್ಗೆ 11 ಗಂಟೆಗೆ ಸೆಣಸಲಿವೆ. 12 ಗಂಟೆಗೆ 'ಡಿ' ಗುಂಪಿನ ಪಂದ್ಯದಲ್ಲಿ ಎಫ್‌ಎಬಿ ಮತ್ತು ಎಂಆರ್‌ಯುಎಫ್‌ಸಿ ಸೆಣಸಲಿವೆ. 1 ಗಂಟೆಗೆ 'ಎ' ಗುಂಪಿನ ಪಂದ್ಯದಲ್ಲಿ ಬಿಪಿಎಸ್‌ಎಸ್ ಮತ್ತು ರೊನಾಲ್ಡೊ ತಂಡಗಳು, 2 ಗಂಟೆಗೆ ನಡೆಯಲಿರುವ 'ಬಿ' ಗುಂಪಿನ ಪಂದ್ಯದಲ್ಲಿ ಬಿವೈಎಫ್‌ಎಲ್ ಮತ್ತು ಬೊಕ್ಕಾ ಅಕಾಡೆಮಿ ತಂಡಗಳು ಪೈಪೋಟಿ ನಡೆಸಲಿವೆ.



ವಾರಾಂತ್ಯದ ನಮ್ಮ ತಪ್ಪುಗಳು...!

ಸುಕೃತ ಎಸ್.

ವಾರವೆಲ್ಲಾ ಕೆಲಸ ಮಾಡಿ ಮಾಡಿ ಸುಸ್ತಾಗಿ, 'ದೇವರೆ ಯಾವಾಗ ವೀಕೆಂಡ್ ಬರುತ್ತಪ್ಪಾ' ಅಂತ ಕಾಯುತ್ತಾ ದಿನ ಕಳೆಯುವವರೇ ಹೆಚ್ಚು. ಈಗಂತೂ ವರ್ಕ್ ಫ್ರಂ ಹೋಮ್ ಇದೆ. ಹಾಗಂತ, ಶನಿವಾರ, ಭಾನುವಾರಕ್ಕೆ ಇರುವ ಬೇಡಿಕೆ ಏನೂ ಕಮ್ಮಿ ಆಗಿಲ್ಲ!

ವಾರದ ತಲೆಬಿಸಿಯನ್ನೆಲ್ಲಾ ಎರಡು ದಿನದಲ್ಲಿ ಕಳೆದುಕೊಳ್ಳುವ ತವಕ ಎಲ್ಲರದ್ದು. ಹೇಗೆ ಕಳೆದುಕೊಳ್ಳೋದು ಅಂದ್ರೆ, ರಾತ್ರಿ ತಡವಾಗಿ ಮಲಗಿ, ಬೆಳಿಗ್ಗೆ ತಡವಾಗಿ ಏಳೋದು. ಕೆಲವರಿಗೆ ಮನೆಯಲ್ಲೇ ದಿನ ಕಳೆಯೋದು ಇಷ್ಟ. ಕೆಲವರಿಗೆ ಹೊರಗೆ ಹೋಗೋದು ಇಷ್ಟ– ಹೀಗೆ ನಾನಾ ರೀತಿಯಲ್ಲಿ ವಾರದ ತಲೆನೋವನ್ನು ಕಡಮೆ ಮಾಡಿಕೊಳ್ಳೋದು ರೂಢಿ. ಆದರೆ, ಕೆಲವು ಅಧ್ಯಯನದ ಪ್ರಕಾರ ನಾವು ಅನುಸರಿಸುತ್ತಿರುವ ಈ ಕೆಲವು ನಡವಳಿಕೆ ನಮ್ಮ ಆರೋಗ್ಯಕ್ಕೆ ಹಾನಿ ಉಂಟು ಮಾಡುತ್ತವೆ. ಹಾಗಾದರೆ, ವೀಕೆಂಡ್ ದಿನಗಳಲ್ಲಿ ಅಥವಾ ನಮ್ಮ ರಜಾ ದಿನಗಳಲ್ಲಿ ಯಾವೆಲ್ಲಾ ಕೆಲವು ತಪ್ಪುಗಳನ್ನು ನಾವು ಮಾಡುತ್ತೇವೆ ಎಂದು ನೋಡೋಣ.

ತಪ್ಪುಗಳು

1 ತಡವಾಗಿ ಮಲಗೋದು, ತಡವಾಗಿ ಏಳೋದು– ನಾವು ಸಾಮಾನ್ಯವಾಗಿ ವೀಕೆಂಡ್‌ನಲ್ಲಿ ಮಾಡುವ ತಪ್ಪುಗಳು. ವಾರದ ಐದು ದಿನ ಒಂದು ರೀತಿಯಲ್ಲಿ ಮಲಗುವ–ಏಳುವ ರೂಢಿ. ಕೊನೆಯ ಎರಡು ದಿನ ಒಂದು ರೀತಿಯದ್ದಾದರೆ, ದೇಹಕ್ಕೆ ಬಹಳ ಆಯಾಸವಾಗುತ್ತದೆ ಮತ್ತು ನಿದ್ರಾಹೀನತೆ ಸಮಸ್ಯೆ ಕೂಡ ಕಾಡಬಹುದು ಎಂದು ಕೆಲವು ಅಧ್ಯಯನಗಳು ತಿಳಿಸಿವೆ.

'ದಿನಾ ಬೆಳಿಗ್ಗೆ ಒಂದೇ ಸಮಯಕ್ಕೆ ಏಳುವ ಅಭ್ಯಾಸ ರೂಢಿಸಿಕೊಂಡರೆ ನಮ್ಮ ದೇಹದ ಗಡಿಯಾರವು ಈ ಸಮಯಕ್ಕೆ ಹೊಂದಿಕೊಳ್ಳುತ್ತದೆ ಮತ್ತು ಇದರಿಂದ ರಾತ್ರಿ ಚೆನ್ನಾಗಿ ನಿದ್ದೆ ಬರುತ್ತದೆ' ಎನ್ನುತ್ತದೆ ಅಧ್ಯಯನವೊಂದು. ಆದ್ದರಿಂದ ರಜಾ ದಿನವೂ ನಾವು ಏಳುವ ಮತ್ತು ಮಲಗುವ ಸಮಯದಲ್ಲಿ ಬದಲಾವಣೆ ಮಾಡಬಾರದು.

2 ಕೆಲವರಿಗೆ ಬೆಳಿಗ್ಗೆ ಎದ್ದು ಕಾಫಿ ಕುಡಿಯುವ ಅಭ್ಯಾಸ ಇರುತ್ತದೆ. ಕೆಲವರು ವೀಕೆಂಡ್‌ನಲ್ಲಿ ಅಥವಾ ರಜಾ ದಿನಗಳಲ್ಲಿ ಈ ಅಭ್ಯಾಸವನ್ನು ಇಟ್ಟುಕೊಂಡಿರುತ್ತಾರೆ. ಇದೂ ಕೂಡ ನಮ್ಮ ಕೆಟ್ಟ ಅಭ್ಯಾಸಗಳಲ್ಲಿ ಒಂದು. ಬೆಳಿಗ್ಗೆ ಎದ್ದು ಚೆನ್ನಾಗಿ ನೀರು ಕುಡಿಯುವುದು ಒಳ್ಳೆಯ ಅಭ್ಯಾಸ. ನಮಗೆ ಬಾಯಾರಿಕೆ ಆಗಲಿ, ಆಗದೇ ಇರಲಿ, ಎದ್ದ ಕೂಡಲೇ ನೀರು ಕುಡಿಯಬೇಕು. ನೀರು ಕುಡಿಯುವುದಕ್ಕೆ ಬೇಸರ ಎಂದಾದರೆ, ನೀರಿನಲ್ಲಿ ಹಣ್ಣನ್ನು ನೆನೆಸಿಟ್ಟು ಎದ್ದ ಕೂಡಲೇ ಸೇವಿಸಬಹುದು.

3 ರಜಾ ದಿನ ಅಲ್ವಾ, ಏನೂ ಕೆಲಸ ಇಲ್ಲ. ತಡವಾಗಿ ಎದ್ದರೂ ಏನೂ ತೊಂದರೆ ಇಲ್ಲ– ಹೀಗೆಂದುಕೊಂಡೇ ರಜಾದ ಹಿಂದಿನ ರಾತ್ರಿ ಮಲಗುವವರೇ ಹೆಚ್ಚು; ಜವಾಬ್ದಾರಿ, ಚಿಂತೆ ಎಲ್ಲವನ್ನೂ ಬಿಟ್ಟು ಮಲಗುವುದು. ಇದೂ ಕೂಡ ತಪ್ಪು ಎನ್ನುತ್ತವೆ ಅಧ್ಯಯನಗಳು. ನಾಳೆ ಬೆಳಿಗ್ಗೆ ಎದ್ದು ಮಾಡುವ ಕೆಲಸ ಇರಲಿ, ಇಲ್ಲ ದಿರಲಿ; ದಿನಾ ಏಳುವ ಸಮಯಕ್ಕೆ ಎದ್ದು ಬಿಡಬೇಕು. ಕಚೇರಿ ಕೆಲಸ ಇಲ್ಲ, ಮಕ್ಕಳಿಗೆ ಹೇಗೂ ಶಾಲೆ ಇಲ್ಲ. ಆರಾಮಾಗಿ ಎದ್ದರಾಯಿತು ಎನ್ನುವ ಮನಃಸ್ಥಿತಿ ನಮ್ಮಲ್ಲಿ ಮೂಡಬಾರದು. ಕೆಲಸ ಇಲ್ಲವಾದರೆ, ವ್ಯಾಯಾಮಕ್ಕೋ, ನಡಿಗೆಗೋ ಸಮಯವನ್ನು ಮೀಸಲಿಡಿ. ಆದರೆ, ಏನೂ ಕೆಲಸವಿಲ್ಲ ಎಂದು ಬೆಳಿಗ್ಗೆ ಬೇಗ ಏಳದಿರುವುದು ಆರೋಗ್ಯಕ್ಕೆ ಒಳ್ಳೆಯದಲ್ಲ ಎನ್ನುತ್ತಾರೆ ವೈದ್ಯರು.

4 ಅದು ಕಚೇರಿ ಕೆಲಸದ ದಿನವಾಗಿರಲಿ, ರಜಾ ದಿನವಾಗಿರಲಿ ನಾವು ಸದಾ ಚಟುವಟಿಕೆಯಿಂದ ಇರಬೇಕು. ಮುಂದಿನ ವಾರ ಮಾಡಬೇಕಾಗಿರುವ ಕೆಲಸಗಳ ಬಗ್ಗೆ ಚಿಂತನೆ, ಅದಕ್ಕೆ ತಯಾರಿ ಮಾಡಿಕೊಳ್ಳಬೇಕು. ಹಾಗೆ ಮಾಡಿಕೊಳ್ಳುವುದರಿಂದ ಕಚೇರಿ ದಿನದಲ್ಲಿ ಒತ್ತಡದಿಂದ ಇರುವುದು ತಪ್ಪುತ್ತದೆ. ಕೆಲಸಗಳನ್ನು ವಾರ ಪೂರ್ತಿ ಹಂಚಿಕೊಂಡು ಮಾಡಿಕೊಳ್ಳುವುದರಿಂದ ಕೆಲವೇ ದಿನಕ್ಕೆ ಒತ್ತಡ ಆಗುವುದೂ ತಪ್ಪುತ್ತದೆ.

5 ಮೊದಲೇ ಹೇಳಿದ ಹಾಗೆ, ರಜಾ ದಿನವಾದರೆ ಸಾಕು ಕೆಲವರಿಗೆ ದಿನ ಇಡೀ ನಿದ್ದೆ ಮಾಡಿಯೇ ಮುಗಿಯುವುದಿಲ್ಲ. ಬದುಕು ಒಂದು ರೀತಿ ಸ್ತಬ್ಧವಾದಂತೆ. ಮನೆ ಒಳಗೇ ಇದ್ದು ಕಳೆದು ಬಿಡುತ್ತಾರೆ. ಆದರೆ, ಹೀಗೆ ಮಾಡುವುದುರಿಂದ ಸೂರ್ಯನ ಕಿರಣಗಳು ನಮ್ಮ ಮೈ ತಾಕದಂತೆ ಆಗುತ್ತದೆ. ಹೊಸ ಗಾಳಿ ದೊರೆಯುವುದಿಲ್ಲ. ಬೆಳಗಿನ ಸೂರ್ಯನ ಕಿರಣಗಳು ರಾತ್ರಿಗೆ ಒಳ್ಳೆಯ ನಿದ್ದೆಗೆ ಸಹಾಯಕ ಎಂದು ಕೆಲವು ಅಧ್ಯಯನಗಳು ಹೇಳಿವೆ. ಆದ್ದರಿಂದ, ರಜೆ ಎಂದು ಮನೆಯ ಒಳಗೇ ಕೂರುವುದಕ್ಕಿಂತ ಮನೆಯಿಂದ ಹೊರಬಂದು ಗಾಳಿ– ಬೆಳಕಿಗೆ ಮೈವೊಡ್ಡಬೇಕು ಎನ್ನುತ್ತಾರೆ ವೈದ್ಯರು. ❖

ಗಣೇಶನ ಹಬ್ಬಕ್ಕೆ ಡಯಟ್ ಸಿಹಿ

ಗೋಪಿ

ರೆಸಿಪಿ

ಹಬ್ಬವೆಂದರೆ ಸಿಹಿಯೂಟವಿಲ್ಲದಿದ್ದರೆ ಅದರ ಸಡಗರವೇ ಗೌಣವಾದಂತೆ. ಆರೋಗ್ಯವಂತರೇನೋ ಚೆನ್ನಾಗಿ ಸಿಹಿ ಖಾದ್ಯಗಳನ್ನು ತಿಂದು ಸಂತೃಪ್ತಿಯಿಂದ ತೇಗಬಹುದು. ಆದರೆ ಮಧುಮೇಹಿಗಳು? ಈಗಂತೂ ಬಹಳಷ್ಟು ಮಂದಿ ಮಧುಮೇಹದಿಂದ ಬಳಲುತ್ತಿದ್ದು, ಹಬ್ಬದ ಸಂದರ್ಭದಲ್ಲಿ ಜಿಹ್ವಾ ಚಾಪಲ್ಯವನ್ನು ತಡೆದುಕೊಳ್ಳುವುದು ಸುಲಭವಲ್ಲ. ಕಣ್ಣುಗಳು ಸಿಹಿ ಭಕ್ಷ್ಯಗಳ ರಾಶಿಯನ್ನು ನೋಡುತ್ತಿದ್ದರೆ, ನಾಲಿಗೆ ಹೇಗೆ ತಾನೇ ಕಡಿವಾಣ ಹಾಕಿಕೊಳ್ಳುತ್ತದೆ?

ಮಧುಮೇಹಿಗಳು ಸಿಹಿ ತಿಂಡಿ ಸೇವಿಸುವುದನ್ನು ನಿಯಂತ್ರಿಸಿಕೊಳ್ಳುವುದು, ಕ್ಯಾಲರಿ ಮೇಲೆ ನಿಗಾ ವಹಿಸುವುದು, ಕಾರ್ಬೊಹೈಡ್ರೇಟ್ ಲೆಕ್ಕ ಹಾಕುವುದೇನೋ ಸರಿ, ಆದರೆ ಅಪರೂಪಕ್ಕೆ, ಇಂತಹ ಹಬ್ಬದ ಸಂದರ್ಭದಲ್ಲಿ ಕಡಿಮೆ ಪ್ರಮಾಣದಲ್ಲಿ ಸಿಹಿ ಸೇವಿಸಬಹುದು. ಆದರೆ ಸಕ್ಕರೆ, ಜೇನುತುಪ್ಪ, ಹಣ್ಣಿನ ಸಕ್ಕರೆ, ಕಾರ್ನ್ ಸಿರಪ್ ಬೆರೆತ ಭಕ್ಷ್ಯವಲ್ಲ, ರಕ್ತದಲ್ಲಿ ಸಕ್ಕರೆ ಪ್ರಮಾಣದ ಮೇಲೆ ಕಣ್ಗಾವಲು ಇಡುವಂತಹ ಸಂಕೀರ್ಣ ಕಾರ್ಬೊಹೈಡ್ರೇಟ್ಸ್ ತಿನ್ನಬಹುದು. ಈಗಂತೂ ಅಂಗಡಿಗಳಲ್ಲಿ ಕಡಿಮೆ ಸಕ್ಕರೆ ಇರುವ ಅಥವಾ ಕೃತಕ ಸಿಹಿ ಸೇರಿಸಿದ ಸಿಹಿ ಖಾದ್ಯ ಲಭ್ಯ. ಆದರೆ ಮನೆಯಲ್ಲೇ ಆರೋಗ್ಯಕರ ಸಿಹಿ ಭಕ್ಷ್ಯಗಳನ್ನು ನಿಮಗೆ ಬೇಕಾದಂತೆ ತಯಾರಿಸಿಕೊಳ್ಳುವುದು ಸೂಕ್ತ.

ಓಟ್ಸ್– ಸೇಬು ಫಿರ್ನಿ

ಬೇಕಾಗುವ ಸಾಮಗ್ರಿ: ತರಿತರಿಯಾಗಿ ಪುಡಿ ಮಾಡಿದ ಓಟ್ಸ್– ಮುಕ್ಕಾಲು ಕಪ್, ತುರಿದ ಸೇಬು– ಮುಕ್ಕಾಲು ಕಪ್, ಕಡಿಮೆ ಕೊಬ್ಬಿನ ಹಾಲು– 3 ಕಪ್, ಸ್ಟೀವಿಯ ಅಥವಾ ಬೆಲ್ಲ– 2 ಟೀ ಚಮಚ.

ಮಾಡುವ ವಿಧಾನ: ಹಾಲನ್ನು ದಪ್ಪ ತಳದ ಪಾತ್ರೆಯಲ್ಲಿ ಚೆನ್ನಾಗಿ ಕಾಯಿಸಿ. ಇದಕ್ಕೆ ಓಟ್ಸ್ ಹಾಕಿ ಮಧ್ಯಮ ಉರಿಯಲ್ಲಿ ಎರಡು ನಿಮಿಷ ಬೇಯಿಸಿ. ಚೆನ್ನಾಗಿ ತಿರುವುತ್ತ ಇರಿ. ಸ್ಟವ್‌ನಿಂದ ಇಳಿಸಿ ಸಿಹಿಯನ್ನು ಸೇರಿಸಿ ತಣ್ಣಗಾಗಲು ಬಿಡಿ. ನಂತರ ಸೇಬಿನ ತುರಿ ಸೇರಿಸಿ ಫ್ರೀಜರ್‌ನಲ್ಲಿ ಅರ್ಧ ತಾಸು ಇಡಿ. ತಣ್ಣಗಿನ ರುಚಿಕರ ಫಿರ್ನಿ ಸವಿಯಲು ಸಿದ್ಧ.



ಸೋರೆಕಾಯಿ ಹಲ್ವ

ಬೇಕಾಗುವ ಸಾಮಗ್ರಿ: ತುರಿದ ಸೋರೆಕಾಯಿ– ಎರಡೂವರೆ ಕಪ್, ಕಡಿಮೆ ಕೊಬ್ಬಿರುವ ಹಾಲು– ಒಂದೂವರೆ ಕಪ್, ತುಪ್ಪ– ಒಂದು ಟೀ ಚಮಚ, ಏಲಕ್ಕಿ ಪುಡಿ– ಅರ್ಧ ಚಮಚ, ಸ್ಟೀವಿಯ ಅಥವಾ ಬೆಲ್ಲ– 2 ಚಮಚ.

ಮಾಡುವ ವಿಧಾನ: ದಪ್ಪ ತಳದ ಪಾತ್ರೆಯಲ್ಲಿ ಒಂದು ಚಮಚ ತುಪ್ಪ ಹಾಕಿ ಬಿಸಿಯಾದ ನಂತರ ತುರಿದ ಸೋರೆಕಾಯಿ ಹಾಕಿ ಮುಚ್ಚಳ ಮುಚ್ಚಿ 5–6 ನಿಮಿಷ ಸಣ್ಣ ಉರಿಯಲ್ಲಿ ಬೇಯಿಸಿ. ಆಗಾಗ ಸೌಟಿನಿಂದ ತಿರುವಿ. ಇದಕ್ಕೆ ಹಾಲು ಹಾಗೂ ಏಲಕ್ಕಿ ಪುಡಿ ಹಾಕಿ 15 ನಿಮಿಷಗಳ ಕಾಲ ಚೆನ್ನಾಗಿ ಬೇಯಿಸಿ. ಕೊನೆಯಲ್ಲಿ ಸ್ಟೀವಿಯ ಹಾಕಿ ತಿನ್ನಲು ಕೊಡಿ. ಒಂದು ಕಪ್ ಹಲ್ವದಲ್ಲಿ ಇರುವ ಕಾರ್ಬೊಹೈಡ್ರೇಟ್ ಪ್ರಮಾಣ ಶೇ 5ರಷ್ಟು.

ಪನೀರ್ ಖೀರ್

ಬೇಕಾಗುವ ಸಾಮಗ್ರಿ: ಕಡಿಮೆ ಕೊಬ್ಬಿರುವ ಹಾಲು– 3 ಕಪ್, ತುರಿದ ಕಾಟೇಜ್ ಪನೀರ್– 1 ಕಪ್, ಸ್ಟೀವಿಯ (ಕಡಿಮೆ ಕ್ಯಾಲರಿಯಿರುವ ನೈಸರ್ಗಿಕ ಸಿಹಿ)– 2 ಟೀ ಚಮಚ, ಏಲಕ್ಕಿ ಪುಡಿ– ಕಾಲು ಟೀ ಚಮಚ.

ಮಾಡುವ ವಿಧಾನ: ಹಾಲನ್ನು ಅಗಲವಾದ ಪಾತ್ರೆಯಲ್ಲಿ ಕುದಿಸಿ ತಣ್ಣಗಾಗಲು ಬಿಡಿ. ತಣ್ಣಗಾದ ನಂತರ ಸ್ಟೀವಿಯ ಮತ್ತು ಏಲಕ್ಕಿ ಪುಡಿ ಮಿಶ್ರ ಮಾಡಿ. ಇದಕ್ಕೆ ಪನೀರ್ ತುಂಡು ಹಾಕಿ ಫ್ರಿಜ್‌ನಲ್ಲಿ ಒಂದು ತಾಸು ಇಟ್ಟು ಸೇವಿಸಿ. ಇದರಲ್ಲಿ ಕಾರ್ಬೊಹೈಡ್ರೇಟ್ ಕೇವಲ ಶೇ 6ರಷ್ಟಿರುತ್ತದೆ. ❖

ಮನೆಯಿಂದಲೇ ಕಚೇರಿ ಕೆಲಸ ಬಾಡದಿರಲಿ ಸೌಂದರ್ಯ

ಸೌಂದರ್ಯ

ಕೋವಿಡ್ ಶುರುವಾದಾಗಿನಿಂದ ಬಹುತೇಕರು ತಮ್ಮ ಸೌಂದರ್ಯದ ಕಾಳಜಿ ಮಾಡುವುದನ್ನು ನಿಲ್ಲಿಸಿದ್ದಾರೆ. ಮನೆಯಿಂದಲೇ ಕಚೇರಿ ಕೆಲಸ ಮಾಡುವುದು ಇನ್ನೇಕೆ ಕ್ರೀಮ್, ಪೌಡರ್ ಬಳಕೆ ಎಂದುಕೊಂಡು ಸುಮ್ಮನಾಗುವವರು ಇದ್ದಾರೆ. ಈ ರೀತಿಯ ಆಲಸ್ಯದಿಂದ ಸೌಂದರ್ಯ ಕೆಡಿಸಿಕೊಳ್ಳುತ್ತಿದ್ದಾರೆ. ಬ್ಯೂಟಿಪಾರ್ಲರ್‌ಗೂ ಹೋಗದೆ, ಮನೆಯಲ್ಲೂ ಕಾಳಜಿ ಮಾಡದೆ ಇರುವುದರಿಂದ ತ್ವಚೆಯ ಕಾಂತಿ ಕುಂದುವುದರೊಂದಿಗೆ ಕಲೆ, ಟ್ಯಾನ್, ಮೊಡವೆಯಂತಹ ಸಮಸ್ಯೆಗಳೂ ಹೆಚ್ಚುತ್ತಿವೆ.

ಕ್ರೀಮ್ ಹಚ್ಚಿ: ಕಚೇರಿಗೆ ಹೋಗುವಾಗ ಯಾವ ರೀತಿ ತ್ವಚೆಯ ಬಗ್ಗೆ ಆಸ್ಥೆ ವಹಿಸಿ ತಯಾರಾಗುತ್ತಿದ್ದಿರೋ ಮನೆಯಲ್ಲೂ ಹಾಗೇ ತಯಾರಾಗಿ. ಪ್ರತಿದಿನ ತಪ್ಪದೇ ಫೇಸ್‌ಕ್ರೀಮ್ ಹಚ್ಚಿಕೊಳ್ಳಿ. ಆಯಾಯ ಋತುಮಾನಕ್ಕೆ ಹೊಂದುವಂತಹ ಕ್ರೀಮ್ ಬಳಸುವುದು ಅಗತ್ಯ.

ಸಾಕಷ್ಟು ನೀರು ಕುಡಿಯಿರಿ: ಬೇಸಿಗೆ, ಮಳೆಗಾಲ, ಚಳಿಗಾಲ ಹೀಗೆ ಯಾವುದೇ ಇರಲಿ, ಎಲ್ಲ ಕಾಲದಲ್ಲೂ ಸಾಕಷ್ಟು ನೀರು ಕುಡಿಯಿರಿ. ಇದರಿಂದ ಚರ್ಮದ ಕಾಂತಿ ಹೆಚ್ಚುತ್ತದೆ. ನೀರು ಚರ್ಮದ ಆರೋಗ್ಯಕ್ಕೆ ಉತ್ತಮ ಮದ್ದು.

ಆಗಾಗ ಮುಖ ತೊಳೆಯಿರಿ: ಹೊರಗೆಲ್ಲೂ ಹೋಗುತ್ತಿಲ್ಲ ಮನೆಯೊಳಗೇ ಇದ್ದೇವೆ, ದೂಳು– ಹೊಗೆ ತಾಕುತ್ತಿಲ್ಲ ಎಂಬ ಕಾರಣಕ್ಕೆ ಯಾವಾಗಲೋ ಒಮ್ಮೆ ಮುಖ ತೊಳೆಯುವುದು ಸರಿಯಲ್ಲ. ಪ್ರತಿದಿನ ಫೇಸ್‌ವಾಷ್ ಅಥವಾ ಸೋಪ್‌ನಿಂದ ಎರಡು ಬಾರಿ ಮುಖ ತೊಳೆದುಕೊಳ್ಳಿ. ತಣ್ಣೀರಿನಿಂದ ಮುಖ ತೊಳೆಯುವುದು ಉತ್ತಮ. ಹೆಚ್ಚು ರಾಸಾಯನಿಕವಲ್ಲದ ಫೇಸ್‌ಕ್ರೀಮ್ ಬಳಸಿ. ನೀಡಿ. ❖

ಜಾಹೀರಾತು

ಆರ್ಥ್ರೈಟಿಸ್ / ಸಂಧಿವಾತ

ಡಾ|| ಶ್ರೀಕಾಂತ್ ಮೋರ್ಲಾವರ್
ಸಿಎಂಡಿ, ಹೋಮಿಯೋಕೇರ್ ಇಂಟರ್‌ನ್ಯಾಷನಲ್

ಆರ್ಥ್ರೈಟಿಸ್ ಸಾಮಾನ್ಯವಾಗಿ 40 ರಿಂದ 50 ವಯಸ್ಸು ಮೇಲ್ಪಟ್ಟವರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.ಪ್ರಸ್ತುತ ಸಂದರ್ಭದ ಜೀವನ ಶೈಲಿಯಿಂದಾಗಿ ಇದು ಚಿಕ್ಕವಯಸ್ಸಿನವರಲ್ಲಿಯೂ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಇದು ಸಾಮನ್ಯವಾಗಿ ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರಲ್ಲಿ ಕಾಣಿಸಿಕೊಳ್ಳುತ್ತಿದೆ.ಮೂಲತಃ ಇದು ಕೀಲುಗಳಿಗೆ ಸಂಬಂಧಪಟ್ಟ ಸಮಸ್ಯೆಯಾಗಿದೆ.ಈ ಸಮಸ್ಯೆಯಲ್ಲಿ ಮೂಳೆಗಳಲ್ಲಿನ ಕಾರ್ಟಿಲೀಜ್ ಗಳು ಕ್ಷೀಣಗೊಳ್ಳುತ್ತವೆ ಹಾಗೆಯೇ ಮೂಳೆಗಳ ಸವೆತ ಉಂಟಾಗುತ್ತದೆ, ಇದರಿಂದ ಆಸ್ಟಿಯೋಫೈಟ್ ನಂತಹ ರಚನೆಗಳು ಬದಲಾವಣೆಗೆ ಒಳಗಾಗುತ್ತವೆ ಇದರ ಪರಿಣಾಮವಾಗಿ ಸೈನೋವಿಯಲ್ ದ್ರವ ಆಂಶಿಕವಾಗಿ ಕಡಿಮೆಯಾಗುವುದನ್ನು ನಾವು ನೋಡಬಹುದು. ಇದರಿಂದ ಮೂಳೆಗಳ ಉಜ್ಜುವಿಕೆ ಮತ್ತು ಸವೆತ ಕಾಣಿಸಿಕೊಳ್ಳಬಹುದು.
ಇದು ಹೆಚ್ಚಾಗಿ ಭಾರ ಬೀಳುವಂತಹ ಮಂಡಿಗಳಲ್ಲಿ ಕಾಣಬರುತ್ತದೆ.

ಕಾರಣಗಳು:–
1. ಮೊದಲನೆಯಾಗಿ ಅತಿಯಾದ ತೂಕ (ಬೊಜ್ಜು) ಆಸ್ಟಿಯೋ ಆರ್ಥ್ರೈಟಿಸ್ ಗೆ ಕಾರಣವಾಗುತ್ತದೆ.
2. ಹೆಚ್ಚಿನ ಸಮಯ ನಿಂತು ಕೆಲಸ ನಿರ್ವಹಿಸುವುದು ನಿರಂತರ ಮೆಟ್ಟಿಲುಗಳನ್ನು ಹತ್ತುವುದು ಇತ್ಯಾದಿ.
3. ಗಂಟುಗಳಿಗೆ ಮತ್ತು ಮೂಳೆಗಳ ಸಂಧಿಗಳಿಗೆ ಏಟಾಗುವುದು ಅಪಘಾತದಂತಹ ಕಾರಣಗಳಿಂದ ಸಂಧಿವಾತ ಉಂಟಾಗಬಹುದು.
4. ಅನುವಂಶಿಕವಾಗಿ ಈ ಸಮಸ್ಯೆ ಕಾಣಿಸಿಕೊಳ್ಳಬಹುದು.
5. ಅಲ್ಲದೆ, ಬ್ಯಾಕ್ಟೀರಿಯಾಗಳಿಂದ ಮತ್ತು ಇತರೆ ಸೋಂಕುಗಳಿಂದ ಇದು ಕಾಣಿಸಿಕೊಳ್ಳಬಹುದು
5. ಸ್ತ್ರೀಯರಲ್ಲಿ ಮುಟ್ಟು ನಿಂತ ನಂತರದಲ್ಲಿ ಕ್ಯಾಲ್ಸಿಯಂ ಕೊರತೆಯಿಂದ ಈ ಬದಲಾವಣೆ ಕಾರಣವಾಗಬಹುದು.
6. ಸಾಮನ್ಯವಾಗಿ 40 ವರ್ಷ ಮೇಲ್ಪಟ್ಟವರಲ್ಲಿ ವಯಸ್ಸು ಹೆಚ್ಚಾಗುತ್ತಿದಂತೆ ಬದಲಾವಣೆಗಳು ಕೂಡ ಹೆಚ್ಚಾಗುವುದನ್ನು ಕಾಣಬಹುದು.

ಲಕ್ಷಣಗಳು:
- ಸಾಮಾನ್ಯವಾಗಿ ಕೀಲುಗಳಲ್ಲಿ ನೋವು ಊತ ಅಥವಾ ಉರಿ ಕಾಣಿಸಿಕೊಳ್ಳಬಹುದು ಹಾಗೆಯೇ ಮೊಣಕಾಲು ಮೊಣಕೈ ಮಣಿಕಟ್ಟುಗಳಲ್ಲಿ ಮಣಿ ಕಟ್ಟು ನೋವು ಕೂಡ ಕಾಣಿಸಿಕೊಳ್ಳಬಹುದು.
- ಸಂಧಿಗಳು ಕೆಂಪಾಗುವುದು, ಊತ ಕಾಣಿಸಿಕೊಳ್ಳುವುದು ಏಳಲು ಮತ್ತು ಕೂರಲು ಕಷ್ಟವಾಗುವುದು.
- ನಿಲ್ಲುವಾಗ ನಡೆಯುವಾಗ ನೋವು ಕಾಣಿಸಿಕೊಳ್ಳುವುದು, ಕೈ ಕಾಲುಗಳಿಗೆ ಜೋಮು ಹಿಡಿಯುವುದು.
- ಕಾಲುಗಳಲ್ಲಿ ಮರಗಟ್ಟುವಿಕೆ ಹಾಗೂ ಸಂವೇದನಾ ಶೀಲತೆಯಲ್ಲಿ ಬದಲಾವಣೆಗಳು.
- ನಡೆಯುವಾಗ ಕೀಲುಗಳಲ್ಲಿ ಶಬ್ದ ಉಂಟಾಗುವುದು.
- ನಮ್ಮ ದೇಶದಲ್ಲಿ ಸುಮಾರು ಒಂದು ಮಿಲಿಯನ್ ಗಿಂತ ಹೆಚ್ಚಿನ ಜನರು ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ.

ಪರೀಕ್ಷೆಗಳು :
- ನಾವು ಎಕ್ಸ್ ರೇ ಮುಖಾಂತರ ಸಂಧಿವಾತವನ್ನು ಪತ್ತೆ ಹಚ್ಚಬಹುದು ಹಾಗೆಯೇ ಆಗಿರುವ ಬದಲಾವಣೆಗಳು ಯಾವ ಅಂತದಲ್ಲಿವೆ ಎಂದು ತಿಳಿದುಕೊಳ್ಳಬಹುದು.
- X-ray ಕಾರ್ಟಿಲೀಜ್ ಗಳ ಮೂಳೆಗಳಲ್ಲಿನ ಬದಲಾವಣೆ ತಿಳಿಯಲು ಸಹಕಾರಿಯಾಗಿದೆ.
- MRI ವಿವರವಾಗಿ ಆಗಿರುವ ಬದಲಾವಣೆ ತಿಳಿಯಲು ಸಹಾಯಮಾಡುತ್ತದೆ.

ಇದರ ಜೊತೆಗೆ ಕೆಲವೊಂದು ರಕ್ತ ಪರೀಕ್ಷೆಯ ಮುಖಾಂತರ ಕೂಡ ಬದಲಾವಣೆಗಳನ್ನು ತಿಳಿಯಬಹುದು.

ಪರಿಣಾಮಗಳು:
ಇದು ಸಂಧಿಗಳ ಗಂಟುಗಳಲ್ಲಿ ಬಿಗಿತ ಉಂಟುಮಾಡಬಹುದು ಮತ್ತು ನಡೆದಾಡಲು ತೊಂದರೆ ಕೊಡಬಹುದು.
ಗಂಟುಗಳಲ್ಲಿ ತೀವ್ರತರದ ನೋವು ಉಂಟಾಗಬಹುದು ಮತ್ತು ವ್ಯಕ್ತಿಯ ಚಲನೆಗೆ ತೊಡಕು ಉಂಟಾಗಬಹುದು.

ಮುಂಜಾಗ್ರತಾ ಕ್ರಮಗಳು /ಪಾಲಿಸಬೇಕಾದ ಅಂಶಗಳು.:
- ದಿನನಿತ್ಯ ವ್ಯಾಯಾಮ ಮಾಡುವುದು ಮತ್ತು ಸವೆತ ಆಗುತ್ತಿರುವ ಸಂಧಿಗಳಿಗೆ ಹೆಚ್ಚಿನ ಭಾರ ಅಥವಾ ಒತ್ತಡ ಬೀಳದಂತೆ ನೋಡಿಕೊಳ್ಳುವುದು.
- ದೇಹದ ತೂಕ ನಿಯಂತ್ರಣ ಅತೀ ತೂಕ ಅಥವಾ ಬೊಜ್ಜು ಇದ್ದವರು ದೇಹದ ತೂಕ ಕಡಿಮೆ ಮಾಡಿಕೊಳ್ಳುವುದು.
- ಆಹಾರ ಸೇವನೆ: ಉತ್ತಮ ಪೌಷ್ಟಿಕಾಂಶಯುಕ್ತ ಆಹಾರದ ಸೇವನೆ ಹಾಗು ಕ್ಯಾಲ್ಸಿಯಂ ಅಧಿಕವಾಗಿರುವ ಆಹಾರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವಿಸುವುದು.
- ಧೂಮಪಾನ ಮಧ್ಯಪಾನ ತ್ಯಜಿಸುವುದು
- ಮಾನಸಿಕ ಒತ್ತಡಗಳಿಂದ ದೂರವಿರುವುದು

ಹೋಮಿಯೋಕೇರ್ ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

- ನಿಯಮಿತವಾಗಿ ತಪಾಸಣೆಗೆ ಒಳಪಡುವುದು ಹಾಗೂ ಸೂಕ್ತ ಸಮಯಕ್ಕೆ ಚಿಕಿತ್ಸೆ ಪಡೆದುಕೊಳ್ಳುವುದು.
- ಕೀಲುಗಳಿಗೆ ಹೆಚ್ಚಿನ ಭಾರ ಬೀಳದಂತೆ ನೋಡುವುದು.
- ನಾರಿನಾಂಶ ಇರುವ ಆಹಾರ ಬಳಕೆ ನೀರನ್ನು ಸರಿಯಾದ ಪ್ರಮಾಣದಲ್ಲಿ ಕುಡಿಯುವುದು.
- ವಿಪರೀತ ದೈಹಿಕ ಚಟುವಟಿಕೆಗಳನ್ನು ತ್ಯಜಿಸುವುದು
- ಮಂಡಿ–ಕ್ಯಾಪ್ ಇತ್ಯಾದಿ ವಸ್ತುಗಳನ್ನು ಅಗತ್ಯವಿದ್ದಲ್ಲಿ ಬಳಸುವುದು.

ರುಮೇಟಾಯ್ಡ್ ಆರ್ಥ್ರೈಟಿಸ್:
ಅನಾರೋಗ್ಯಕರ ಜೀವನ ಶೈಲಿಯಲ್ಲಿ ಯೌವನಾವಸ್ಥೆಯಲ್ಲಿ ಕೀಲು ಮತ್ತು ಸಂಧಿಗಳಿಗೆ ಸಮಸ್ಯೆ ನೀಡಬಹುದು.ನಮ್ಮ ದೇಶದಲ್ಲಿ ಒಟ್ಟು ಜನಸಂಖ್ಯೆಯ ಶೇ.15% ಜನರು ಸಂಧಿವಾತದಿಂದ ಬಳಲುತ್ತಿದ್ದಾರೆ. ಸಂಧಿವಾತದಿಂದ ಬಳಲುತ್ತಿರುವ ಹದಿ ವಯಸ್ಸಿನವರು ನಿರಾಶಾಭಾವನೆಯನ್ನು ಮತ್ತು ಏಕಾಂಗಿತನವನ್ನು ಅನುಭವಿಸುತ್ತಿರುತ್ತಾರೆ ಈ ರೀತಿಯಲ್ಲಿ ಹದಿಹರೆಯದವರಲ್ಲಿ ಮತ್ತು ಮಧ್ಯವಯಸ್ಕರಲ್ಲಿ ಕಂಡುಬರುವ ಸಂಧಿವಾತವನ್ನು ರುಮೇಟಾಯ್ಡ್ ಆರ್ಥ್ರೈಟಿಸ್ ಎನುತ್ತಾರೆ.
ಇದು ಒಂದು ಆಟೋ ಇಮ್ಯೂನ್ ಸಮಸ್ಯೆಯಾಗಿದೆ ಸಾಮಾನ್ಯವಾಗಿ ಇದು ದುರ್ಬಲ ಜೀನ್ ಗಳನ್ನು ಹೊಂದಿರುವವರಲ್ಲಿ ಕಂಡು ಬರುತ್ತದೆ. ಕೆಲವೊಮ್ಮೆ ಇದು ಬ್ಯಾಕ್ಟೀರಿಯಾ ಅಥವಾ ವೈರಸ್ ಗಳ ಸೋಂಕಿನಿಂದ ಹೆಚ್ಚಾಗಬಹುದು.ಇವರಲ್ಲಿ ರೋಗನಿರೋಧಕ ವ್ಯವಸ್ಥೆಯು ಕೀಲುಗಳನ್ನು ರಕ್ಷಿಸುವ ಬದಲಾಗಿ,ಅಸಮರ್ಕವಾಗಿ ಕಾರ್ಯನಿರ್ವಹಿಸಬಹುದು. ಇದರಿಂದಾಗಿ ಕೀಲುಗಳಲ್ಲಿ ಊತ ಮತ್ತು ನೋವು ಕಾಣಿಸಿಕೊಳ್ಳುತ್ತದೆ.

ಕಾರಣಗಳು.
- ಬದಲಾದ ಜೀವನ ಶೈಲಿ ಆಹಾರದ ಅಸಮರ್ಪಕ ಸೇವನೆ, ವ್ಯಾಯಾಮ ಇಲ್ಲದಿರುವಿಕೆ ಧೀರ್ಘಕಾಲ ಕಂಪ್ಯೂಟರ್ ಮುಂದೆ ಕಾರ್ಯ ನಿರ್ವಹಣೆ ಇತ್ಯಾದಿ.
- ಇತರೇ ಕಾರಣಗಳೆಂದರೆ ಅಸಮತೋಲಿತ ಆಹಾರ ಪದ್ಧತಿ ಮಾಲಿನ್ಯಕರ ವಾತಾವರಣ ಅಧಿಕ ಮಾನಸಿಕ ಒತ್ತಡ .
- ಇದು ಸಾಮಾನ್ಯವಾಗಿ ಮಹಿಳೆಯರಲ್ಲಿ ಕಾಣಿಸಿಕೊಳ್ಳುತ್ತದೆ.
- ಯಾವ ವಯಸ್ಸಿನಲ್ಲೂ ಕಾಣಿಸಿಕೊಳ್ಳಬಹುದು ಸಾಮಾನ್ಯವಾಗಿ ಮಧ್ಯವಯಸ್ಸಿನವರಲ್ಲಿ ಕಂಡು ಬರುತ್ತದೆ.
- ಅನುವಂಶೀಯ ಕಾರಣಗಳು ಕೂಡ ಸಂಧಿವಾತಕ್ಕೆ ಕಾರಣವಾಗುತ್ತದೆ.
- ಧೂಮಪಾನ, ಹಾಗೂ ಮದ್ಯಪಾನದಂತಹ ಅಭ್ಯಾಸಗಳು ಕೂಡ ಸಂಧಿವಾತಕ್ಕೆ ಕಾರಣ.
- ವಾತಾವರಣದ ಕಾರಣಗಳು : ಕಲುಷಿತ ಗಾಳಿ ನೀರು ಆಹಾರ, ಜಂಕ್ ಫುಡ್ ಇತ್ಯಾದಿ.
- ಬೊಜ್ಜು ಅನಿಯಂತ್ರಿತ ದೇಹದ ತೂಕ.
- ಇತರ ಧೀರ್ಘಕಾಲಿನ ಅರೋಗ್ಯ ಸಮಸ್ಯೆಗಳು
- ಕಡಿಮೆಯಾಗುತ್ತಿರುವ ಮತ್ತು ಕುಂದುತ್ತಿರುವ ದೈಹಿಕ ಸಾಮರ್ಥ್ಯ.
- ವೈರಸ್ ಮತ್ತು ಬ್ಯಾಕ್ಟೀರಿಯಾ ಸೋಂಕುಗಳು.
- ಧೀರ್ಘಕಾಲ ಒಂದೇ ಭಂಗಿಯಲ್ಲಿ ಕೆಲಸ ಮಾಡುವುದು. ಭಾರ ಎತ್ತುವುದು
- ಪೋಷಕಾಂಶಗಳ ಕೊರತೆ.

ಲಕ್ಷಣಗಳು.
- ಕೀಲುಗಳಲ್ಲಿ ಊತ ನೋವು ಬಿಸಿಯ ಅನುಭವ ಉಂಟಾಗಬಹುದು ಇತ್ಯಾದಿ.
- ಮುಂಜಾನೆ ಎದ್ದ ತಕ್ಷಣ ನಡೆಯುವುದಕ್ಕೆ ಕಷ್ಟವಾಗುವುದು, ಮೂಳೆ ಕೀಲುಗಳ ಬಿಗಿತ ಕಾಣಿಸುವುದು.
- ಸುಸ್ತಾಗುವಿಕೆ, ಹಸಿವೆ ಇಲ್ಲದಿರುವುದು
- ಜ್ವರ ಕಾಣಿಸಿಕೊಳ್ಳುವುದು.
- ಬೆರಳುಗಳು ಸೊಟ್ಟಗಾಗುವುದು ಇತ್ಯಾದಿ.

ಪರಿಣಾಮಗಳು:
- ಒಸ್ಟಿಯೋ ಪೋರೋಸಿಸ್ ನಂತಹ ಬದಲಾವಣೆಗಳು ಕಾಣಿಸುತ್ತವೆ ಮತ್ತು ಮೂಳೆಗಳ ಸಾಂದ್ರತೆ ಕಡಿಮೆಯಾಗುತ್ತಾ ಮೂಳೆ ದುರ್ಬಲವಾಗುತ್ತದೆ.
- ಕಣ್ಣು ಬಾಯಿ ಒಣಗುವಿಕೆ ಕಾಣಿಸಿಕೊಳ್ಳಬಹುದು.

ಮುನ್ನೆಚ್ಚರಿಕೆ ಅಂಶಗಳು:
- ತೂಕವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು.
- ನಿಯಮಿತ ಪ್ರಮಾಣದಲ್ಲಿ ನೀರು ಕುಡಿಯುವುದು.
- ಸಮತೋಲನ ಆಹಾರ ಸೇವನೆ / ವಿಟಮಿನ್ ಸಿ ಇ ಕ್ಯಾಲ್ಸಿಯಂ ಸಮೃದ್ಧ ಆಹಾರ ಸೇವಿಸುವುದು.
- ನಿಯಮಿತ ವ್ಯಾಯಾಮ, ಶಾರೀರಿಕ ಚಟುವಟಿಕೆ.
- ಮಾನಸಿಕ ಒತ್ತಡ ನಿಯಂತ್ರಿಸುವುದು.
- ಯಾವುದೇ ಸೋಂಕು ಬಂದಾಗ ತಜ್ಞ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳುವುದು. ಧೂಮಪಾನ ಮದ್ಯಪಾನ ತ್ಯಜಿಸುವುದು.

ಹೋಮಿಯೋಕೇರ್ ಇಂಟರ್ ನ್ಯಾಷನಲ್ ಚಿಕಿತ್ಸೆ. ಹೋಮಿಯೋಕೇರ್ ನಲ್ಲಿನ ಜೆನೆಟಿಕ್ ಕಾನ್ಸ್ಟಿಟ್ಯೂಷನಲ್ ಚಿಕಿತ್ಸಾ ವಿಧಾನದಿಂದ ಈ ಸಮಸ್ಯೆಯಿಂದಾಗುವ ತೊಂದರೆ ಹಾಗೂ ಪರಿಣಾಮಗಳನ್ನು ನಿವಾರಿಸುವ ಸಾಧ್ಯತೆ ಅಧಿಕವಾಗಿದೆ. ಇಲ್ಲಿನ ಚಿಕಿತ್ಸೆಯಲ್ಲಿ ರೋಗಿಯ ಅನಾರೋಗ್ಯದ ವಿವರ ಮಾತ್ರವಲ್ಲದೇ, ಮಾನಸಿಕ ದೈಹಿಕ ಪರಿಸ್ಥಿತಿ ಅವಲೋಕಿಸಿ ಅವುಗಳನ್ನು ಸಮಗ್ರವಾಗಿ ಪರಿಶೀಲಿಸಿಕೊಂಡು ಚಿಕಿತ್ಸೆ ನೀಡಲಾಗುವುದು. ಇದರೊಂದಿಗೆ ರೋಗಿಯ ದೈಹಿಕ ಅರೋಗ್ಯ ಸುಧಾರಿಸುವುದಲ್ಲದೆ ರೋಗನಿರೋಧಕ ಶಕ್ತಿಯು ಪರಿಣಾಮಕಾರಿಯಾಗಿ ಸುಧಾರಿಸಲ್ಪಡುತ್ತದೆ.

ವಿವರಗಳಿಗೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್
ಉಚಿತ ಸಮಾಲೋಚನೆಗಾಗಿ 9550001133
Toll Free Num: 18001081212

ಶಾಖೆಗಳು: ಕರ್ನಾಟಕ: ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಗುಲ್ಬರ್ಗ, ಶಿವಮೊಗ್ಗ, ತುಮಕೂರು, ಹಾಸನ.
ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ